
ಪ್ರಾಚ್ಯವಿದ್ಯಾ ಸಂಶೋಧನಾಲಯ ಕನ್ನಡ ಗ್ರಂಥಮಾಲೆ ೩೬

ಶ್ರೀ ಶಂಕರಾಚಾರ್ಯ ವಿರಚಿತಾ

ಸೌಂದರ್ಯಲಹರೀ

(ಶ್ರೀ ಜಕ್ಕಣಾಮಾತ್ಯ ವಿರಚಿತ ಟೀಕಾ ಸಹಿತಾ)



…ದ್ಯಾ ಸಂಶೋಧನಾಲಯ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು
೧೯೫೯

ಪ್ರಾಚ್ಯವಿದ್ಯಾ ಸಂಶೋಧನಾಲಯ ಕನ್ನಡ ಗ್ರಂಥಮಾಲೆ ೩೭

ಪ್ರಧಾನ ಸಂಪಾದಕ:

ಎಚ್. ದೇವೀರಪ್ಪ, ಎಂ.ಎ.,

ಡೈರೆಕ್ಟರ್

ಶ್ರೀ ಶಂಕರಾಚಾರ್ಯವಿರಚಿತಾ

ಸೌಂದರ್ಯಲಹರೀ

ಶ್ರೀ ಜಕ್ಕಣಾಮಾತ್ಯವಿರಚಿತ ಟೀಕಾಸಹಿತಾ

ಸಂಪಾದಕ:

ವಿದ್ವಾನ್ ಸು. ನಾರಾಯಣಸ್ವಾಮಿ ಶಾಸ್ತ್ರೀ

ರಿಸರ್ಚ್ ಅಸಿಸ್ಟೆಂಟ್

ಪ್ರಾಚ್ಯವಿದ್ಯಾ ಸಂಶೋಧನಾಲಯ

ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು

೧೯೫೬

ಪ್ರಥಮ ಮುದ್ರಣ—೧೯೫೭

ಕ್ರಯ : ರೂ. ೨–೭೫

ಮೈಸೂರು :
ಸರ್ಕಾರದ ಬ್ರಾಂಚ್ ಮುದ್ರಣಾಲಯದ ಡೆಪ್ಯುಟಿ ಡೈರೆಕ್ಟರವರಿಂದ
ಮುದ್ರಿಸಲ್ಪಟ್ಟಿತು

ORIENTAL RESEARCH INSTITUTE, KANNADA SERIES No. 36

GENERAL EDITOR:

SRI H. DEVEERAPPA, M.A.,

Director

SAUNDARYALAHARĪ

OF

Śrī Śaṅkarācārya

WITH

Ṭīkā of Śrī Jakkaṇāmātya

EDITED BY

VIDWAN S. NARAYANASWAMY SASTRY,

Research Assistant

ORIENTAL RESEARCH INSTITUTE

UNIVERSITY OF MYSORE

MYSORE

1959

First Edition—1959

Price : Rs. 2-75

PRINTED BY THE DEPUTY DIRECTOR, GOVT. BRANCH PRESS
MYSORE

ಪ್ರಸ್ತಾವನೆ

ಸಂಸ್ಕೃತ ಮತ್ತು ಕನ್ನಡ ಪ್ರಾಚೀನ ಗ್ರಂಥಗಳನ್ನು ಶಾಸ್ತ್ರಾನುಸಾರವಾಗಿ ಸಂಪ್ರತಿಸಿ ಸಮುಚಿತವಾದ ಪೀಠಿಕೆ ಟಿಪ್ಪಣಿ ಟೀಕೆಗಳೊಂದಿಗೆ ಪ್ರಕಟಪಡಿಸುವುದು ಪ್ರಾಚ್ಯವಿದ್ಯಾ ಸಂಶೋಧನಾಲಯದ ಕಾರ್ಯಗಳಲ್ಲಿ ಒಂದಾಗಿದೆ.

ಈ ಸಂಸ್ಥೆಯು ಸಾಹಿತ್ಯಭಾಗವನ್ನು ಮಾತ್ರವಲ್ಲದೆ ನಮ್ಮ ಪ್ರಾಚೀನರು ರಚಿಸಿರುವ ವೇದಾಗಮಶಾಸ್ತ್ರಪುರಾಣಸ್ತೋತ್ರಾದಿ ಇತರವರ್ಗದ ಗ್ರಂಥಗಳನ್ನೂ ಅತ್ಯಾಧುನಿಕರೀತಿಯಲ್ಲಿ ಸಂಶೋಧಿಸಿ ಪರಿಷ್ಕರಿಸಿ ಎಂದಿನಿಂದಲೂ ಪ್ರಕಟ ಮಾಡುತ್ತಲೇ ಬಂದಿರುತ್ತದೆ.

ಸಂಸ್ಕೃತದಲ್ಲಿ ಮಾತ್ರವಲ್ಲದೆ ಕನ್ನಡದಲ್ಲಿರುವ ಪ್ರಾಚೀನಶಾಸ್ತ್ರಗ್ರಂಥಗಳನ್ನೂ ಈ ಸಂಸ್ಥೆಯಿಂದ ಪ್ರಕಟಪಡಿಸುತ್ತಿದ್ದು ಈವರೆಗೆ ನಾಲ್ಕಾರು ಶಾಸ್ತ್ರ ಗ್ರಂಥಗಳು ಬೆಳಕಿಗೆ ಬಂದಿವೆ. ಶ್ರೀಧರಾಚಾರ್ಯಕೃತ 'ಜಾತಕತಿಲಕಂ' ಎಂಬ ಜ್ಯೋತಿಷಗ್ರಂಥವೂ ಮಂಗರಸವಿರಚಿತ 'ಸೂಪಶಾಸ್ತ್ರ' ಎಂಬ ಪಾಕಶಾಸ್ತ್ರ ಗ್ರಂಥವೂ ಸದ್ಯದಲ್ಲಿಯೆ ಬರಲಿವೆ.

ಆದರೆ ಮಂತ್ರಶಾಸ್ತ್ರಕ್ಕೆ ಸಂಬಂಧಿಸಿದ ತಾಂತ್ರಿಕಗ್ರಂಥಗಳು ಈವರೆಗೆ ಕನ್ನಡದಲ್ಲಿ ಪ್ರಕಟವಾಗಿಯೇ ಇರಲಿಲ್ಲ. ಜಕ್ಕಣಾಮಾತ್ಯನು ಬರೆದಿರುವ ಕನ್ನಡ ಟೀಕು ಸಹಿತ 'ಸೌಂದರ್ಯಲಹರೀ' ಎಂಬೀ ಗ್ರಂಥವೇ ಮೊದಲ ಬಾರಿಗೆ ಬೆಳಕಿಗೆ ಬರುತ್ತಿರುವ ಕನ್ನಡ ಮಂತ್ರಶಾಸ್ತ್ರಗ್ರಂಥ. ಶ್ರೀ ಶಂಕರಾಚಾರ್ಯ ವಿರಚಿತವೆಂದು ಹೇಳಲಾಗುತ್ತಿರುವ ಈ ಗ್ರಂಥವು ಬೇರೆ ಬೇರೆ ಟೀಕೆಗಳೊಂದಿಗೆ ಬೇರೆ ಬೇರೆ ಭಾರತೀಯ ಭಾಷೆಗಳಲ್ಲಿ ಪ್ರಕಟವಾಗಿದ್ದರೂ ಕನ್ನಡ ಲಿಪಿಯಲ್ಲಿ ಕನ್ನಡ ಟೀಕೆಯೊಂದಿಗೆ ಆಗಿರಲಿಲ್ಲ. ಈ ಕೊರತೆಯನ್ನೂ ಈಗ ನಿವಾರಿಸಿದಂತಾಯಿತು.

ಈ ಗ್ರಂಥ ಪಾರಾಯಣಮಾಡುವುದೇ ಒಂದು ಆನಂದದ ಕೆಲಸವೆಂದು ಅನುಭವಿಗಳು ಹೇಳುತ್ತಿರುತ್ತಾರೆ. ಈ ಕೃತಿಯ ಕಾವ್ಯಮಯವಾದ ಸಹಜ ಸುಂದರಮಧುರಶೈಲಿಯು ಓದುಗರನ್ನು ಭಾವಪರವಶರನ್ನಾಗಿ ಮಾಡುತ್ತದೆ. ಶಾಸ್ತ್ರೋಕ್ತವಾಗಿ ಪಾರಾಯಣಮಾಡುವವರಿಗಂತೂ ಅನನ್ಯಸಾಧಾರಣವಾದ ಅನುಭವವಾಗುವುದೆಂದು ಹೇಳುತ್ತಾರೆ. ಇಂತಹ ಸುಂದರ ಶಾಸ್ತ್ರಗ್ರಂಥವನ್ನು ಸೀನಿಯರ್ ರಿಸರ್ಚ್ ಅಸಿಸ್ಟೆಂಟ್ ಶ್ರೀ ನಾರಾಯಣಸ್ವಾಮಿ ಶಾಸ್ತ್ರಿಗಳು ಶಾಸ್ತ್ರೀಯ ವಾಗಿ ಪರಿಷ್ಕರಿಸಿ, ಅಚ್ಚಿನ ಪ್ರತಿಯನ್ನು ಸಿದ್ಧಗೊಳಿಸಿ, ವಿದ್ವತ್ಪರಿಪೂರ್ಣವಾದ ಮುನ್ನುಡಿಯನ್ನೂ ಟಿಪ್ಪಣಿಗಳನ್ನೂ ಬರೆದು ಸೇರಿಸಿದ್ದಾರೆ.

ಪ್ರಕೃತ ಗ್ರಂಥದಿಂದ ಜಕ್ಕಣಾಮಾತ್ಯನ (ಸು. ೧೭೦೦) ಕಾಲದ ಕನ್ನಡ ಗದ್ಯದ ಸ್ವರೂಪವನ್ನೂ ತಿಳಿಯಬಹುದಾಗಿದೆ. ಸಂಸ್ಕೃತವರಿಯದ ಕನ್ನಡಿಗರಿಗೆ ಸಹಾಯವಾಗುವುದೆಂದು ಭಾವಿಸಲಾಗಿದೆ.

ಈ ಗ್ರಂಥವನ್ನು ಅತ್ಯಲ್ಪಕಾಲದಲ್ಲಿಯೇ ಅಚ್ಚುಮಾಡಿಸಿಕೊಟ್ಟ ಮೈಸೂರು ಸರ್ಕಾರದ ಡೆಪ್ಯುಟಿ ಡೈರೆಕ್ಟರ್ ಅವರಿಗೆ ನಮ್ಮ ನೆನವರಿಕೆಗಳು.

ಮೈಸೂರು
ತಾ॥ ೨೦-೭-೧೯೫೮

ಎಚ್. ದೇವೀರಪ್ಪ,
ಡೈರೆಕ್ಟರ್.

ಪೀಠಿಕೆ

ಶ್ರೀ ಮಹಾತ್ರಿಪುರಸುಂದರ್ಯೈ ನಮಃ

ಅಂಬ ತಾವಕಪದದ್ವಯಾರ್ಚಕಃ
ತ್ವನ್ಮಯೋ ಭವತಿ ನಾತ್ರ ಸಂಶಯಃ ।
ಯಸ್ತ್ವಯೈವ ವಿವಶೋ ವಶೀಕೃತಃ
ಶಕ್ತಿರೇವ ಸಮಭೂಚ್ಛಿವಃ ಸ್ವಯಮ್ ॥

(ಚಿದ್ಗಗನ ಚಂದ್ರಿಕಾ)

ಯಾವ ಪರಶಿವನು ನಿನ್ನಿಂದ ವಶೀಕೃತನಾಗಿ ತಾನು ಶಕ್ತಿಯಾದ ನಿನ್ನ ಸ್ವರೂಪವೇ ಆಗಿದ್ದಾನೆಯೋ ಹಾಗೆಯೇ ಹೇ ತಾಯೇ! ನಿನ್ನ ಪಾದದ್ವಯಗಳನ್ನು ಪೂಜಿಸುವ ಭಕ್ತನು ನಿನ್ನ ರೂಪವಾಗಿಯೆ ಆಗುತ್ತಾನೆ. ಅಂದರೆ ಸಾಯುಜ್ಯವೆಂಬ ನಾಲ್ಕನೇಯ ಮುಕ್ತಿಯನ್ನು (ನಿನ್ನ ಸ್ವರೂಪದಲ್ಲಿ ಐಕ್ಯವನ್ನು) ಹೊಂದುತ್ತಾನೆ. ಈ ವಿಷಯದಲ್ಲಿ ಸ್ವಲ್ಪವೂ ಸಂದೇಹವಿಲ್ಲ.—ಎಂಬ ಅರ್ಥವುಳ್ಳ ಈ ಶ್ಲೋಕವೇ ಮುಂತಾದ ತಂತ್ರಾಗಮಾದಿಗಳ ವಾಕ್ಯಗಳಿಂದ ಅನನ್ಯಚಿತ್ತನಾದ ಭಕ್ತನು ಪರಮಾತ್ಮಾಭಿನ್ನವಾದ ಶಕ್ತಿರೂಪದಲ್ಲಿ ಲೀನನಾಗುವನು ಎಂಬುದಾಗಿ ತತ್ತ್ವವನ್ನುಬೋಧಿಸುವ 'ಸೌಂದರ್ಯಲಹರೀ' ಎಂಬ ಈ ಗ್ರಂಥವು ಉಪನಿಷತ್ತುಗಳಂತೆ ಜ್ಞಾನಕಾಂಡರೂಪವಾದದ್ದು.

'ಶಿವಃ ಶಕ್ತ್ಯಾ ಯುಕ್ತಃ' ಎಂಬ ಈ ಗ್ರಂಥದ ಮೊದಲನೆಯ ಶ್ಲೋಕವೂ ಈ ಅರ್ಥವನ್ನೇ ಹೇಳುತ್ತದೆ. ಹೇಗೆಂದರೆ—

'ಕಕಾರಾದಿಕ್ಷಕಾರಾನ್ತಾಃ ವರ್ಣಾಸ್ತೇ ಶಿವರೂಪಿಣಃ ।
ಅಕಾರಾದಿವಿಸರ್ಗಾನ್ತಾಃ ಸ್ವರಾಃ ಷೋಡಶಶಕ್ತಯಃ' ॥

(ಮಾತೃಕಾಹೃದಯಮ್)

ಎಂಬ ಪ್ರಮಾಣದಿಂದ ಶಿವಾಕ್ಷರಗಳಾದ ವ್ಯಂಜನಗಳು ಶಿವಶಬ್ದದಿಂದ ಹೇಳಲ್ಪಡುತ್ತವೆ. ಸ್ವರಗಳು ಶಕ್ತಿಶಬ್ದದಿಂದ ಹೇಳಲ್ಪಡುತ್ತವೆ. ವ್ಯಂಜನಗಳು ಸ್ವರಾಕ್ಷರಗಳೊಡನೆ ಕೂಡಿ ಒಂದಾಗಿ ಶಬ್ದಸೃಷ್ಟಿಯನ್ನು ಮಾಡಲು ಅರ್ಹವಾಗುವುವು. ಕೂಡದೆ ಇದ್ದರೆ ಆಗುವುದಿಲ್ಲ. ಹಾಗೆ ಶಿವಶಬ್ದದಿಂದ 'ಶ್ ವ್' ಎಂಬ ಅಕ್ಷರಗಳು ಹೇಳಲ್ಪಡುತ್ತವೆ. ಶಕ್ತಿಶಬ್ದದಿಂದ ಅಕಾರ ಇಕಾರ ಸಮಷ್ಟಿರೂಪವಾದ ಶಕ್ತಿಬೀಜವೆಂಬ 'ಏ' ಕಾರ ಹೇಳಲ್ಪಡುತ್ತದೆ. ಅದರಿಂದ 'ಶ್–ವ್' ಎಂಬ ಅಕ್ಷರವು ಶಕ್ತ್ಯಾ [1] ಶಕ್ತಿಬೀಜವಾದ 'ಏ' ಕಾರದ ವ್ಯಷ್ಟಿರೂಪವಾದ 'ಅ ಇ' ಕಾರಗಳೊಡನೆ (ವ್ಯತ್ಯಸ್ತವಾಗಿ 'ಇ ಅ' ಕಾರಗಳೊಡನೆ)

---

1. ಏಕಾರ ಶಕ್ತಿಬೀಜ ಎಂಬುದರಲ್ಲಿ 'ಯದೇಕಾದಶಮೇಕಾರಂ ಬೀಜಂ ಕೋಣತ್ರಯಾತ್ಮಕಮ್' (ಚತುಶ್ಶತೀ) ಎಂಬ ವಾಕ್ಯ ಪ್ರಮಾಣ.

ಕೂಡಿದರೆ 'ಶಿವ' ಎಂಬುದಾಗಿ ಉಚ್ಚರಿಸಲು ಯೋಗ್ಯವಾಗುವುದು. ಇಲ್ಲದಿದ್ದರೆ ಆಗುವುದಿಲ್ಲ. ಹಾಗೆ ಚಿತ್‌ಶಕ್ತಿಗಳಿಗೆ ಅಭೇದವಿರುವುದರಿಂದ ಚಿದ್ರೂಪನಾದ ಪರಮೇಶ್ವರನು ಶಕ್ತಿರೂಪವಾದ ಸಾಮರ್ಥ್ಯವಿಶೇಷದಿಂದ ಕೂಡಿದವನಾದರೆ ಜಗತ್ತಿನ ಸೃಷ್ಟಿಯನ್ನು ಮಾಡಲು ಶಕ್ತನಾಗುವನು. ಕೂಡದಿದ್ದರೆ ಚಲಿಸು ವುದಕ್ಕೂ ಸಮರ್ಥನಾಗುವುದಿಲ್ಲ. ಹೀಗೆ ಬ್ರಹ್ಮವಿಷ್ಣು ಮೊದಲಾದವರೂ ನಿನ್ನ ಪ್ರಭಾವದಿಂದಲೇ ಅವರವರ ಕೆಲಸಗಳಲ್ಲಿ ಶಕ್ತರಾಗಿರುತ್ತಾರೆ. ಅಂದರೆ ಬ್ರಹ್ಮವಿಷ್ಣು ಮುಂತಾದ ದೇವತೆಗಳು ಸ್ಫುರಣರೂಪವಾದ ನಿನ್ನೊಡನೆ ಕೂಡಿ ದವರಾಗಿ ತಮ್ಮ ತಮ್ಮ ಕೆಲಸಗಳನ್ನು ಮಾಡುತ್ತಾರೆ, ಎಂದುದರಿಂದ ಸರ್ವ ದೇವತಾಮಯವಾದ ಪರಬ್ರಹ್ಮಸ್ವರೂಪವೇ ಶ್ರೀ ದೇವಿಯು ಎಂಬುದು ತಾತ್ಪರ್ಯ.

ಇಂತಹ ತತ್ತ್ವಾರ್ಥವನ್ನು ಬೋಧಿಸುವ ಈ ಗ್ರಂಥವನ್ನು ವೇದಾನ್ತ ರೂಪವಾಗಿಯೂ ಶ್ರೀ ದೇವಿಯ ಗುಣವರ್ಣನೆ ರೂಪವಾಗಿಯೂ ಇರುವುದರಿಂದ ಸ್ತೋತ್ರವೆಂಬುದಾಗಿಯೂ, ಅನೇಕ ಮಂತ್ರ ಯಂತ್ರ ಗರ್ಭಿತವಾಗಿರುವುದ ರಿಂದ ಮಂತ್ರಶಾಸ್ತ್ರವೆಂಬುದಾಗಿಯೂ ಹೇಳಬಹುದು.

ಈ ಸೌಂದರ್ಯಲಹರಿಯಲ್ಲಿ ಪ್ರತಿಪಾದಿಸಲ್ಪಡುವ ಪರಬ್ರಹ್ಮಸ್ವರೂಪಿಣಿ ಯಾದ ಶ್ರೀ ಮಹಾತ್ರಿಪುರಸುಂದರಿಯ ಷಟ್ಚಕ್ರಸೇವಾತ್ಮಕವೂ ಧಾರಣಾತ್ಮ ಕವೂ ಆದ ಭಜನೆಯಿಂದ ಇಹದಲ್ಲಿ ಸರ್ವೋತ್ಕೃಷ್ಟವಾದ ವಿದ್ಯಾಸಂಪತ್ತು ಧನ ಸಂಪತ್ತು ರೂಪಸಂಪತ್ತುಗಳೂ, ಪರದಲ್ಲಿ ಕ್ರಮವಾಗಿ ಸಾರ್ಷ್ಟಿ ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯವೆಂಬ ನಿರತಿಶಯಾನಂದರೂಪವಾದ ಪರಮ ಪುರುಷಾರ್ಥ ಮೋಕ್ಷವೂ ಪ್ರಾಪ್ತವಾಗುವುದೆಂಬುದು ಗ್ರಂಥದ ೯೯ನೆಯ ಶ್ಲೋಕದಲ್ಲಿ ಹೇಳಿದೆ. ಅದರ ಟೀಕಿನಲ್ಲಿ (ಪುಟ ೧೧೦–೧೧೧) ವಿಸ್ತಾರವಾಗಿ ಬರೆದಿದ್ದಾರೆ. ಅಲ್ಲದೆ ಇತರ ಮಂತ್ರಶಾಸ್ತ್ರಜ್ಞರೂ ಈ ರೀತಿ ಹೇಳಿದ್ದಾರೆ—

'ಅತ್ರ ಸ್ತೋತ್ರೇ ಗುರುಮುಖಾದವಗಮ್ಯಾಗಮಾಮೃತಮ್ ।
ಕಾಮೇಶ್ವರ್ಯಾಃ ಪ್ರಸಾದೇನ ಭುಕ್ತಿಮುಕ್ತೀ ಭಜೇನ್ನರಃ' ॥

(ಡಿಂಡಿಮ)

'ಯತ್ರಾಸ್ತಿ ಭೋಗೋ ನ ಚ ತತ್ರ ಮೋಕ್ಷಃ
ಯತ್ರಾಸ್ತಿ ಮೋಕ್ಷೋ ನ ಚ ತತ್ರ ಭೋಗಃ ।
ಶ್ರೀ ಸುಂದರೀಸೇವನತತ್ಪರಾಣಾಂ
ಭೋಗಶ್ಚ ಮೋಕ್ಷಶ್ಚ ಕರಸ್ಥ ಏವ' ॥

(ಭಾಸ್ಕರರಾಯರು)

ಭಕ್ತನು ಈ ಸ್ತೋತ್ರದಲ್ಲಿ ಆಗಮಾರ್ಥರಹಸ್ಯಾಮೃತವನ್ನು ಗುರೂಪ ದೇಶದಿಂದ ಪಡೆದು ಶ್ರೀ ಕಾಮೇಶ್ವರಿಯ ಪ್ರಸಾದದಿಂದ ಇಹಲೋಕದಲ್ಲಿ ಸಮಸ್ತ ಭೋಗವನ್ನೂ ಶರೀರಪತನಾನಂತರ ಮೋಕ್ಷವನ್ನೂ ಹೊಂದುವನು.

ಸಮಸ್ತವೇದಪುರಾಣೇತಿಹಾಸಗಳಲ್ಲಿ ಐಹಿಕಫಲವನ್ನು ಬೋಧಿಸುವ ಭಾಗದಿಂದ ಮೋಕ್ಷ ದೊರೆಯುವುದಿಲ್ಲ. ಯಾವ ಜ್ಞಾನಕಾಂಡಭಾಗದ ಅರ್ಥ ವಿಚಾರಾದಿಗಳಿಂದ ಮೋಕ್ಷ ದೊರೆಯುವುದೋ ಅಲ್ಲಿ ಐಹಿಕಭೋಗವಿಲ್ಲ. ಶ್ರೀ ಮಹಾತ್ರಿಪುರಸುಂದರಿಯ ಎರಡುವಿಧ ಭಜನೆಯಿಂದ ಭುಕ್ತಿಮುಕ್ತಿಗಳು ಹಸ್ತ ಗತವಾಗಿದೆ ಎಂಬುದಾಗಿ ಈ ಶ್ಲೋಕಗಳ ಅರ್ಥ. ಈ ರೀತಿ ಒಂದೊಂದು ರೂಪದಿಂದ ಸ್ತ್ರೀ ಬಾಲರೇ ಮೊದಲಾದ ಎಲ್ಲರಿಗೂ ಅವರವರಿಗೆ ಅನುಗುಣವಾದ ಫಲಕ್ಕೆ ಸಾಧಕವಾಗಿರುವುದರಿಂದ ಸರ್ವೋತ್ತಮವಾದದ್ದು ಈ 'ಸೌಂದರ್ಯ ಲಹರೀ' ಎಂಬ ಗ್ರಂಥವು.

ಈ ಗ್ರಂಥದಲ್ಲಿರುವ ೧೦೦ ಶ್ಲೋಕಗಳಲ್ಲಿ ೧–೪೧ ಶ್ಲೋಕದವರೆಗೆ ಒಂದನೆಯ ಭಾಗ; ಇದಕ್ಕೆ ಆನಂದಲಹರೀ ಎಂಬುದಾಗಿ ಹೆಸರು. ೪೨–೧೦೦ ಶ್ಲೋಕದವರೆಗೆ ಇರುವ ೫೯ ಶ್ಲೋಕಗಳು ಎರಡನೆಯ ಭಾಗ; ಇದಕ್ಕೆ ಸೌಂದರ್ಯಲಹರೀ ಎಂಬುದಾಗಿ ಹೆಸರು. ೧ ನೆಯ ಭಾಗದಲ್ಲಿ ಶ್ರೀಮಹಾ ತ್ರಿಪುರಸುಂದರೀ, ಶ್ರೀಚಕ್ರಂ, ಶ್ರೀವಿದ್ಯೆ, ಕೆಲವು ಪ್ರಯೋಗಗಳು, ಉಪಾಸನೆ ಗಳು, ಕೌಲಮತ ಇವುಗಳನ್ನು ವಿವರಿಸಿದೆ.

ಅಂದರೆ—೧ ಮತ್ತು ೨ ಶ್ಲೋಕಗಳಿಂದ ಶ್ರೀಮಹಾತ್ರಿಪುರಸುಂದರಿಯು 'ಬ್ರಹ್ಮಶಕ್ತಿ, ಸರ್ವದೇವವಂದ್ಯೆ, ಪುಣ್ಯವಂತರಿಂದ ಧ್ಯಾನಿಸಲ್ಪಡುವವಳು, ಚಿಚ್ಛಕ್ತಿ, ಶ್ರೀಚಕ್ರವಿದ್ಯಾಸ್ವರೂಪಿಣೀ' ಎಂಬುದಾಗಿಯೂ, ೩–೮, ೨೨, ೩೦, ಈ ಶ್ಲೋಕಗಳಿಂದ ಶ್ರೀದೇವಿಯ ಸಗುಣೋಪಾಸನೆಯ ಸಂಪ್ರದಾಯಗಳನ್ನೂ, ೨೭ನೆಯ ಶ್ಲೋಕದಿಂದ ನಿರ್ಗುಣೋಪಾಸನೆಯನ್ನೂ, ೧೧ನೆಯ ಶ್ಲೋಕದಿಂದ ಶ್ರೀಚಕ್ರೋಪಾಸನೆಯನ್ನೂ, ೩೧–೩೩ನೆಯ ಶ್ಲೋಕಗಳಿಂದ ಷೋಡಶಾಕ್ಷರೀ ಮಂತ್ರೋಪಾಸನೆಯನ್ನೂ, ೯, ೧೦, ೧೪, ೨೧ ಈ ಶ್ಲೋಕಗಳಿಂದ ಕುಂಡಲಿನೀ ಧ್ಯಾನವನ್ನೂ, ೧೨, ೨೪, ೨೫, ೨೬, ೨೮, ೨೯, ಈ ಶ್ಲೋಕ ಗಳಿಂದ ಶ್ರೀವಿದ್ಯೆಯ ಮಾಹಾತ್ಮ್ಯವನ್ನೂ, ೧೩, ಮತ್ತು ೧೫–೨೦ ಈ ಶ್ಲೋಕ ಗಳಿಂದ ಮಾದನಾದಿಪ್ರಯೋಗಗಳನ್ನೂ, ೨೩, ೩೪ ಶ್ಲೋಕಗಳಿಂದ ಶಿವ ಶಕ್ತ್ಯೈಕ್ಯೋಪಾಸನೆಯನ್ನೂ, ೩೫ನೆಯ ಶ್ಲೋಕದಿಂದ ಪ್ರಪಂಚರೂಪ ಪರಿಣಾ ಮವನ್ನೂ, ೩೬–೪೧ ವರೆಗಿನ ಶ್ಲೋಕಗಳಿಂದ ಸಮಯಮತದ ಷಡಾಧಾರ ಪೂಜೆಯನ್ನೂ ಹೇಳಿದೆ. ಇದರಲ್ಲಿಯೂ ೧, ೨, ೮, ೯, ೧೦, ೧೧, ೧೪, ೨೧, ೨೬, ೨೭, ೩೧–೪೧ ಈ ಇಪ್ಪತ್ತೊಂದು ಶ್ಲೋಕಗಳು ಪ್ರಧಾನವೆಂಬುದು ಕೆಲವರ ಅಭಿಪ್ರಾಯ. ಎರಡನೆಯ ಭಾಗವಾದ ಸೌಂದರ್ಯಲಹರಿಯ ೫೯ ಶ್ಲೋಕಗಳಿಂದ ಶ್ರೀದೇವಿಯ ಕಿರೀಟದಿಂದ ಪಾದಾಗ್ರದವರೆಗೆ ಇರುವ ಅವಯವ ಗಳು ವರ್ಣಿಸಲ್ಪಟ್ಟಿವೆ.

ಈ ರೀತಿ ೧೦೦ ಶ್ಲೋಕರೂಪವಾದ ಈ ಸ್ತೋತ್ರವು ಶ್ರೀಶಂಕರಾ ಚಾರ್ಯರು ಬರೆದರೆಂಬುದು ಬಹುಜನ ಪಂಡಿತರ ಅಭಿಪ್ರಾಯ. ಈ ವಿಷಯ ದಲ್ಲಿ 'ತವ ಸ್ತನ್ಯಂ ಮನ್ಯೇ' ಎಂಬ ೭೪ನೆಯ ಶ್ಲೋಕವನ್ನು ಪ್ರಮಾಣವಾಗಿ

ಉದಾಹರಿಸಿ ಒಂದು ಐತಿಹ್ಯವನ್ನೂ ಹೇಳುತ್ತಾರೆ. ಅದನ್ನು 'ಸೌಭಾಗ್ಯ ವರ್ಧನೀ' ಎಂಬ ಸಂಸ್ಕೃತವ್ಯಾಖ್ಯಾನಕರ್ತರಾದ 'ಕೈವಲ್ಯಾಶ್ರಮ' ಎಂಬುವರು ಒಳನೆಯ ಶ್ಲೋಕದ ವ್ಯಾಖ್ಯಾನದಲ್ಲಿ ಈ ರೀತಿ ಬರೆದಿದ್ದಾರೆ—ಶ್ರೀದೇವಿಯಲ್ಲಿ ಅತ್ಯಂತಭಕ್ತನಾದ 'ಶಿವಗುರು' ಎಂಬ ಶ್ರೀ ಶಂಕರಾಚಾರ್ಯರ ತಂದೆಯು ಪ್ರತಿನಿತ್ಯವೂ ಗ್ರಾಮದ ಹೊರಗೆ ಇರುವ ದೇವಿಯ ಆಲಯಕ್ಕೆ ಹೋಗಿ ಹಾಲಿನಿಂದ ದೇವಿಗೆ ಅಭಿಷೇಕಾನಂತರ ಪ್ರದಕ್ಷಿಣನಮಸ್ಕಾರಗಳನ್ನು ಮಾಡಿ ಮನೆಗೆ ಹಿಂದಿರುಗುವಾಗ ಉಳಿದಿರುವ ಹಾಲನ್ನು ತನ್ನ ಸಂಗಡ ಬಂದಿದ್ದ ಮಗನಿಗೆ ಕೊಡುತ್ತಾ ಇದ್ದರು. ಆಗ ಹುಡುಗನಿಗೆ—ದೇವಿಯು ಕುಡಿದು ಮಿಕ್ಕಿದ್ದ ಹಾಲನ್ನು ತಂದೆಯು ತನಗೆ ಕೊಡುತ್ತಾರೆಂಬ ಅಭಿಪ್ರಾಯ ಉಂಟಾಗಿತ್ತು. ಒಂದು ದಿನ ಶಿವಗುರುವಿಗೆ ಪರಸ್ಥಳಕ್ಕೆ ಹೋಗಬೇಕಾದ ಸಂದರ್ಭಬಂದಾಗ ತನ್ನ ಹೆಂಡತಿಗೆ ಎಂದಿನಂತೆ ಶ್ರೀದೇವಿಗೆ ಪೂಜೆ ಮಾಡಬೇಕು ಎಂದು ಅಪ್ಪಣೆ ಮಾಡಿಬಿಟ್ಟು ಹೋದರು. ಅವನ ಹೆಂಡತಿಯೂ ಪತಿಯ ಅಪ್ಪಣೆಯಂತೆ ಪೂಜೆಯನ್ನು ಮಾಡುತ್ತಾ ತಾನು ಹೊರಗಾದ ಕಾಲದಲ್ಲಿ ಬೇರೆ ಗತಿಯಿಲ್ಲದೆ ಮಗನನ್ನು ಮಾತ್ರ ಕಳುಹಿಸಿದಳು. ಬಾಲಕನು ಹಾಲನ್ನು ತೆಗೆದುಕೊಂಡು ಆಲಯಕ್ಕೆ ಹೋಗಿ ಹಾಲನ್ನು ದೇವಿಯ ಮುಂದೆ ಇರಿಸಿ ಪೂಜೆಯನ್ನು ಮುಗಿಸಿದ ನಂತರ ದೇವಿಯನ್ನು ಕುರಿತು ಹಾಲನ್ನು ಕುಡಿಯುವಂತೆ ಪ್ರಾರ್ಥಿಸಿದನು. ಬಹಳ ಹೊತ್ತಾಗಿ ಹಾಲನ್ನು ಕುಡಿಯದೆ ಇದ್ದುದರಿಂದ ಬಾಲಕನು ಅಳಲು ಪ್ರಾರಂಭಿಸಿದನು. ಆಗ ದಯಾರ್ದ್ರಹೃದಯಳಾದ ಶ್ರೀ ದೇವಿಯು ಪ್ರತ್ಯಕ್ಷಳಾಗಿ ಹಾಲನ್ನು ಸಂಪೂರ್ಣವಾಗಿ ಕುಡಿದು ಪಾತ್ರೆಯು ಬರಿದಾಗಿರುವುದನ್ನು ನೋಡಿ ತನಗೆ ಸ್ವಲ್ಪವೂ ಉಳಿದಿಲ್ಲವಲ್ಲಾ ಎಂಬುದಾಗಿ ಮತ್ತೆ ಅಳಲು ಪ್ರಾರಂಭಿಸಿದನು. ಆಗ ಶ್ರೀದೇವಿಯು ನಗುತ್ತಾ ಬಾಲಕನನ್ನು ತನ್ನ ತೊಡೆಯ ಮೇಲೆ ಇರಿಸಿಕೊಂಡು ಸ್ತನ್ಯವನ್ನು ಕುಡಿಸಿದಳು. ಅದರಿಂದ ಕೂಡಲೇ ಅವನಿಗೆ ಸರ್ವವಿದ್ಯೆಯೂ ಭಾಸವಾಯಿತು. ಈ ಸ್ತೋತ್ರವನ್ನು ಕವನ ಮಾಡುತ್ತಾ ಮನೆಗೆ ಹಿಂದಿರುಗಿ ಬಂದನು. ಇಷ್ಟರೊಳಗೆ ಪರಸ್ಥಳದಿಂದ ಮನೆಗೆ ಬಂದಿದ್ದ ಶಿವಗುರುವು ಮಗನ ತೇಜಸ್ಸನ್ನೂ ಅವನ ಕವಿತ್ವವನ್ನೂ ನೋಡಿ ಬಹಳ ಆಶ್ಚರ್ಯಗೊಂಡರು. ಅನಂತರ ಅವನ ಸ್ವಪ್ನದಲ್ಲಿ ಶ್ರೀದೇವಿಯು ಪ್ರತ್ಯಕ್ಷಳಾಗಿ 'ಈ ಬಾಲಕನು ಶಂಕರನ ಅಂಶ, ನನ್ನ ಮಗ, ಇವನಿಂದ ಲೋಕೋದ್ಧಾರವಾಗುವುದು' ಎಂಬುದಾಗಿ ಹೇಳಿ ಮರೆಯಾದಳು.*

ಈ ಕಥಾನಕವನ್ನೇ ಆಧಾರವಾಗಿ ಇಟ್ಟುಕೊಂಡು 'ಸುಧಾವಿದ್ಯೋತಿನೀ' ಎಂಬ ವ್ಯಾಖ್ಯಾಕಾರನು ತನ್ನ ಪಿತೃವಾದ ಪ್ರವರಸೇನನು ಅವನ ತಂದೆಯಾದ ದ್ರವಿಡದೇಶಾಧಿಪತಿಯಿಂದ ಪರಿತ್ಯಕ್ತನಾಗಿ ಶ್ರೀ ದೇವಿಯ ಅನುಗ್ರಹದಿಂದ ಈ ಸ್ತೋತ್ರವನ್ನು ರಚಿಸಿದನೆಂದು ಹಿಂದಿನಂತೆ ಕಥೆಯನ್ನು ಉದಹರಿಸಿದ್ದಾನೆ.

---

* ಕೋಳೂರು ಕೊಡಗೂಸಿನ ಕಥೆಯನ್ನು ಹೋಲಿಸಿ.

ಡಿಂಡಿಮವ್ಯಾಖ್ಯಾಕರ್ತನು ವ್ಯಾಖ್ಯಾನಾರಂಭದಲ್ಲ ಪರಮಶಿವನೇ ಈ ಸ್ತೋತ್ರವನ್ನು ರಚಿಸಿದನೋ ಅಥವಾ ಶಿವನ ಅವತಾರವಾದ ಶಂಕರಾಚಾರ್ಯರು ರಚಿಸಿದರೋ ಅಥವಾ ಪರಾಶಕ್ತಿಯ ಮುಖದಿಂದ ತಾನಾಗಿಯೇ ಉದ್ಭವಿಸಿತೋ ಎಂಬುದಾಗಿ ವಿಕಲ್ಪಿಸಿಕೊಂಡು 'ತವ ಸ್ತನ್ಯಂ ಮನ್ಯೇ' ಎಂಬ ಶ್ಲೋಕದ ವ್ಯಾಖ್ಯಾನದಲ್ಲಿ 'ಕಾಂಚೀನಗರವಾಸಿಯಾದ ಸಂಬಂಧಸ್ವಾಮಿ ಎಂಬುವರು ಶ್ರೀ ದೇವೀಸ್ತನ್ಯಪಾನಮಾಡಿದ ಮಹಿಮೆಯಿಂದ ಈ ಸ್ತೋತ್ರವನ್ನು ಬರೆದನು' ಎಂಬ ಅಭಿಪ್ರಾಯವನ್ನು ಬರೆದಿರುತ್ತಾನೆ.

ಕೆಲವರು (ಈ ಸ್ತೋತ್ರದ ೭೫ನೆಯ 'ತವ ಸ್ತನ್ಯಂ ಮನ್ಯೇ' ಎಂಬ ಶ್ಲೋಕದಲ್ಲಿ ಹೇಳಿದಂತೆ) 'ಶ್ರೀ ದೇವೀ ಸ್ತನ್ಯಪಾನಮಾಡಿದ' 'ದ್ರವಿಡ ಶಿಶು' ಎಂಬ ಸಿದ್ಧನು ಶ್ರೀ ದೇವೀವಿಷಯವಾಗಿ ೧೦೦ ಶ್ಲೋಕವನ್ನು ಕೈಲಾಸದ ಗೋಡೆಯ ಮೇಲೆ ಬರೆದು 'ಇದನ್ನು ಒಬ್ಬರೂ ಕೆಡಿಸಬಾರದು, ಶಂಕರಾಚಾರ್ಯರು ಬಂದು ಇದನ್ನು ಪ್ರಚಾರಪಡಿಸುತ್ತಾರೆ' ಎಂದು ಹೇಳಿದ್ದನು. ಅದು ಕಾಲಾಂತರದಲ್ಲಿ ತಾನಾಗಿಯೆ ಅಳಿಸಿಹೋಗಿ ಕೆಲವು ಶ್ಲೋಕಗಳು ಮಾತ್ರ ಉಳಿದಿರುವಾಗ ಶಂಕರಾಚಾರ್ಯರು ಹೋಗಿ ವ್ಯತ್ಯಸ್ತವಾಗಿ ಕಂಡು ಬಂದ ೪೧ ಶ್ಲೋಕಗಳೊಡನೆ ೫೯ ಶ್ಲೋಕಗಳನ್ನು ತಾವೇ ಬರೆದು ಈ ಸ್ತೋತ್ರವನ್ನು ಪೂರ್ತಿಮಾಡಿದರು. ಅದರಿಂದಲೇ ಮೊದಲನೆಯ ಭಾಗದಲ್ಲಿ ಕ್ರಮವಾಗಿ ವರ್ಣನೆ ಕಂಡುಬರುವುದಿಲ್ಲ, ಕವಿತಾ ಸರಣಿಯ ವ್ಯತ್ಯಾಸವೂ ಕಂಡು ಬರುತ್ತದೆ' ಎಂದು ಅಭಿಪ್ರಾಯಪಡುತ್ತಾರೆ. ಸಾಂಪ್ರದಾಯಿಕ ತಿಳಿವಳಿಕೆಯಿಂದಲೂ ಬಹುಜನ ವ್ಯಾಖ್ಯಾಕರ್ತರ ಮತ್ತು ವಿದ್ವಾಂಸರ ಅಭಿಪ್ರಾಯದಿಂದಲೂ ಕವಿತಾ ಸರಣಿಯಿಂದಲೂ ಶ್ರೀ ಶಂಕರಾಚಾರ್ಯರೇ ಈ ಸ್ತೋತ್ರವನ್ನು ಬರೆದರೆಂದು ನಿಶ್ಚಯವಾಗಿ ಹೇಳಬಹುದು. ಅದ್ವೈತ ಸಿದ್ಧಾಂತಸ್ಥಾಪನೆ ಮಾಡಿದವರು ದೇವೀ ಸ್ತೋತ್ರ ಮಾಡಬಾರದೆಂದು ಭಾವಿಸುವುದು ಅನುಚಿತವಾಗಬಹುದು.

ಈ ಸ್ತೋತ್ರಕ್ಕೆ 'ಷಟ್ಚಕ್ರ ದೀಪಿಕೆ' ಎಂಬ ಕನ್ನಡ ಟೀಕನ್ನು ಬರೆದ ಜಕ್ಕಣಾಮಾತ್ಯನ ವಿಷಯವಾಗಿ ಬೇರೆ ಗ್ರಂಥಗಳಿಂದಾಗಲಿ ಶಾಸನಗಳಿಂದಾಗಲಿ ದೇಶಕಾಲಾದಿಗಳು ಯಾವುದೂ ನಿಶ್ಚಯವಾಗಿ ದೊರೆತಿಲ್ಲ. ಕನ್ನಡ ಕವಿಚರಿತ್ರೆಕಾರರು (೩ನೆಯ ಭಾಗ ೬೫ನೆಯ ಪುಟ) ಈತನು ಸುಮಾರು ೧೭ನೆಯ ಶತಮಾನದವನೆಂದು ಬರೆದಿದ್ದಾರೆ. ಈ ಟೀಕೆಯ ೧ ಮತ್ತು ೨ನೆಯ ಪದ್ಯಗಳಿಂದ ಇವರು ಬರೆದಿರುವ ಟೀಕೆಗೆ 'ಷಟ್ಚಕ್ರದೀಪಿಕೆ' ಎಂದು ಹೆಸರು, ವಿಟ್ಠಲ ಪಂಡಿತನು ಈತನ ತಂದೆ, ಇವನು ಶ್ರೀಚಕ್ರಪೂಜೆ, ಶ್ರೀವಿದ್ಯೋಪಾಸನೆಯನ್ನು ಮಾಡುವವನು, ಕನ್ನಡ ಕವಿಯು ಎಂಬುದು ಗೊತ್ತಾಗುತ್ತದೆ. ಟೀಕೆಯ ಅನೇಕ ಸ್ಥಳಗಳಲ್ಲಿ 'ವೇದಾರ್ಥವನ್ನು ಪ್ರಾಕೃತಟೀಕಿನಲ್ಲಿ ಬರೆಯಬಾರದು' ಎಂದು ಹೇಳಿರುವುದರಿಂದ ಇವನು ವೇದಾಧಿಕಾರ ಉಳ್ಳವನೆಂಬುದಾಗಿ ಊಹಿಸಬಹುದು.

ಈ ವ್ಯಾಖ್ಯಾನವು ಹಳೆಗನ್ನಡದಲ್ಲಿದ್ದರೂ ಮೂಲದ ಅರ್ಥವನ್ನೂ ತಾತ್ಪರ್ಯವನ್ನೂ ತಿಳಿಯಲು ಬಹಳ ಅನುಕೂಲವಾಗಿದೆ. ಈ ವ್ಯಾಖ್ಯಾನವನ್ನೂ ಲಕ್ಷ್ಮೀಧರಾಚಾರ್ಯರಚಿತವಾದ ಸಂಸ್ಕೃತವ್ಯಾಖ್ಯಾನವನ್ನೂ ಪರಿಶೀಲನೆ ಮಾಡಿದ್ದರಲ್ಲಿ ಸಂಸ್ಕೃತವ್ಯಾಖ್ಯಾನದಲ್ಲಿರುವ ವೇದವ್ಯಾಖ್ಯಾನಭಾಗವನ್ನು ಬಿಟ್ಟು ಉಳಿದ ಭಾಗವನ್ನು ಸಂಪೂರ್ಣವಾಗಿ ಅನುವಾದ ಮಾಡಿದ್ದಾರೆಂದು ಹೇಳಬಹುದಾಗಿದೆ. ಈ ವ್ಯಾಖ್ಯಾನದ ೧೧೫ನೆಯ ಪುಟದಲ್ಲಿ ಲಕ್ಷ್ಮೀಧರಾಚಾರ್ಯರ ಹೆಸರನ್ನು ಹೇಳಿರುವುದರಿಂದ ಲಕ್ಷ್ಮೀಧರಾಚಾರ್ಯರೂ ಅವರ ವ್ಯಾಖ್ಯಾನವೂ ಇದಕ್ಕಿಂತ ಹಿಂದಿನದು.

ಈ ಕೃತಿಯ ಕಾಲ ಸುಮಾರು ಕ್ರಿ.ಶ. ೧೨೦೦ ಎನ್ನಬಹುದು.

ಈತನ ಕೃತಿಗೂ ಆಗಲೇ ಸುಪ್ರಸಿದ್ಧವಾಗಿರುವ ಕೃತಿಗೂ ಶ್ಲೋಕಗಳ ಆನುಪೂರ್ವಿ—

ಸಂಸ್ಕೃತ—೧-೨೯, ೩೦, ೩೧-೮೯, ೯೦, ೯೧, ೯೨, ೯೩, ೯೪, ೯೫, ೯೬, ೯೭, ೯೮, ೯೯-೧೦೦.

ಕನ್ನಡ—೧-೨೯, ೯೬, ೩೦-೮೮, ೯೦-೯೧, ೯೪, ೯೨, ೯೫, ೯೩, ೯೭, ೯೮, ೯೯-೧೦೦.

ಈ ರೀತಿ ಇದೆ.

ಈ ಗ್ರಂಥವನ್ನು ಮುದ್ರಿಸಲು ಆಧಾರವಾಗಿ ಇಟ್ಟುಕೊಂಡಿರುವ ಕೈಬರಹದ ಪುಸ್ತಕಗಳು ಎರಡು—

(1) ನಂದಿನಾಗರಾಕ್ಷರ ತಾಳಪತ್ರಾತ್ಮಕ ಶುದ್ಧಪ್ರತಿ 'ಕ' ಸಂಜ್ಞಿಕ.
(2) ಕನ್ನಡಾಕ್ಷರ ಕಾಗದಪತ್ರಾತ್ಮಕ ಶುದ್ಧಪ್ರತಿ 'ಖ' ಸಂಜ್ಞಿಕ.

ಹಳಗನ್ನಡದಲ್ಲಿ ಬರೆದಿರುವ ಈ ವ್ಯಾಖ್ಯಾನದಲ್ಲಿ ಸ್ಪಷ್ಟವಾಗಿ ತಾತ್ಪರ್ಯವಾಗದೆ ಇರುವ ಕಡೆಗಳಲ್ಲಿ ಉಚಿತವಾದ ಟಿಪ್ಪಣಿಗಳನ್ನು ಕೊಡಲಾಗಿದೆ.

ಅರುಣಾಂ ಕರುಣಾತರಂಗಿತಾಕ್ಷೀಂ
ಧೃತಪಾಶಾಂಕುಶಪುಷ್ಪಬಾಣಹಸ್ತಾಮ್ ।
ಅಣಿಮಾದಿಭಿರಾವೃತಾಂ ಮಯೂಖೈ
ರಹಮಿತ್ಯೇವ ವಿಭಾವಯೇ ಭವಾನೀಮ್ ॥

ಚಿಂತಾಮಣಿಗೃಹ ಮತ್ತು ಶ್ರೀಚಕ್ರವರ್ಣನಂ

ಮೊದಲು ತ್ರಿಪುರಾಂಡಂ, ಇದಕ್ಕೆ ರಥಾಂಡವೆಂಬುದಾಗಿಯೂ ವಿಮಾನಾಂಡವೆಂಬುದಾಗಿಯೂ ಬ್ರಹ್ಮಾಂಡವೆಂಬುದಾಗಿಯೂ ಹೆಸರುಂಟು. ಇದರ ಮಧ್ಯದಲ್ಲಿ ರತ್ನಮಯವಾದ ದ್ವೀಪವಿರುವುದು. ತ್ರಿಪುರಾಂಡದ ಗೋಡೆಯಿಂದ ರತ್ನದ್ವೀಪದವರೆಗ ಸುಧಾಸಮುದ್ರವಿರುವುದು. ಈ ದ್ವೀಪದ ಸುತ್ತಲೂ ಕಲ್ಪವೃಕ್ಷಗಳ ತೋಟವಿರುವುದು. ಆ ತೋಟದಲ್ಲಿ ತಂತಮ್ಮ ಭೈರವ ಸಮೇತರಾದ ಯೋಗಿನೀಗಣಗಳು ತ್ರಿಪುರಸುಂದರೀಪ್ರಸಾದದಿಂದ ನಿತ್ಯತೃಪ್ತರಾಗಿ ಕ್ರೀಡಿಸುತ್ತಿರುವರು. ದ್ವೀಪದ ಮಧ್ಯದಲ್ಲಿರುವ ಚಿಂತಾಮಣಿಗೃಹದ ಸುತ್ತಲೂ ಇಪ್ಪತ್ತೈದು ಪ್ರಾಕಾರಗಳು (ಕೋಟೆಗಳು) ಇರುವುವು. ಅವು—

ಅಯೋಮಯಸ್ತು ಪ್ರಥಮಃ ಪ್ರಾಕಾರಃ ಪರಿಕೀರ್ತಿತಃ ।
ತದಂತಃ ಸೀಸರಚಿತಃ ಪ್ರಾಕಾರಃ ಸ್ಯಾದ್ದ್ವಿತೀಯಕಃ ॥

ತತೋ ವಂಗಮಯಶ್ಚಾರಕೂಟಾಕಾರಸ್ತ್ವನಂತರಃ ।
ತತಃ ಕಾಂಸ್ಯಮಯಸ್ತಾಮ್ರಪ್ರಾಕಾರೋ ರಾಜತಃ ಪರಃ ॥

ಸ್ವರ್ಣಾಕಾರಸ್ತತಶ್ಚೇತಿ ಹ್ಯಷ್ಟೌ ಧಾತುಮಯಾಃ ಪರಾಃ ।
ಪುಷ್ಯರಾಗಮಯಃ ಪದ್ಮರಾಗರತ್ನಮಯಃ ಪರಃ ॥

ಗೋಮೇಧಕಸ್ತತೋ ವಜ್ರಪ್ರಾಕಾರಃ ಸ್ಯಾತ್ತತಃ ಪರಃ ।
ವೈಡೂರ್ಯಶ್ಚೇಂದ್ರನೀಲೇನ ಕೃತೋ ಮರಕತಃ ಪರಃ ॥

ಮೌಕ್ತಿಕೋ ವೈದ್ರುಮಶ್ಚಾನ್ಯೋ ನವರತ್ನಕೃತಃ ಪರಃ ।
ವಿಚಿತ್ರರತ್ನಪ್ರಾಕಾರಶ್ಚೇತ್ಯೇಕಾದಶ ಸುಂದರಿ ॥

ನವರತ್ನಕೃತಾಂಸ್ತತ್ರ ಪ್ರಾಕಾರಾನಪಿ ಷಟ್ ಶ್ರುಣು ।
ಅಹಂಕಾರಮಯಸ್ತಸ್ಮಾದಾಂತರಶ್ಚಿತ್ತಸಂಜ್ಞಿತಃ ॥

ತತೋ ಬುದ್ಧಿಮಯಸ್ತಸ್ಮಾದಿತರಸ್ತು ಮನೋಮಯಃ ।
ತೇಜೋಮಯಸ್ತತೋ ಜ್ಞೇಯೋ ಮಹಾಶೃಂಗಾರಸಂಜ್ಞಿತಃ ॥

ಇತ್ಯೇವಂ ಕಥಿತಾಃ ಪಂಚವಿಂಶತ್ಪ್ರಾಕಾರಕಾಃ ಶುಭಾಃ ॥

ಎಂಬುದಾಗಿ ಹೇಳಿದಂತೆ ಕಬ್ಬಿಣ, ಸೀಸ, ತಗರ, ಹಿತ್ತಾಳೆ, ಕಂಚು, ತಾಮ್ರ, ಬೆಳ್ಳಿ, ಚಿನ್ನ ಎಂಬ ಧಾತುಮಯವಾದ ಎಂಟು ಪ್ರಾಕಾರಗಳು, ಪುಷ್ಯರಾಗ, ಪದ್ಮರಾಗ, ಗೋಮೇಧಕ, ವಜ್ರ, ವೈಡೂರ್ಯ, ಇಂದ್ರನೀಲ, ಮರಕತ,

ಮುತ್ತು, ಹವಳ, ನವರತ್ನ, ವಿಚಿತ್ರರತ್ನ ಎಂಬ ಹನ್ನೊಂದು ರತ್ನಮಯವಾದ ಪ್ರಾಕಾರಗಳು. ಅಹಂಕಾರ, ಚಿತ್ತ, ಬುದ್ಧಿ, ಮನಸ್ಸು, ತೇಜಸ್ಸು, ಮಹಾಶೃಂಗಾರ ಎಂಬ ತತ್ತ್ವಮಯವಾದ ಆರು ಪ್ರಾಕಾರಗಳೂ, ಒಟ್ಟು ಇಪ್ಪತ್ತೈದು ಪ್ರಾಕಾರ ಗಳು.

ಈ ಪ್ರಾಕಾರಗಳು ಒಂದಕ್ಕೊಂದು ಎತ್ತರವಾಗಿಯೂ, ನಾಲ್ಕು ದಿಕ್ಕು ಗಳಲ್ಲಿ ದ್ವಾರವುಳ್ಳವುಗಳಾಗಿಯೂ ಉಪರಿಭಾಗದಲ್ಲಿ ಕಲಶಗಳುಳ್ಳವುಗಳಾಗಿಯೂ ಇರುವವು. ಒಂದೊಂದು ಪ್ರಾಕಾರದ ಮಧ್ಯದಲ್ಲಿಯೂ ವಿಸ್ತಾರವಾದ ಬೀದಿಗಳೂ ಅಲ್ಲಲ್ಲಿ ದೊಡ್ಡದೊಡ್ಡ ಉದ್ಯಾನಗಳೂ ಮನೆಗಳೂ ಇರುವವು. ಬೀದಿಗಳಲ್ಲಿ ಭೈರವ ವೀರಭದ್ರ ಮುಂತಾದ ಪುರರಕ್ಷಕರು ನಾನಾವಿಧ ವೇಷಶಸ್ತ್ರಾಸ್ತ್ರಗಳನ್ನು ಧರಿಸಿಕೊಂಡು ಅನೇಕಕೋಟಿ ಗಣ ಮತ್ತು ಗಣಪರೊಡನೆ ಕೂಡಿದವರಾಗಿ ಅಮೃತಸಾಗರ ಪರ್ಯಂತವೂ ನಿರಂಕುಶವಾಗಿ ಸಂಚರಿಸಿಕೊಂಡು ನಿತ್ಯತೃಪ್ತ ರಾಗಿ ಶ್ರೀದೇವಿಯ ಆಲಯವನ್ನು ರಕ್ಷಣೆ ಮಾಡುತ್ತಿರುವರು. ಆಲಯದ್ವಾರ ದಲ್ಲಿರುವ ಬಲಿಪೀಠದ ದಕ್ಷಿಣದಲ್ಲಿ ರಾಜರಾಜೇಶ್ವರನು, ಪೂರ್ವದಲ್ಲಿ ಕ್ಷೇತ್ರ ಪಾಲನು, ಉತ್ತರದಲ್ಲಿ ಭೂತನಾಥನು, ಪಶ್ಚಿಮದಲ್ಲಿ ವಟುಕನು, ಈಶಾನ್ಯದಲ್ಲಿ ಮುಂಜಿಷ್ಮಭೈರವನು ಎಂಬ ಐದು ಬಲೀಶ್ವರರು ಶ್ರೀದೇವಿಯ ಬಲಿಯನ್ನು ಭುಜಿ ಸುತ್ತಾ ನಿತ್ಯತೃಪ್ತರಾಗಿರುವರು. ದೇವ್ಯಾಲಯದ ದಕ್ಷಿಣಭಾಗದಲ್ಲಿ ಗಣಗಳ ಸಮೇತನಾದ ದ್ವೀಪನಾಥನೂ ಉತ್ತರಭಾಗದಲ್ಲಿ ಸರ್ವಕಲಾಧರನಾದ ಗುರುವೂ ಇರುವರು. ಆಲಯದ್ವಾರದೇಶದಲ್ಲಿ ವಿಘ್ನೇಶ ಮತ್ತು ಷಣ್ಮುಖ ಇವರಿಬ್ಬರೂ ಸಪರಿವಾರರಾಗಿರುವರು. ಇವರುಗಳಿಗೂ ಆಲಯಕ್ಕೂ ಮಧ್ಯದಲ್ಲಿ ಕೋಟಿ ಯೋಜನವಿಸ್ತಾರವುಳ್ಳ ಮಹಾಶೃಂಗಾರಪರಿಖೆಯು (ಅಗಳು) ಇರುವದು. ದ್ವಾರಪಾಲಕರ ಅಪ್ಪಣೆ ಇಲ್ಲದೇ ಈ ಪರಿಖೆಯನ್ನು ದಾಟಿಕೊಂಡು ದೇವ್ಯಾಲ ಯದಲ್ಲಿ ಯಾರಿಗೂ ಪ್ರವೇಶ ದೊರೆಯುವುದಿಲ್ಲ. ಇದರ ಒಳಭಾಗದಲ್ಲಿ ಮಹಾ ಪದ್ಮವನ, ಅದರಲ್ಲಿ ರತ್ನಸ್ಥಲದಲ್ಲಿ ಹುಟ್ಟಿದ ಮಹಾಪದ್ಮ, ಇದರ ಮಧ್ಯದಲ್ಲಿ ರತ್ನಮಯವಾದ ವೇದಿಕೆಯೂ, ಅದರ ಮೇಲೆ ಸುತ್ತಲೂ ಮೂರುಮೇಖಲೆಗಳೊ ಡನೆಯೂ ಸ್ಥಳಪದ್ಮಗಳೊಡನೆಯೂ ಕೂಡಿದ ಮಹಾವೇದಿಯೂ, ಅದರ ಮಧ್ಯ ದಲ್ಲಿ ಚಿಂತಾಮಣಿಗೃಹವೂ ಇರುವುದು. ಇದುವೇ ಅಖಂಡವಾದ ಒಂದೇ ಚಿಂತಾ ಮಣಿಯಿಂದ ರಚಿಸಲ್ಪಟ್ಟುದೂ ನಾಲ್ಕು ದ್ವಾರವುಳ್ಳುದೂ ಸ್ವರ್ಣಮಯವಾದ ಬಾಗಿಲುಳ್ಳುದೂ ಬಹಳ ಆಶ್ಚರ್ಯಕರವೂ ಆದ ತ್ರಿಪುರಾಲಯವೆಂಬುದು. ಆ ಆಲಯದ ನಾಲ್ಕು ದ್ವಾರಗಳಿಗೆ ಎದುರಾಗಿ ನಾಲ್ಕು ರತ್ನಗೃಹಗಳೂ ಅವುಗಳ ಕೆಳಭಾಗದಲ್ಲಿ ಅದೇ ಮಾದರಿ ರತ್ನಮಯವಾದ ಆರಾರು ಗೃಹಗಳೂ ಇರುವುವು. ಗೃಹದ ಕೆಳಭಾಗದಲ್ಲಿರುವ ಮಹಾವೇದಿಯ ಆಗ್ನೇಯದಿಕ್ಕಿನಲ್ಲಿ ಶಂಭುವಿನಿಂದ ಹುತವಾಗಿ ಜ್ವಲಿಸುವ ಅಗ್ನಿಸಹಿತವಾದ ಅಗ್ನಿಕುಂಡವೂ, ನೈಋತ್ಯದಿಕ್ಕಿನಲ್ಲಿ ನವಚಕ್ರರಥವೂ, ವಾಯವ್ಯದಿಕ್ಕಿನಲ್ಲಿ ಷಟ್ಚಕ್ರರಥವೂ, ಈಶಾನ್ಯದಿಕ್ಕಿನಲ್ಲಿ ಪಂಚಚಕ್ರರಥವೂ ಇರುವುವು. ಅದರ ಕೆಳಗಿನ ರತ್ನವೇದಿಕೆಯಲ್ಲಿ ಅನೇಕವಿಧ

ವಸ್ತುಪೂರ್ಣವಾದ ಪಾತ್ರೆಗಳಿರುವುವು. ಅವುಗಳಲ್ಲಿ ಸುಧಾಮೂರ್ತಿಯಾದ ಅಮೃತೇಶಿಯು ತ್ರಿಪುರೆ ಮುಂತಾದ ದೇವತೆಗಳನ್ನು ಸುಧಾಪಾನದಿಂದ ತೃಪ್ತಿ ಪಡಿಸಿ ಮಹಾಪದ್ಮವನದ ಸುವಾಸನೆಯಿಂದ ತೃಪ್ತಳಾಗಿ ವಿರಾಜಿಸುವಳು.

ಚಿಂತಾಮಣಿಗೃಹದ ನಾಲ್ಕುಭಾಗಗಳಲ್ಲಿಯೂ ಮೇಖಲಾತ್ರಯಗಳ ಮೇಲೆ ಒಂಭತ್ತು ಒಂಭತ್ತು ಪೀಠಗಳನ್ನೊಳಗೊಂಡಿರುವ ನಾಲ್ಕು ವೈಮಾನಿಕ ಗೃಹಗಳಿರುವುವು. ಇವುಗಳಿಗೆ ಆಮ್ನಾಯಗೃಹವೆಂದು ಹೆಸರು.

ಪೂರ್ವಾಮ್ನಾಯ ಗೃಹದಲ್ಲಿರುವ ಒಂಭತ್ತು ಪೀಠಗಳಲ್ಲಿ ಮಧ್ಯದಲ್ಲಿ ಮಾತಂಗಿಯೂ ಇತರ ಎಂಟು ಪೀಠಗಳಲ್ಲಿ ಶುದ್ಧಾ ಮುಂತಾದ ಎಂಟು ಶಕ್ತಿಗಳೂ ಇರುವರು. ದಕ್ಷಿಣಾಮ್ನಾಯದ ಮಧ್ಯಪೀಠದಲ್ಲಿ ವಾರಾಹಿಯೂ ಇತರ ಎಂಟು ಪೀಠಗಳಲ್ಲಿ ಆಪದುದ್ಧಾರಾ ಮುಂತಾದ ಎಂಟು ಶಕ್ತಿಗಳೂ ಇರುವರು. ಪಶ್ಚಿಮಾಮ್ನಾಯದ ಮಧ್ಯಪೀಠದಲ್ಲಿ ಭುವನೇಶಿಯೂ ಇತರ ಎಂಟು ಪೀಠಗಳಲ್ಲಿ ಸೌಭಾಗ್ಯಾ ಮುಂತಾದ ಎಂಟು ಶಕ್ತಿಗಳೂ ಇರುವರು. ಉತ್ತರಾಮ್ನಾಯ ಗೃಹದ ಮಧ್ಯಪೀಠದಲ್ಲಿ ಕಾಲಸಂಕರ್ಷಣಿಯೂ ಇತರ ಎಂಟು ಪೀಠಗಳಲ್ಲಿ ಮಹಾಯೋಗಾ ಮುಂತಾದ ಎಂಟು ಶಕ್ತಿಗಳೂ ಇರುವರು.

ಇವುಗಳ ಕೆಳಭಾಗದಲ್ಲಿರುವ ಅಧರಾಮ್ನಾಯವೆಂಬ ಹೆಸರುಳ್ಳ ವಿಮಾನಾಕಾರವಾದ ಇಪ್ಪತ್ತುನಾಲ್ಕು ಗೃಹಗಳಲ್ಲಿ ಈಶಾನಕೋಣದಿಂದ ಕ್ರಮವಾಗಿ ಮಹಾಮಾಯಾ ಮುಂತಾದ ಇಪ್ಪತ್ತುನಾಲ್ಕು ದೇವತೆಗಳು ಅವರವರಿಗೆ ಉಚಿತವಾದ ಪರಿವಾರದೊಡನೆ ಇರುವರು.


ಚಿಂತಾಮಣಿಗೃಹದ ಒಳಭಾಗದಲ್ಲಿರುವ ಊರ್ಧ್ವಾಮ್ನಾಯವೆಂಬ ಹೆಸರುಳ್ಳ ಹದಿನಾರು ಗೃಹಗಳಲ್ಲಿ ಚಕ್ಷುಷ್ಮತೀ ಮುಂತಾದ ಹದಿನಾರು ದೇವತೆಗಳಿರುವರು. ಚಿಂತಾಮಣಿಗೃಹದ ಹೊರಗಿರುವ ಪಂಚಾಮ್ನಾಯಗಳಿಗೂ ಅಧಿಪನಾದ ಶಂಭುನಾಥನು ಅನ್ನಪೂರ್ಣಾದೇವಿಯೊಡನೆ ವಿರಾಜಿಸುವನು. ಚಿಂತಾಮಣಿಗೃಹದ ದ್ವಾರಗೃಹಗಳ ಮೇಲುಭಾಗದ ಎರಡು ಕಡೆಯಲ್ಲಿಯೂ ತುರೀಯಾಂಬೆಯೂ, ಮಿಶ್ರೆಯೂ ಇರುವರು. ಗೃಹದ್ವಾರದ ಪಾರ್ಶ್ವಗೋಡೆಯ ಎರಡು ಕಡೆಯಲ್ಲಿಯೂ ದಕ್ಷಿಣದಲ್ಲಿ ಮಂತ್ರಮಾತಂಗೀ ಉತ್ತರದಲ್ಲಿ ವಾರಾಹೀ ಇವರಿಬ್ಬರೂ ಎದುರೆದುರಾಗಿಯೂ ಶ್ರೀದೇವಿಯ ಸಮಸ್ತ ಕಾರ್ಯನಿರ್ವಾಹದಲ್ಲಿ ದಕ್ಷರಾಗಿಯೂ ಇರುವರು. ಇವರಿಬ್ಬರ ಅಪ್ಪಣೆಯನ್ನು ಪಡೆದೇ ಚಿಂತಾಮಣಿ ಗೃಹದಲ್ಲಿ ಪ್ರವೇಶಿಸಬೇಕು. ಈ ಗೃಹದ ನಿಋುತಿ ಮುಂತಾದ ದಿಕ್ಕುಗಳಲ್ಲಿ ಕ್ರಮವಾಗಿ ಗಣೇಶ್ವರ, ದುರ್ಗಾ, ಕ್ಷೇತ್ರಪಾಲ, ಶಾರದಾ, ಕೃತಯುಗಾಂಬಾ, ತ್ರೇತಾಯುಗಾಂಬಾ, ದ್ವಾಪರಯುಗಾಂಬಾ, ಕಲಿಯುಗಾಂಬಾ, ನಾಲ್ಕು ವೇದಗಳು ಸಿಂಹ, ವೃಷಭ, ವರಾಹ ಹಂಸ(ವಾಹನಗಳೂ) ಇವು ಹದಿನಾರು ಇರುವುವು. ಇವುಗಳ ಮಧ್ಯದಲ್ಲಿ ಅಷ್ಟದಳಪದ್ಮಾಕಾರವಾದ ರತ್ನಸಿಂಹಾಸನವು ಪ್ರಕಾಶಿಸುವುದು. ಆ ಸಿಂಹಾಸನಕ್ಕೆ ವಿಮಲಾ ಮುಂತಾದ ಒಂಭತ್ತು ಪೀಠಶಕ್ತಿಗಳಿರುವರು. ಈ ಸಿಂಹಾಸನದ ಮಧ್ಯದಲ್ಲಿ ಹದಿನಾರು ಆವರಣ ಸಹಿತವೂ ಹದಿನೇಳು ಪೀಠರೂಪವೂ

ಆದ ಮಾತೃಕಾಚಕ್ರಮಂಡಲವಿರುವುದು, ಮಧ್ಯದಲ್ಲಿ ಬಿಂದು ಮಹಾಪೀಠ, ಬಿಂದುವಿನ ಹೊರಭಾಗದಲ್ಲಿ ಬೈಲು ಪ್ರದೇಶ, ಅದರ ಮುಂದೆ ಹದಿನಾರು ವೃತ್ತಗಳು. ಅಡ್ಡವಾದ ಮೂವತ್ತಾರು ರೇಖೆಗಳು ಇರುವುವು. ಈ ರೇಖೆಗಳಿಂದ ಒಂದೊಂದಾವರಣವೂ ಮೂವತ್ತಾರು ಕೋಣಯುತ ವಾಗಿಯೂ ಬಾಹ್ಯದಿಂದ ಒಳಗೆ ಹೋಗುತ್ತಾ ಹೋಗುತ್ತಾ ಒಂದ ಕ್ಕಿಂತೊಂದು ಉನ್ನತವಾಗಿಯೂ ಇರುವುದು. ಮಧ್ಯದಲ್ಲಿರುವ ಬಿಂದುಮಹಾ ಪೀಠದ ನಾಲ್ಕು ದಿಕ್ಕುಗಳಲ್ಲಿರುವ ನಾಲ್ಕು ರತ್ನಮಹಾಸಿಂಹಾಸನಗಳಲ್ಲಿ ಪರಾ ಪಶ್ಯಂತೀ ಮಧ್ಯಮಾ ವೈಖರೀ ರೂಪದಿಂದ ಮಾತೃಕಾಮೂರ್ತಿ ಇರುವುದು. ಮೊದಲನೆಯ ಆವರಣ ಕೋಣಗಳಲ್ಲಿ ಅಕಾರಾದಿ ಕ್ಷಕಾರಾಂತವಾದ ಮೂವ ತ್ತಾರು ಅಕ್ಷರಗಳು. ಎರಡನೆಯ ಆವರಣ ಕೋಣಗಳಲ್ಲಿ ಆಕಾರಾದಿ ಕ್ಷಾಕಾರಾಂತ ವಾದ ಮೂವತ್ತಾರು ಅಕ್ಷರಗಳು. ಈ ರೀತಿ ಹದಿನಾರು ಆವರಣಗಳಲ್ಲಿಯೂ ಮೂವತ್ತಾರು ಮೂವತ್ತಾರಾಗಿ ಮಾತೃಕಾಮೂರ್ತಿಗಳಿರುತ್ತವೆ. ಇದೇ ಮಾತೃಕಾಚಕ್ರವೆಂಬುದು. ಬಿಂದು ಮಹಾಪೀಠದ ಮಧ್ಯದಲ್ಲಿ ಅಮೃತಾಸನವೂ ಅದರ ಮಧ್ಯದಲ್ಲಿ ಬೇರೆ ಪೋತಾಂಬುಜಾಸನವೂ ಇರುವುದು. ಇದರ ಮಧ್ಯ ದಲ್ಲಿ ಪಂಚಪೀಠಾತ್ಮಕವೂ ನಾಲ್ಕು ಆವರಣಗಳುಳ್ಳದ್ದೂ ಆದ ಸುದರ್ಶನ ಚಕ್ರ ವಿರಾಜಿಸುವುದು. ಅದರ ಮಧ್ಯದಲ್ಲಿ ಶ್ರೀಚಕ್ರವಿರುತ್ತದೆ.

ಶ್ರೀ ಚಕ್ರದ ಮೊದಲನೆಯ ಭಾಗವಾದ ಚತುರಶ್ರಕ್ಕೆ ತ್ರೈಲೋಕ್ಯ ಮೋಹನಚಕ್ರವೆಂಬುದಾಗಿಯೂ, ಎರಡನೆಯ ಷೋಡಶದಳ ಪದ್ಮಕ್ಕೆ ಸರ್ವಾ ಶಾಪರಿಪೂರಕಚಕ್ರವೆಂಬುದಾಗಿಯೂ, ಮೂರನೆಯ ಅಷ್ಟದಳಪದ್ಮಕ್ಕೆ ಸರ್ವ ಸಂಕ್ಷೋಭಣಚಕ್ರವೆಂಬುದಾಗಿಯೂ, ನಾಲ್ಕನೆಯ ಚತುರ್ದಶಾರಕ್ಕೆ ಸರ್ವ ಸೌಭಾಗ್ಯದಾಯಕಚಕ್ರವೆಂಬುದಾಗಿಯೂ, ಐದನೆಯ ಬಹಿರ್ದಶಾರಕ್ಕೆ ಸರ್ವಾ ರ್ಥಸಾಧಕಚಕ್ರವೆಂಬುದಾಗಿಯೂ, ಆರನೆಯ ಅಂತರ್ದಶಾರಕ್ಕೆ ಸರ್ವರಕ್ಷಾಕರ ವೆಂಬುದಾಗಿಯೂ, ಏಳನೆಯ ಅಷ್ಟಕೋಣಕ್ಕೆ ಸರ್ವರೋಗಹರವೆಂಬು ದಾಗಿಯೂ, ಎಂಟನೆಯ ತ್ರಿಕೋಣಕ್ಕೆ ಸರ್ವಸಿದ್ಧಿಪ್ರದವೆಂಬುದಾಗಿಯೂ, ಒಂಭತ್ತನೆಯ ಬಿಂದುವಿಗೆ ಸರ್ವಾನಂದಮಯಚಕ್ರವೆಂಬುದಾಗಿಯೂ ಹೆಸರು.

(೧) ಮೊದಲನೆಯ ಭೂಪುರದ ಪಶ್ಚಿಮ ದಿಕ್ಕಿನಲ್ಲಿ ಸರ್ವಸಂಕ್ಷೋ ಭಿಣೀ, ಉತ್ತರದಲ್ಲಿ ವಿಧಾರಿಣೀ, ಪೂರ್ವದಲ್ಲಿ ಸರ್ವಾಕರ್ಷಿಣೀ, ದಕ್ಷಿಣದಲ್ಲಿ ಸರ್ವವಶಂಕರೀ, ವಾಯುವ್ಯದಲ್ಲಿ ಸರ್ವೋನ್ಮಾದಿನೀ, ಈಶಾನ್ಯದಲ್ಲಿ ಸರ್ವಮಹಾಂ ಕುಶಾ, ಆಗ್ನೇಯದಲ್ಲಿ ಖೇಚರೀ, ನಿಋುತಿಯಲ್ಲಿ ಸರ್ವಬೀಜಾ, ಅಧೋಭಾಗ ದಲ್ಲಿ ಸರ್ವಯೋನೀ, ಊರ್ಧ್ವದಲ್ಲಿ ಸರ್ವೇಶ್ವರೀ, ಎಂಬ ಮುದ್ರಾಶಕ್ತಿಗಳಿರು ವರು.

(೨) ಎರಡನೆಯ ಷೋಡಶದಳಪದ್ಮದಲ್ಲಿ—ಪೂರ್ವದಿಂದ ಅಪ್ರದಕ್ಷಿಣ ವಾಗಿ—ಕಾಮಾಕರ್ಷಿಣೀ, ಬುದ್ಧ್ಯಾಕರ್ಷಿಣೀ, ಅಹಂಕಾರಾಕರ್ಷಿಣೀ, ಶಬ್ದಾ ಕರ್ಷಿಣೀ, ಸ್ಪರ್ಶಾಕರ್ಷಿಣೀ, ರೂಪಾಕರ್ಷಿಣೀ, ರಸಾಕರ್ಷಿಣೀ, ಗಂಧಾ


ಉತ್ತರ

ಕರ್ಷಿಣೀ, ಚಿತ್ತಾಕರ್ಷಿಣೀ, ಧೈರ್ಯಾಕರ್ಷಿಣೀ, ಸ್ಮೃತ್ಯಾಕರ್ಷಿಣೀ, ನಾಮಾಕರ್ಷಿಣೀ, ಬೀಜಾಕರ್ಷಿಣೀ, ಆತ್ಮಾಕರ್ಷಿಣೀ, ಅಮೃತಾಕರ್ಷಿಣೀ, ಶರೀರಾಕರ್ಷಿಣೀ, ಎಂಬ ಗುಪ್ತಯೋಗಿನಿಯರಿರುವರು.

(೩) ಮೂರನೆಯ ಅಷ್ಟದಳಪದ್ಮದಲ್ಲಿ--ಪೂರ್ವದಲ್ಲಿ ಅನಂಗಕುಸುಮಾ, ದಕ್ಷಿಣದಲ್ಲಿ ಅನಂಗಮೇಖಲಾ, ಪಶ್ಚಿಮದಲ್ಲಿ ಅನಂಗಮದನಾ, ಉತ್ತರದಲ್ಲಿ ಮದನಾತುರಾ, ಆಗ್ನೇಯದಲ್ಲಿ ಅನಂಗರೇಖಾ, ನಿಋುಋತಿಯಲ್ಲಿ ಅನಂಗವೇಗಿನೀ, ವಾಯುವ್ಯದಲ್ಲಿ ಅನಂಗಾಂಕುಶಾ, ಈಶಾನ್ಯದಲ್ಲಿ ಅನಂಗಮಾಲಿನೀ, ಎಂಬ ಸರ್ವಾಭೀಷ್ಟಪ್ರದ ಯೋಗಿನಿಯರಿರುವರು.

(೪) ನಾಲ್ಕನೆಯ ಚತುರ್ದಶಾರದಲ್ಲಿ--ಪೂರ್ವದಿಂದ ಅಪ್ರದಕ್ಷಿಣವಾಗಿ ಸರ್ವಸಂಕ್ಷೋಭಿಣೀ, ಸರ್ವವಿದ್ರಾವಿಣೀ, ಸರ್ವಾಕರ್ಷಿಣೀ, ಸರ್ವಾಹ್ಲಾದಕಾರಿಣೀ, ಸರ್ವಸಂಮೋಹಿನೀ, ಸರ್ವಸ್ತಂಭನರೂಪಿಣೀ, ಸರ್ವಜೃಂಭಿಣೀ, ಸರ್ವಾಕರ್ಷಣಕಾರಿಣೀ, ಸರ್ವರಂಜಿನೀ, ಸರ್ವೋನ್ಮಾದಿನೀ, ಸರ್ವಾರ್ಥಸಾಧಿನೀ, ಸರ್ವಸಂಪತ್ತಿಪೂರಣೀ, ಸರ್ವಮಂತ್ರಮಯೀ, ಸರ್ವದ್ವಂದ್ವಮಯೀ, ಎಂಬ ಸಂಪ್ರದಾಯ ಯೋಗಿನಿಯರಿರುವರು.

(೫) ಐದನೆಯ ಬಹಿರ್ದಶಾರದಲ್ಲಿ--ಪೂರ್ವದಿಂದ ಅಪ್ರದಕ್ಷಿಣವಾಗಿ ಸರ್ವಸಿದ್ಧಿಪ್ರದಾ, ಸರ್ವಸಂಪತ್ಪ್ರದಾ, ಸರ್ವಪ್ರಿಯಂಕರೀ, ಸರ್ವಮಂಗಳಕಾರಿಣೀ, ಸರ್ವಕಾಮಪ್ರದಾ, ಸರ್ವದುಃಖವಿಮೋಚಿನೀ, ಸರ್ವಮೃತ್ಯುಪ್ರಶಮನೀ, ಸರ್ವವಿಘ್ನನಿವಾರಿಣೀ, ಸರ್ವಾಂಗಸುಂದರೀ, ಸರ್ವಸೌಭಾಗ್ಯದಾಯಿನೀ, ಎಂಬ ಹತ್ತು ಕುಲೋತ್ತೀರ್ಣ ಯೋಗಿನಿಯರಿರುವರು.

(೬) ಆರನೆಯ ಅಂತರ್ದಶಾರದಲ್ಲಿ--ಪೂರ್ವದಿಂದ ಅಪ್ರದಕ್ಷಿಣವಾಗಿ ಸರ್ವಜ್ಞಾ, ಸರ್ವಶಕ್ತಿಃ, ಸರ್ವೈಶ್ವರ್ಯಫಲಪ್ರದಾ, ಸರ್ವಜ್ಞಾನಮಯೀ, ಸರ್ವವ್ಯಾಧಿವಿನಾಶಿನೀ, ಸರ್ವಾಧಾರಸ್ವರೂಪಾ, ಸರ್ವಪಾಪಹರಾ, ಸರ್ವಾನಂದಮಯೀ, ಸರ್ವರಕ್ಷಾಸ್ವರೂಪಿಣೀ, ಸರ್ವೇಪ್ಸಿತಫಲಪ್ರದಾ, ಎಂಬ ಹತ್ತು ನಿಗರ್ಭ ಯೋಗಿನಿಯರಿರುವರು.

(೭) ಏಳನೆಯ ಅಷ್ಟಕೋಣದಲ್ಲಿ--ಪೂರ್ವದಿಂದ ಅಪ್ರದಕ್ಷಿಣವಾಗಿ ವಶಿನೀ, ಕಾಮೇಶೀ, ಮೋದಿನೀ, ವಿಮಲಾ, ಅರುಣಾ, ಜಯಿನೀ, ಸರ್ವೇಶೀ, ಕುಲಸುಂದರೀ, ಎಂಬ ಎಂಟು ರಹಸ್ಯಯೋಗಿನಿಯರಿರುವರು.

(೮) ಎಂಟನೆಯ ತ್ರಿಕೋಣದಲ್ಲಿ--ಮೂರು ಮೂಲೆಗಳಲ್ಲಿಯೂ ಮೂರು ಪೀಠಗಳಿರುವುವು. ಅದರಲ್ಲಿ ಪೂರ್ವದಿಕ್ಕಿನ ಕಾಮರೂಪವೆಂಬ ಪೀಠದಲ್ಲಿ ಕಾಮೇಶ್ವರಿಯೂ, ದಕ್ಷಿಣದಲ್ಲಿ ಪೂರ್ಣಗಿರಿಯೆಂಬ ಪೀಠದಲ್ಲಿ ವಜ್ರೇಶ್ವರಿಯೂ, ವಾಮದಲ್ಲಿರುವ ಜಾಲಂಧರಪೀಠದಲ್ಲಿ ಭಗಮಾಲಿನಿಯೂ ಇರುವರು.

(೯) ತ್ರಿಕೋಣಮಧ್ಯದಲ್ಲಿರುವ ಮಹಾಬಿಂದುವೆಂಬ ಮಹಾಪೀಠದ ಮಧ್ಯದಲ್ಲಿ ಏಕಕಾಲದಲ್ಲಿ ಉದಿಸಿದ ಸಾವಿರಸೂರ್ಯಪ್ರಕಾಶವುಳ್ಳ ವಿಮಾನಾಕಾರವಾದ ಮಂಚವು ಪ್ರಕಾಶಿಸುವುದು. ಆ ಮಂಚಕ್ಕೆ ಬ್ರಹ್ಮನು ಈಶಾನದಿಕ್ಕಿನ

ಕಾಲಾಗಿಯೂ, ವಿಷ್ಣುವು ಅಗ್ನಿದಿಕ್ಕಿನ ಕಾಲಾಗಿಯೂ, ರುದ್ರನು ನಿಋುಋುತಿ ದಿಕ್ಕಿನ ಕಾಲಾಗಿಯೂ, ಈಶ್ವರನು ವಾಯವ್ಯ ದಿಕ್ಕಿನ ಕಾಲಾಗಿಯೂ, ಸದಾಶಿವನು ಮಧ್ಯಫಲಕವಾಗಿಯೂ ಇರುವರು. ಆ ಮಂಚದ ಮಧ್ಯದಲ್ಲಿ ಸರ್ವಕಾಮೇಶ್ವರೀ ಸಚ್ಚಿದಾನಂದರೂಪಿಣೀ ಸರ್ವಾನುಗ್ರಹಶಾಲಿನೀ ಶಿವಾಂಕನಿಲಯಾ ಶಿವಾಭಿನ್ನಾ ಶ್ರೀಚಕ್ರನಗರಸಾಮ್ರಾಜ್ಞಿಯೂ ಆದ ಶ್ರೀ ಮಹಾತ್ರಿಪುರಸುಂದರಿಯು ಸುಖ ವಾಗಿ ವಿರಾಜಿಸುತ್ತಿರುವಳು—ಎಂಬುದಾಗಿ 'ಸುಧಾಸಿಂಧೋರ್ಮಧ್ಯೇ' (ಶ್ಲೋಕ ೮) ಎಂಬ ಶ್ಲೋಕದ ತಾತ್ಪರ್ಯವನ್ನು ಸಂಗ್ರಹಿಸಿ ಬರೆಯಲಾಗಿದೆ.

ಶ್ರೀವಿದ್ಯೆಗೆ ಸಂಬಂಧಪಟ್ಟ ಮುಖ್ಯವಾದ ಕೆಲವು ವಿಷಯಗಳ ಸಂಗ್ರಹ

ಶ್ರೀವಿದ್ಯಾವಿಷಯದಲ್ಲಿ ಸಮಯಮತ ಕೌಲಮತ ಎಂದು ಎರಡು ಭೇದ ಗಳುಂಟು. ಪರ್ಯವಸಾನದಲ್ಲಿ ಇವೆರಡೂ ಒಂದೇ ಆದರೂ ಇತರ ವಿಷಯ ಗಳಲ್ಲಿ ಪರಸ್ಪರ ವಿರುದ್ಧವಾದುವು.

ಪರಮಶಿವ (ಕಾಮೇಶ್ವರ), ಪಾರ್ವತಿ (ಕಾಮೇಶ್ವರೀ) ಇವರನ್ನು ಸಮಭಾವನೆಯಿಂದ ಪೂಜಿಸುವುದು ಸಮಯಮತ. ಈ ಮತದಲ್ಲಿ ವಿಯಚ್ಚಕ್ರ ಪೂಜೆಯು ಮುಖ್ಯ. ವಿಯತ್ (ಆಕಾಶವು) ಆಂತರ ಬಾಹ್ಯವೆಂದು ಎರಡು. ಆಂತರವಾದದ್ದು ಹೃದಯಾಕಾಶ. ಉತ್ತಮಾಧಿಕಾರಿಗಳು ಹೃದಯಾಕಾಶದಲ್ಲಿ ಶ್ರೀದೇವಿಯನ್ನು ಮಾನಸಿಕವಾದ ಧ್ಯಾನಾದಿ ಉಪಚಾರಗಳಿಂದ ಪೂಜಿಸುವರು. ಇವರಿಗೆ ಬಾಹ್ಯಗಳಾದ ಜಲ ಪುಷ್ಪ ಮುಂತಾದ ಸಾಮಗ್ರಿಗಳು ಬೇಕಾಗಿಲ್ಲ. ಮಧ್ಯಮಾಧಿಕಾರಿಗಳು ಬಾಹ್ಯಾಕಾಶದಲ್ಲಿರುವ ಶುದ್ಧವಾದ ಪ್ರದೇಶದಲ್ಲಿ ಶ್ರೀ ಚಕ್ರವನ್ನು ನಿರ್ಮಾಣಮಾಡಿ ಅದನ್ನು ಬಾಹ್ಯಸಾಮಗ್ರಿಗಳಿಂದ ಪೂಜಿಸುವರು. ಸಮಯಿಗಳಿಗೆ ಮೂಲಾಧಾರ ಸ್ವಾಧಿಷ್ಠಾನ ಚಕ್ರಗಳಲ್ಲಿ ಪೂಜೆಯಿಲ್ಲ. ಇದು ದಕ್ಷಿಣಾಚಾರವುಳ್ಳುದು. ಈ ಮತವೇ ಶ್ರೀ ಶಂಕರಾಚಾರ್ಯರಿಗೆ ಇಷ್ಟವಾದುದು. ಇದರಲ್ಲಿ ವೇದಾಧಿಕಾರವುಳ್ಳವರಿಗೆ ಮಾತ್ರ ಅವಕಾಶವುಂಟು.

ಆಧಾರಚಕ್ರ ಪೂಜೆಮಾಡುವವರು ಕೌಲರು. ಇವರ ಪೂಜೆಗೆ ಎಲ್ಲಾ ಸಾಮಗ್ರಿಗಳೂ (ಮದ್ಯಮಾಂಸಾದಿಸಹಿತವಾಗಿ) ಬೇಕು. ಈ ಕ್ರಮವನ್ನು ವೇದಾಧಿಕಾರವಿಲ್ಲದವರು ಅನುಷ್ಠಿಸುವರು. ಇದರಲ್ಲಿ ದಕ್ಷಿಣಕೌಲ, ಉತ್ತರ ಕೌಲ ಎಂಬ ಎರಡು ಪ್ರಭೇದಗಳು. ಉತ್ತರ ಕೌಲರಲ್ಲಿ ಶಮಣರೆಂಬ ಒಂದು ಭೇದವಿದೆ. ಈ ಮತಗಳಲ್ಲಿ ಪ್ರಧಾನವಾಗಿ ಶಕ್ತಿಗೇ ಪೂಜೆಯೇ ಹೊರತು ಪರಶಿವನಿಗಿಲ್ಲ. ಇವರೆಲ್ಲರಿಗೂ ಪೂಜಾಕ್ರಮಗಳು ಒಂದೇ ಆದರೂ ಶ್ರೀಚಕ್ರ ವಿಷಯದಲ್ಲಿ ವ್ಯತ್ಯಾಸವುಂಟು. ಅದನ್ನು ಇಲ್ಲಿ ವರ್ಣಿಸಲು ಅರ್ಹವಲ್ಲ. ಈ ಮತದಲ್ಲಿ ನಿಯಮವ್ಯತ್ಯಾಸದಿಂದ ಉಪಾಸಕರಿಗೆ ಒಂದುವೇಳೆ ತೊಂದರೆ ಬರುವ ಅವಕಾಶವುಂಟು. ಸಮಯಮತದಲ್ಲಿ ಯಾವ ವಿಧವಾದ ತೊಂದರೆಗೂ

ಅವಕಾಶವಿಲ್ಲದೆ ಇರುವುದರಿಂದ ಈ ಮತವೇ ಉತ್ತಮವಾದುದೆಂದು ಶ್ರೀ ಮದಾಚಾರ್ಯರ ಅಭಿಪ್ರಾಯ.

ಮೂಲಾಧಾರಾದಿ ಆರು ಚಕ್ರಗಳಲ್ಲಿ ಶಿವಶಕ್ತ್ಯಾತ್ಮಕವಾದ ಶ್ರೀಚಕ್ರಕ್ಕೇ ಅಂತರ್ಭಾವ—

ಮೂಲಾಧಾರದಲ್ಲಿ – ತ್ರಿಕೋಣಕ್ಕೂ
ಸ್ವಾಧಿಷ್ಠಾನದಲ್ಲಿ – ಅಷ್ಟಕೋಣಕ್ಕೂ
ಮಣಿಪೂರದಲ್ಲಿ – ಅಂತರ್ದಶಾರಕ್ಕೂ
ಅನಾಹತದಲ್ಲಿ – ಬಹಿರ್ದಶಾರಕ್ಕೂ
ವಿಶುದ್ಧಿಯಲ್ಲಿ – ಚತುರ್ದಶಾರಕ್ಕೂ, (ಆಪತ್ಯ ಆಧಾರಾದಿ ಐದು ಚಕ್ರಗಳಲ್ಲಿ ಐದು ಶಕ್ತಿಚಕ್ರಗಳಿಗೂ ಅಂತರ್ಭಾವ.)

ಆಜ್ಞೆಯಲ್ಲಿ – ಶಿವಚಕ್ರಗಳಾದ ಅಷ್ಟದಳ ಪದ್ಮ, ಷೋಡಶದಳ ಪದ್ಮ, ವೃತ್ತತ್ರಯ, ಭೂಪುರತ್ರಯ ಈ ನಾಲ್ಕು ಚಕ್ರಗಳಿಗೂ ಅಂತರ್ಭಾವ.

ಮೂಲಾಧಾರ ಮೊದಲಾದ ಆರು ಚಕ್ರಗಳು

(೧) ಮೂಲಾಧಾರಚಕ್ರ——ಇದು ಪಾಯುಮೇಢ್ರಗಳ ಮಧ್ಯದಲ್ಲದೆ. ಮೂಲಾಧಾರದಿಂದ ಬ್ರಹ್ಮರಂಧ್ರದ ಪರ್ಯಂತರ ಹೋಗುವ ಸುಷುಮ್ನಾ ನಾಡಿಯ ಮಧ್ಯದಲ್ಲಿರುವ ಆರುಚಕ್ರಗಳಲ್ಲಿ ಮೊದಲನೆಯದು. ಇದರಲ್ಲಿ ನಾಲ್ಕುದಳಗಳು. ಇದರ ಕರ್ಣಿಕೆಯಲ್ಲಿ ಪೃಥಿವೀತತ್ತ್ವ, ಡಾಕಿನೀಶಕ್ತಿ, ಬ್ರಹ್ಮ ಮೂರ್ತಿ, ದಳಗಳಲ್ಲಿ ವರದಾ, ಶ್ರೀ, ಷಂಡಾ, ಸರಸ್ವತೀ ಎಂಬ ನಾಲ್ಕು ಪರಿವಾರಶಕ್ತಿಗಳು ಇರುವರು. ಕಂದ ಮಧ್ಯದಲ್ಲಿರುವ ಸೂಕ್ಷ್ಮರಂಧ್ರದಲ್ಲಿ ಸ್ವಯಂಭೂಲಿಂಗವಿರುವುದು. ಶರೀರವನ್ನು ಚಲನಾದಿಗಳಿಲ್ಲದ ಹಾಗೆ ಧರಿಸುವುದರಿಂದ ಇದಕ್ಕೆ ಮೂಲಾಧಾರವೆಂದು ಹೆಸರು.

(೨) ಸ್ವಾಧಿಷ್ಠಾನ——ಇದು ಲಿಂಗಮೂಲದಲ್ಲಿರುವ ಆರುದಳಪದ್ಮ. ಇದರ ಕರ್ಣಿಕೆಯಲ್ಲಿ ಜಲತತ್ತ್ವ, ರಾಕಿಣೀ, ವಿಷ್ಣುಮೂರ್ತಿ, ದಳಗಳಲ್ಲಿ ಬಂಧಿನೀ, ಭದ್ರಕಾಳೀ, ಮಹಾಮಾಯಾ, ಯಶಸ್ವಿನೀ, ರಕ್ತಾ, ಲಂಬೋಷ್ಠಿಕಾ, ಎಂಬ ಆರು ಪರಿವಾರಶಕ್ತಿಗಳು ಇರುವರು. ಈ ಪದ್ಮದಲ್ಲಿ ದೇವಿಯು ಗ್ರಂಥಿಯನ್ನು ಮಾಡಿಕೊಂಡು ಅಧಿಷ್ಠಿತಳಾಗಿರುವುದರಿಂದ ಇದಕ್ಕೆ ಸ್ವಾಧಿಷ್ಠಾನವೆಂದು ಹೆಸರು. ಇದರ ಅಗ್ರಭಾಗದಲ್ಲಿ ರುದ್ರಗ್ರಂಥಿ ಇರುವುದು. ಈ ಎರಡು ಪದ್ಮಗಳಿಗೂ ಅಗ್ನಿಖಂಡವೆಂದು ಹೆಸರು.

(೩) ಮಣಿಪೂರ—ಇದು ನಾಭಿಮೂಲದಲ್ಲಿರುವ ಹತ್ತುದಳಪದ್ಮ. ಇದರ ಕರ್ಣಿಕೆಯಲ್ಲಿ ಅಗ್ನಿತತ್ತ್ವ, ಲಾಕಿನೀಶಕ್ತಿ, ರುದ್ರಮೂರ್ತಿ, ದಳಗಳಲ್ಲಿ ಡಾಕಿನೀ, ಢಂಕಾರೀ, ಣಾಮಿನೀ, ತಾಮಸೀ, ಸ್ಥಾಣ್ವೀ, ದಾಕ್ಷಾಯಣೀ, ಧಾತ್ರೀ, ನಂದಾ, ಪಾರ್ವತೀ, ಫಟ್ಕಾರೀ ಎಂಬ ಹತ್ತು ಪರಿವಾರಶಕ್ತಿಗಳಿರುವರು. ಶ್ರೀದೇವಿಯು ಇಲ್ಲಿದ್ದುಕೊಂಡು ಈ ಸ್ಥಾನವನ್ನು ಮಣಿಗಳಿಂದ ತುಂಬುತ್ತಾ ಇರುವುದರಿಂದ ಇದಕ್ಕೆ ಮಣಿಪೂರವೆಂದು ಹೆಸರು.

(೪) ಅನಾಹತ—ಇದು ಹೃದಯದೇಶದಲ್ಲಿರುವ ಹನ್ನೆರಡುದಳಪದ್ಮ. ಇದರ ಕರ್ಣಿಕೆಯಲ್ಲಿ ವಾಯುತತ್ತ್ವ, ಕಾಕಿನೀಶಕ್ತಿ, ಈಶಾನಮೂರ್ತಿ, ದಳಗಳಲ್ಲಿ ಕಾಳರಾತ್ರೀ, ಖಾಂತೀತಾ, ಗಾಯತ್ರೀ, ಘಂಟಾಧಾರೀ, ಙಾರ್ಣಾತ್ಮಾ, ಚಂಡಾ, ಛಾಯಾ, ಜಯಾ, ಝಂಕಾರೀ, ಜ್ಞಾನರೂಪಾ, ಟಂಕಹಸ್ತಾ, ಠಂಕಾರೀ, ಈ ಹನ್ನೆರಡು ಪರಿವಾರಶಕ್ತಿಗಳು ಇರುವರು. ನಾದಕ್ಕೆ ತಡೆಯಿಲ್ಲದೆ ಇರುವ ಸ್ಥಾನವಾದುದರಿಂದ ಇದಕ್ಕೆ ಅನಾಹತವೆಂದು ಹೆಸರು. ಇದರ ಅಗ್ರಭಾಗದಲ್ಲಿ ವಿಷ್ಣುಗ್ರಂಥಿ ಇರುವುದು. ಮಣಿಪೂರ ಅನಾಹತ ಈ ಎರಡಕ್ಕೂ ಸೂರ್ಯಖಂಡವೆಂದು ಹೆಸರು.

(೫) ವಿಶುದ್ಧಿ—ಇದು ತಾಲುಮೂಲದಲ್ಲಿರುವ ಹದಿನಾರುದಳಪದ್ಮ. ಇದರ ಕರ್ಣಿಕೆಯಲ್ಲಿ ಆಕಾಶತತ್ತ್ವ, ಶಾಕಿನೀ, ಸದಾಶಿವಮೂರ್ತಿ, ದಳಗಳಲ್ಲಿ ಅಮೃತಾ, ಆಕರ್ಷಿಣೀ, ಇಂದ್ರಾಣೀ, ಈಶಾನೀ, ಉಮಾ, ಊರ್ಧ್ವಕೇಶಿನೀ, ಋದ್ಧಿದಾ, ೠಷಾ, ಌಷಾ, ೡಕಾ, ಏಕಪಾದಾ, ಐಶ್ವರ್ಯಾಭಿರತಾ, ಓಂಕಾರೀ, ಔಷಧಾತ್ಮಾ, ಅಂಬಿಕಾ, ಅಕ್ಷರಾ ಎಂಬ ಹದಿನಾರು ಪರಿವಾರಶಕ್ತಿಗಳಿರುವರು. ಇದು ಶುದ್ಧಸ್ಫಟಿಕದಂತೆ ಸ್ವಚ್ಛವಾಗಿರುವುದರಿಂದ ಇದಕ್ಕೆ ವಿಶುದ್ಧಿ ಎಂದು ಹೆಸರು.

(೬) ಆಜ್ಞಾ—ಇದು ಹುಬ್ಬುಗಳ ಮಧ್ಯದಲ್ಲಿರುವ ಎರಡುದಳಪದ್ಮ. ಇದರ ಕರ್ಣಿಕೆಯಲ್ಲಿ ಮನಸ್ತತ್ತ್ವ, ಹಾಕನೀ, ಇತರಾಖ್ಯಲಿಂಗ, ದಳಗಳಲ್ಲಿ ಕ್ಷಮಾ, ಹಾಸವತೀ ಎಂಬ ಪರಿವಾರಶಕ್ತಿಗಳಿರುವರು. ಈ ಪದ್ಮದಲ್ಲಿ ಶ್ರೀದೇವಿಯು ಮುಂದಿರುವ ಬ್ರಹ್ಮಗ್ರಂಥಿಯನ್ನು ಭೇದಿಸುವ ಪ್ರಯತ್ನದಿಂದ ಕ್ಷಣಕಾಲ ವಿಳಂಬಿಸುವುದರಿಂದ ಸಾಧಕನಿಗೆ ಸ್ವಲ್ಪಜ್ಞಾನ ಉದಿಸಿದಹಾಗೆ ತೋರುವುದರಿಂದ ಇದಕ್ಕೆ ಆಜ್ಞಾ ಎಂದು ಹೆಸರು. ಇದರ ಅಗ್ರಭಾಗದಲ್ಲಿ ಬ್ರಹ್ಮಗ್ರಂಥಿ ಇರುವುದು. ವಿಶುದ್ಧಿ ಆಜ್ಞಾ ಎರಡಕ್ಕೂ ಸೋಮಖಂಡವೆಂದು ಹೆಸರು. ಈ ಆರು ಪದ್ಮಗಳ ದಳಗಳಲ್ಲಿರುವ ಐವತ್ತು ಪರಿವಾರಶಕ್ತಿಗಳೂ ಕ್ರಮವಾಗಿ ಅಕಾರಾದಿ ಕ್ಷಕಾರಾಂತವಾದ ಐವತ್ತು ಮಾತೃಕಾ ಸ್ವರೂಪಿಣಿಯರು.

ಕುಂಡಲಿನೀ

ಮೂಲಾಧಾರಕಂದ ಮಧ್ಯದಲ್ಲಿ ತ್ರಿಪುರಾಸಂಬಂಧವುಳ್ಳ ಮದನಾಗಾರ ರೂಪವಾದ ತ್ರಿಕೋಣವಿರುವುದು. ಅದರಲ್ಲ ಊರ್ಧ್ವಮುಖವಾಗಿ ಸ್ವಯಂಭೂ

ಲಿಂಗವಿದೆ. ಅದರ ಮೇಲುಭಾಗದಲ್ಲಿ ಸರ್ಪಾಕಾರವಾಗಿ ಸ್ವಯಂಭೂ ಲಿಂಗವನ್ನು ಮೂರುವರೆ ಸುತ್ತು ಸುತ್ತಿಕೊಂಡು ಇಂಪಾಗಿಯೂ ಅಸ್ಫುಟವಾಗಿಯೂ ಶಬ್ದಮಾಡುವ ಕುಂಡಿಲಿನೀ ಶಕ್ತಿಯು ಶ್ವಾಸೋಚ್ಛ್ವಾಸ ವಿಭಾಗದಿಂದ ಜಗತ್ತಿನ ಪ್ರಾಣವನ್ನೇ ಧರಿಸಿಕೊಂಡು ತನ್ನ ಹೆಡೆಯಿಂದ ಬ್ರಹ್ಮರಂಧ್ರದ ಮಾರ್ಗವಾದ ಸುಷುಮ್ನಾನಾಡಿಯ ಮುಖವನ್ನು ಮುಚ್ಚಿಕೊಂಡು ಸುಖವಾಗಿ ಯೋಗನಿದ್ರೆಯನ್ನು ಮಾಡುತ್ತಿರುವಳು.

ಯೇನ ಮಾರ್ಗೇಣ ಗಂತವ್ಯಂ ಬ್ರಹ್ಮದ್ವಾರಂ ನಿರಾಮಯಂ ।
ಮುಖೇನಾಚ್ಛಾದ್ಯ ತದ್ದ್ವಾರಂ ಪ್ರಸುಪ್ತಾ ಪರಮೇಶ್ವರೀ ॥

ತಸ್ಯೋರ್ಧ್ವೇ ಬಿಸತಂತುಸೋದರಲಸತ್ಸೂಕ್ಷ್ಮಾ ಜಗನ್ಮೋಹಿನೀ
ಬ್ರಹ್ಮದ್ವಾರಮುಖಂ ಮುಖೇನ ಮಧುರಂ ಸಂಛಾದಯಂತೀ ಸ್ವಯಂ ।
ಶಂಖಾವರ್ತನಿಭಾ ನವೀನಚಪಲಾಮಾಲಾವಿಲಾಸಾಸ್ಪದಾ
ಸುಪ್ತಾ ಸರ್ಪಸಮಾ ಶಿವೋಪರಿಲಸತ್ಸಾರ್ಧತ್ರಿವೃತ್ತಾಕೃತಿಃ ॥
ಕೂಜಂತೀ ಕುಲಕುಂಡಲೀ ಚ ಮಧುರಂ ಮತ್ತಾಳಿಮಾಲಾಸ್ಫುಟಂ
ವಾಚಂ ಕೋಮಲಕಾವ್ಯಬಂಧರಚನಾ ಭೇದಪ್ರಭೇದಕ್ರಮೈಃ ।
ಶ್ವಾಸೋಚ್ಛ್ವಾಸವಿಭಂಜನೇನ ಜಗತಾಂ ಜೀವೋ ಯಯಾ ಧಾರ್ಯತೇ
ಸಾ ಮೂಲಾಂಬುಜಗಹ್ವರೇ ವಿಲಸತಿ ಪ್ರೋದ್ದಾಮದೀಪ್ತ್ಯಾವಳಿಃ ॥

(ಷಟ್ಚಕ್ರನಿರೂಪಣಂ)

ಈ ರೀತಿ ನಿದ್ರಿಸುತ್ತಿರುವ ಕುಂಡಲಿನೀಶಕ್ತಿಯನ್ನು—"ಮೂಲಾಧಾರೇ ಮೂಲವಿದ್ಯಾ ಸ್ವರೂಪಾಂ ಪ್ರಸುಪ್ತಾಂ ಕುಲಕುಂಡಲೀಮ್" ಇತ್ಯಾದಿ ಉಕ್ತ ಪ್ರಕಾರ ಸಾಧಕನು ಉಪಾಯದಿಂದ ಎಚ್ಚರಗೊಳಿಸಿ, ಹೃದಯಸ್ಥಾನದಲ್ಲಿರುವ ಜೀವವನ್ನು ಪ್ರಣವದಿಂದಾಗಲೀ ಹುಂಕಾರದಿಂದಾಗಲೀ ಕುಂಡಲಿನಿಯ ಸ್ಥಾನವಾದ ಮೂಲಾಧಾರವನ್ನು ನಯಿಸಿ, ಅಲ್ಲಿರುವ ಶಕ್ತಿಯೊಡನೆ ಏಕೀಭಾವಮಾಡಿ, ಅನಂತರ ಕುಂಡಲಿನಿಯನ್ನು ಜೀವಸಮೇತವಾಗಿ ಹುಂಕಾರದಿಂದ ಮೂಲಾಧಾರವನ್ನು ಪ್ರಾಪಿಸಿ, ಅಲ್ಲಿರುವ ಇಂದ್ರಬೀಜ, ಬ್ರಹ್ಮದೇವ, ಡಾಕಿನ್ಯಾದಿಶಕ್ತಿ ಇವುಗಳಿಗೆ ಪೃಥಿವೀತತ್ತ್ವದಲ್ಲಿಯೂ, ಪೃಥಿವೀತತ್ತ್ವಕ್ಕೆ ಗಂಧತನ್ಮಾತ್ರೆಯಲ್ಲಿಯೂ ಅಂತರ್ಭಾವಮಾಡಿ, ಗಂಧತನ್ಮಾತ್ರೆ, ಕುಂಡಲಿನೀ, ಜೀವ ಇವರನ್ನು ಸ್ವಾಧಿಷ್ಠಾನವನ್ನು ನಯಿಸಿ, ಅದರಲ್ಲಿ ಅಪಲಾಪಮಾಡಬೇಕು. ಇದೇ ರೀತಿ ಕ್ರಮವಾಗಿ ಆಜ್ಞಾಚಕ್ರ ಪರ್ಯಂತರವೂ ನಯಿಸಿ ಅಲ್ಲಿರುವ ಲಿಂಗ ಮತ್ತು ಶಕ್ತಿಗಳನ್ನು ಮನಸ್ತತ್ತ್ವದಲ್ಲಿ ಲಯಿಸಿ, ಶಬ್ದತನ್ಮಾತ್ರೆಸಹಿತವಾದ ಮನಸ್ಸು ಕುಂಡಲಿನೀ ಶಕ್ತಿ ಜೀವ ಇವರನ್ನು ಬ್ರಹ್ಮಗ್ರಂಥಿ ಭೇದನಪೂರ್ವಕವಾಗಿ ಅಹಂಕಾರ, ಸೂಕ್ಷ್ಮ ಪ್ರಕೃತಿ ಈ ಪರಂಪರೆಯಾಗಿ ಪೂರ್ವಪೂರ್ವವನ್ನು ಉತ್ತರೋತ್ತರದಲ್ಲಿ ಅಂತರ್ಭವಿಸಿ, ಇದೆಲ್ಲವನ್ನೂ ಪರಬಿಂದುವಿನಲ್ಲಿ ವಿಲಾಪನಮಾಡಬೇಕು.

ಅಂದರೆ ಸಹಸ್ರದಳಕಮಲಾಂತರ್ಗತವಾದ ಸದಾಶಿವನೆಂಬ ಇಪ್ಪತ್ತೈದನೆಯ ತತ್ತ್ವವನ್ನು ನಯಿಸಬೇಕು.

ಈ ವಿಷಯದಲ್ಲಿ ಪ್ರಮಾಣವಚನಗಳು:—

ಅಹಂಕಾರೇ ಹರೇದ್ವ್ಯೋಮ ಸಶಬ್ದಂ ತನ್ಮಹತ್ಯಪಿ ।
ಮಹಚ್ಚ ಸರ್ವಶಕ್ತೀನಾಮವ್ಯಕ್ತೇ ಕಾರಣೇ ಪರೇ ॥
ಸಚ್ಚಿದಾನಂದರೂಪಂ ಯದ್ವೈಷ್ಣವಂ ಕಾರಣಂ ಪರಮ್ ।
ಪೃಥಿವ್ಯಾದಿಕ್ರಮಾತ್ಸರ್ವಂ ತತ್ರ ಲೀನಂ ವಿಚಿಂತಯೇತ್ ॥

ಈ ರೀತಿ ನಯಿಸಲ್ಪಟ್ಟ ಕುಂಡಲಿನಿಯು ಹದಿನಾರು ವಯಸ್ಸಿನ ಸುಂದರೀ ರೂಪವನ್ನು ಧರಿಸಿ "ಸುಧಾಸಿಂಧೋರ್ಮಧ್ಯೇ" ಎಂಬ ಎಂಟನೆಯ ಶ್ಲೋಕ ದಲ್ಲಿ ಹೇಳಿರುವಂತೆ ಸದಾಶಿವತತ್ತ್ವದೊಡನೆ ಇಪ್ಪತ್ತಾರನೆಯ ತತ್ತ್ವವಾದ ತಾದಾತ್ಮ್ಯವನ್ನು ಹೊಂದಿ ಕ್ಷಣಕಾಲ ಅಮೃತಪಾನಮಾಡಿ ಮತ್ತಳಾಗಿ ಮೂಲಾಧಾರಾದಿ ಷಟ್‌ಚಕ್ರದೇವತೆಗಳಾದ ಡಾಕಿನೀ ಮೊದಲಾದ ಶಕ್ತಿಗಳನ್ನು ತನ್ಮೂಲಕವಾಗಿ ಉಪಾಸಕನ ಸಮಸ್ತಶರೀರವನ್ನು ತೃಪ್ತಿಪಡಿಸಿ, ಅನಂತರ ಹೋದ ಮಾರ್ಗವಾಗಿಯೇ ಮೇಲಿಂದ ಕೆಳಗಿಳಿದು ಮೂಲಾಧಾರಕಂದವನ್ನು ಪ್ರವೇಶಿಸಿ ಸರ್ಪರೂಪವನ್ನು ತಾಳಿ ಕಂದ ಮಧ್ಯವರ್ತಿಯಾದ ಸ್ವಯಂಭೂಲಿಂಗ ವನ್ನು ಸುತ್ತಿಕೊಂಡು ಸುಖವಾಗಿ ನಿದ್ರಿಸುತ್ತಾಳೆ. ಇದೇ ಅರ್ಥವನ್ನು "ಸುಧಾಧಾರಾಸಾರೈಃ" ಎಂಬ ಹತ್ತನೆಯ ಶ್ಲೋಕದಲ್ಲಿ ಶ್ರೀಮದಾಚಾರ್ಯರು ಹೇಳಿದ್ದಾರೆ.

ಸಹಸ್ರದಳ ಕಮಲದಲ್ಲಿ ಸದಾಶಿವನೊಡನೆ ಸಂಗತಳಾದ ದೇವಿಯನ್ನು 'ಸದಾಷೋಡಶವರ್ಷೀಯಾಂ ಪೀನೋನ್ನತಪಯೋಧರಾಮ್' ಇತ್ಯಾದಿ ಶ್ಲೋಕಗಳಿಂದ ಧ್ಯಾನಮಾಡಿ ಮಾತೃಕಾ ಮಂತ್ರವನ್ನು ನೂರೆಂಟಾವರ್ತಿ ಜಪಿಸಿ ಆಜ್ಞಾಚಕ್ರವನ್ನು ನಯಿಸಿ ಅಲ್ಲಿರುವ ಇತರಾಖ್ಯಲಿಂಗದೊಡನೆ ಸೇರಿಸಬೇಕು. ಹೀಗೆ ಒಂದೊಂದಾಗಿ ಇಳಿಸಿ ಮೂಲಾಧಾರವನ್ನು ಸೇರಿಸಬೇಕು.

ಈ ವಿಷಯಗಳೆಲ್ಲವೂ ಚಂದ್ರಜ್ಞಾನ, ಶಾಕ್ತಾನಂದತರಂಗಿಣೀ, ವರಿವ ಸ್ಯಾರಹಸ್ಯ ಮುಂತಾದ ಗ್ರಂಥಗಳ ಆಧಾರದ ಮೇಲೆ ಬರೆಯಲಾಗಿದೆ.

ಇತಿ ಸಜ್ಜನ ವಿಧೇಯ,

ಸು. ನಾರಾಯಣಸ್ವಾಮಿ ಶಾಸ್ತ್ರೀ
ಸೀನಿಯರ್ ರೀಸರ್ಚ್ ಅಸಿಸ್ಟೆಂಟ್.

ವಿಷಯಗಳು

ಅಕಾರಾದಿಕ್ರಮದಿಂದ ಸೌಂದರ್ಯಲಹರಿಯ ಶ್ಲೋಕಗಳ ಅನುಕ್ರಮಣಿಕೆ

ಸೌಂದರ್ಯಲಹರೀ

॥ ಶ್ರೀಃ ॥

ಶ್ರೀಮಹಾತ್ರಿಪುರಸುಂದರ್ಯೈ ನಮಃ

ಶ್ರೀಶಂಕರಾಚಾರ್ಯಕೃತಾ

ಸೌಂದರ್ಯಲಹರೀ

ಜಕ್ಕಣಾಮಾತ್ಯ ವಿರಚಿತ ಷಟ್ಚಕ್ರದೀಪಿಕಾಸಹಿತಾ

ಶಿವಃ ಶಕ್ತ್ಯಾ ಯುಕ್ತೋ ಯದಿ ಭವತಿ ಶಕ್ತಃ ಪ್ರಭವಿತುಂ
ನ ಚೇದೇವಂ ದೇವೋ ನ ಖಲು ಕುಶಲಃ ಸ್ಪಂದಿತುಮಪಿ
ಅತಸ್ತ್ವಾಮಾರಾಧ್ಯಾಂ ಹರಿಹರವಿರಿಂಚಾದಿಭಿರಪಿ
ಪ್ರಣಂತುಂ ಸ್ತೋತುಂ ವಾ ಕಥಮಕೃತಪುಣ್ಯಃ ಪ್ರಭವತಿ ೧

ಸೌಂದರ್ಯಲಹರಿಯೆನಿಸುವ
ಸೌಂದರವರಸಾಂದಸಪ್ತದಂತರದೆಡೆಗುಂ
ಎಯ್ದುವ ದಾರಿಯ ತೋರುವ
ಐದೊಂದರ ಚಕ್ರದೀಪವಿದು ಬುಧಜನರ್ಗಮ್

ಶ್ರೀಚಕ್ರಾಂಬುಜಭೃಂಗಪುಂಗವ ಸದಾ ಷಟ್ಚಕ್ರಸೌಧಾಂತದೊಳ್
ಸಂಚಾರೀ ಷರಪಾರಿವಪ್ರಕಟಿತ[1] ಶ್ರೀರಾಜ್ಯ[1] ವಿದ್ಯಾಸರೋ
ವೀಚೀಖೇಲನಹಂಸಕನ್ನಡಕವಿ ಶ್ರೀವಿಟ್ಠಲಾಖ್ಯಾಸುಧೀ
ಪ್ರಾಚೀಪರ್ವತಭಾನುಜಕ್ಕಣಮಹಾಮಾತ್ಯಪ್ರಣೀತಂ ಶುಭಮ್

ಶ್ರೀದೇವೀನಿಜರೂಪಸೌಂದರವನೇ[2]ನಾನಾಗಲುಂ[2] ಧ್ಯಾನಿಸ
ಲ್ಕಾದೇವೀದಯುದಿಂದ ಬಪ್ಪುದು ಷಡ್ಚೈಕ್ಯಾನಂಗಸಂಧಾನಮು
ತ್ತಾದೇವೀವರರೂಪೆ ತನ್ನ ತನುವೆಂಬಾಧಿಕ್ಯಸುಜ್ಞಾನ[3]ಮೇ
ಲಾ[3]ದೇಹಾಂತರಮೈಕ್ಯದೇವಿಯೊಡಲೊಳ್ಗುಂಟಾಮಹಾಯೋಗಿಗಮ್

* [ಹೇ ಭಗವತಿ! [4]ಯ ಏಕೋ ದೇವಃ[4] ಶಿವಃ ಶಕ್ತ್ಯಾ ಯುಕ್ತೋ ಭವತಿ ಯದಿ ತದಾ ಪ್ರಭವಿತುಂ ಶಕ್ತಃ. ಏವಂ ನ ಚೇತ್ ಸ್ಪಂದಿತುಮಪಿ ಕುಶಲೋ ನ

---

[1] ಶ್ರೀರಾಜ (ಖ) [2] ಆವಾಗಲಂ (ಖ) [3] ಮೆಲ್ಲಾ (ಖ) [4] ಯತೋ ದೇವಃ (ಕ).

* ಕಂಸದ ಒಳಗಡೆ ಇರುವ ಭಾಗವು ಆಯಾ ಶ್ಲೋಕದ ಅನ್ವಯವೆಂದೂ ಅದರ ಮುಂದಿನ ಭಾಗ ಟೀಕು ಎಂದೂ ತಿಳಿಯುವುದು.

ಖಲು. ಅತಃ ಹರಿಹರವಿರಿಂಚಾದಿಭಿರಪಿ ಆರಾಧ್ಯಾಂ ತ್ವಾಂ ಅಕೃತಪುಣ್ಯಃ ಪ್ರಣಂತುಂ ಸ್ತೋತುಂ ವಾ ಕಥಂ ಪ್ರಭವತಿ.]

ಹೇ ಭಗವತಿಯೇ! [1]ಯ ಏಕೋ ದೇವಃ[1] ಶಿವಃ ಶಕ್ತ್ಯಾ ಯುಕ್ತೋ ಭವತಿ ಯದಿ–[2]ಆವದಿಂದ[2] ಸದಾಶಿವನು ಶಕ್ತಿಯೊಡನೆ ಕೂಡಿದವನಾ[3]ದದುಂ[3]ಟಾದರೆ, ತದಾ ಪ್ರಭವಿತುಂ ಶಕ್ತಃ–ಆಗ ಪ್ರಪಂಚವನ್ನು ಸೃಷ್ಟಿಮಾಡುವುದಕ್ಕೆ ಸಮರ್ಥನು. ಏವಂ ನ ಚೇತ್–ಆ ಸದಾಶಿವನು ಶಕ್ತಿಯೊಡನೆ ಕೂಡದವನಾದರೆ, ಸ್ಪಂದಿತು-ಮಪಿ ಕುಶಲೋ ನ ಖಲು–ಚರಿಸುವದಕ್ಕೂ ಸಮರ್ಥನಲ್ಲವಲ್ಲಾ.

ಯಥಾರ್ಥವು–ನಿರಾಕಾರ ಆಕಾಶರೂಪವಾಗಿ ಇದ್ದಂಥಾ ಪರಶಿವನಿಗೆ ಚರಿಸುವದು ಕೂಡದು. ಸ್ತ್ರೀಪುರುಷನ್ಯಾಯದಿಂದ ಶಿವನು ಶಕ್ತಿಯೊಡನೆ ಕೂಡಿದವನಾಗಿ [4]ಲೋಕವನ್ನು ಸೃಷ್ಟಿಯ ಮಾಡು[4]ವುದಕ್ಕೆ ಸಮರ್ಥನು. ಸ್ತ್ರೀಹೊರತಾಗಿ ಕೇವಲ ಪುರುಷನು [5]ಸಂತಾನವ[5] ಪಡೆಯಲರಿಯನಲ್ಲಾ. ಈ ಅರ್ಥವು ಆಗಮ ರಹಸ್ಯದಲ್ಲಿದೆ. ಶಿವಶಕ್ತಿಯೋಗವು ಶಿವಶಬ್ದದಿಂದ ನವಯೋನಿರೂಪವಾದ ಶ್ರೀಚಕ್ರದಲ್ಲಿ ನಾಲ್ಕುಯೋನಿರೂಪವಾದ ಅರ್ಧಚಕ್ರವು ಹೇಳಲ್ಪಟ್ಟಿತ್ತು. ಶಕ್ತಿ ಶಬ್ದದಿಂದ ಉಳಿದ ಐದುಯೋನಿರೂಪವಾದ ಅರ್ಧಚಕ್ರವು ಹೇಳಲ್ಪಟ್ಟಿತ್ತು. ಈ ಎರಡು ಅರ್ಧವು ಕೂಡಲಾಗಿ ಒಂಬತ್ತು ಯೋನಿರೂಪವಾದ ಶ್ರೀಚಕ್ರ ವಹುದು. ಈ ಶ್ರೀಚಕ್ರದಿಂದಲೆ ಲೋಕದ ಉತ್ಪತ್ತಿಸ್ಥಿತಿಲಯಗಳು [6]ಆಗುವ ವೆಂದು[6] ಮುಂದೆ ಬರೆದೇನು. ಈ ಅರ್ಥಕ್ಕೆ ಸಮ್ಮತಿವಚನ–

'ಚತುರ್ಭಿಃ ಶಿವಚಕ್ರೈಶ್ಚ ಶಕ್ತಿಚಕ್ರೈಶ್ಚ ಪಂಚಭಿಃ
ಶಿವಶಕ್ತ್ಯಾತ್ಮಕಂ ಜ್ಞೇಯಂ ಶ್ರೀಚಕ್ರಂ ಶಿವಯೋರ್ವಪುಃ'

ಹೀಗೆ ಶಿವಶಕ್ತಿಯೋಗ[7]ವು[7] ಇಪ್ಪತ್ತಾರನೆ ತತ್ತ್ವ[7]ವು[7] ಸರ್ವತತ್ತ್ವಕ್ಕೂ ಅತೀತವಾಗಿ ಅನ್ಯವಾದುದೆಂದು ಮುಂದೆ ಬರದೇನು. ಆ ಶಿವಶಕ್ತಿಗಳ ಯೋಗ ದಿಂದ ಜಗದ ಉತ್ಪತ್ತಿಸ್ಥಿತಿಲಯಗಳು ಆಗುವುವು. ಶಕ್ತಿಹೊರತಾಗಿ ಕೇವಲ ಶಿವನಿಂದ ಆಗದು. ಈ ಅರ್ಥಕ್ಕೆ ವಾಮಕೇಶ್ವರಮಹಾತಂತ್ರದಲ್ಲಿ ಸಮ್ಮತಿವಚನ–

'ಪರೋಽಪಿ ಶಕ್ತಿರಹಿತಃ ಶಕ್ತ್ಯಾ ಯುಕ್ತೋ ಭವೇದ್ಯದಿ
ಸೃಷ್ಟಿಸ್ಥಿತಿಲಯಾನ್ ಕರ್ತುಮಶಕ್ತಃ ಶಕ್ತ ಏವ ಹಿ'

ಇದನು "ಚತುರ್ಭಿಃ ಶ್ರೀಕಂಠೈಃ" (ಶ್ಲೋ ೧೧) ಎಂಬ ಶ್ಲೋಕದ ಟೀಕಿನಲ್ಲಿ ವಿವರವಾಗಿ ಬರದೇನು. ಅತಃ ಹರಿಹರವಿರಿಂಚಾದಿಭಿರಪಿ ಆರಾಧ್ಯಾಂ ತ್ವಾಂ–ಅದುಕಾರಣ ವಿಷ್ಣುರುದ್ರಬ್ರಹ್ಮಾದಿದೇವತೆಗಳಿಂದ ಪೂಜೆಗೆ ಯೋಗ್ಯವಾಗಿದ್ದಂಥಾ ನಿನ್ನನು. ಅಕೃತಪುಣ್ಯಃ ಪ್ರಣಂತುಂ ಸ್ತೋತುಂ ವಾ ಕಥಂ ಪ್ರಭವತಿ–ಪುಣ್ಯವ ಮಾಡದೆ ಇದ್ದಂಥಾವನು ಕಾಯಿಕವಾಚಿಕಮಾನಸಿಕವೆಂಬ ಮೂರುಬಗೆಯ ನಮಸ್ಕಾರವನ್ನು ಸ್ತೋತ್ರವನ್ನು ಮಾಡುವುದಕ್ಕೆ ಹೇಗೆ ಸಮರ್ಥನಾದಾನು.

---

1 ಯತೋ ದೇವಃ (ಕ) 2 ಆವದರಿಂದ (ಖ) 3 ದರಾಂ (ಖ) 4 ಲೋಕಮಾನು ಸೃಷ್ಟಿ ಮಾಪು (ಕ) 5 ಸಂತಾನ (ಕ) 6 ಆಗುವದೆಂದು (ಕ) 7 ವೂ (ಖ).

ತನೀಯಾಂಸಂ ಪಾಂಸುಂ ತವ ಚರಣಪಂಕೇರುಹಭವಂ
ವಿರಿಂಚಿಃ ಸಂಚಿನ್ವನ್ ವಿರಚಯತಿ ಲೋಕಾನವಿಕಲಮ್
ವಹತ್ಯೇನಂ ಶೌರಿಃ ಕಥಮಪಿ ಸಹಸ್ರೇಣ ಶಿರಸಾಂ
ಹರಃ ಸಂಕ್ಷುಭ್ಯೈನಂ ಭಜತಿ ಭಸಿತೋದ್ಧೂಲನವಿಧಿಮ್ ೨

[ಹೇ ಭಗವತಿ! ವಿರಿಂಚಿಃ ತವ ಚರಣಪಂಕೇರುಹಭವಂ ತನೀಯಾಂಸಂ ಪಾಂಸುಂ ಸಂಚಿನ್ವನ್ ಲೋಕಾನವಿಕಲಂ ವಿರಚಯತಿ. ಶೌರಿರೇನಂ ಶಿರಸಾಂ ಸಹಸ್ರೇಣ ಕಥಮಪಿ ವಹತಿ. ಹರಃ ಏನಂ ಸಂಕ್ಷುಭ್ಯ ಭಸಿತೋದ್ಧೂಲನವಿಧಿಂ ಭಜತಿ.]

ಈ ಶ್ಲೋಕದಲ್ಲಿ ಸೃಷ್ಟಿಸ್ಥಿತಿಪ್ರಲಯಕ್ಕೆ ಆಸ್ಪದವಾದ ಬ್ರಹ್ಮಾಂಡವನು ಸರ್ವೇಶ್ವರಿಯ ಪಾದರೇಣುಮಾತ್ರವೆಂದು ಹೇಳಲ್ಪಟ್ಟಿತ್ತು. ಹೇ ಭಗವತಿ! ವಿರಿಂಚಿಃ ತವ ಚರಣಪಂಕೇರುಹಭವಂ ತನೀಯಾಂಸಂ ಪಾಂಸುಂ ಸಂಚಿನ್ವನ್ ಲೋಕಾನವಿಕಲಂ ವಿರಚಯತಿ–ಹೇ ಭಗವತಿಯೆ! ಸೃಷ್ಟಿಗೆ ಕರ್ತನಾದ ಬ್ರಹ್ಮನು ನಿನ್ನ ಪಾದಪದ್ಮದಲ್ಲಿ ಹುಟ್ಟಿದಂಥಾ ಸೂಕ್ಷ್ಮವಾದ [1]ರೇಣುವನು[1] ಸಂಗ್ರಹಿಸಿ [2]ಭೂಮಿಯ ಆದಿ[2]ಯಾದ ಮೇಲಣ ಏಳುಲೋಕ, ಅತಳ ಆದಿಯಾದ ಕೆಳಗಣ ಏಳು[3]ಲೋಕ[3], ಕೂಡಾ ಹದಿನಾಲ್ಕುಲೋಕವನು ಒಂದರಲ್ಲಿ ಒಂದು ಕೂಡದಹಾಗೆ ಸ್ಥಾವರಜಂಗಮಾತ್ಮಕವಾಗಿದ್ದಂಥಾ ಪ್ರಪಂಚವನು ಮಾಡುತ್ತಾ ಇದ್ದಾನೆ. ಶೌರಿರೇನಂ ಶಿರಸಾಂ ಸಹಸ್ರೇಣ ಕಥಮಪಿ ವಹತಿ–ಸ್ಥಿತಿಗೆ ಕರ್ತನಾದ ವಿಷ್ಣು ಚತುರ್ದಶಭುವನವನು ಸಾವಿರ ತಲೆಗಳಲ್ಲಿ ಶೇಷರೂಪನಾಗಿ ಅತಿಪ್ರಯತ್ನದಿಂದ ಧರಿಸಿ ಇದ್ದಾನೆ. ಈ ಅರ್ಥಕ್ಕೆ ಸಮ್ಮತಿವಚನ ಚತುಶ್ಶತಿಯಲ್ಲಿ—

'ಶಿಂಶುಮಾರಾತ್ಮಕೋ ವಿಷ್ಣುಃ ಸಪ್ತ ಲೋಕಾನಧಃ ಸ್ಥಿತಾನ್
ದಧ್ರೇ ಶೇಷತಯಾ ಲೋಕಾನ್ ಭೂರಾದೀನೂರ್ಧ್ವತಃ ಸ್ಥಿತಾನ್'

ಹರಃ ಏನಂ ಸಂಕ್ಷು[4]ಭ್ಯ[4] ಭಸಿತೋದ್ಧೂಲನವಿಧಿಂ ಭಜತಿ–ಲಯಕ್ಕೆ ಕರ್ತನಾದ ರುದ್ರನು ಈ ಚತುರ್ದಶಲೋಕಾತ್ಮಕವಾದ ಈ ಪಾದರೇಣುವನು [5]ಚೂರ್ಣವ[5] ಮಾಡಿ ವಿಭೂತಿ[6]ಯ ಉದ್ಧೂ[6]ಲನವಿಧಿಯನು ಮಾಡಿಕೊಳ್ಳುತ್ತಾನೆ. ಈ ಶ್ಲೋಕದ ಅಭಿಪ್ರಾಯ–ಬ್ರಹ್ಮವಿಷ್ಣುಮಹೇಶ್ವರರಿಗೆ ಸೃಷ್ಟಿಸ್ಥಿತಿಲಯಗಳು ಸರ್ವೇಶ್ವರಿಯ ಪಾದರೇಣುವಿನ ಅಧೀನ.

---

1 ರೇಣುವ (ಖ) 2 ಭೂಮಿ ಆದಿ (ಖ) 3 ಲೋಕಗಳೂ (ಖ) 4 ದ್ಯ (ಖ) 5 ಚೂರ್ಣ (ಕ) 6 ಯಲ್ಲುದ್ಧೂ (ಖ).

*

ಅವಿದ್ಯಾನಾಮಂತಸ್ತಿಮಿರಮಿಹಿರದ್ವೀಪನಗರೀ
ಜಡಾನಾಂ ಚೈತನ್ಯಸ್ತಬಕಮಕರಂದಸ್ರುತಿಝುರೀ
ದರಿದ್ರಾಣಾಂ ಚಿಂತಾಮಣಿಗುಣನಿಕಾ ಜನ್ಮಜಲಧೌ
ನಿಮಗ್ನಾನಾಂ ದಂಷ್ಟ್ರಾ ಮುರರಿಪುವರಾಹಸ್ಯ ಭವತಿ ೩

[ಹೇ ಭಗವತಿ! ತವ ಪಾದಾಬ್ಜರೇಣುಶೇಷಃ ಅವಿದ್ಯಾನಾಮಂತಸ್ತಿಮಿರಮಿಹಿರದ್ವೀಪನಗರೀ, ಜಡಾನಾಂ ಚೈತನ್ಯಸ್ತಬಕಮಕರಂದಸ್ರುತಿಝುರೀ, ದರಿದ್ರಾಣಾಂ ಚಿಂತಾಮಣಿಗುಣನಿಕಾ, ಜನ್ಮಜಲಧೌ ನಿಮಗ್ನಾನಾಂ ಮುರರಿಪುವರಾಹಸ್ಯ ದಂಷ್ಟ್ರಾ ಭವತಿ.]

ಪೂರ್ವಶ್ಲೋಕದಲ್ಲಿ ಹೇಳಿದ ಸರ್ವೇಶ್ವರಿಯ ಪಾದರೇಣುವಿನ ಸ್ತೋತ್ರ— ಆ ಪಾದರೇಣುವೆಂಥಾದ್ದೆಂದರೆ—ಅವಿದ್ಯಾನಾಮಂತಸ್ತಿಮಿರಮಿಹಿರದ್ವೀಪನಗರೀ— ಅಜ್ಞಾನಿಗಳ ಅಂತಃಕರಣದಲ್ಲಿ ಇದ್ದ ಅಜ್ಞಾನವೆಂಬ ಕತ್ತಲೆಗೆ ಸೂರ್ಯನ ಉದಯವಾಗುವ ಸಮುದ್ರಮಧ್ಯದಲ್ಲಿ ಇದ್ದ ಪಟ್ಟಣವಾಗಿದ್ದಂಥಾದ್ದು, ಜಡಾನಾಂ ಚೈತನ್ಯಸ್ತಬಕಮಕರಂದಸ್ರುತಿಝುರೀ—ಮಂದಬುದ್ಧಿಗಳಾಗಿದ್ದಂಥಾವರಿಗೆ ಜ್ಞಾನವೆಂಬ [1]ಪೂವಿನ[1] ಗೊಂಚಲ ಪುಷ್ಪರಸದ ಹನಿಯ ಪ್ರವಾಹವಾಗಿದ್ದಂಥಾದ್ದು, ದರಿದ್ರಾಣಾಂ ಚಿಂತಾಮಣಿಗುಣನಿಕಾ—ದರಿದ್ರರುಗಳಿಗೆ ಇಷ್ಟಾರ್ಥವ ಕೊಡುವಂಥಾ ಚಿಂತಾಮಣಿರತ್ನಗಳ ಸಮೂಹವಾಗಿದ್ದಂಥಾದ್ದು, ಜನ್ಮಜಲಧೌ ನಿಮಗ್ನಾನಾಂ ಮುರರಿಪುವರಾಹಸ್ಯ ದಂಷ್ಟ್ರಾ ಭವತಿ—[2]ಹುಟ್ಟೋಣವೆಂಬ[2] ಸಮುದ್ರದಲ್ಲಿ ಮುಳುಗಿದ್ದವರಿಗೆ ಉದ್ಧರಿಸುವ [3]ವಿಷ್ಣುವಿನ ಅವತಾರದ[3] ಕೋರೆದಾಡೆಯಾಗಿಯಿದ್ದಂಥಾದ್ದು [4]ಆ[4] ಪಾದರೇಣು. ಈ ಶ್ಲೋಕದಲ್ಲಿ ಪರಿ[5]ಣಾಮ ಉಲ್ಲೇ[5]ಖರೂಪಕ ಈ ಮೂರು ಅಲಂಕಾರಗಳು.

ತ್ವದನ್ಯಃ ಪಾಣಿಭ್ಯಾಮಭಯವರದೋ ದೈವತಗಣಃ
ತ್ವಮೇಕಾ ನೈವಾಸಿ ಪ್ರಕಟಿತವರಾಭೀತ್ಯಭಿನಯಾ
ಭಯಾತ್ತ್ರಾತುಂ ದಾತುಂ ಫಲಮಪಿ ಚ ವಾಂಛಾಸಮಧಿಕಂ
ಶರಣ್ಯೇ ಲೋಕಾನಾಂ ತವ ಹಿ ಚರಣಾವೇವ ನಿಪುಣೌ ೪

[ಹೇ ಭಗವತಿ! ಲೋಕಾನಾಂ ಶರಣ್ಯೇ ತ್ವದನ್ಯೋ ದೈವತಗಣಃ ಪಾಣಿಭ್ಯಾಮಭಯವರದಃ. ಏಕಾ ತ್ವಮೇವ ಪಾಣಿಭ್ಯಾಂ ಪ್ರಕಟಿತವರಾಭೀತ್ಯಭಿನಯಾ ನೈವಾಸಿ ಹಿ ಇತಿ ಸಂಚಿತ್ಯ ತವ ಚರಣಾವೇವ ಭಯಾತ್ತ್ರಾತುಂ ವಾಂಛಾಸಮಧಿಕಂ ಫಲಮಪಿ ಚ ದಾತುಂ ನಿಪುಣೌ.]

---

1 ಹುವ್ವಿನ (ಖ) 2 ಹುಟ್ಟು ಮೊದಲಾದ ಸಂಸಾರವೆಂದರ್ಥ 3 ವಿಷ್ಣುವಿನ ಅವತಾರದ ವರಾಹದ (ಖ) 4 ಈ (ಖ) 5 ಣಾಮೋಲ್ಲೇ (ಖ).

ಹೇ ಭಗವತಿಯೇ ! ಲೋಕಾನಾಂ ಶರಣ್ಯೇ–ಹದಿನಾಲ್ಕು ಲೋಕಗಳಿಗೆ ಗತಿಯಾಗಿದ್ದಂಥಾವಳೇ ! ತ್ವದನ್ಯೋ ದೈವತಗಣಃ ಪಾಣಿಭ್ಯಾಮಭಯ-ವರದಃ–ನೀನು ಹೊರತಾದ ಇಂದ್ರಾದಿತ್ಯಾದಿದೇವಸಮೂಹವು ಒಂದು ಕೈಯಲ್ಲಿ [1]ಭಯಗಳು[1] ಇಲ್ಲದ ಹಾಗೆ ರಕ್ಷಿಸುವ ಅಭಯ ಮುದ್ರೆಯನು, ಮತ್ತೊಂದು ಕೈಯಲ್ಲಿ ಬೇಡಿದ ಇಷ್ಟಾರ್ಥವ ಕೊಡುವ ವರದ ಮುದ್ರೆಯನು ಧರಿಸಿ ಇಹರು. ಏಕಾ ತ್ವಮೇವ ಪಾಣಿಭ್ಯಾಂ ಪ್ರಕಟಿತವರಾಭೀತ್ಯಭಿನಯಾ ನೈವಾಸಿ ಹಿ–ನೀನು ಒಬ್ಬಳೇ ಎರಡು ಕೈಗಳಿಂದ ಪ್ರಕಟವಾದ ವರದಾಭಯವಾದ ಮುದ್ರೆಗಳು ಇಲ್ಲದವಳು ಅಲ್ಲ. ಇಂದ್ರಾದಿತ್ಯ[2]ದೇವರಹಾಂಗೆ[2] ಎರಡು ಕೈಗಳಲ್ಲಿ ವರದಾಭಯಮುದ್ರೆಯ ಧರಿಸಿದ್ದದುಂಟಾದರೆ ಇಂದ್ರಾದಿತ್ಯಾದಿದೇವತೆಗಳೂ ಸರ್ವೋತ್ಕೃಷ್ಟವಾದ ಸರ್ವೇಶ್ವರಿಯೂ ಸಮಾನವೆಂಬರೆಂದು. ಇತಿ ಸಂಚಿತ್ಯ ತವ ಚರಣಾವೇವ ಭಯಾತ್ತ್ರಾತುಂ ವಾಂಛಾಸಮಧಿಕಂ ಫಲಮಪಿ ಚ ದಾತುಂ ನಿಪುಣೌ–ಹೀಗೆ ವಿಚಾರಿಸಿ ನಿನ್ನ ಎರಡು ಪಾದಗಳು ಭಯದಿಂದ ನೋವು ಇಲ್ಲದಹಾಗೆ ರಕ್ಷಿಸುವದಕ್ಕೂ ಬಯಸಿದುದಕ್ಕಿಂದಧಿಕವಾದ ಫಲವ ಕೊಡುವದಕ್ಕೂ ತಾವೇ ಸಮರ್ಥರಾದರು. ಈ ಶ್ಲೋಕದಲ್ಲಿ ವ್ಯತಿರೇಕಾಲಂಕಾರ ವಾಕ್ಯಲಿಂಗ ಕಾವ್ಯಲಿಂಗಾಲಂಕಾರಗಳು.

ಹರಿಸ್ತ್ವಾಮಾರಾಧ್ಯ ಪ್ರಣತಜನಸೌಂದರ್ಯಜನನೀಂ
ಪುರಾ ನಾರೀಭೂತ್ವಾ ಪುರರಿಪುಮಪಿ ಕ್ಷೋಭಮನಯತ್
ಸ್ಮರೋಽಪಿ ತ್ವಾಂ ನತ್ವಾ ರತಿನಯನಲೇಹ್ಯೇನ ವಪುಷಾ
ಮುನೀನಾಮಪ್ಯಂತಃ ಪ್ರಭವತಿ ಹಿ ಮೋಹಾಯ ಮಹತಾಮ್ ೫

[ಹೇ ಭಗವತಿ ! ಪ್ರಣತಜನಸೌಂದರ್ಯಜನನೀಂ ತ್ವಾಂ ಹರಿರಾರಾಧ್ಯ ಪುರಾ ನಾರೀಭೂತ್ವಾ ಪುರರಿಪುಮಪಿ ಕ್ಷೋಭಮನಯತ್. ಸ್ಮರೋಽಪಿ ತ್ವಾಂ ನತ್ವಾ ರತಿನಯನಲೇಹ್ಯೇನ ವಪುಷಾ ಮಹತಾಂ ಮುನೀನಾಮಪ್ಯಂತ-ರ್ಮೋಹಾಯ ಪ್ರಭವತಿ.]

ಹೇ ಭಗವತಿಯೇ ! ಪ್ರಣತಜನಸೌಂದರ್ಯಜನನೀಂ ತ್ವಾಂ–ಚೆನ್ನಾಗಿ ಕಾಯಿಕವಾಚಿಕಮಾನಸಿಕವೆಂಬ ಮೂರುವಿಧನಮಸ್ಕಾರವ ಮಾಡುವಂಥಾ ಭಕ್ತಜನರಿಗೆ ಸೌಂದರ್ಯವ ಹುಟ್ಟಿಸುವಂಥಾ ಚಕ್ರರೂಪಾದ ವಿದ್ಯಾರೂಪಾಗಿದ್ದಂಥಾ ನಿನ್ನನು, ಹರಿರಾರಾಧ್ಯ–ವಿಷ್ಣುವು ಪೂಜೆಯಮಾಡಿ ಧ್ಯಾನವಮಾಡಿ ಜಪವಮಾಡಿ, ಪುರಾ ನಾರೀಭೂತ್ವಾ ಪುರರಿಪುಮಪಿ ಕ್ಷೋಭಮನಯತ್–ಪೂರ್ವದಲ್ಲಿ ಸ್ತ್ರೀರೂಪವ ಧರಿಸಿ ತ್ರಿಪುರಾಂತಕನಾದ ಜಿತೇಂದ್ರಿಯನ ಮೊದಲಾಗಿಯೂ ಕ್ಷೋಭಿಸಿದನು. ಆದುದರಿಂದ ತ್ರಿಪುರಸೌಂದರಿಯ ಪ್ರಸ್ತಾರಭೇದ

---

[1] ಭಯವು (ಖ) [2] ದೇವರುಗಳಹಾಗೆ (ಖ).

ದಲ್ಲಿ ಒಂದು ಪ್ರಸ್ತಾರಕ್ಕೆ ಋಷಿ ವಿಷ್ಣು. ಈ ಅರ್ಥವು ಋಗ್ವೇದದಲ್ಲಿದೆ. ಸ್ಮರೋಽಪಿ ತ್ವಾಂ ನತ್ವಾ ರತಿನಯನಲೇಹ್ಯೇನ ವಪುಷಾ–ಮನ್ಮಥನೂ ವಿಷ್ಣುವಿನ ಹಾಗೆ ನಿನ್ನನ್ನು ನಮಸ್ಕಾರವಮಾಡಿ ಶ್ರೀಚಕ್ರವನ್ನು ಚೆನ್ನಾಗಿ ಪೂಜೆಯಮಾಡಿ ನಿನ್ನ ಮೂಲಮಂತ್ರವನು ಚೆನ್ನಾಗಿ ಅಭ್ಯಾಸವಮಾಡಿ ಆ ಮಹಿಮೆಯಿಂದ ರತಿದೇವಿಯ ಕಣ್ಣಿಗೆ ಅತಿಪ್ರಿಯವಾದ ದೇಹದಿಂದ, ಮಹತಾಂ ಮುನೀನಾಮಪಿ ಅಂತರ್ಮೋಹಾಯ ಪ್ರಭವತಿ ಹಿ–ಮಹಾತ್ಮವಾಗಿ ಇದ್ದ ಜಿತೇಂದ್ರಿಯರ ಅಂತರಂಗದಲ್ಲಿ ಶಬ್ದಸ್ಪರ್ಶಾದಿವಿಷಯಗಳ ಬಯಕೆಯ ಹುಟ್ಟಿಸುವದಕ್ಕೆ ಸಮರ್ಥ[1] ನಾದಾನು.[1] ಈ ಅರ್ಥಕ್ಕೆ ಸಮ್ಮತಿವಚನ ವಾಮಕೇಶ್ವರಮಹಾತಂತ್ರದ ಚತುಶ್ಶತಿಯಲ್ಲಿ—

'[2]ಏತಾ[2]ಮೇವ ಪುರಾ[3]ರಾಧ್ಯ[3] ವಿದ್ಯಾಂ ತ್ರೈಲೋಕ್ಯಮೋಹಿನೀಮ್
ತ್ರೈಲೋಕ್ಯಂ ಮೋಹಯಾಮಾಸ ಕಾಮಾರಿಂ ಭಗವಾನ್ ಹರಿಃ
ಕಾಮದೇವೋಽಪಿ ದೇವೇಶೀಂ ಮಹಾತ್ರಿಪುರಸುಂದರೀಮ್
ಸಮಾರಾಧ್ಯಾಭವಲ್ಲೋಕೇ ಸರ್ವಸೌಭಾಗ್ಯಸುಂದರಃ'

ಅದುಕಾರಣ ಎಲ್ಲಾ ಬಯಕೆಯ ಹುಟ್ಟಿಸುವ ಮನಸ್ಸಿನ ಸಂಕ್ಷೋಭಣವು ಭಗವತೀ ಪ್ರಸಾದಮಹಿಮೆಯೆಂದು ಶಂಕರಭಗವತ್ಪಾದರ ಅಭಿಪ್ರಾಯ.

ಧನುಃ ಪೌಷ್ಪಂ ಮೌರ್ವೀ ಮಧುಕರಮಯೀ ಪಂಚ ವಿಶಿಖಾಃ
ವಸಂತಃ ಸಾಮಂತೋ ಮಲಯಮರುದಾಯೋಧನರಥಃ
ತಥಾಪ್ಯೇಕಃ ಸರ್ವಂ ಹಿಮಗಿರಿಸುತೇ ಕಾಮಪಿ ಕೃಪಾ-
ಮಪಾಂಗಾತ್ತೇ ಲಬ್ಧ್ವಾ ಜಗದಿದಮನಂಗೋ ವಿಜಯತೇ ೬

[ಹೇ ಹಿಮಗಿರಿಸುತೇ ! ಯಸ್ಯಾನಂಗಸ್ಯ ಧನುಃ ಪೌಷ್ಪಂ, ಮೌರ್ವೀ ಮಧುಕರಮಯೀ, ಪಂಚ ವಿಶಿಖಾಃ, ಸಾಮಂತೋ ವಸಂತಃ, ಆಯೋಧನರಥೋ ಮಲಯಮರುತ್, ಏಕಃ, ತಥಾಪಿ ಅನಂಗಃ, ತೇ ಅಪಾಂಗಾತ್ ಕಾಮಪಿ ಕೃಪಾಂ ಲಬ್ಧ್ವಾ ಸರ್ವಮಿದಂ ಜಗದ್ವಿಜಯತೇ.]

ಪೂರ್ವಶ್ಲೋಕದಲ್ಲಿ ಸರ್ವೇಶ್ವರಿಯ ಪ್ರಸಾದವುಂಟಾದ ಮನ್ಮಥನ ಸಾಮರ್ಥ್ಯವು ಹೇಳಲ್ಪಟ್ಟಿತ್ತು. ಹೇ ಹಿಮಗಿರಿಸುತೇ !–ಹೇ ಹಿಮವತ್ಪರ್ವತನ ಮಗಳೇ !, ಯಸ್ಯಾನಂಗಸ್ಯ ಧನುಃ ಪೌಷ್ಪಂ–ಆವ ಮನ್ಮಥನಿಗೂ ಯುದ್ಧಸಾಧನವಾದ ಬಿಲ್ಲು ಹೂವು, ಹೂವು ಮಹಾಮೃದುವಾದಕಾರಣ ಮುಷ್ಟಿಯಲ್ಲಿ ಹಿಡಿವದು ತೆಗದರೆ ಬಗ್ಗುವದು ಮೊದಲಾದ ಬಿಲ್ಲಿನಕಾರ್ಯ ಹೂವುಗಳಿಗೆ ಕೂಡದೆಂಬುದು ತಾತ್ಪರ್ಯ. ಮೌರ್ವೀ ಮಧುಕರಮಯೀ–ಅಂಥಾ ಹೂವಿನ ಬಿಲ್ಲಿಗೆ ನಾರಿ

[1] ನಾದನು (ಖ) [2] ಏನಾ (ಖ) [3] ಧ್ಯಾತ್ವಾ (ಕ ಖ).

ತುಂಬಿಗಳಸಮೂಹ, ತುಂಬಿಗಳಿಗೆ ಒಂದಕ್ಕೊಂದು ಕೂಡಿ ಪಂಕ್ತಿಯಾ[1]ಗಿಯಿರವಾ[1]ದಕಾರಣ ತುಂಬಿಗಳಿಗೆ ನಾರಿಯಕಾರ್ಯ ಕೂಡದೆಂಬುದು ತಾತ್ಪರ್ಯ. ಪಂಚ ವಿಶಿಖಾಃ–ಐದೇ ಬಾಣಗಳು, ಐದುಬಾಣವನ್ನು ಪ್ರಯೋಗಿಸಿದ ಮೇಲೆ ಮತ್ತೆ ಬಾಣಗಳು ಇಲ್ಲ ಸುಮ್ಮನೆ ಇರಬೇಕು. ಆದರೂ ಐದುಬಾಣಗಳು ಪುಷ್ಪ ಬಾಣಗಳೆಂದು ಪ್ರಸಿದ್ಧವಾದಕಾರಣ ಪುಷ್ಪಕ್ಕೆ ಬಾಣದಕಾರ್ಯ ಕೂಡದೆಂಬುದು ತಾತ್ಪರ್ಯ. ಸಾಮಂತೋ ವಸಂತಃ–ಪ್ರಧಾನಿ ಚೈತ್ರಮಾಸವು, ವಸಂತ ಮಾಸವು ಕಾಲವಿಶೇಷವಾದಕಾರಣ ಬಾಯಿಕಣ್ಣು ಮೊದಲಾದ ಮನುಷ್ಯರೂಪು ಇಲ್ಲ. ಕೂಡಾಕುಳಿತು ಮಾತನಾಡುವಂಥಾ [2]ಪ್ರಧಾನಿ[2]ಕಾರ್ಯ ಕೂಡದೆಂಬುದು ತಾತ್ಪರ್ಯ. ಆಯೋಧನರಥೋ ಮಲಯಮರುತ್–ಯುದ್ಧಸಾಧನವಾದ ರಥವು ಮಲಯಮಾರುತನು, ಮಲಯಪರ್ವತದಲ್ಲಿಯೆ ಇದ್ದಂಥಾದ್ದು, ಸರ್ವದಿಕ್ಕುಗಳ ಲ್ಲಿಯೂ ಇಲ್ಲ, ಆದರೂ ಸರ್ವದಾ ಉಂಟಾಗಿ ಇರದು. ಹಾಗೆ ಇರದು ವಾಯುವಿಗೆ ರಥಕಾರ್ಯ ಕೂಡದೆಂಬುದು ತಾತ್ಪರ್ಯ. ಏಕಃ–ಒಬ್ಬನೇ ಸಹಾಯವಿಲ್ಲದವನು. ತಥಾಪಿ ಅನಂಗಃ– ಹಾಗಾದರೂ ಶರೀರವಿಲ್ಲದವನು. ಇಂಥಾ ಮನ್ಮಥನು, ತೇ ಅಪಾಂಗಾತ್ ಕಾಮಪಿ ಕೃಪಾಂ ಲಬ್ಧ್ವಾ ಸರ್ವಮಿದಂ ಜಗದ್ವಿಜಯತೇ–ನಿನ್ನ ಕಟಾಕ್ಷದಿಂದ ವಾಕ್ಕಿಗೆ ಅಗೋಚರವಾಗಿದ್ದಂಥಾ ದಯವನು ಪಡೆದು ಸಕಲಜಂಗಮಾತ್ಮಕವಾದ ಈ ಲೋಕವನ್ನೂ ಗೆಲು[3]ತಾ[3]ಯಿದ್ದಾನೆ. ಈ ಶ್ಲೋಕದಲ್ಲಿ ವಿಭಾವನಾಲಂಕಾರ.

'ಸುಧಾಸಿಂಧೋರ್ಮಧ್ಯೇ' ಎಂಬ [4]ಶ್ಲೋಕೋಪಯುಕ್ತವಾಗಿ[4] ಸಮಯಿಗಳ ಚತುರ್ವಿಧೈಕ್ಯಾನುಸಂಧಾನಮಹಿಮೆಯಿಂದ ಮಣಿಪೂರಚಕ್ರದಲ್ಲಿ ಸ್ಫುರಿಸಿದ ಭಗವತಿಯನ್ನು ಹೇಳಿದರು—

ಕ್ವಣತ್ಕಾಂಚೀದಾಮಾ ಕರಿಕಲಭಕುಂಭಸ್ತನನತಾ
ಪರಿಕ್ಷೀಣಾ ಮಧ್ಯೇ ಪರಿಣತಶರಚ್ಚಂದ್ರವದನಾ
ಧನುರ್ಬಾಣಾನ್ ಪಾಶಂ ಸೃಣಿಮಪಿ ದಧಾನಾ ಕರತಲೈಃ
ಪುರಸ್ತಾದಾಸ್ತಾಂ ನಃ ಪುರಮಥಿತುರಾಹೋಪುರುಷಿಕಾ 2

[ಕ್ವಣತ್ಕಾಂಚೀದಾಮಾ ಕರಿಕಲಭಕುಂಭಸ್ತನನತಾ ಮಧ್ಯೇ ಪರಿಕ್ಷೀಣಾ ಪರಿಣತಶರಚ್ಚಂದ್ರವದನಾ ಧನುಃ ಬಾಣಾನ್ ಪಾಶಂ ಸೃಣಿಮಪಿ ಕರತಲೈರ್ದ-ಧಾನಾ ಪುರಸ್ತಾತ್ ಪುರಮಥಿತುರಾಹೋಪುರುಷಿಕಾ ಆಸ್ತಾಮ್.]

ಕ್ವಣತ್ಕಾಂಚೀದಾಮಾ–ಧ್ವನಿಕೂಡಿದ ಕಾಂಚೀದಾಮವುಂಟಾದವಳು, ಕರಿಕಲಭಕುಂಭಸ್ತನನತಾ – ಮರಿಯಾನೆಯ ಕುಂಭಸ್ಥಳದೋಪಾದಿಯಲ್ಲಿದ್ದ

---

[1] ಗಿದ್ದವಾ (ಖ) [2] ಪ್ರಧಾನ (ಖ) [3] ತ್ತಾ (ಖ) [4] ಶ್ಲೋಕಪ್ರಯುಕ್ತವಾಗಿ (ಖ) ಶ್ಲೋಕೋಪಯೋಗವಾಗಿ (ಕ).

ಸ್ತನಭಾರದಿಂದ ವೊಂದಿಷ್ಟು ಬಾಗಿಯಿದ್ದಂಥಾವಳು, ಮಧ್ಯೇ ಪರಿಕ್ಷೀಣಾ–ನಡುವಿನಲ್ಲಿ ಸಣ್ಣನಾಗಿದ್ದಂಥಾವಳು, ಪರಿಣತಶರಚ್ಚಂದ್ರವದನಾ–ಪೂರ್ಣಕಳಾಯುಕ್ತನಾದ ಶರತ್ಕಾಲದ ಚಂದ್ರನ ಹಾಗೆ ಮುಖವುಂಟಾದವಳು, ಧನುರ್ಬಾಣಾನ್ ಪಾಶಂ ಸೃಣಿಮಪಿ ಕರತಲೈರ್ದಧಾನಾ–ಕಬ್ಬಿನ ಬಿಲ್ಲನು ಪುಷ್ಪಬಾಣಗಳನು ಪಾಶವನು ಅಂಕುಶವನು ನಾಲ್ಕು ಕೈಗಳಿಂದ ಧರಿಸಿದ್ದಂಥಾವಳು, ನಃ ಪುರಸ್ತಾತ್ ಪುರಮಥಿತುರಾಹೋಪುರುಷಿಕಾ ಆಸ್ತಾಂ–ನಮ್ಮ ಮಣಿಪೂರಚಕ್ರದಿಂದ ಹೃದಯಕಮಲಕ್ಕೆ ಬಂದು ತ್ರಿಪುರಾಂತಕ ಅಹಂಕಾರರೂಪಿಣಿಯಾಗಿದ್ದಂಥಾ ಸರ್ವೇಶ್ವರಿ [1]ಯಿಹಳು[1]. ಇಲ್ಲಿ ಬರೆಯತಕ್ಕ ಅರ್ಥ ಆವು[2]ದುಂಟು[2] ಅದನು "ತವಾಜ್ಞಾಚಕ್ರಸ್ಥಂ" (ಶ್ಲೋ. ೩೬) ಎಂಬ ಶ್ಲೋಕ ಆದಿಯಾದ ಆರುಶ್ಲೋ[3]ಕದ[3] ಟೀಕಿನಲ್ಲಿ ವಿವರವಾಗಿ ಬರೆದೇನು.

ಸುಧಾಸಿಂಧೋರ್ಮಧ್ಯೇ ಸುರವಿಟಪಿವಾಟೀಪರಿವೃತೇ
ಮಣಿದ್ವೀಪೇ ನೀಪೋಪವನವತಿ ಚಿಂತಾಮಣಿಗೃಹೇ
ಶಿವಾಕಾರೇ ಮಂಚೇ ಪರಮಶಿವಪರ್ಯಂಕನಿಲಯಾಂ
ಭಜಂತಿ ತ್ವಾಂ ಧನ್ಯಾಃ ಕತಿಚನ ಚಿದಾನನ್ದಲಹರೀಮ್ ೮

[ಸುಧಾಸಿಂಧೋಃ ಮಧ್ಯೇ ಸುರವಿಟಪಿವಾಟೀಪರಿವೃತೇ ಮಣಿದ್ವೀಪೇ ನೀಪೋಪವನವತಿ ಚಿಂತಾಮಣಿಗೃಹೇ ಶಿವಾಕಾರೇ ಮಂಚೇ ಪರಮಶಿವಪರ್ಯಂಕನಿಲಯಾಂ ಚಿದಾನನ್ದಲಹರೀಂ ತ್ವಾಂ ಕತಿಚನ ಧನ್ಯಾಃ ಭಜಂತಿ.]

ಸುಧಾಸಿಂಧೋರ್ಮಧ್ಯೇ–ಅಮೃತಸಮುದ್ರದ ಮಧ್ಯದಲ್ಲಿ, ಸುರವಿಟಪಿವಾಟೀಪರಿವೃತೇ ಮಣಿದ್ವೀಪೇ–ಕಲ್ಪವೃಕ್ಷಗಳ ಸಮೂಹದಿಂದ ಬಳಸಿದ್ದ ರತ್ನಮಯವಾದ ದ್ವೀಪದಲ್ಲಿ, ನೀಪೋಪವನವತಿ ಚಿಂತಾಮಣಿಗೃಹೇ–ಕಡವದ ವೃಕ್ಷಗಳ ಉಪವನವುಳ್ಳ ಚಿಂತಾಮಣಿಗಳಿಂದ ಮಾಡಿದಂಥಾ ಮನೆಯಲ್ಲಿ, ಶಿವಾಕಾರೇ ಮಂಚೇ ಪರಮಶಿವಪರ್ಯಂಕನಿಲಯಾಂ–ತ್ರಿಕೋಣವಾದ ಮಂಚದಲ್ಲಿ ಪರಮಶಿವನೆ ಸುಷುಪ್ತಿಗೆಯುಳ್ಳಂಥಾ, ಚಿದಾನನ್ದಲಹರೀಂ ತ್ವಾಂ–ಜ್ಞಾನಾನಂದ ಅಧಿಕವಾಗಿಯಿದ್ದಂಥಾ ನಿನ್ನನು, ಕತಿಚನ ಧನ್ಯಾಃ ಭಜಂತಿ–ನಿನ್ನ ಕೃಪಾಮಹಿಮೆಯಿಂದ ಧನ್ಯರುಗಳಾಗಿಯಿದ್ದಂಥಾ ಕೆಲಬರು ಭಜಿಸುವರು.

ಇಲ್ಲಿ ಬರೆಯಬೇಕಾಗಿದ್ದ ಅರ್ಥ–ಭಗವತ್ಪಾದಾಚಾರ್ಯರ ಸಮಯಮತವ ಅನುಸರಿಸಿದಂಥಾ ಸಮಯಾಚಾರಪ್ರವೀಣರುಗಳು [4]ಸಮಯ[4]ರೂಪಾಗಿದ್ದಂಥಾ ಭಗವತಿಯನ್ನು ಸ್ತೋತ್ರವ ಮಾಡುತ್ತಿದ್ದಾರೆ. ಸಮಯಾಚಾರವೆಂಬ ನಾಮ ಮಾನಸಪೂಜೆಯ ಮಾಡುವಂಥಾದ್ದು. ಕುಲಾಚಾರವೆಂಬ ನಾಮ ಬಾಹ್ಯದಲ್ಲಿ

1 ಇರಲ, ಎಂದಿರಬೇಕು 2 ದುಂಟೋ (ಖ) 3 ಕದಿಂದ 4 ಸಮಯಿ, ಎಂದಿರಬೇಕು.

ಪೂಜೆಯ ಮಾಡುವಂಥಾದ್ದು. ಇದರ [1]ಅರ್ಥ[1] "ತವಾಧಾರೇ ಮೂಲೇ" (ಶ್ಲೋ. ೪೦) ಎಂಬ ಶ್ಲೋಕದ ಟೀಕಿನಲ್ಲಿ ವಿವರವಾಗಿ ಬರೆದೇನು. ಶ್ರೀಚಕ್ರಕ್ಕೆ ವಿಯಚ್ಚಕ್ರವೆಂಬ ನಾಮಾಂತರವುಂಟು. ವಿಯಚ್ಚಕ್ರತ್ವವೂ ವಿಯತ್ಪೂಜೆಯಿಂದ. ವಿಯತ್ಪೂಜೆಯೆಂಬುದು ಎರಡು ವಿಧ. ಅಂತರಾಕಾಶದಲ್ಲಿ ಹುಟ್ಟಿದ್ದು ಬಾಹ್ಯಾಕಾಶದಲ್ಲಿ ಹುಟ್ಟಿದ್ದು. ಬಾಹ್ಯಾಕಾಶದಲ್ಲಿ ಎಂಬುದು ಪೀಠಾದಿಗಳಲ್ಲಿ ಭುಜಪತ್ರೆ ಶುದ್ಧವಸ್ತ್ರ ಚಿನ್ನ ಬೆಳ್ಳಿ ಮೊದಲಾದ ತಗಡಿನಲ್ಲಿ ಶ್ರೀಚಕ್ರವ ಬರೆದು ಪೂಜೆಯ ಮಾಡುವುದು. ಇದೀಗ ಕೌಲಪೂಜೆ[2]ಯೆಂದರಿವುದು[2]. ಅದನು ಮುಂದೆ ವಿವರವಾಗಿ ಬರೆದೇನು. ಅಂತರಾಕಾಶವೆ (ದಲ್ಲಿ ಎ) ಂಬುದು ಹೃದಯಾಕಾಶದಲ್ಲಿ ಚಕ್ರ ಪೂಜೆಯ ಮಾಡುವಂಥಾದ್ದು. ಇದು ಸಮಯಪೂಜೆಯೆಂಬರು. ಅದನು ಮುಂದೆ ವಿವರಿಸಿ ಬರೆದೇನು. ಆ ಶ್ರೀಚಕ್ರದ ಒಂಭತ್ತು ಯೋನಿಗಳಲ್ಲಿ ಕೆಳಗೆಯಿದ್ದ ಶಿವಾತ್ಮಕಯೋನಿ ನಾಲ್ಕರ ಮೇಲೆ ಮೇಲೆಯಿದ್ದ ಶಕ್ತ್ಯಾತ್ಮಕಯೋನಿ ಐದರ ಕೆಳಗೆ ಇದ್ದಂಥಾ ನಾಲ್ಕು ಮೂಲೆಯಾದ ಬಿಂದುಸ್ಥಾನದ ಹೆಸರು ಸುಧಾಸಿಂಧುವೆಂಬುದು.

'ಬಿಂದುಸ್ಥಾನಂ ಸುಧಾಸಿಂಧುಃ ಪಂಚಯೋನ್ಯಃ ಸುರದ್ರುಮಾಃ
ತತ್ರೈವ ನೀಪಶ್ರೇಣೀ ಚ ತನ್ಮಧ್ಯೇ ಮಣಿಮಂಟಪಮ್
ತತ್ರ ಚಿಂತಾಮಣಿಕೃತಂ ದೇವ್ಯಾ ಮಂದಿರಮುತ್ತಮಂ
ಶಿವಾತ್ಮಕೇ ಮಹಾಮಂಚೇ ಮಹೇಶಾನೋಪ[3]ಬರ್ಹಿಣೀ[3]
ಅತಿರಮ್ಯತರೇ ತತ್ರ ಕಶಿಪುಶ್ಚ ಸದಾಶಿವಃ
ಭೃತಕಾಶ್ಚ ಚತುಷ್ಪಾದಾ ಮಹೇಂದ್ರಶ್ಚ ಪತದ್ಗ್ರಹಃ
ತತ್ರಾಸ್ತೇ ಪರಮೇಶಾನೀ ಮಹಾತ್ರಿಪುರಸುಂದರೀ
ಶಿವಾರ್ಕಮಂಡಲಂ ಭಿತ್ವಾ ದ್ರಾವಯಂತೀಂದುಮಂಡಲಮ್
[4]ತದುದ್ಭೂತಾ[4]ಮೃತಸ್ಯಂದಿಪರಮಾನಂದನಂದಿತಾ
ಕುಲಯೋಷಿತ್ಕುಲಂ ತ್ಯಕ್ತ್ವಾ ಪರಂ ಪರ್ಷಣಮೇತ್ಯ ಸಾ'

ಹೀಗೆಂದು ವಾಮಕೇಶ್ವರಮಹಾತಂತ್ರದ ಬಹುರೂಪಾಷ್ಟಕದಲ್ಲಿ ಹೇಳಿದೆ. ದೇವ್ಯಾಮಂದಿರವೆಂಬ ಪದಕ್ಕೆ ಅರ್ಥ– ದೇವೀಮಂದಿರವು ನಾಲ್ವತ್ತುಮೂರು ತ್ರಿಕೋಣಾಕಾರವಾದ ಶ್ರೀಚಕ್ರವು ಹೇಳಲ್ಪಟ್ಟಿತ್ತು. ಅದುಕಾರಣ 'ಶಿವಾಕಾರೇ ಮಂಚೇ' ಎಂಬ ತ್ರಿಕೋಣಾತ್ಮಕ ಶ್ರೀಚಕ್ರಕ್ಕೆ ಬಿಂದುಸ್ಥಾನ ಪ್ರಧಾನವಾಗಿದ್ದಂಥಾದ್ದು. ಆ ಪ್ರಧಾನವಾದ ಬಿಂದುಸ್ಥಾನವ ಹೇಳಿದ್ದರಿಂದ ಸುಧಾಸಿಂಧು ಮೊದಲಾದವ ಹೇಳಿದ್ದಾಯಿತು. ಭೃತ್ಯರಾಗಿದ್ದಂಥಾ ಬ್ರಹ್ಮ ವಿಷ್ಣು ರುದ್ರ ಈಶ್ವರ ಈ ನಾಲ್ವರೂ ಮಂಚದ ಪಾದಗಳು. ಈ ಅರ್ಥವನು "ಗತಾಸ್ತೇ ಮಂಚತ್ವಂ"

---

[1] ಅರ್ಥವು (ಖ) [2] ಯೆಂದು ಹೇಳುವದು (ಖ) [3] ಬರ್ಹಿಣೀ (ಖ) [4] ತನೂದ್ಭೂತಾ (ಖ) ತನೂದ್ಭೂತಾಮೃತಸ್ಯಂದೈಃ (ಕ).

(ಶ್ಲೋ. ೯೪) ಎಂಬ ಶ್ಲೋಕದ ಟೀಕಿನಲ್ಲಿ ವಿವರವಾಗಿ ಬರೆದೇನು. "ಶಿವಾಽರ್ಕ-ಮಂಡಲಂ[1] ಭಿತ್ವಾ[1]" ಎಂಬುದಕ್ಕೆ ಅರ್ಥ—ಶಿವಾಯೆಂಬ ಹೆಸರುಂಟಾದ ಕುಂಡಲಿನೀ ಶಕ್ತಿಯು ಹೃತ್ಕಮಲದ ಮೇಲೆ ಇದ್ದ ಸೂರ್ಯಮಂಡಲವನು ಭೇದಿಸಿಕೊಂಡು ಸಹಸ್ರಕಮಲದೊಳಗಿದ್ದ ಚಂದ್ರಮಂಡಲವನು ದ್ರವಿಸುವಳೂ. "ಕುಲಯೋಽಪಿ-ತ್ಕುಲಂ ತ್ಯಕ್ತ್ವಾ ಪರಂ ವರ್ಷಣಮೇತ್ಯ ಸಾ" ಇದಕ್ಕೆ ಅರ್ಥ——ಕುಂಡಲಿನೀ ಶಕ್ತಿಯು ಸುಷುಮ್ನಾಮಾರ್ಗವ ಬಿಟ್ಟು ಚಂದ್ರಮಂಡಲಕ್ಕೆ ಬಂದು ಎಪ್ಪತ್ತೆರಡು ಸಾವಿರ ನಾಡಿಗಳಲ್ಲಿ ಅಮೃತದ ವೃಷ್ಟಿಯನ್ನು ಮಾಡಿ ತಿರುಗಿ ಸ್ವಸ್ಥಾನವಾದ ಸ್ವಾಧಿಷ್ಠಾನಕ್ಕೆ ಬಂದು ನಿದ್ರೆಯುಮಾಡಿಕೊಂಡು ಇಹಳು. ಈ "ಸುಧಾ ಸಿಂಧೋಃ" ಎಂಬ ಶ್ಲೋಕಾರ್ಥವ ಸಂಕ್ಷೇಪದಲ್ಲಿ ಹೇಳಿದನು ಸದಾಶಿವನು—

'ಸುಧಾಬ್ಧೌ ನಂದನೋದ್ಯಾನೇ ರತ್ನಮಂಟಪಮಧ್ಯಗಾಮ್
ಬಾಲಾರ್ಕಮಂಡಲಾಭಾಸಾಂ ಚತುರ್ಬಾಹಾಂ ತ್ರಿಲೋಚನಾಮ್
ಪಾಶಾಂಕುಶಧನುರ್ಬಾಣಾನ್ ಧಾರಯಂತೀಂ ಶಿವಾಂ ಶ್ರಿಯಮ್
ಧ್ಯಾತ್ವಾ ಚ ಹೃದ್ಗತಂ ಚಕ್ರಂ ವ್ರತಸ್ಥಃ ಪರಮೇಶ್ವರೀಮ್
ಪೂರ್ವೋಕ್ತಧ್ಯಾನಯೋಗೇನ ಸಂಚಿಂತ್ಯ ಜಪಮಾಚರೇತ್'

ಮಹೀಂ ಮೂಲಾಧಾರೇ ಕಮಪಿ ಮಣಿಪೂರೇ ಹುತವಹಂ
ಸ್ಥಿತಂ ಸ್ವಾಧಿಷ್ಠಾನೇ ಹೃದಿ ಮರುತಮಾಕಾಶಮುಪರಿ
ಮನೋಽಪಿ ಭ್ರೂಮಧ್ಯೇ ಸಕಲಮಪಿ [1]ಭಿತ್ವಾ[1] ಕುಲಪಥಂ
ಸಹಸ್ರಾರೇ ಪದ್ಮೇ ಸಹ ರಹಸಿ ಪತ್ಯಾ ವಿಹರಸೇ ೯

[ಹೇ ಭಗವತಿ ! ಮೂಲಾಧಾರೇ ಮಹೀಂ ಕಮಪಿ ಮಣಿಪೂರೇ ಹುತವಹ-ಮಪಿ ಸ್ವಾಧಿಷ್ಠಾನೇ ಹೃದಿ ಮರುತಮಾಕಾಶಮುಪರಿ ಮನೋಽಪಿ ಭ್ರೂಮಧ್ಯೇ ಸ್ಥಿತಮಿತಿ ಲಿಂಗವ್ಯತ್ಯಯೇನ ಸರ್ವತ್ರಾನುಷಜ್ಯತೇ. ಸಕಲಂ ಕುಲಪಥಮಪಿ ಭಿತ್ವಾ ಸಹಸ್ರಾರೇ ಪದ್ಮೇ ರಹಸಿ ಪತ್ಯಾ ಸಹ ವಿಹರಸೇ.]

ಹೇ ಭಗವತಿಯೇ ! ಮೂಲಾಧಾರೇ ಮಹೀಂ—ಮೂಲಾಧಾರಚಕ್ರಕ್ಕೆ ಸರ್ವಚಕ್ರಗಳಿಗೂ ಆಧಾರಭೂತವಾದ ಕಾರಣ ಮೂಲಾಧಾರವೆಂಬ ನಾಮ ವುಂಟಾಯಿತು. ರುದ್ರರಹಸ್ಯದಲ್ಲಿ ಸಮ್ಮತಿ—

[2]'ಸರ್ವಾಧಾರಾ ಮಹೀ ಯಸ್ಮಾನ್ಮೂಲಾಧಾರತಯಾ ಸ್ಥಿತಾ
ತದಭಾವೇ ತು ದೇಹಸ್ಯ ಪಾತಃ ಸ್ಯಾದುದ್ಗಮೋಽಪಿ ವಾ'

ಅಂಥಾ ಮೂಲಾಧಾರಚಕ್ರದಲ್ಲಿ ಇಹ ಭೂತತ್ತ್ವವನ್ನೂ, ಕಮಪಿ ಮಣಿ-ಪೂರೇ—ಮಣಿಪೂರಚಕ್ರಕ್ಕೆ ಮಣಿಪೂರಚಕ್ರದಲ್ಲಿ ಇಹಂಥಾ ಭಗವತಿ ಮಣಿಗಳಿಂದ

---

[1] ಜಿತ್ವಾ (ಖ) [2] ಪೃಥಿವೀತತ್ತ್ವಾತ್ಮಕವಾದ ಮೂಲಾಧಾರವಿಲ್ಲದಿದ್ದರೆ ಶರೀರವು ಮೇಲೆ ಹೋಗುವದು ಅಥವಾ ಕೆಳಗಾದರೂ ಬೀಳುವದು ಎಂದರ್ಥ.

ಆ ಸ್ಥಳವನು ಪೂರ್ಣವಮಾಡಿ ಇದ್ದುದರಿಂದ ಮಣಿಪೂರವೆಂಬ ನಾಮವುಂಟಾಯಿತು. ಅಂಥಾ ಮಣಿಪೂರಚಕ್ರದಲ್ಲಿಹ ಜಲತತ್ತ್ವವನ್ನೂ, ಹುತವಹಮಪಿ ಸ್ವಾಧಿಷ್ಠಾನೇ–ಸ್ವಾಧಿಷ್ಠಾನಚಕ್ರಕ್ಕೆ ಆ ಚಕ್ರದಲ್ಲಿ [1]ಕುಂಡಲಿನೀಶಕ್ತಿ ನಿದ್ರೆಮಾಡಿಕೊಂಡು ಇಹದರಿಂದ ಸ್ವಾಧಿಷ್ಠಾನವೆಂಬ ನಾಮವುಂಟಾಯಿತು. ಯೋಗದೀಪಿಕೆಯಲ್ಲಿ ಸಮ್ಮತಿ—

'ರುದ್ರಗ್ರಂಥಿರಿಯಂ ಶಕ್ತೇಃ ಸ್ವಾಧಿಷ್ಠಾನಾಗ್ರಸೀಮನಿ'

ಅಂಥಾ ಸ್ವಾಧಿಷ್ಠಾನಚಕ್ರದಲ್ಲಿ ಇಹ ಅಗ್ನಿತತ್ತ್ವವನ್ನೂ. ಆದರೆ ಯೋಗಶಾಸ್ತ್ರ ಪ್ರಕಾರ ಮೂಲಾಧಾರಚಕ್ರದಮೇಲೆ ಸ್ವಾಧಿಷ್ಠಾನವ ಹೇಳಬೇಕು. ಹಾಗಾದರು ಆಕಾಶಾದಿತತ್ತ್ವೋತ್ಪತ್ತಿಕ್ರಮದಿಂದ ಮಣಿಪೂರಚಕ್ರ ಹೇಳಲ್ಪಟ್ಟಿತ್ತು. ಈ ಅರ್ಥವನು "ತವಾಜ್ಞಾಚಕ್ರಸ್ಥಂ" (ಶ್ಲೋ. ೩೫) ಎಂಬ ಶ್ಲೋಕ ಮೊದಲಾದ ಆರು ಶ್ಲೋಕದ ಟೀಕಿನಲ್ಲಿ ನೋಡಿಕೊಂಬುದು. ಹೃದಿ ಮರುತಂ—ಅನಾಹತಚಕ್ರಕ್ಕೆ ಹೃದಯಾಕಾಶದಲ್ಲಿ ಆಹತವಿಲ್ಲದೆ ನಾದವುಂಟಾಗಿರುವದರಿಂದ ಅನಾಹತವೆಂಬ ನಾಮವುಂಟಾಯಿತು. ಅಂಥಾ ಅನಾಹತಚಕ್ರದಲ್ಲಿ ಇಹ ವಾಯುತತ್ತ್ವವನ್ನೂ, ಆಕಾಶಮುಪರಿ––ವಿಶುದ್ಧಿಚಕ್ರಕ್ಕೆ ಶುದ್ಧಸ್ಫಟಿಕದಹಾಗೆ ನಿರ್ಮಲವಾಗಿ ಇದ್ದುದರಿಂದ ವಿಶುದ್ಧಿಯೆಂಬ ನಾಮವುಂಟಾಯಿತು. ಅಂಥಾ ವಿಶುದ್ಧಿಚಕ್ರದಲ್ಲಿಹ ಆಕಾಶತತ್ತ್ವವನ್ನೂ, ಮನೋಽಪಿ ಭ್ರೂಮಧ್ಯೇ––ಆಜ್ಞಾಚಕ್ರಕ್ಕೆ ಭಗವತಿಯು ಬ್ರಹ್ಮಗ್ರಂಥಿಭೇದನಸಮಯದಲ್ಲಿ ಭ್ರೂಮಧ್ಯದಲ್ಲಿ ಕ್ಷಣಮಾತ್ರದಿಂ ಮಿಂಚಿನಹಾಗೆ ಕಾಣಬರುವದರಿಂದ ಆಜ್ಞಾಚಕ್ರವೆಂಬ ನಾಮವುಂಟಾಯಿತು. ಅಂಥಾ ಆಜ್ಞಾಚಕ್ರದಲ್ಲಿ ಇಹ ಮನಸ್ಸಿನ ತತ್ತ್ವವನ್ನೂ, [2]ಸ್ಥಿತವಿತಿ ಲಿಂಗವ್ಯತ್ಯಯೇನ ಸರ್ವತ್ರಾನುಷಜ್ಯತೇ. ಮೂಲಾಧಾರವಾದಿಯಾದ ಆಯಾ ಚಕ್ರದಲ್ಲಿದ್ದು, ಸಕಲಂ ಕುಲಪಥಮಪಿ *ಜಿತ್ವಾ–ಸರ್ವಸುಷುಮ್ನಾಮಾರ್ಗವನು ಬಿಟ್ಟು, ಯೋಗಶಾಸ್ತ್ರಪ್ರಕಾರದಲ್ಲಿ—ಮೂಲಾಧಾರ ಗುದಸ್ಥಾನ, ಅಲ್ಲಿಯ ನಾಲ್ಕುದಳ ಕಮಲವನು, ಸ್ವಾಧಿಷ್ಠಾನ ಲಿಂಗಸ್ಥಾನ, ಅಲ್ಲಿಯ ಆರುದಳ ಕಮಲವನು, ಮಣಿಪೂರ ನಾಭಿಸ್ಥಾನ, ಅಲ್ಲಿಯ ಹತ್ತುದಳ ಕಮಲವನು, ಅನಾಹತ ಹೃದಯಸ್ಥಾನ, ಅಲ್ಲಿಯ ಹನ್ನೆರಡುದಳ ಕಮಲವನು, ವಿಶುದ್ಧಿ ಕಂಠಸ್ಥಾನ, ಅಲ್ಲಿಯ ಹದಿನಾರುದಳ ಕಮಲವನು, ಆಜ್ಞಾಚಕ್ರ ಭ್ರೂಮಧ್ಯ, ಅಲ್ಲಿಯ ಎರಡುದಳ ಕಮಲವನು ಈ ವಿಧದಲ್ಲಿ ಆರು ಕಮಲವನು ಭೇದಿಸಿಕೊಂಡು, ಸಹಸ್ರಾರೇ ಪದ್ಮೇ ರಹಸಿ ಪತ್ಯಾ ಸಹ ವಿಹರಸೇ–ಬ್ರಹ್ಮರಂಧ್ರ [3]ಸ್ಥಾನದ ಸಹಸ್ರ[3]ದಳವುಂಟಾದ ಕಮಲದಲ್ಲಿ ಏಕಾಂತದಲ್ಲಿ ಸದಾಶಿವನಕೂಡೆ ಕ್ರೀಡಿಸುತ್ತಾ ಇದ್ದೇ. ಇಲ್ಲಿಗೆ ಬರೆಯತಕ್ಕ ಅರ್ಥ––ಮೂಲಾಧಾರ ಸ್ವಾಧಿಷ್ಠಾನ

---

[1] ಕುಂಡಲನೀಶಕ್ತಿಯು ಗ್ರಂಥಿಯನ್ನು ಮಾಡಿಕೊಂಡು ಇರುವದರಿಂದ ಆ ಶಕ್ತಿಗೆ ಮೂಲಾಧಾರಕಂದದ ಮಧ್ಯವೇ ನಿದ್ರಾಸ್ಥಾನ (ಕೌಲಮತ) [2] ಸ್ಥಿತಂ ಎಂಬ ಪದವನ್ನು ನಪುಂಸಕಲಿಂಗ ವ್ಯತ್ಯಸದಿಂದ ಮಹೀಂ ಮೊದಲಾದ ಸ್ಥಳಗಳಲ್ಲಿಯೂ ಸೇರಿಸಬೇಕು [3] ಸ್ಥಾನದ ಮೇಲೆ ಇರುವ ಸಹಸ್ರ * ಭಿತ್ವಾ.

ಮಣಿಪೂರ ಅನಾಹತ ವಿಶುದ್ಧಿ ಆಜ್ಞಾ ಎಂಬ ಆರು ಚಕ್ರಗಳು. ಇವು ಪೃಥಿವಿ ಅಗ್ನಿ ಜಲ ವಾಯು ಆಕಾಶ ಮನಸ್ತತ್ತ್ವಗಳು ಕೂಡಿದವು. ಆ ತತ್ತ್ವಗಳು ಆ ಚಕ್ರದಲ್ಲಿ ತನ್ಮಾತ್ರವಾಗಿ ಗಂಧ ರೂಪ ರಸ ಸ್ಪರುಶ ಶಬ್ದಾತ್ಮಕಗಳು. ಮೂಲಾಧಾರ ಆದಿಯಾಗಿ ವಿಶುದ್ಧಿಚಕ್ರ ಪರಿಯಂತರ ಐದು ಚಕ್ರದಲ್ಲಿ ಪಂಚಭೂತಗಳು ಐದು ತನ್ಮಾತ್ರವೈದು ಕೂಡಾ ಹತ್ತು ತತ್ತ್ವವು. ಆಜ್ಞಾಚಕ್ರದಲ್ಲಿ ಇದ್ದ ಮನದ ತತ್ತ್ವದಿಂದ ಜ್ಞಾನೇಂದ್ರಿಯ ಐದು ಕರ್ಮೇಂದ್ರಿಯವೈದು ಮನಸ್ತತ್ತ್ವ ಈ ಹನ್ನೊಂದು ಇಂದ್ರಿಯಗಳು ಕೂಡಾ ಇಪ್ಪತ್ತೊಂದು ತತ್ತ್ವಗಳು ಆಜ್ಞಾಚಕ್ರಪರಿಯಂತರ ಹೇಳಲ್ಪಟ್ಟಿತು. ಪತಿಯಾದ ಸದಾಶಿವನೊಡನೆ ಸಹಸ್ರಕಮಲದಲ್ಲಿ ಕ್ರೀಡಿಸುತ್ತಿದ್ದೆ ಎಂದದ್ದರಿಂದ ಮಾಯಾ ಶುದ್ಧವಿದ್ಯಾ ಮಹೇಶ್ವರ ಸದಾಶಿವ ಎಂಬ ಈ ನಾಲ್ಕು ತತ್ತ್ವವು ಹೇಳಲ್ಪಟ್ಟಿತು, ಎಲ್ಲವೂಕೂಡ ಇಪ್ಪತ್ತೈದು ತತ್ತ್ವಗಳು. ಅದುಕಾರಣ ಭಗವತಿಯು ಇಪ್ಪತ್ತುನಾಲ್ಕು ತತ್ತ್ವದಾಟಿದ ಇಪ್ಪತ್ತೈದು ತತ್ತ್ವವಾಗಿದ್ದಂಥಾ ಸದಾಶಿವನೊಡನೆ ಕ್ರೀಡಿಸಿ ಐಕ್ಯದಿಂದ ಇಪ್ಪತ್ತಾರುತತ್ತ್ವವಾಗಿದ್ದಂಥಾ ಪರಮಾತ್ಮವೆಂದು ಹೇಳುವರು. ಅದೀಗ ಸಾದಾಖ್ಯಕಲೆ ಇಪ್ಪತ್ತೈದೇ ತತ್ತ್ವವೆಂದು ವೇದದಲ್ಲಿ ಹೇಳಿದೆ, ಅದು ಸದಾಶಿವತತ್ತ್ವಪರಿಯಂತರ ಹೇಳಿದ್ದು, ಸದಾಶಿವ ಶಕ್ತಿಯ ಐಕ್ಯವ ಹೇಳಿದ್ದಲ್ಲಾ. ಆದರೆ ಬಿಂದು ಶಿವಚಕ್ರಗಳ ನಾಲ್ಕರ ಮೇಲೆ ಶಕ್ತಿ ಚಕ್ರಗಳ ಐದರ ಕೆಳಗೆ ಇಹದರಿಂದ ಶ್ರೀಚಕ್ರಮಧ್ಯವು ಬಿಂದುಸ್ಥಾನವು. ಸಹಸ್ರ ಕಮಲದಲ್ಲಿ ಶಿವನು ಇಹದರಿಂದ ಸರ್ವಚಕ್ರಗಳಿಗೂ ಮೇಲೆ ಇಹದರಿಂದ ಆ ಸಹಸ್ರ ಕಮಲಕ್ಕೆ ಬಿಂದುಸ್ಥಾನವು ಕೂಡದು ಎಂದುಂಟಾದರೆ ಭಗವತೀರಹಸ್ಯವ ಕೇಳಿ—

'ಚತುರ್ಭಿಃ ಶಿವಚಕ್ರೈಶ್ಚ ಶಕ್ತಿಚಕ್ರೈಶ್ಚ ಪಂಚಭಿಃ
ಶಿವಶಕ್ತಿಮಯಂ ಜ್ಞೇಯಂ ಶ್ರೀಚಕ್ರಂ ಶಿವಯೋರ್ವಪುಃ'

ಇವು ಮೊದಲಾದ ವಚನಗಳಿಂದ ಶಕ್ತಿಚಕ್ರಗಳು—ತ್ರಿಕೋಣ ಅಷ್ಟಕೋಣ ದಶಕೋಣ ಮತ್ತೊಂದುದಶಕೋಣ ಚತುರ್ದಶಕೋಣ ಈ ಐದು ಶಕ್ತಿಚಕ್ರಗಳು. ಅಷ್ಟದಳ ಷೋಡಶದಳ ಮೇಖಲಾತ್ರಯ ಭೂಪುರತ್ರಯ ಈ ನಾಲ್ಕು ಶಿವಚಕ್ರಗಳು. ಅದರಿಂದ [1]ಶಕ್ತಿಚಕ್ರಗಳಹೊರಗೆ ಶಿವಚಕ್ರಗಳ ಹೊರಗೆ ಇಹಂಥಾ ಶಿವನ[1] ಒಳಗೆ ಇಹಶಕ್ತಿಯೋಗಕ್ಕಾಗಿ ಆ ಶಿವಚಕ್ರಗಳ ನಾಲ್ಕು ಬಿಂದುರೂಪದಲ್ಲಿ ತೆಗೆದು ಶಕ್ತಿಚಕ್ರಗಳ ಮಧ್ಯದಲ್ಲಿರಿಸಲ್ಪಟ್ಟಂಥಾದ್ದು. ಅದುಕಾರಣ ಶಿವಚಕ್ರಗಳ ನಾಲ್ಕರ ರೂಪವಾದ ಬಿಂದುವು ಶಕ್ತಿಚಕ್ರ ಐದರಲ್ಲಿಯೂ ವ್ಯಾಪಿಸಿ ಇಹದೆಂದು. ಹೀಗೆ ಶಿವಶಕ್ತಿಗಳ ಐಕ್ಯವೆಂಬುದು ಕೆಲಬರು ಹೇಳುವರು.

ಮತ್ತೆ ಕೆಲಬರು ಬಿಂದುವಿಗೂ ತ್ರಿಕೋಣಕ್ಕೂ ಐಕ್ಯ, ಅಷ್ಟಕೋಣಕ್ಕೂ ಅಷ್ಟದಳಕ್ಕೂ ಐಕ್ಯ, ದಶಕೋಣ ಎರಡಕ್ಕೂ ಷೋಡಶದಳಕ್ಕೂ ಐಕ್ಯ, ಚತುರ್ದಶ

---

[1] ಶಿವಗೆ ಶಕ್ತಿ ಬಹಿರ್ಭಾವಕೂಡದಾದ್ದರಿಂದ.

ಕೋಣಕ್ಕೂ ಭೂಪುರಕ್ಕೂ ಐಕ್ಯ, ಈ ಪ್ರಕಾರ ಚಕ್ರದಲ್ಲಿ ಶಿವಶಕ್ತಿಯೋಗವನ್ನು ಹೇಳುವರು. ಅಲ್ಲಿ ಬಿಂದುಶಬ್ದದಿಂದ ಶಿವಚಕ್ರನಾಲ್ಕರ ಪ್ರತಿನಿಧಿಯಾಗಿ ವೃತ್ತಾಕಾರವಾಗಿ ಕಾಣಿಸಿದೆ. ಈ ನಾಲ್ಕುಕೋಣಮಧ್ಯದಲ್ಲಿ ಇಹ ಬಿಂದುಮಾತ್ರವೇ ಸಹಸ್ರಕಮಲದಲ್ಲಿ ಅಲ್ಲಾ ಮತ್ತೆಂಥಾ ಬಿಂದುವೆಂದರೆ ಆಧಾರಸ್ವಾಧಿಷ್ಠಾನದಲ್ಲಿ ಇಹ ಹತ್ತುದಳಕ್ಕೆ ಆಧಾರಭೂತವಾದ್ದು. ಶಿವಶಕ್ತಿಗಳ ಐಕ್ಯವಾದ್ದು. ಸಾದಾಖ್ಯವಾದ್ದು. ಇಪ್ಪತ್ತಾರು ತತ್ತ್ವವಾದ್ದು. ನಾದಬಿಂದುಕಲಾತೀತವಾದ್ದು. ಇದನು ಮುಂದೆ ವಿವರಿಸಿ ಬರೆದೇನು. ಅದುಕಾರಣ ಸಹಸ್ರದಳಕಮಲದೊಳಗೆ ಇರುವ ಚಂದ್ರಮಂಡಲಮಧ್ಯದಲ್ಲಿ ಇಹದೆ ಭಗವತಿಯು ಕೇಳಿಯ ಸ್ಥಾನವಾಗಿ ಇದ್ದಂಥಾ ಸುಧಾಸಿಂಧು. 'ಸಹಸ್ರಾರೇ ಪದ್ಮೇ ಸಹ ರಹಸಿ ಪತ್ಯಾ ವಿಹರಸೇ,' 'ಸುಧಾಸಿಂಧೋರ್ಮಧ್ಯೇ' ಯೆಂಬ ಎರಡು ಶ್ಲೋಕಕ್ಕೆ ಒಂದೇ ಅರ್ಥ. ಈ ಅರ್ಥಕ್ಕೆ ಸಮ್ಮತಿ ವಚನ ಭೈರವಯಾಮಳದ ಚಂದ್ರಜ್ಞಾನವಿದ್ಯೆಯಲ್ಲಿ ಶಿವನು ಪಾರ್ವತಿಯ ಕೂಡೆ ಹೇಳಿದ್ದು—

'ಚತುರ್ಭಿಃ ಶಿವಚಕ್ರೈಶ್ಚ ಪಂಚಭಿಃ ಶಕ್ತಿಚಕ್ರಕೈಃ
ನವಚಕ್ರೈಶ್ಚ ಸಂಸಿದ್ಧಂ ಶ್ರೀಚಕ್ರಂ ಶಿವಯೋರ್ವಪುಃ

ತ್ರಿಕೋಣಮಷ್ಟಕೋಣಂ ಚ ದಶಕೋಣದ್ವಯಂ ತಥಾ
ಚತುರ್ದಶಾರಂ ಚೈತಾನಿ ಶಕ್ತಿಚಕ್ರಾಣಿ ಪಂಚ ಚ

ಬಿಂದುಶ್ಚಾಷ್ಟದಳಂ ಪದ್ಮಂ ಪದ್ಮಂ ಷೋಡಶಪತ್ರಕಮ್
ಚತುರಶ್ರಂ ಚ ಚತ್ವಾರಿ ಶಿವಚಕ್ರಾಣ್ಯನುಕ್ರಮಾತ್

ತ್ರಿಕೋಣೇ ಬೈಂದವಂ ಶ್ಲಿಷ್ಟಮಷ್ಟಾರೇಽಷ್ಟದಳಾಂಬುಜಮ್
ದಶಾರಯೋಃ ಷೋಡಶಾರಂ ಭೂಗೃಹಂ ಭುವನಾಶ್ರಕೇ

ಶೈವಾನಾಮಪಿ ಶಾಕ್ತಾನಾಂ ಚಕ್ರಾಣಾಂ ಚ ಪರಸ್ಪರಮ್
ಅವಿನಾಭಾವಸಂಬಂಧಂ ಯೋ ಜಾನಾತಿ ಸ ಚಕ್ರವಿತ್

ತ್ರಿಕೋಣಮಷ್ಟಕೋಣಂ ಚ ದಶಕೋಣದ್ವಯಂ ತಥಾ
ಮನುಕೋಣಂ ಚತುಷ್ಕೋಣಂ ಕೋಣಚಕ್ರಾಣಿ ಷಟ್ ಕ್ರಮಾತ್

ಮೂಲಾಧಾರಂ ತಥಾ ಸ್ವಾಧಿಷ್ಠಾನಂ ಚ ಮಣಿಪೂರಕಮ್
ಅನಾಹತಂ ವಿಶುದ್ಧ್ಯಾಖ್ಯಮಾಜ್ಞಾಚಕ್ರಂ ವಿದುರ್ಬುಧಾಃ

ತವಾಧಾರಸ್ವರೂಪಾಣಿ ಕೋಣಚಕ್ರಾಣಿ ಪಾರ್ವತಿ
ತ್ರಿಕೋಣರೂಪಿಣೀ ಶಕ್ತಿಃ ಬಿಂದುರೂಪಃ ಶಿವಸ್ತಥಾ

ಅವಿನಾಭಾವಸಂಬಂಧಸ್ತಸ್ಮಾದ್ಬಿಂದುತ್ರಿಕೋಣಯೋಃ'

ಕೌಲಮತಾನುಸಾರದಲ್ಲಿಯೂ ಶಿವಶಕ್ತಿಗಳ ಐಕ್ಯ—ಅಧೋಮುಖವಾಗಿದ್ದ ನಾಲ್ಕು ತ್ರಿಕೋಣಗಳು ಶಿವಾತ್ಮಕಗಳು. ಊರ್ಧ್ವಮುಖವಾಗಿದ್ದ ಐದು ತ್ರಿಕೋಣಗಳು ಶಕ್ತ್ಯಾತ್ಮಕಗಳು. ಕೂಡಾ ಒಂಭತ್ತು ತ್ರಿಕೋಣಾತ್ಮಕ. ಶ್ರೀಚಕ್ರವನು ಕೌಲಮತದಲ್ಲಿ ಸಂಹಾರಕ್ರಮದಿಂದ [1]ಬರೆವ[1] ಪ್ರಕಾರವನು 'ಚತುರ್ಭಿಃ ಶ್ರೀಕಂಠೈಃ' (ಶ್ಲೋ. ೧೧) ಎಂಬ ಶ್ಲೋಕದ ಟೀಕಿನಲ್ಲಿ ಬರೆಯಬೇಕಾಗಿಯಿದ್ದಂಥಾದ್ದಾದರು 'ಸಹಸ್ರಾರೇ ಪದ್ಮೇ ಸಹ ರಹಸಿ ಪತ್ಯಾ ವಿಹರಸೇ' ಎಂಬ ಇಲ್ಲಿ ಅವಶ್ಯವು ಬರೆಯಬೇಕಾದುದರಿಂದ ಎರಡಕ್ಕೂ ಉಪಯೋಗವಾಗಿ ಇಲ್ಲಿ ಕೆಲವು ಬರೆದನು. ಸವಿಸ್ತಾರವಾಗಿ ಮುಂದೆ ಬರೆದೇನು.

ಸುಧಾಧಾರಾಸಾರೈಶ್ಚರಣಯುಗಳಾಂತರ್ವಿಗಳಿತೈಃ
ಪ್ರಪಂಚಂ ಸಿಂಚಂತೀ ಪುನರಪಿ ರಸಾಮ್ನಾಯಮಹಸಃ
ಅವಾಪ್ಯ ಸ್ವಾಂ ಭೂಮಿಂ ಭುಜಗನಿಭಮಧ್ಯುಷ್ಟವಲಯಂ
ಸ್ವಮಾತ್ಮಾನಂ ಕೃತ್ವಾ ಸ್ವಪಿಷಿ ಕುಲಕುಂಡೇ ಕುಹರಿಣಿ ೧೦

[ಚರಣಯುಗಳಾಂತರ್ವಿಗಳಿತೈಃ ಸುಧಾಧಾರಾಸಾರೈಃ ಪ್ರಪಂಚಂ ಸಿಂಚಂತೀ ಪುನರಪಿ ರಸಾಮ್ನಾಯಮಹಸಃ ಸ್ವಾಂ ಭೂಮಿಂ ಅವಾಪ್ಯ ಭುಜಗನಿಭಮಧ್ಯುಷ್ಟವಲಯಂ ಸ್ವಮಾತ್ಮಾನಂ ಕೃತ್ವಾ ಕುಹರಿಣಿ ಕುಲಕುಂಡೇ ಸ್ವಪಿಷಿ.]

ಚರಣಯುಗಳಾಂತರ್ವಿಗಳಿತೈಃ ಸುಧಾಧಾರಾಸಾರೈಃ—ಪಾದಾರವಿಂದದ್ವಯಮಧ್ಯಪ್ರದೇಶದಿಂದ ಬೀಳುವಂಥಾ [2]ಅಮೃತವು ಆಧಾರವಾದ ಧಾರೆಗಳಿಂದ[2], ಪ್ರಪಂಚಂ ಸಿಂಚಂತೀ—ಎಪ್ಪತ್ತೆರಡುಸಾವಿರ ನಾಡಿಮಾರ್ಗವನೂ ನೆನೆಸಿ, ರಸಾಮ್ನಾಯಮಹಸಃ ಸಕಾಶಾತ್—ಸಹಸ್ರಕಮಲದಲ್ಲಿ ಇದ್ದ ಚಂದ್ರನ ಸಮೀಪದಿಂದ, ಸ್ವಾಂ ಭೂಮಿಂ ಪುನರಪ್ಯವಾಪ್ಯ—ತನ್ನ ಸಂಬಂಧವಾಗಿ ಇದ್ದ ಮೂಲಾಧಾರವನು ಅಮೃತವರ್ಷವ ಮಾಡಿದ ಬಳಿಕ ಎಯ್ದಿ, ಭುಜಗನಿಭಮಧ್ಯುಷ್ಟವಲಯಂ ಸ್ವಮಾತ್ಮಾನಂ ಕೃತ್ವಾ—ಸರ್ಪಸದೃಶವಾದ ಕುಂಡಲಿನೀ ಶಕ್ತಿಯೂ ತನ್ನ ಸ್ವರೂಪವ ಧರಿಸಿ, ಕುಹರಿಣಿ ಕುಲಕುಂಡೇ ಸ್ವಪಿಷಿ—ಕಮಲನಾಳದಲ್ಲಿ ಇಹ [3]ಬಿಂದು[3]ಹಾಗೆ ರಂಧ್ರವುಳ್ಳ ಸುಷುಮ್ನಾಮಾರ್ಗದಲ್ಲಿ ತಾವರೆ ನೂಲಿನ ಹಾಗೆ ಆಧಾರಕಂದದಲ್ಲಿ ನಿದ್ರೆಯ ಮಾಡುತ್ತಾ ಇಹೆ. ಅದುಕಾರಣ ಕುಲವೆಂಬ ನಾಮವುಳ್ಳ ಆಧಾರಚಕ್ರವ ಪೂಜೆಯ ಮಾಡುವವರು ಕೌಲರು. ಕೌಲಮತದವರಿಗೆ ಆಧಾರಚಕ್ರದಲ್ಲಿ ಪೂಜೆಯೆಂಬುದು ರಹಸ್ಯ.

ಇಲ್ಲಿಗೆ ಬರೆಯತಕ್ಕ ಅರ್ಥ—ಶಿರಸ್ಸಿನಲ್ಲಿ ಚಂದ್ರಮಂಡಲವಿಹುದು ಸರ್ವಯೋಗಶಾಸ್ತ್ರಸಿದ್ಧವು. ಆ ಚಂದ್ರಮಂಡಲವೇ ಸಮಯಿಗಳಮತದಲ್ಲಿ ಶ್ರೀಚಕ್ರವು.

---

[1] ಬರೆಯುವ [2] ಅಮೃತದ ಧಾರೆಗಳಿಂದ, ಅಥವಾ ಅಮೃತಕ್ಕೆ ಆಧಾರಭೂತವಾದ ಧಾರೆಗಳಿಂದ, ಎಂದರ್ಥ [3] ಬಿಲದ (ಖ).

ಶ್ರೀವಿದ್ಯಕ್ಕೆ ಪಾದ್ಯವಾದಿಯಾಗಿ ಹದಿನಾರು ಕಲಾವೃದ್ಧಿಕ್ಷಯಗಳು ಹೇಳಿ ಇಹದರಿಂದ ಶ್ರೀಚಕ್ರವೇ ಚಂದ್ರಮಂಡಲವು. ಹೊರಗೆ ಇಹ ಚಂದ್ರಮಂಡಲವು ಶ್ರೀಚಕ್ರವೆಂಬುದು ಲಕ್ಷ್ಮೀಧರಾಚಾರ್ಯರು ಸುಭಗೋದಯವ್ಯಾಖ್ಯಾನದಲ್ಲಿ ನಿರೂಪಿಸಿ ಇದ್ದಾರೆ. ಇದು ಮಹಾರಹಸ್ಯವು. ಅದುಕಾರಣ ಶಿರಸ್ಸಿನಲ್ಲಿ ಇದ್ದಂಥಾ ಸಹಸ್ರದಳಕಮಲಮಧ್ಯದಲ್ಲಿ ಶ್ರೀಚಕ್ರಾಕಾರವಾದ ಚಂದ್ರಬಿಂಬ ಮಧ್ಯದಲ್ಲಿ ಇಹ ಭಗವತಿಯು ಚರಣಕಮಲದ ಅಮೃತಮಯವಾದ ಜಲದಿಂದ ಸಾಧಕನ ಸಕಲಶರೀರವನು ವ್ಯಾಪಿಸಿ ಮರಳಿ ಸರ್ಪಾಕಾರವಾಗಿ ಸುಷುಮ್ನಾಮಾರ್ಗದಿಂದ ಆಧಾರಕುಂಡವ ಪ್ರವೇಶಿಸಿ ಭಗವತಿಯು ನಿದ್ರೆಯಮಾಡುತ್ತಾಳೆ. ಈ ಅರ್ಥಕ್ಕೆ ಸಮ್ಮತಿವಚನ ವಾಮಕೇಶ್ವರ ಮಹಾತಂತ್ರದಲ್ಲಿ--

* 'ಭುಜಂಗಾಕಾರರೂಪೇಣ ಮೂಲಾಧಾರಂ ಸಮಾಶ್ರಿತಾ
ಶಕ್ತಿಃ ಕುಂಡಲಿನೀ ನಾಮ ಬಿಸತಂತುನಿಭಾಽಽ[1]ಶುಭಾ[1]

ಮೂಲಕಂದಂ ಫಣಾಗ್ರೇಣ ದಷ್ಟ್ವಾ ಕಮಲಕಂದವತ್
ಮುಖೇನ ಪುಚ್ಛಂ ಸಂಗೃಹ್ಯ [2]ಬ್ರಹ್ಮರಂಧ್ರಸಮನ್ವಿತಾ[2]

ಪದ್ಮಾಸನಗತಃ ಸ್ವಸ್ಥೋ ಗುದಮಾಕುಂಚ್ಯ ಸಾಧಕಃ
ವಾಯುಮೂರ್ಧ್ವಗತಂ ಕುರ್ವನ್ ಕುಂಭಕಾವಿಷ್ಟಮಾನಸಃ

ವಾಯ್ವಾಘಾತವಶಾದಗ್ನಿಃ ಸ್ವಾಧಿಷ್ಠಾನಗತೋ ಜ್ವಲನ್
ಜ್ವಲನಾಘಾತಪವನಾಘಾತೈರುನ್ನಿದ್ರಿತೋಽಹಿರಾಟ್

ರುದ್ರಗ್ರಂಥಿಂ ತತೋ ಭಿತ್ತ್ವಾ ವಿಷ್ಣುಗ್ರಂಥಿಂ ಭಿನತ್ತ್ಯತಃ
ಬ್ರಹ್ಮಗ್ರಂಥಿಂ ಚ ಭಿತ್ತ್ವೈವ ಕಮಲಾನಿ ಭಿನತ್ತಿ ಷಟ್

ಸಹಸ್ರಕಮಲೇ ಶಕ್ತಿಃ ಶಿವೇನ ಸಹ ಮೋದತೇ
ಸಾ ಚಾವಸ್ಥಾ ಪರಾ ಜ್ಞೇಯಾ ಸೈವ ನಿರ್ವೃತಿಕಾರಣಮ್'

ಹೀಗೆ ವೇದದಲ್ಲಿಯೂ ಭಗವತಿಯು ಚರಣಾಂಬುಜಸುಧಾಧಾರೆಗಳಿಂದ ಶರೀರವನು ನೆನೆಸುವಂಥಾದ್ದು ಹೇಳಿದೆ. ವೇದವನು ಪ್ರಾಕೃತ ಟೀಕಿನಲ್ಲಿ ಬರೆಯಬಾರದೆಂದು ಬರೆಯಲಿಲ್ಲಾ.

---

[1] ಆಶುಭಾ—ಮಿಂಚಿಗೆ ಸಮಾನವಾದವಳು ಎಂದರ್ಥ.

[2] ಬ್ರಹ್ಮರಂಧ್ರಂ ಸಮಾಶ್ರಿತಾ (ಗ).

* ಈ ಶ್ಲೋಕಗಳಲ್ಲಿ ಕುಂಡಲಿನೀ ಶಕ್ತಿಯು ವಿಚಾರ ಸ್ಪಷ್ಟವಾಗಿದೆ :

ಸರ್ಪದ ಸ್ವರೂಪವನ್ನು ತೆಗೆದುಕೊಂಡು ತಾವರೆ ದಂಟಿನೊಳಗಿನ ಸ್ವಚ್ಛವಾದ ತಂತುವಿಗೆ ಸಮಾನಳೂ ಮಿಂಚಿನಂತೆ ಹೊಳಪುಳ್ಳವಳೂ ಇರುವ ಕುಂಡಲಿನೀಶಕ್ತಿಯು ತನ್ನ ಬಾಯಿಯಿಂದ ಬಾಲವನ್ನು ಕಚ್ಚಿಕೊಂಡು ಸುಷುಮ್ನಾನಾಡಿಯ ಕೆಳಭಾಗದಲ್ಲಿ ಮೂಲಾಧಾರಕಂದವನ್ನು ಆಶ್ರಯಿಸಿಕೊಂಡಿರುವಳು. ಸಾಧಕನು ಪದ್ಮಾಸನಮಾಡಿಕೊಂಡು ಪಾಯುಸ್ಥಾನವನ್ನು ಬಿಗಿಯಾಗಿ ಸಂಕೋಚಮಾಡಿ ಕುಂಭಕವೆಂಬ ಪ್ರಾಣಾಯಾಮಮಾಡುತ್ತಾ, ವಾಯು

ಚತುರ್ಭಿಃ ಶ್ರೀಕಂಠೈಃ ಶಿವಯುವತಿಭಿಃ ಪಂಚಭಿರಪಿ
ಪ್ರಭಿನ್ನಾಭಿಃ ಶಂಭೋರ್ನವಭಿರಪಿ ಮೂಲಪ್ರಕೃತಿಭಿಃ
ಚತುಶ್ಚತ್ವಾರಿಂಶದ್ವಸುದಳಕಲಾಶ್ರತ್ರಿವಲಯ-
ತ್ರಿರೇಖಾಭಿಃ ಸಾರ್ಧಂ ತವ ಶರಣಕೋಣಾಃ ಪರಿಣತಾಃ ೧೧

[ಚತುರ್ಭಿಃ ಶ್ರೀಕಂಠೈಃ ಶಂಭೋಃ ಸಕಾಶಾತ್ ಪ್ರಭಿನ್ನಾಭಿಃ ಶಿವಯುವತಿಭಿಃ ಪಂಚಭಿಃ ನವಭಿರಪಿ ಮೂಲಪ್ರಕೃತಿಭಿಃ ತವ ಶರಣಕೋಣಾಃ ವಸುದಳಕಲಾಶ್ರತ್ರಿವಲಯತ್ರಿರೇಖಾಭಿಃ ಸಾರ್ಧಂ ಪರಿಣತಾಃ ಸಂತಃ ಚತುಶ್ಚತ್ವಾರಿಂಶತ್.]

ಹೇ ಭಗವತಿಯೇ, ಚತುರ್ಭಿಃ ಶ್ರೀಕಂಠೈಃ——ನಾಲ್ಕು ಶಿವಾತ್ಮಕ ಚಕ್ರಗಳಿಂದಲೂ, ಶಂಭೋಃ ಸಕಾಶಾತ್ ಪ್ರಭಿನ್ನಾಭಿಃ ಶಿವಯುವತಿಭಿಃ ಪಂಚಭಿಃ——ಶಂಭುಚಕ್ರಗಳಿಂದ ಅತ್ಯಂತ ಭಿನ್ನವಾದಂಥಾ ಶಕ್ತ್ಯಾತ್ಮಕವಾದ ಐದುಚಕ್ರಗಳಿಂದಲೂ——ಉಭಯವೂ ಕೂಡಾ, ನವಭಿರಪಿ ಮೂಲಪ್ರಕೃತಿಭಿಃ——ಒಂಭತ್ತು ಮೂಲಕಾರಣಗಳಿಂದ. ಅದುಕಾರಣ ಒಂಭತ್ತುಮೂಲಕಾರಣಗಳಿಂದ ಚಕ್ರಗಳಿಗೆ ಯೋನಿಯೆಂಬ ನಾಮವುಂಟಾಯಿತು. ಒಂಭತ್ತು ಚಕ್ರಗಳು ಒಂಭತ್ತು ಧಾತ್ವಾತ್ಮಕಗಳು. ಈ ಅರ್ಥಕ್ಕೆ ಸಮ್ಮತಿವಚನ ಕಾಮಿಕಾಗ್ರಂಥದಲ್ಲಿ——


'[1]ತ್ವಗಸೃಜ್ಮಾಂಸಮೇದೋಽಸ್ಥಿಧಾತವಃ ಶಕ್ತಿಮೂಲಕಾಃ
ಮಜ್ಜಾಶುಕ್ಲಪ್ರಾಣ[2]ಜೀವಧಾತವಃ ಶಿವಮೂಲಕಾಃ

ನವಧಾತುರಯಂ ದೇಹೋ ನವಯೋನಿಸಮುದ್ಭವಃ
ದಶಮೀ ಯೋನಿರೇಕೈವ ಪರಾಶಕ್ತಿಸ್ತದೀಶ್ವರೀ'

ವನ್ನು ಮೇಲ್ಮುಖವಾಗಿ ಮಾಡುವನು. ಈ ಊರ್ಧ್ವಮುಖವಾದ ವಾಯುವಿನ ಹೊಡೆತದಿಂದ ಸ್ವಾಧಿಷ್ಠಾನಚಕ್ರಗತವಾದ ಅಗ್ನಿಯು ಜ್ವಲಿಸುವದು. ಈ ರೀತಿಯಾದ ಅಗ್ನಿ ಮತ್ತು ವಾಯುವಿನ ಹೊಡೆತದಿಂದ ಸಹಸ್ರಕಮಲದಿಂದ ಹರಿದುಬರುತ್ತಿರುವ ಅಮೃತ ಪ್ರವಾಹವು ನಿಂತುಹೋದದ್ದರಿಂದ ಸುಖವಾಗಿ ನಿದ್ರಿಸುತ್ತಿದ್ದ ಕುಂಡಲಿನೀ ಶಕ್ತಿಯು ಹಸಿದವಳಾಗಿ ಎದ್ದು ಕ್ರಮವಾಗಿ ಮೂಲಾಧಾರ ಸ್ವಾಧಿಷ್ಠಾನ ರುದ್ರಗ್ರಂಥಿ, ಮಣಿಪೂರ ಅನಾಹತ ವಿಷ್ಣುಗ್ರಂಥಿ, ವಿಶುದ್ಧಿ ಆಜ್ಞಾ ಬ್ರಹ್ಮಗ್ರಂಥಿ, ಈ ರೀತಿಯಾದ ಆರು ಕಮಲಗಳನ್ನು ಮತ್ತು ಮೂರು ಗ್ರಂಥಿಗಳನ್ನು ಭೇದಿಸಿಕೊಂಡು ಸಹಸ್ರಕಮಲದಲ್ಲಿ ಪರಮಶಿವನೊಡನೆ ಕೂಡಿ ಸಂತುಷ್ಟಳಾಗಿರುವಳು. ಇದುವೆ ಉತ್ಕೃಷ್ಟವಾದ ಅವಸ್ಥೆ, ಇದುವೆ ಮೋಕ್ಷಕ್ಕೆ ಕಾರಣ—ಎಂದರ್ಥ.

[1] ಈ ಶ್ಲೋಕಗಳಲ್ಲಿ ಪಿಂಡಾಂಡಬ್ರಹ್ಮಾಂಡಗಳಿಗೆ ಒಂಭತ್ತುಯೋನಿಗಳಿಂದ ಉತ್ಪತ್ತಿಯೂ, ಇಪ್ಪತ್ತೈದುತತ್ತ್ವಗಳಿಗೂ ಪಂಚಭೂತಗಳು, ಮಾಯಾ, ಶುದ್ಧವಿದ್ಯಾ, ಮಹೇಶ್ವರ, ಸದಾಶಿವ ಇವುಗಳಲ್ಲಿ ಅಂತರ್ಭಾವವೂ, ಚರಾಚರಾತ್ಮಕವಾದ ಪ್ರಪಂಚಕ್ಕೆ ಶಿವಶಕ್ತ್ಯಾತ್ಮಕತ್ವವೂ ಹೇಳಲ್ಪಟ್ಟಿದೆ.

2 ಜೀವಶಬ್ದದಿಂದ ಜೀವಾಧಾರಭೂತವಾದ ಓಜೋಧಾತುವಿಗೆ ಗ್ರಹಣ.



ಏವಂ ಪಿಂಡಂ ಸಮುತ್ಪನ್ನಂ ತದ್ವದ್ಬ್ರಹ್ಮಾಂಡಮುದ್ಭವೌ
ಪಂಚಭೂತಾನಿ ಶಾಕ್ತಾನಿ ಮಾಯಾದೀನಿ ಶಿವಸ್ಯ ತು

ಮಾಯಾ ಚ ಶುದ್ಧವಿದ್ಯಾ ಚ ಮಹೇಶ್ವರಸದಾಶಿವೌ
ಪಂಚವಿಂಶತಿ ತತ್ತ್ವಾನಿ ತತ್ರೈವಾಂತರ್ಭವಂತಿ ತೇ

ಶಿವಶಕ್ತ್ಯಾತ್ಮಕಂ ಸಿದ್ಧಂ ಜಗದೇತಚ್ಚರಾಚರಮ್'

'ದಶಮೀ ಯೋನಿರೇಕೈವ ಪರಾಶಕ್ತಿಸ್ತದೀಶ್ವರೀ' ಎಂಬುದಕ್ಕೆ ಅರ್ಥ—ಹತ್ತನೆ ಯೋನಿ ಬಿಂದುಸ್ಥಾನವು ಈ ಒಂಬತ್ತು ಯೋನ್ಯಾತ್ಮಕವಾದ ದೇಹಕ್ಕೆ ಈಶ್ವರೀರೂಪಾಗಿದ್ದಂಥಾದ್ದು. 'ಶಿವಶಕ್ತ್ಯಾತ್ಮಕಂ ಸಿದ್ಧಂ ಜಗದೇತಚ್ಚರಾಚರಂ' ಎಂಬುದಕ್ಕೆ ಅರ್ಥ—ಚರವೆಂಬುದು ಪಿಂಡಾಂಡವು. ಅಚರವೆಂಬುದು ಬ್ರಹ್ಮಾಂಡವು. ಅದುಕಾರಣ ಸರ್ವತತ್ತ್ವಾತೀತ ಶಿವಶಕ್ತಿಯೋಗವು. ಅದರಿಂದ ಜಗತ್ತಿನ ಉತ್ಪತ್ತಿ. ಈ ಅರ್ಥವು ಸುಭಗೋದಯಲ್ಲಿದೆ—

'ಪರೋಽಪಿ ಶಕ್ತಿರಹಿತಃ ಶಕ್ತಃ ಕರ್ತುಂ ನ ಕಿಂಚನ
ಶಕ್ತಃ ಸ್ಯಾತ್ಪರಮೇಶಾನಿ ಶಕ್ತ್ಯಾ ಯುಕ್ತೋ ಭವೇದ್ಯದಿ'

ಇಂಥಾ ಒಂಬತ್ತು ಯೋನ್ಯಾತ್ಮಕವಾದ ಮೂಲಪ್ರಕೃತಿಗಳಿಂದ, ತವ ಶರಣ ಕೋಣಾಃ—ನಿನ್ನ ಗೃಹವೆಂಬ ಬಿಂದುಸ್ಥಾನವು ನಾಲ್ವತ್ತುಮೂರು ತ್ರಿಕೋಣಗಳು, ವಸುದಳಕಲಾಶ್ರತ್ರಿವಲಯತ್ರಿರೇಖಾಭಿಃ ಸಾರ್ಧಂ—[1] ಎಂಟುದಳ ಹದಿನಾರುದಳ ಮೂರುವೃತ್ತ ಮೂರುರೇಖೆಗಳೊಡನೆ ಕೂಡಿದ ಭೂಗೃಹವು, ಪರಿಣತಾಃ ಸಂತಃ ತ್ರಯಶ್ಚತ್ವಾರಿಂಶತ್.[1] ಇಲ್ಲಿ ಪರಿಣತಶಬ್ದಕ್ಕೆ ಶಕ್ತಿಚಕ್ರದ ತ್ರಿಕೋಣಗಳಲ್ಲಿ ಶಿವಚಕ್ರದ ಅಷ್ಟದಳವು, ಶಕ್ತಿಚಕ್ರದ ಅಷ್ಟಕೋಣದಲ್ಲಿ ಶಿವಚಕ್ರದ ಷೋಡಶದಳವು, ಶಕ್ತಿಚಕ್ರದ ದಶಾರಯುಗ್ಮದಲ್ಲಿ ಶಿವಚಕ್ರದ ಮೂರು ವೃತ್ತವು, ಶಕ್ತಿಚಕ್ರದ ಚತುರ್ದಶಾರದಲ್ಲಿ ಶಿವಚಕ್ರದ ತ್ರಿರೇಖೆಯಾದ ಭೂಗೃಹವು, ಅಂತರ್ಭಾವವು ಹೇಳಲ್ಪಟ್ಟಿತು. ಇಲ್ಲಿಗೆ ಬರೆಯತಕ್ಕ ಅರ್ಥ—

'ಬಿಂದುತ್ರಿಕೋಣವಸುಕೋಣದಶಾರಯುಗ್ಮ-
ಮನ್ವಶ್ರನಾಗದಳಸಂಯುತಷೋಡಶಾರಮ್
ವೃತ್ತತ್ರಯಂ ಚ ಧರಣೀಸದನತ್ರಯಂ ಚ
ಶ್ರೀಚಕ್ರಮೇತದುದಿತಂ ಪರದೇವತಾಯಾಃ'

---

[1] ವಸುದಳಕಲಾಶ್ರತ್ರಿವಲಯತ್ರಿರೇಖಾಭಿಃ ಸಾರ್ಧಂ ತ್ರಯಶ್ಚತ್ವಾರಿಂಶತ್ ಪರಿಣತಾಃ, ಎಂಟುದಳ ಹದಿನಾರುದಳ ಮೂರುವೃತ್ತ ಭೂಪುರತ್ರಯ ಇವುಗಳೊಡನೆ ಕೂಡ ನಾಲ್ವತ್ತುಮೂರಾಗಿ ಪರಿಣಾಮವನ್ನು ಹೊಂದಿದೆ ಎಂದರ್ಥ.

ಇಂಥಾ ಶ್ರೀ ಚಕ್ರದಲ್ಲಿ ಮೂರು ರೇಖೆ ಕೂಡಿದ ಇಪ್ಪತ್ತುನಾಲ್ಕು ಮರ್ಮಸ್ಥಾನಗಳು. ಎರಡು ರೇಖೆ ಕೂಡಿದ ಇಪ್ಪತ್ತುನಾಲ್ಕು ಸಂಧಿಸ್ಥಾನಗಳು. ಅದಕ್ಕೆ ಚಂದ್ರಜ್ಞಾನವಿದ್ಯದಲ್ಲಿ ಸಮ್ಮತಿ—

'ದ್ವಿರೇಖಾಸಂಗಮಸ್ಥಾನಂ ಸಂಧಿರಿತ್ಯಭಿಧೀಯತೇ
ತ್ರಿರೇಖಾಸಂಗಮಸ್ಥಾನಂ ಮರ್ಮ ಮರ್ಮವಿದೋ ವಿದುಃ
ಮನ್ವಶ್ರದ್ವಿದಶಾರಾಷ್ಟಕೋಣವೃತ್ತಚತುಷ್ಟಯೆ
ಅಷ್ಟಾವಿಂಶತಿಮರ್ಮಾಣಿ ಚತುರ್ವಿಂಶತಿಸಂಧಯಃ'

ಇದಕ್ಕೆ ಅರ್ಥ—ಶಿವಚಕ್ರದ ಅಷ್ಟದಳ ಷೋಡಶದಳ ಮೇಖಲಾತ್ರಿತಯ ಭೂಪುರತ್ರಯಗಳಲ್ಲಿಗೆ ದ್ವಿರೇಖಾತ್ರಿರೇಖಾಸಂಗಮಸ್ಥಾನಗಳು ಇಲ್ಲದಕಾರಣ ಮರ್ಮಸಂಧಿಗಳು ಇಲ್ಲ. ಶಕ್ತಿಚಕ್ರದ ಚತುರ್ದಶಕೋಣ ದಶಾರದ್ವಯ ಅಷ್ಟಕೋಣ ಈ ನಾಲ್ಕು ಚಕ್ರಗಳಲ್ಲಿಯೂ ಇಪ್ಪತ್ತುನಾಲ್ಕು ಸಂಧಿಸ್ಥಾನವು ಇಪ್ಪತ್ತುನಾಲ್ಕು ಮರ್ಮಸ್ಥಾನವು. ಆದರೆ ಅಷ್ಟಾವಿಂಶತಿ ಮರ್ಮಸ್ಥಾನವೆಂದು ಹೇಳಿದ್ದಕ್ಕೆ ಹೇಗೆ[1]ಯಂದ[1]ದುಂಟಾದರೆ ಶಿವಚಕ್ರ ನಾಲ್ಕಾಗಿ ಚತುಷ್ಟಯುವನೂ ಕೂಡಿಕೊಂಡು ಹೇಳಿದ್ದು. ಆದರೆ ಇದು ಎಲ್ಲವು ಚಕ್ರವ ಬರೆವ ಪ್ರಕಾರವ ತಿಳಿದಲ್ಲದೆ ತಿಳಿಯ ಕೂಡದು. ಅದುಕಾರಣ ಶ್ರೀಚಕ್ರವ ಬರೆವಪ್ರಕಾರ[2]ಹೇಳಿದೇನು. ಅದು ಸೃಷ್ಟಿಕ್ರಮವೆಂದು ಸಂಹಾರಕ್ರಮವೆಂದು ಎರಡು ಪ್ರಕಾರ. ಸಂಹಾರಕ್ರಮದಲ್ಲಿ ಬರೆವದು ಕೌಲಮತದವರಿಗೆ. ಹಾಗಾದರು ಒಂಬತ್ತು ಯೋನಿಪ್ರಕಾರವ ತಿಳಿಯಬೇಕಾಗಿ ಅದನು[2]ಹೇಳಿದೇನು.

ಸಂಹಾರಚಕ್ರವ ಬರೆವಪ್ರಕಾರ—ಮೊದಲೆ ವೃತ್ತಾಕಾರವ ಬರೆದು ಆ ವೃತ್ತಮಧ್ಯದಲ್ಲಿ ಒಂಬತ್ತು ರೇಖೆಯ ಬರೆದು ಪಡುವಣದಿಕ್ಕಿನ ರೇಖೆಯ ಎರಡು ಕೊನೆಗಳಿಂದ ತ್ರಿಕೋಣಾಕಾರವಾಗಿ ಅದರ ಆರನೆ ರೇಖೆಯ ಮಧ್ಯದಲ್ಲಿ ಕೂಡಿಸುವುದು. [3]ಹಾಗೆ[3]ಮೂಡಣ ರೇಖೆಯ ಎರಡು ಕೊನೆಗಳಿಂದ ತ್ರಿಕೋಣಾಕಾರವಾಗಿ ಅದರ ಏಳನೇಯ ರೇಖೆಯ ಮಧ್ಯದಲ್ಲಿ ಕೂಡಿಸುವದು. ಪಡುವಣ ಎರಡನೆ ರೇಖೆಯ ಎರಡು ಕೊನೆಗಳಿಂದ ತ್ರಿಕೋಣಾಕಾರವಾಗಿ ಅದರ ಎಂಟನೆ ರೇಖೆಯ ಮಧ್ಯದಲ್ಲಿ ಕೂಡಿಸುವದು. ಹಾಗೆ ಮೂಡಣ ಎರಡನೆ ರೇಖೆಯ ಎರಡು ಕೊನೆಗಳಿಂದ ತ್ರಿಕೋಣಾಕಾರವಾಗಿ ಅದರ ಎಂಟನೆ ರೇಖೆಯ ಮಧ್ಯದಲ್ಲಿ ಕೂಡಿಸುವದು. ಆ ತರುವಾಯದಲ್ಲಿ ಮೂಡಣ ಪಡುವಣ ಮಧ್ಯದಲ್ಲಿ ಇದ್ದ ದೊಡ್ಡ ಎರಡು ರೇಖೆಗಳಿಂದ ವೃತ್ತಪರಿಯಂತರವು ಷಟ್‌ಕೋಣವ ಬರೆವದು. ಮಧ್ಯದಲ್ಲಿ ಇದ್ದ ಚಿಕ್ಕರೇಖೆಗಳ ಮೂರರಲ್ಲಿ ಪಡುವಣ ರೇಖೆಯ ಕೊನೆಗಳಿಂದ ತ್ರಿಕೋಣಾಕಾರವಾಗಿ ಅದಕ್ಕೆ ಬೇಕಾದ ಐದನೆ ರೇಖೆಯ ಮಧ್ಯದಲ್ಲಿ ಕೂಡಿಸುವದು. ಹಾಗೆ ಮೂಡಣ ದಿಕ್ಕಿನ ರೇಖೆಯ ಕೊನೆಗಳಿಂದ ತ್ರಿಕೋಣಾಕಾರವಾಗಿ

---

[1] ಯಂಬು (ಖ) [2] ಹೇಳೇನು (ಖ) [3] ಅಪ್ರಕಾರದಲ್ಲಯೆ (ಖ).

ಅದಕ್ಕೆ ಬೇಕಾದ ಐದನೆ ರೇಖೆಯ ಮಧ್ಯದಲ್ಲಿ ಕೂಡಿಸುವದು. ಮಧ್ಯದಲ್ಲಿ ಇದ್ದ ಅತಿ ಚಿಕ್ಕರೇಖೆಯ ಕೊನೆಗಳಿಂದ ತ್ರಿಕೋಣಾಕಾರವಾಗಿ ಅದಕ್ಕೆ ಬೇಕಾದ ಮೂರನೆ ರೇಖೆಯ ಮಧ್ಯದಲ್ಲಿ ಕೂಡಿಸುವದು. ಹೀಗೆ ಚಕ್ರವ ಬರೆದರೆ ಇಪ್ಪತ್ತ ನಾಲ್ಕು ಮರ್ಮವೂ ಇಪ್ಪತ್ತನಾಲ್ಕು ಸಂಧಿಯೂ ನಾಲ್ವತ್ತುಮೂರು ಕೋಣ ಸಹಿತವಾಗಿ ಒಂಬತ್ತು ಯೋನ್ಯಾತ್ಮಕವಾಗಿ ಚಕ್ರವಿಹುದು. ಇದು ಕೌಲಮತ ರಹಸ್ಯವು.

ಸಮಯ ಮತದ ಸೃಷ್ಟಿಕ್ರಮದಲ್ಲಿ ಚಕ್ರವ ಬರೆವ ಪ್ರಕಾರವ ಹೇಳೇನು. ಮೊದಲೇ ಮೂಡಲುಮುಖದ ತ್ರಿಕೋಣವ ಬರೆದು ಆ ತ್ರಿಕೋಣಮಧ್ಯದಲ್ಲಿ ಬಿಂದುವ ಬರೆದು ಆ ಬಿಂದುವಿನ ಮೇಲೆ ಮೊದಲ ತ್ರಿಕೋಣ ಮಧ್ಯವ ಭೇದಿಸಿ ಮತ್ತೊಂದು ತ್ರಿಕೋಣವ ಮೂಡಲುಮುಖವಾಗಿ ಬರೆವದು. ಆ ಮೊದಲ ತ್ರಿಕೋಣಾಗ್ರದಲ್ಲಿ ಪಡುವಲುಮುಖವಾಗಿ ಮತ್ತೊಂದು ತ್ರಿಕೋಣವ ಬರೆದು ಈ ಪ್ರಕಾರದಲ್ಲಿ ಬರೆದರೆ ಮೂರು ತ್ರಿಕೋಣಗಳಿಂದ ಎಂಟುಕೋಣಚಕ್ರ ಹುಟ್ಟುವದು. ಇದರಿಂದಲೆ ಹತ್ತುಕೋಣಚಕ್ರವ ಹುಟ್ಟಿಸಬೇಕು. ಅದು ಹೇಗೆ ಎಂದರೆ—ಅಷ್ಟ ಕೋಣದ ಮೂಡಣ ಪಡುವಣ ರೇಖೆಗಳ ಕೊನೆಗಳಿಂದ ಷಟ್ಕೋಣವ ಬರೆವದು. ವಿದಿಕ್ಕುಗಳಲ್ಲಿ ಇದ್ದ ಮೂರುರೇಖೆಯ ಕೂಡಿದ ಮರ್ಮಸ್ಥಾನ ನಾಲ್ಕರಿಂದ ನಾಲ್ಕು ತ್ರಿಕೋಣವ ಹುಟ್ಟಿಸುವದು. ಎಂಟು ಕೋಣ ಮಧ್ಯದಲ್ಲಿ ಇದ್ದ ಯೋನಿಯ ಮೇಲೆ ದಕ್ಷಿಣೋತ್ತರವಾಗಿ ದೀರ್ಘ ರೇಖೆಯ ಬರೆವದು. ಈಶಾನಅಗ್ನಿತ್ರಿಕೋಣ ಗಳಲ್ಲಿ ಕೂಡಿಸುವದು. ಈ ಪ್ರಕಾರದಲ್ಲಿಯೇ ಪಡುವಣ ದಿಕ್ಕಿನಲ್ಲಿಯೂ ಕೂಡಿಸು ವದು. ಹೀಗೆ ಬರೆದರೆ ಹತ್ತು ಕೋಣವಾದ ಚಕ್ರ ಹುಟ್ಟುವದು. ಈ ಹತ್ತುಕೋಣ ಚಕ್ರಕ್ಕೆ ಹೇಳಿದ ಪ್ರಕಾರದಲ್ಲಿಯೇ ಮತ್ತೆ ಒಂದು ಹತ್ತುಕೋಣ ಚಕ್ರ ಹುಟ್ಟುವದು. ಎರಡನೆಯ ಹತ್ತುಕೋಣ ಚಕ್ರದಮೇಲೆ ಹದಿನಾಲ್ಕು ಕೋಣವಾದ ಚಕ್ರವ ಬರೆವದು. ಅದು ಹೇಗೆ ಎಂದರೆ–ಪ್ರಥಮದಶಕೋಣದ ಮೂಡಣಪಡುವಣ ರೇಖೆಯ ಕೊನೆಗಳಿಂದ ಷಟ್ಕೋಣವ ಹುಟ್ಟಿಸುವದು. ಆ ಷಟ್ಕೋಣದಲ್ಲಿ ಮೊದಲೇ ಇದ್ದ ಮರ್ಮಸ್ಥಾನವ ನಾಲ್ಕರಿಂದ ನಾಲ್ಕು ತ್ರಿಕೋಣ ಹುಟ್ಟಿಸುವದು. ಆ ಮರ್ಮಸ್ಥಾನಗಳಿಗೆ ಮೇಲೆ ಇದ್ದಂಥಾ ನಾಲ್ಕು ಮರ್ಮಸ್ಥಾನಗಳಿಂದ ಹತ್ತುಕೋಣಚಕ್ರವ ಬರೆದ ಪ್ರಕಾರದಲ್ಲಿ ನಾಲ್ಕು ತ್ರಿಕೋಣವ ಹುಟ್ಟಿಸಿ ಮೂಡಣ ಪಡುವಣ ರೇಖೆಯ ಕೂಡುವದು. ಹೀಗೆ ಚಕ್ರವ ಬರೆದರೆ ನಾಲ್ವತ್ತು ಮೂರು ತ್ರಿಕೋಣವಾಗಿ, ಯೆರಡುರೇಖೆ ಕೂಡಿದ ಸಂಧಿ ಇಪ್ಪತ್ತುನಾಲ್ಕಾಗಿ, ಮೂರು ರೇಖೆ ಕೂಡಿದ ಮರ್ಮ ಇಪ್ಪತ್ತುನಾಲ್ಕಾಗಿ ಚಕ್ರ ಹುಟ್ಟುವದು. ಈ ಸಮಯಮತಚಕ್ರದಲ್ಲಿ ತ್ರಿಕೋಣ ಊರ್ಧ್ವಮುಖವು, ಕೌಲಮತದಲ್ಲಿ ತ್ರಿಕೋಣ ಅಧೋಮುಖವು. ಸಮಯಮತದಲ್ಲಿ ನಾಲ್ಕುಕೋಣಮಧ್ಯದಲ್ಲಿ ಬಿಂದು. ಕೌಲಮತದಲ್ಲಿ ತ್ರಿಕೋಣಮಧ್ಯದಲ್ಲಿ ಬಿಂದು. ನಾಲ್ವತ್ತು ಮೂರು ಚಕ್ರಕ್ಕೆ ಮೇಲೆ ಎಂಟುದಳಚಕ್ರವು ಅದರ ಮೇಲೆ ಹದಿನಾರುದಳ ಚಕ್ರವು. ಅದರಮೇಲೆ ಮೂರು ವೃತ್ತಚಕ್ರವು. ಅದರಮೇಲೆ ನಾಲ್ಕುಬಾಗಿಲು

ಕೂಡಿದ ಮೂರುರೇಖೆಯಿಂದ ನಾಲ್ಕುಮೂಲೆಯಾದ ಭೂಪುರ ಚಕ್ರವು. ಶಿವ ಚಕ್ರವ ಬರೆವಂಥಾದ್ದು ಎರಡು ಮತಕ್ಕೂ ಸರಿ. ಈ ಪ್ರಕಾರದಲ್ಲಿ ಶ್ರೀಚಕ್ರವ ಉದ್ಧರಿಸಿಕೊಂಬುದ ತಿಳಿದುಕೊಂಬುದು. ಇಂಥಾ ಶ್ರೀಚಕ್ರದಲ್ಲಿ ಭೂಪ್ರಸ್ತಾರ ವೆಂದು ಕೈಲಾಸಪ್ರಸ್ತಾರವೆಂದು ಮೇರುಪ್ರಸ್ತಾರವೆಂದು ಮೂರು ಭೇದ ವಾಗಿ ಇಹದು. ಮೇರುಪ್ರಸ್ತಾರವೆಂಬುದು ಚಕ್ರಕ್ಕೆ ತ್ರಿಪುರಸುಂದರಿ ಯಾದಿ ಹದಿನಾರು ನಿತ್ಯೆಗಳ ಐಕ್ಯವು. ಕೈಲಾಸಪ್ರಸ್ತಾರವೆಂಬುದು ಚಕ್ರಕ್ಕೆ ಮಾತೃಕಾರೂಪಾಗಿ ಇದ್ದಂಥಾ ಅಕಾರ ಆದಿಯಾದ ಐವತ್ತು ಅಕ್ಷರಗಳ ಐಕ್ಯವು. ಭೂಪ್ರಸ್ತಾರವೆಂಬುದು ಚಕ್ರಕ್ಕೆ ವಶಿನ್ಯಾದಿನಾಲ್ವತ್ತನಾಲ್ಕುಶಕ್ತಿಗಳ ಐಕ್ಯವು. ಈ ಅರ್ಥವನೆಲ್ಲವನು ಚತುಷ್ಷಷ್ಟ್ಯಾ ತಂತ್ರೈಃ (ಶ್ಲೋ ೩೦) ಎಂಬ ಶ್ಲೋಕದ ಟೀಕಿನಲ್ಲಿ ವಿವರವಾಗಿ ಬರದೇನು. ಈ ಶ್ರೀಚಕ್ರಮಾಹಾತ್ಮ್ಯವ ರುದ್ರಯಾಮಳ ದಲ್ಲಿ ಹೇಳಿದ್ದು—

'ಪೃಶ್ನಯೋ ನಾಮ ಮುನಯಃ ಸರ್ವೇ ಚಕ್ರಸಮಾಶ್ರಯಾಃ
ಸೇವಮಾನಾಶ್ಚಕ್ರವಿದ್ಯಾಂ ದೇವಗಂಧರ್ವಪೂಜಿತಾಮ್

ಅಗ್ನೀಷೋಮಾತ್ಮಕಂ ಚಕ್ರಮಗ್ನೀಷೋಮಮಯಂ ಜಗತ್
ಅಗ್ನಾವಂತರ್ಬಭೌ ಭಾನುರಗ್ನೀಷೋಮಮಯಂ ಸ್ಮೃತಮ್

ತ್ರಿಖಂಡಂ ಮಾತೃಕಾಚಕ್ರಂ ಸೋಮಸೂರ್ಯಾನಲಾತ್ಮಕಮ್
ತ್ರಿಕೋಣಂ ಬೈಂದವಂ ಸೌಮ್ಯಮಷ್ಟಕೋಣಂ ಚ ಮಿಶ್ರಕಮ್

(ಚಕ್ರಂ ಚಂದ್ರಮಯಂ ಚೈವ ದಶಾರದ್ವಿತಯಂ ತಥಾ)
ಚತುರ್ದಶಾರಂ ವಹ್ನೇಸ್ತು ಚತುಶ್ಚಕ್ರಂ ಚ ಭಾನುಮತ್

ಏತತ್ಪ್ರಸಾದಾದಿಂದ್ರಾದ್ಯಾ ವಸವೋಽಷ್ಟೌ ಮರುದ್ಗಣಾಃ
[1]ಏತೇ ಸಮೃದ್ಧಾ ಲೋಕೇಽಸ್ಮಿನ್ ತ್ರಿಪುರಾಚಕ್ರಸೇವಕಾಃ

ಪುರತ್ರಯಂ ಚ ಚಕ್ರಸ್ಯ ಸೋಮಸೂರ್ಯಾನಲಾತ್ಮಕಮ್
[2]ಮಹಾಲಕ್ಷ್ಮ್ಯಾ ಯುತಂ[2] ಚಕ್ರಂ ತತ್ರೈವಾಸ್ತೆ [3]ತಯಾ ಶಿವಃ[3]'

ಈ ಅರ್ಥವು ವೇದಗಲ್ಲಿ ಹೇಳಿದೆ, ಪ್ರಾಕೃತಟೀಕಿನಲ್ಲಿ ಬರೆಯಲಿಲ್ಲ.

ತ್ವದೀಯಂ ಸೌಂದರ್ಯಂ ತುಹಿನಗಿರಿಕನ್ಯೇ ತುಲಯಿತುಂ
ಕವೀಂದ್ರಾಃ ಕಲ್ಪಂತೇ ಕಥಮಪಿ ವಿರಿಂಚಿಪ್ರಭೃತಯಃ
ಯದಾಲೋಕ್ಯೌತ್ಸುಕ್ಯಾದಮರಲಲನಾ ಯಾಂತಿ ಮನಸಾ
ತಪೋಭಿರ್ದುಷ್ಪ್ರಾಪಾಮಪಿ ಗಿರಿಶಸಾಯುಜ್ಯಪದವೀಮ್ ೧೨

---

[1] ಯೇ ಯೇ (ಗ) [2] ಮಹಾಲಕ್ಷ್ಮ್ಯಾಃಪುರಂ (ಗ) [3] ಸದಾಶಿವಃ (ಗ).

[ಹೇ ತುಹಿನಗಿರಿಕನ್ಯೇ! ತ್ವದೀಯಂ ಸೌಂದರ್ಯಂ ತುಲಯಿತುಂ ವಿರಿಂಚಿ ಪ್ರಭೃತಯಃ ಕವೀಂದ್ರಾಃ ಕಥಮಪಿ ಕಲ್ಪಂತೇ, ಯದ್ಯಸ್ಮಾತ್ಕಾರಣಾತ್ ಅಮರ ಲಲನಾಃ ಆಲೋಕ್ಯೌತ್ಸುಕ್ಯಾತ್ ತಪೋಭಿರ್ದುಷ್ಪ್ರಾಪಾಮಪಿ ಗಿರಿಶಸಾಯುಜ್ಯ ಪದವೀಂ ಮನಸಾ ಯಾಂತಿ.]

ಹೇ ತುಹಿನಗಿರಿಕನ್ಯೇ–ಹೇ ಹಿಮವತ್ಪರ್ವತನ ಮಗಳೇ! ತ್ವದೀಯಂ ಸೌಂದರ್ಯಂ–ನಿನ್ನ ಶರೀರದಲ್ಲಿ ಇಹ ಚೆಲುವಿಕೆಯನು, ತುಲಯಿತುಂ–ವರ್ಣಿಸು ವದಕ್ಕೆ, ವಿರಿಂಚಿಪ್ರಭೃತಯಃ ಕವೀಂದ್ರಾಃ ಕಥಮಪಿ ಕಲ್ಪಂತೇ–ಬ್ರಹ್ಮವಿಷ್ಣು ಇಂದ್ರಾದಿಗಳಾದ ಕವೀಶ್ವರರುಗಳು ಅತಿಪ್ರಯತ್ನದಿಂದಲಾದರೂ ಹೇಳಬಲ್ಲರೆ? ಹೇಳಲರಿಯರು. ಯದ್ಯಸ್ಮಾತ್ಕಾರಣಾತ್ ಅಮರಲಲನಾಃ *ಆಲೋಕ್ಯ ಔತ್ಸು ಕ್ಯಾತ್–ಅವದೊಂದು ಕಾರ್ಯಕಾರಣದಿಂದ ದೇವಸ್ತ್ರೀಯರು ನಿನ್ನ ಚೆಲುವಿಕೆ ಯನು ನೋಡಿ ಔತ್ಸುಕ್ಯದಿಂದ, ತಪೋಭಿರ್ದುಷ್ಪ್ರಾಪಾಮಪಿ ಗಿರಿಶಸಾಯುಜ್ಯ ಪದವೀಂ ಮನಸಾ ಯಾಂತಿ–ತಪಸ್ಸುಗಳಿಂದ ಐದಬಾರದಿದ್ದಂಥಾ ಶಿವನ ಸಾಯುಜ್ಯಪದವಿಯನು ಮನಸ್ಸಿನಿಂದ ಐದುವರು. ಈ ಶ್ಲೋಕಕ್ಕೆ ಅಭಿಪ್ರಾಯ—ಬ್ರಹ್ಮಬೃಹಸ್ಪತಿಗಳು ಮೊದಲಾದವರಾದರೂ ನಿನ್ನ ಚೆಲುವಿಕೆಯ ಹೋಲಿಕೆಯನು ವರ್ಣಿಸುವದಕ್ಕೆ ಕೂಡದು. ಊರ್ವಶಿ ತಿಲೋತ್ತಮೆ ಮೊದಲಾದ ಅತಿರೂಪವತಿಯಾಗಿದ್ದ ಅಪ್ಸರಸ್ತ್ರೀಯರು ನಿನ್ನ ಸೌಂದರ್ಯವ ನೋಡಿ ತಮ್ಮದು ಏತರ ಸೌಂದರ್ಯವೆಂದು ನಿಂದಿಸಿಕೊಂಡು ಇಂಥಾ ಸ್ತ್ರೀಯ ಅಂಗಸಂಗಸೌಖ್ಯವಾಗಬೇಕಲ್ಲಾ, ಅನ್ಯವಾದ ಪುರುಷದೇಹಕ್ಕೆ ಕೂಡದೆಂದು ಸದಾಶಿವನ ಐಕ್ಯವನು ಮನಸ್ಸಿನಲ್ಲಿ ಬಯಸುವರು, ಈ ಶ್ಲೋಕದಲ್ಲಿ ಅನನ್ವಯಾಲಂಕಾರ ಕಾಣಿಸುತದೇ.

ನರಂ ವರ್ಷೀಯಾಂಸಂ ನಯನವಿರಸಂ ನರ್ಮಸು ಜಡಂ
ತವಾಪಾಂಗಾಲೋಕೇ ಪತಿತಮನುಧಾವಂತಿ ಶತಶಃ
ಗಳದ್ವೇಣೀಬಂಧಾಃ ಕುಚಕಲಶವಿಸ್ರಸ್ತಸಿಚಯಾಃ
ಹಠಾತ್ತ್ರುಟ್ಯತ್ಕಾಂಚ್ಯೋ ವಿಗಳಿತದುಕೂಲಾ ಯುವತಯಃ ೧೩

[ಹೇ ಭಗವತಿ! ವರ್ಷೀಯಾಂಸಂ ನಯನವಿರಸಂ ನರ್ಮಸು ಜಡಂ ತವಾಪಾಂಗಾಲೋಕೇ ಪತಿತಂ ನರಂ ಶತಶೋ ಯುವತಯಃ ಗಳದ್ವೇಣೀ ಬಂಧಾಃ ಕುಚಕಲಶವಿಸ್ರಸ್ತಸಿಚಯಾಃ ಹಠಾತ್ ತ್ರುಟ್ಯತ್ಕಾಂಚ್ಯಃ ವಿಗಳಿತ ದುಕೂಲಾಃ ಸತ್ಯಃ ಅನುಧಾವಂತಿ.]

ಹೇ ಭಗವತಿ! ವರ್ಷೀಯಾಂಸಂ ನಯನವಿರಸಂ ನರ್ಮಸು ಜಡಂ ತವಾ ಪಾಂಗಾಲೋಕೇ ಪತಿತಂ ನರಂ—ಏ ಭಗವತಿಯೇ ಅತಿವೃದ್ಧನಾಗಿ ಇದ್ದಂಥಾ

* ಆಲೋಕೌತ್ಸುಕ್ಯಾತ್ ಎಂಬ ಪಾಠದಲ್ಲಿ ನಿನ್ನ ಸೌಂದರ್ಯವ ನೋಡುವದರಲ್ಲಿ ಔತ್ಸುಕ್ಯ ದಿಂದ ಎಂದರ್ಥ.

[1] ನಿನ್ನ ಕಟಾಕ್ಷವುಂಟಾದಂಥಾ [2] ಮನುಷ್ಯನನ್ನು,[2] ಶತಶೋ ಯುವತಯಃ ಗಳದ್ವೇಣೀಬಂಧಾಃ ಕುಚಕಲಶವಿಸ್ರಸ್ತಸಿಚಯಾಃ ಹಠಾತ್ ತ್ರುಟ್ಯತ್ಕಾಂಚ್ಯಃ ವಿಗಳಿತದುಕೂಲಾಃ ಸತ್ಯಃ ಅನುಧಾವಂತಿ—ಮೂರುಲೋಕದಲ್ಲಿಯೂ ಇದ್ದಂಥಾ ಯೌವನ ಸ್ತ್ರೀಯರು ಎಣೆತಿಗಂಟು ಸಡಿಲಿ ಬಿಡುವ ಹಾಗೆ, ಕುಚಕುಂಭಗಳ ಮೇಲೆ ಇಹ ಸೆರಗು ಜಾರಿಬೀಳುವಹಾಗೆ, ಶೀಘ್ರಗಮನದಿಂದ ಕಾಂಚಿಯದಾಮ ಹರಿವ ಹಾಗೆ, ಸೀರೆಯ ನಿರಿ ಜಾರುವಹಾಗೆ ಹಿಂದುಗೊಂಡು ಓಡಿಬರುತ್ತಿದ್ದಾರೆ.

ಮೊದಲು ಹೇಳಿದ ಪ್ರಕಾರಕ್ಕೆಲ್ಲಾ ಕುರೂಪಿಯಾದ ಮನುಷ್ಯನ ನಿನ್ನ ಮಹಿಮೆಯಿಂದ ಮನ್ಮಥನೆಂದು ತಿಳಿದು ಸ್ತ್ರೀಯರು ಹಿಂದುಕೊಂಡು ಓಡಿಬರುತ್ತಿದ್ದಾರೆ ಎಂಬುದು ಅಭಿಪ್ರಾಯ. ಇಂಥಾ ಮದನಪ್ರಯೋಗವನು "ಮುಖಂ ಬಿಂದುಂ ಕೃತ್ವಾ" (ಶ್ಲೋ ೧೯) ಎಂಬ ಶ್ಲೋಕದ ಟೀಕಿನಲ್ಲಿ ವಿವರಿಸಿ ಬರದೇನು.

ಕ್ಷಿತೌ ಷಟ್ಪಂಚಾಶದ್ದ್ವಿಸಮಧಿಕಪಂಚಾಶದುದಕೇ
ಹುತಾಶೇ ದ್ವಾಷಷ್ಟಿಶ್ಚತುರಧಿಕಪಂಚಾಶದನಿಲೇ,
ದಿವಿ ದ್ವಿಷ್ಷಟ್ತ್ರಿಂಶನ್ಮನಸಿ ಚ ಚತುಷ್ಷಷ್ಟಿರಿತಿ ಯೇ
ಮಯೂಖಾಸ್ತೇಷಾಮಪ್ಯುಪರಿ ತವ ಪಾದಾಂಬುಜಯುಗಮ್ ೧೪

ಅನ್ವಯ ಶ್ಲೋಕ ಪ್ರಕಾರವೆ.

ಭೂತತ್ತ್ವಯುಕ್ತವಾದ ಮೂಲಾಧಾರಚಕ್ರದಲ್ಲಿ ಐವತ್ತಾರು ಕಿರಣಗಳು, ಉದಕ ತತ್ತ್ವಯುಕ್ತವಾದ ಮಣಿಪೂರಚಕ್ರದಲ್ಲಿ ಐವತ್ತೆರಡು ಕಿರಣಗಳು, ಅಗ್ನಿತತ್ತ್ವಯುಕ್ತವಾದ ಸ್ವಾಧಿಷ್ಠಾನಚಕ್ರದಲ್ಲಿ ಅರವತ್ತೆರಡು ಕಿರಣಗಳು, ವಾಯುತತ್ತ್ವಯುಕ್ತವಾದ ಅನಾಹತಚಕ್ರದಲ್ಲಿ ಐವತ್ತನಾಲ್ಕು ಕಿರಣಗಳು, ಆಕಾಶತತ್ತ್ವಯುಕ್ತವಾದ ವಿಶುದ್ಧಿಚಕ್ರದಲ್ಲಿ ಎಪ್ಪತ್ತೆರಡು ಕಿರಣಗಳು, ಮನಸ್ತತ್ತ್ವಯುಕ್ತವಾದ ಆಜ್ಞಾಚಕ್ರದಲ್ಲಿ ಅರವತ್ತುನಾಲ್ಕು ಕಿರಣಗಳು, ಹೀಗೆ ವೇದ ಶಾಸ್ತ್ರಾಗಮಗಳಲ್ಲಿ ಪ್ರಸಿದ್ಧವಾದ ಈ ಆರು ಚಕ್ರಗಳಲ್ಲಿ ಇರುವಂಥಾ ಮುನ್ನೂರ ಅರವತ್ತು ಕಿರಣಗಳಮೇಲೆ ಸಹಸ್ರಕಮಲಮಧ್ಯಚಂದ್ರಬಿಂಬಸ್ವರೂಪದ ಬಿಂದುಸ್ಥಾನವೆಂಬ ಹೆಸರುಂಟಾದ ಅಮೃತಸಮುದ್ರಮಧ್ಯದಲ್ಲಿ ನಿನ್ನ ಪಾದಪದ್ಮಂಗಳು ಇದ್ದಾವೆ.

ಇಲ್ಲಿ ಬರೆಯತಕ್ಕ ಅರ್ಥ—ಯೋಗಶಾಸ್ತ್ರಪ್ರಕಾರದಲ್ಲಿ ಆಧಾರ ಸ್ವಾಧಿಷ್ಠಾನ ಮಣಿಪೂರ ಅನಾಹತ ವಿಶುದ್ಧಿ ಆಜ್ಞಾ ಎಂಬ ಈ ಆರು ಚಕ್ರವು ಮೂರು ಖಂಡವು. ಅವು ಅಗ್ನಿ ಸೂರ್ಯ ಚಂದ್ರ ಖಂಡಗಳು. ಆಧಾರ ಸ್ವಾಧಿಷ್ಠಾನ

---

[1] ಕಾಚಕಾಮಿಲ ಮೊದಲಾದ ನೇತ್ರದೋಷ ವುಂಟಾದಂಥಾ ರತಿಕಲೆಗಳಲ್ಲಿ ಮೂಢನಾದಂಥಾ ಎಂಬ ಅರ್ಥವು ಬಿಟ್ಟುಹೋಗಿದೆ [2] ಮನುಷ್ಯರನ್ನು (ಖ).

ಎರಡುಚಕ್ರವು ಅಗ್ನಿಖಂಡವು. ಆ ಖಂಡದಮೇಲೆ ಅಗ್ನಿಸ್ಥಾನವು. ಅದೇ ರುದ್ರಗ್ರಂಥಿ ಎಂಬುದು. ಮಣಿಪೂರ ಅನಾಹತ ಈ ಎರಡು ಚಕ್ರವು ಸೂರ್ಯ ಖಂಡವು. ಆ ಖಂಡದಮೇಲೆ ಸೂರ್ಯಸ್ಥಾನವು. ಅದೇ ವಿಷ್ಣುಗ್ರಂಥಿ ಎಂಬುದು. ವಿಶುದ್ಧಿ ಆಜ್ಞಾ ಈ ಎರಡು ಸೋಮಖಂಡವು. ಆ ಖಂಡದ ಮೇಲೆ ಚಂದ್ರಸ್ಥಾನವು. ಅದೆ ಬ್ರಹ್ಮಗ್ರಂಥಿ ಎಂಬುದು. ಅಲ್ಲಿ ಮೊದಲ ಖಂಡದ ಮೇಲೆ ಇರುವ ಅಗ್ನಿ ತನ್ನ ಜ್ವಾಲೆಗಳಿಂದ ಮೊದಲಖಂಡವ ಆವರಿಸಿಕೊಂಡು ಇಹನು. ಎರಡನೇ ಖಂಡದಮೇಲೆ ಇಹ ಸೂರ್ಯನು ತನ್ನ ಕಿರಣಗಳಿಂದ ಎರಡನೇ ಖಂಡವ ಆವರಿಸಿಕೊಂಡು ಇಹನು. ಮೂರನೆ ಖಂಡದಮೇಲೆ ಇಹ ಚಂದ್ರನು ತನ್ನ ಕಿರಣಗಳಿಂದ ಮೂರನೆ ಖಂಡವನು ಆವರಿಸಿಕೊಂಡು ಇಹನು. [1]ಶ್ರುತಿಯು ತತ್ತ್ವೋತ್ಪತ್ತಿಯ ಸಂಹಾರಕ್ರಮದ ಭೂತತತ್ವೋತ್ಪತ್ತಿಯ ಆದಿಯಾಗಿ.[1] ಭೂತತತ್ತ್ವಾತ್ಮಕವಾದ ಆಧಾರಚಕ್ರದಲ್ಲಿ ಐವತ್ತಾರು ಅಗ್ನಿಜ್ವಾಲೆ ಗಳು. ಜಲತತ್ತ್ವಾತ್ಮಕವಾದ ಮಣಿಪೂರಚಕ್ರದಲ್ಲಿ ಐವತ್ತಾರು ಆ ಚಕ್ರದಮೇಲೆ ಇಹ ಅಗ್ನಿಜ್ವಾಲೆಗಳು ಐವತ್ತೆರಡು. ಉಭಯವು ಕೂಡಾನೂರೆಂಟುಜ್ವಾಲೆಯೂ ಅಗ್ನಿಯವು. ಅಗ್ನಿತತ್ತ್ವಾತ್ಮಕವಾದ ಸ್ವಾಧಿಷ್ಠಾನಚಕ್ರದಲ್ಲಿ ಸೂರ್ಯಕಿರಣಗಳು ಅರವತ್ತೆರಡು. ವಾಯುತತ್ತ್ವಾತ್ಮಕವಾದ ಅನಾಹತಚಕ್ರದಲ್ಲಿ ಆ ಚಕ್ರದಮೇಲೆ ಇಹ ಸೂರ್ಯ ಕಿರಣಗಳು ಐವತ್ತನಾಲ್ಕು. ಉಭಯವು ಕೂಡ ಸೂರ್ಯಕಿರಣ ಗಳು ನೂರಹದಿನಾರು. [2]ಈ ನಾಲ್ಕನೆಯ ಚಕ್ರವಾದ ಅನಾಹತದ ಮೇಲೆ ಇಹ ಸೂರ್ಯನ ಕಿರಣಗಳು ತಮಗೆ ಕೆಳಗಣ ಎರಡನೆಯ (ಮಣಿಪೂರ) ಚಕ್ರವ ದಾಟಿ ಅಗ್ನಿಸ್ಥಾನವಾದ ಮೂರನೆಯ (ಸ್ವಾಧಿಷ್ಠಾನ) ಚಕ್ರಕ್ಕೆ ಪ್ರವೇಶವು. ಈ ಎರಡನೆ ಚಕ್ರದಮೇಲೆ ಇಹ ಅಗ್ನಿಜ್ವಾಲೆಗಳು ತಮಗೆ ಮೇಲಣ ಚಕ್ರಕ್ಕೆ ಪ್ರವೇಶವು. ಸ್ವಾಧಿಷ್ಠಾನ ಮಣಿಪೂರಗಳು ಸೂರ್ಯಾಗ್ನಿಮಿಶ್ರಕಿರಣಗಳು, ಅದರಿಂದ ಜಗದ್ದಹನಾಗ್ನಿಹೆಸರುಂಟಾದ ಸಂವರ್ತಮೇಘವೆಂಬ ಹೆಸರುಂಟಾದ ಸೂರ್ಯಕಿರಣಗಳು ಮಳೆಗೆ ಕಾರಣವು. ಈ ಅರ್ಥವನು "ತಟಿತ್ತ್ವಂತಂ ಶಕ್ತ್ಯಾ" (ಶ್ಲೋ ೩೯) ಎಂಬ ಶ್ಲೋಕದ ಟೀಕಿನಲ್ಲಿ ವಿವರವಾಗಿ ಬರೆದೇನು. ಆಕಾಶ ತತ್ತ್ವಾತ್ಮಕವಾದ ವಿಶುದ್ಧಿಚಕ್ರದಲ್ಲಿ ಚಂದ್ರನ ಕಲೆಗಳು ಎಪ್ಪತ್ತೆರಡು. ಮನಸ್ಸಿನ ತತ್ತ್ವಾತ್ಮಕವಾದ ಆಜ್ಞಾಚಕ್ರದಲ್ಲಿ ಇಹ ಚಂದ್ರನ [3]ಕಲೆಗಳು[3] ಅರವತ್ತನಾಲ್ಕು. ಉಭಯವು ಕೂಡ ಚಂದ್ರನ ಕಲೆಗಳು ನೂರಮೂವತ್ತಾರು. ಈ ಅರ್ಥಕ್ಕೆ ಸಮ್ಮತಿವಚನ ಭೈರವಯಾಮಳದಲ್ಲಿ—

---

[1] ಆಕಾಶ ವಾಯು ಅಗ್ನಿಜಲ ಪೃಥಿವೀ ಈರೀತಿ ಶ್ರುತಿಯಲ್ಲಿ ಹೇಳಿರುವ ತತ್ತ್ವೋತ್ಪತ್ತಿ ಕ್ರಮ, ಪೃಥಿವೀ ಜಲ ಅಗ್ನಿವಾಯು ಆಕಾಶ ಇದು ಸಂಹಾರಕ್ರಮ, ಇದನ್ನು ಅನುಸರಿಸಿ ಪ್ರಕೃತದಲ್ಲಿ ಭೂತತತ್ತ್ವವನ್ನು ಮೊದಲಾಗಿ ಹೇಳಿದ ಎಂದರ್ಥ. [2] ಸೂರ್ಯ ಮತ್ತು ಅಗ್ನಿಗಳಿಗೆ ಐಕ್ಯವಿರುವದರಿಂದಲೂ ಸೂರ್ಯನಲ್ಲಿ ಅಗ್ನಿಗೆ ಅಂತರ್ಭಾವ ಇರುವುದರಿಂದಲೂ, ಎಂದು ಸೇರಿಸ ಬೇಕು. [3] ಕಿರಣಗಳು (ಖ).

'ಅಷ್ಟೋತ್ತರಶತಂ ವಹ್ನೇಃ 108 ಷೋಡಶೋತ್ತರಕಂ ರವೇಃ 116
ಷಟ್ತ್ರಿಂಶದುತ್ತರಶತಂ 136 ಚಂದ್ರಸ್ಯ ಚ ವಿನಿರ್ಣಯಃ'

ಸೋಮಸೂರ್ಯಾಗ್ನಿಗಳು ಪಿಂಡಾಂಡಬ್ರಹ್ಮಾಂಡಗಳನು ಆವರಿಸಿಕೊಂಡು ಇಹವು. (ಪಿಂಡಾಂಡಬ್ರಹ್ಮಾಂಡಗಳಿಗೆ ಐಕ್ಯವಿಹಕಾರಣ ಪಿಂಡಾಂಡಾವೃತಿ ಬ್ರಹ್ಮಾಂಡಾವೃತಿ ಎಂಬುದು ರಹಸ್ಯ), [1]ಹಾಗೆ ಸಹಸ್ರಕಮಲವು ಪಿಂಡಾಂಡವ [2]ಆವರಿಸಿಕೊಂಡು[2] ಇಹದು. ಆ ಸಹಸ್ರಕಮಲ ಬೆಳದಿಂಗಳ ಮಯವು. ಅಲ್ಲಿಯಿಹ ಚಂದ್ರ ಕಲೆಯು ನಿತ್ಯವು. ಈ ಅರ್ಥವನು "ತವಾಜ್ಞಾ ಚಕ್ರಸ್ಥಂ" (ಶ್ಲೋ ೩೬) ಎಂಬ ಶ್ಲೋಕದ ಟೀಕಿನಲ್ಲಿ ವಿವರವಾಗಿ ಬರೆದೇನು. ಆಜ್ಞಾಚಕ್ರದ ಮೇಲೆ ಚಂದ್ರನಿಹನೆಂದು ಹೇಳಿದ್ದು ಚಂದ್ರಕಲಾವಸ್ಥಾನ ಮಾತ್ರವೆ, ಚಂದ್ರನ ಸ್ಥಾನವಲ್ಲ. ಚಂದ್ರಕಲೆಗೆ ನಾಶವಿಲ್ಲವೆಂದು ಹೇಳಿದ್ದು ಕೂಡದು, ಸುಭಗೋದಯ ದಲ್ಲಿ ಚಂದ್ರಕಲೆಗೆ ನಾಶವ ಹೇಳಿದೆ ಎಂದರೇ, ಅದು ಸಹಸ್ರಕಮಲದಲ್ಲಿ ಇಹ ಚಂದ್ರಗೆ ನಾಶವ ಹೇಳಿದ್ದು ಅಲ್ಲ. ಮತ್ತೆ ಆವದಕ್ಕೆಂದರೇ ಹದಿನಾರು ನಿತ್ಯಾತ್ಮಕ ವಾದ ಹದಿನಾರು ಚಂದ್ರಕಲೆಗಳು ತಮ್ಮ ಪ್ರಕಾಶದಿಂದ ಶುಕ್ಲಪಕ್ಷದ ಪಾಡ್ಯ ವಾರಭ್ಯ ಪೌರ್ಣಮಿಯ ಪರಿಯಂತರ ತಿಥಿಪ್ರವರ್ತಕರು, ತಮ್ಮ ಅಪ್ರಕಾಶ ದಿಂದ ಕೃಷ್ಣಪಕ್ಷದ ಪಾಡ್ಯವಾರಭ್ಯ ಅಮಾವಾಸ್ಯೆ ಪರಿಯಂತರ ತಿಥಿ ಪ್ರವರ್ತ ಕರು, ಆ ಕಲೆಗಳಿಗೆ ವೃದ್ಧಿಕ್ಷಯವೆಂದು ಮಾತ್ರ ರಹಸ್ಯ.

ಸಹಸ್ರಕಮಲದಲ್ಲಿ ಇಹ ಚಂದ್ರಕಲೆಗೆ ವೃದ್ಧಿಕ್ಷಯವಿಲ್ಲ. ಚಂದ್ರಕಲಾ ವಿದ್ಯೆಯೆಂಬ ನಾಮವುಂಟಾದ ಶ್ರೀವಿದ್ಯೆ ಪಂಚದಶತಿಥಿರೂಪವಾಗಿಹದು. ಮೊದಲೇ ಹೇಳಿದ ಮೂನ್ನೂರ ಅರವತ್ತು ಕಿರಣಗಳು ಮುನ್ನೂರಅರವತ್ತು ದಿವಸವಾಗಿ ಇಹವು. ಆ ಮುನ್ನೂರ ಅರವತ್ತು ದಿವಸಗಳು ಸಂವತ್ಸರ ರೂಪವಾ ಗಿಹದು. ಆ ಸಂವತ್ಸರ ವೇದದಲ್ಲಿ ಪ್ರಜಾಪತಿ ಎಂದು ಹೇಳಿ ಇಹದು. ಆ ಪ್ರಜಾಪತಿ ಜಗವ ಸೃಷ್ಟಿಸ್ಥಿತಿಪ್ರಳಯಗಳಿಗೆ ಕಾರಣವಾಗಿಹನು. ಇವಕ್ಕೆಲ್ಲಾ ಕಿರಣಗಳೇ ಮೂಲಕಾರಣವಾಗಲಾಗಿ ಆ ಕಿರಣಗಳೇ ಜಗದುತ್ಪತ್ತಿಸ್ಥಿತಿಲಯಕ್ಕೆ ಕಾರಣವಾಯಿತು. ಆ ಕಿರಣಗಳು ಈ ಒಂದೊಂದು ಬ್ರಹ್ಮಾಂಡ ಪಿಂಡಾಂಡದಲ್ಲಿ ಮುನ್ನೂರ ಅರವತ್ತು. ಹೀಗೆ ಲೆಕ್ಕವಿಲ್ಲದ ಪಿಂಡಾಂಡಬ್ರಹ್ಮಾಂಡವುಂಟು. ಅದರಿಂದ ಅನಂತಕಿರಣಗಳುಂಟು. ಆ ಕಿರಣಗಳು ಭಗವತಿಯ ಪಾದಾರವಿಂದ ದಲ್ಲಿ ಹುಟ್ಟಿದವು. ಆಯಾ ಪಿಂಡಾಂಡ ಬ್ರಹ್ಮಾಂಡಗಳ ಪ್ರಕಾಶವ ಮಾಡುವವು. ಈ ಅರ್ಥವು ವೇದದಲ್ಲಿದೆ, ಪ್ರಾಕೃತ ಟೀಕಿನಲ್ಲಿ ಬರೆಯಬಾರದು.

ಸೂರ್ಯಚಂದ್ರಾಗ್ನಿಗಳು ಭಗವತಿಯ ಪಾದಾರವಿಂದದಲ್ಲಿ ಹುಟ್ಟಿದ ಅನೇಕ ಕೋಟಿಕಿರಣಗಳ ಮಧ್ಯದಲ್ಲಿ ಕೆಲವು ಕಿರಣಗಳ ಭಗವತಿಯ ಪ್ರಸಾದದಿಂದ ತೆಗೆದುಕೊಂಡು ಲೋಕವನ್ನು ಪ್ರಕಾಶಮಾಡಿಕೊಂಡು ತಾವು ಪ್ರಕಾಶವಾಗಿ ಇಹರು. ಅದರಿಂದ ಸರ್ವಲೋಕಗಳಿಗೂ ಮೇಲೆ ಬಿಂದುಸ್ಥಾನವಾದ ಚಂದ್ರಕಲಾ

---

1 ಹೀಗೆ 2 ಅತಿಕ್ರಮಿಸಿ ಎಂದಿರಬೇಕು.

ಚಕ್ರವಿಹುದು. ಅಲ್ಲಿ ನನ್ನ ಚರಣಾಂಬುಜಗಳು ಇಹವು. ಇದು ಸ್ತೋತ್ರವಲ್ಲ ಯಥಾರ್ಥವೆ. ಈ ಅರ್ಥಕ್ಕೆ ಸಮ್ಮತಿವಚನ ಭೈರವಯಾಮಳದಲ್ಲಿ ಪಾರ್ವತಿಗೆ ಈಶ್ವರನು ಹೇಳಿದ್ದು––

'ಸಾಧು ಸಾಧು ಮಹಾಭಾಗೇ ಪೃಷ್ಟಂ ತ್ರೈಲೋಕ್ಯಸುಂದರಿ
ಗುಹ್ಯಾದ್ಗುಹ್ಯತರಂ ಜ್ಞಾನಂ ನ ಕುತ್ರಾಪಿ ಪ್ರಕಾಶಿತಮ್

ಕಲಾವಿದ್ಯಾ ಪರಾಶಕ್ತೇಃ ಶ್ರೀಚಕ್ರಾಕಾರರೂಪಿಣೀ
ತನ್ಮಧ್ಯೇ ಬೈಂದವಸ್ಥಾನಂ ತತ್ರಾಸ್ತೇ ಪರಮೇಶ್ವರೀ

ಸದಾಶಿವೇನ ಸಂಪೃಕ್ತಾ ಸರ್ವತತ್ತ್ವಾತಿಗಾ ಸತೀ
ಚಕ್ರಂ ತ್ರಿಪುರಸುಂದರ್ಯಾಃ ಬ್ರಹ್ಮಾಂಡಾಕಾರಮೀಶ್ವರಿ

ಪಂಚಭೂತಾತ್ಮಕಂ ಚೈವ ತನ್ಮಾತ್ರಾತ್ಮಕಮೇವ ಚ
ಇಂದ್ರಿಯಾತ್ಮಕಮೇವಂ ಚ ಮನಸ್ತತ್ತ್ವಾತ್ಮಕಂ ತಥಾ

ಮಾಯಾದಿತತ್ತ್ವರೂಪಂ ಚ ತತ್ತ್ವಾತೀತಂ ಚ ಬೈಂದವಮ್
ಬೈಂದವೇ ಜಗದುತ್ಪತ್ತಿಸ್ಥಿತಿಸಂಹಾರಕಾರಿಣೀ

ಸದಾಶಿವೇನ ಸಂಪೃಕ್ತಾ ತತ್ತ್ವಾತೀತಾ ಮಹೇಶ್ವರೀ
ಜ್ಯೋತೀರೂಪಾ ಪರಾಕಾರಾ ಯಸ್ಯಾ ದೇಹೋದ್ಭವಾಃ ಶಿವೇ

ಕಿರಣಾಶ್ಚ ಸಹಸ್ರಂ ಚ ದ್ವಿಸಹಸ್ರಂಚ ಲಕ್ಷಕಮ್
ಕೋಟಿರರ್ಬುದಮೇತೇಷಾಂ ಪರಾ ಸಂಖ್ಯಾ ನ ವಿದ್ಯತೆ

ತಾಮೇವಾನುಪ್ರವಿಶ್ಯೈವ ಭಾತಿ ಲೋಕಂ ಚರಾಚರಮ್
ಯಸ್ಯಾ ದೇವ್ಯಾ ಮಹೇಶಾನಿ ಭಾಸಾ ಸರ್ವಂ ವಿಭಾಸತೇ

ತದ್ಭಾಸಾ ರಹಿತಂ ಕಿಂಚಿತ್ ನ ಚ ಯಚ್ಚ ಪ್ರಕಾಶತೇ
ತಸ್ಯಾಶ್ಚ ಶಿವಶಕ್ತೇಶ್ಚ ಚಿದ್ರೂಪಾಯಾಶ್ಚಿತಿಂ ವಿನಾ

ಆಂಧ್ಯಮಾಪದ್ಯತೆ ನೂನಂ ಜಗದೇತಚ್ಚರಾಚರಮ್
ತೇಷಾಮನಂತಕೋಟೀನಾಂ ಮಯೂಖಾನಾಂ ಮಹೇಶ್ವರಿ

ಮಧ್ಯೇ ಷಷ್ಟ್ಯುತ್ತರಂ ತೇಷಾಮೀ ತ್ರಿಶತಂ ಕಿರಣಾಃ ಶಿವೇ
ಬ್ರಹ್ಮಾಂಡಂ ವ್ಯಶ್ನುವಾನಾಸ್ತೇ ಸೋಮಸೂರ್ಯಾನಲಾತ್ಮನಾ

ಅಗ್ನೇರಷ್ಟೋತ್ತರಶತಂ, ಷೋಡಶೋತ್ತರಕಂ ರವೇಃ
ಷಟ್ತ್ರಿಂಶದುತ್ತರಶತಂ ಚಂದ್ರಸ್ಯ ಕಿರಣಾಃ ಶಿವೆ

ಬ್ರಹ್ಮಾಂಡಂ ಭಾಸಯಂತಸ್ತೇ ಪಿಂಡಾಂಡಮಪಿ ಶಾಂಕರಿ
ದಿವಾ ಸೂರ್ಯಸ್ತಥಾ ರಾತ್ರೌ ಸೋಮೋ ವಹ್ನಿಶ್ಚ ಸಂಧ್ಯಯೋಃ

ಪ್ರಕಾಶಯಂತಃ ಕಾಲಾಂಸ್ತೇ ತಸ್ಮಾತ್ಕಾಲಾತ್ಮಕಾಸ್ತ್ರಯಃ
ಷಷ್ಟ್ಯುತ್ತರಂ ಚ ತ್ರಿಶತಂ ದಿನಾನ್ಯೇವ ಚ ಹಾಯನಮ್

ಹಾಯನಾತ್ಮಾ ಮಹಾದೇವಃ ಪ್ರಜಾಪತಿರಿತಿ ಶ್ರುತಃ
ಪ್ರಜಾಪತಿರ್ಲೋಕಕರ್ತಾ ಮರೀಚಿಪ್ರಮುಖಾನ್ ಮುನೀನ್

ಸೃಜತೇ ಲೋಕಪಾಲಾಸ್ತು ತೇ ಸರ್ವೇ ಲೋಕರಕ್ಷಕಾಃ
ಸಂಹಾರಶ್ಚ ಹರಾಯತ್ತಃ ಉತ್ಪತ್ತಿರ್ಭವನಿರ್ಮಿತಾ

ರಕ್ಷಾ ತು ಮೃಡಸಂಲಗ್ನಾ ಸೃಷ್ಟಿಸ್ಥಿತಿಲಯೇ ಶಿವಃ
ನಿಯುಕ್ತಃ ಪರಮೇಶಾನ್ಯಾ ಜಗದೇವಂ ಪ್ರವರ್ತತೇ '

ವಿದ್ಯಾಪ್ರಾಪ್ತಿಗೆ ಧ್ಯಾನ—

ಶರಜ್ಜ್ಯೋತ್ಸ್ನಾ[1]ಶುಭ್ರಾಂ ಶಶಿಯುತಜಟಾಜೂಟಮಕುಟಾಂ
ವರತ್ರಾಸತ್ರಾಣಸ್ಫಟಿಕಘುಟಿಕಾಪುಸ್ತಕಕರಾಮ್
ಸಕೃನ್ನ ತ್ವಾಂ ನತ್ವಾ ಕಥಮಿವ ಸತಾಂ ಸಂನಿದಧತೇ
ಮಧುಕ್ಷೀರದ್ರಾಕ್ಷಾಮಧುರಿಮಧುರೀಣಾಃ ಫಣಿತಯಃ ೧೫

[ಹೇ ಭಗವತಿ ! ಶರಜ್ಜ್ಯೋತ್ಸ್ನಾ[1]ಶುಭ್ರಾಂ ಶಶಿಯುತಜಟಾಜೂಟ ಮಕುಟಾಂ ವರತ್ರಾಸತ್ರಾಣಸ್ಫಟಿಕಘುಟಿಕಾಪುಸ್ತಕಕರಾಂ ತ್ವಾಂ ಸಕೃತ್ ನ ನತ್ವಾ ಸತಾಂ ಮಧುಕ್ಷೀರದ್ರಾಕ್ಷಾಮಧುರಿಮಧುರೀಣಾಃ ಫಣಿತಯಃ ಕಥಮಿವ ಸನ್ನಿದಧತೇ.]

"ಹೇ ಭಗವತಿಯೇ ! ಶರಜ್ಜ್ಯೋತ್ಸ್ನಾಶುಭ್ರಾಂ ಶಶಿಯುತಜಟಾಜೂಟ ಮಕುಟಾಂ ವರತ್ರಾಸತ್ರಾಣಸ್ಫಟಿಕಘುಟಿಕಾಪುಸ್ತಕಕರಾಂ ತ್ವಾಂ—ಶರತ್ಕಾಲದ ಬೆಳದಿಂಗಳಹಾಗೆ ಬೆಳ್ಳಗೆ ಇದ್ದಂಥಾ, ಚಂದ್ರಕಲಾಯುಕ್ತವಾದ ಜಡೆಯ[2]ಶಿಖಿ[2] ಯುಳ್ಳಂಥಾ ಇಷ್ಟದಾನಮುದ್ರೆಯನು ಅಭಯಮುದ್ರೆಯನು ಸ್ಫಟಿಕದ [3]ಬಟ್ಟಲನು[3] ಪುಸ್ತಕವನು ಹಿಡಿದು ಇದ್ದಂಥಾ ನಿನ್ನನು, ಸಕೃನ್ನ ನ ತ್ವಾ—ಒಂದುಸಾರಿ ಯಾದರೂ ನಮಸ್ಕಾರವಂ ಮಾಡದೇ, ಸತಾಂ ಮಧುಕ್ಷೀರದ್ರಾಕ್ಷಾಮಧುರಿ ಮಧುರೀಣಾಃ ಫಣಿತಯಃ—ಕವೀಶ್ವರರುಗಳಿಗೆ ಜೇನು ಹಾಲು ದ್ರಾಕ್ಷೆಗಳ ಮಾಧುರ್ಯದ ಹಾಗೆ ರಸವುಂಟಾದ[4]ವಿಕ್ಕಿನವಿಸ್ತಾರಗಳು.[4] ಕಥಮಿವ ಸನ್ನಿದಧತೇ—ಹೇಗೆ ಉಂಟಾದೀತು. ಉಂಟಾಗದು. ಸರ್ವೇಶ್ವರಿಗೆ ಪೂರ್ವ ಜನ್ಮದಲಾದರು ಈ ಜನ್ಮದಲಾದರು ಒಂದು ನಮಸ್ಕಾರಮಾತ್ರವ ಮಾಡಿದ ವರಿಗೂ ವಿದ್ಯವುಂಟೆಂಬುದು ತಾತ್ಪರ್ಯ.

---

[1] ಶುದ್ಧಾಂ—ಪಾಠಾಂತರ [2] ಮಕುಟವೆಂದರ್ಥ [3] ಪಾತ್ರೆಯನು (ಖ) [4] ವಾಕ್ಕಿನ ಪ್ರವಾಹಗಳು ಎಂದರ್ಥ.

ಕವೀಂದ್ರಾಣಾಂ ಚೇತಃಕಮಲವನಬಾಲಾತಪರುಚಿಂ
ಭಜಂತೇ ಯೇ ಸಂತಃ ಕತಿಚಿದರುಣಾಮೇವ ಭವತೀಮ್
ವಿರಿಂಚಿಪ್ರೇಯಸ್ಯಾಸ್ತರುಣತರಶೃಂಗಾರಲಹರೀ
ಗಭೀರಾಭಿರ್ವಾಗ್ಭಿರ್ವಿದಧತಿ ಸತಾಂ ರಂಜನಮಮೀ ೧೬

[ಹೇ ಭಗವತಿ ! ಕವೀಂದ್ರಾಣಾಂ ಚೇತಃಕಮಲವನಬಾಲಾತಪರುಚಿಂ ಅರುಣಾಮೇವ ಭವತೀಂ ಕತಿಚಿದ್ಯೇ ಸಂತಃ ಭಜಂತೇ ಅಮೀ ಸಂತಃ ವಿರಿಂಚಿಪ್ರೇಯಸ್ಯಾಃ ತರುಣತರಶೃಂಗಾರಲಹರೀಗಭೀರಾಭಿರ್ವಾಗ್ಭಿಃ ಸತಾಂ ರಂಜನಂ ವಿದಧತಿ.]

ಹೇ ಭಗವತಿಯೇ! ಕವೀಂದ್ರಾಣಾಂ ಚೇತಃಕಮಲವನಬಾಲಾತಪರುಚಿಂ ಅರುಣಾಮೇವ ಭವತೀಂ—ಕವೀಶ್ವರರ ಮನಸ್ಸೆಂಬ ಕಮಲವನಕ್ಕೆ ಉದಯಕಾಲದ ಸೂರ್ಯನ ಕಿರಣದ ಹಾಗೆ ಕೆಂಪಾಗಿ ಇದ್ದಂಥಾ ನಿನ್ನನು, ಕತಿಚಿದ್ಯೇ ಸಂತಃ ಭಜಂತೇ—ಆರು ಕೆಲವು ಸತ್ಪುರುಷರು ಸೇವೆಯ ಮಾಡುತಿದ್ದಾರು, ಅಮೀ ಸಂತಃ—ಅಂಥಾ ಈ ಸತ್ಪುರುಷರು, ವಿರಿಂಚಿಪ್ರೇಯಸ್ಯಾಃ ತರುಣತರಶೃಂಗಾರಲಹರೀಗಭೀರಾಭಿಃ ವಾಗ್ಭಿಃ—ಬ್ರಹ್ಮನ ಸ್ತ್ರೀಯಾಗಿದ್ದ ಸರಸ್ವತಿಯ ಅತಿಯವ್ವನದ ಶೃಂಗಾರರಸಪ್ರವಾಹಕೂಡಿದ್ದ ಗಂಭೀರವಾದ ವಾಗ್ವಿಸ್ತಾರಗಳಿಂದ, ಸತಾಂ ರಂಜನಂ ವಿದಧತಿ—ಸತ್ಪುರುಷರಿಗೆ ಮನೋಹರುಷವ ಮಾಡಿಸುವರು.

ಅಭಿಪ್ರಾಯ—[1]ಹೃದಯಕಮಲದಲ್ಲಿ ಬಾಲಸೂರ್ಯನಹಾಗೆ ಕೆಂಪಾಗಿ ಇದ್ದ ಸರ್ವೇಶ್ವರಿಯ ಧ್ಯಾನವ ಮಾಡುವವರ ಶೃಂಗಾರರಸಪ್ರಧಾನವಾದ ವಾಗ್ವಿಲಾಸಗಳಿಂದ ಅರುಣವರ್ಣವಾಗಿದ್ದಂಥಾ ಸರ್ವೇಶ್ವರಿಯು ಸತ್ಪುರುಷರಿಗೆ ಆನಂದವ ಮಾಡುವಳು[1] !

ಈ ಅರ್ಥಕ್ಕೆ ವಾಮಕೇಶ್ವರ ಮಹಾತಂತ್ರದಲ್ಲಿ ಸಮ್ಮತಿವಚನ—

‘ ಅರುಣಾಖ್ಯಾಂ ಭಗವತೀಮರುಣಾಭಾಂ ವಿಚಿಂತಯೇತ್
ಪಾಶಾಂಕುಶಕರಾಂ ದೇವೀಂ ಧನುರ್ಬಾಣಧರಾಂ ಶಿವಾಮ್
ವರದಾಭಯಹಸ್ತಾಂ ಚ ಪುಸ್ತಕಾಕ್ಷಸ್ರಗನ್ವಿತಾಮ್
ಅಷ್ಟಬಾಹುಂ ತ್ರಿನಯನಾಂ ಖೇಲಂತೀಮಮೃತಾಂಬುಧೌ
ಸ ಕರೋತ್ಯೇವ ಶೃಂಗಾರರಸಾಸ್ವಾದನಲಂಪಟಾನ್
ಸಭಾಸದಸ್ತದಾ ಸರ್ವಾನ್ ಸಾಧಕೇಂದ್ರಃ ಸಭಾಸ್ಥಿತಃ ’

ಈ ಶ್ಲೋಕದಲ್ಲಿ ಪರಂಪರಿತಾಲಂಕಾರ.

---

[1] ಹೃದಯಕಮಲದಲ್ಲಿ ಬಾಲಸೂರ್ಯನ ಹಾಗೆ ಕೆಂಪಾಗಿ ಇದ್ದ ಸರ್ವೇಶ್ವರಿಯ ಧ್ಯಾನವ ಮಾಡುವವರು ಪುರುಷರೂಪವನ್ನು ಹೊಂದಿದ ಸರಸ್ವತೀದೇವಿಯಂತೆ ಶೃಂಗಾರರಸಪ್ರಧಾನವಾದ ತನ್ನ ವಾಗ್ವಿಲಾಸಗಳಿಂದ ಸಭಾರಂಜನವನ್ನು ಮಾಡುವರು—ಎಂದಭಿಪ್ರಾಯ.

ಸವಿತ್ರೀಭಿರ್ವಾಚಾಂ ಶಶಿಮಣಿಶಿಲಾಭಂಗರುಚಿಭಿಃ
ವಶಿನ್ಯಾದ್ಯಾಭಿಸ್ತ್ವಾಂ ಸಹ ಜನನಿ ಸಂಚಿಂತಯತಿ ಯಃ
ಸ ಕರ್ತಾ ಕಾವ್ಯಾನಾಂ ಭವತಿ ಮಹತಾಂ ಭಂಗಿಸುಭಗೈಃ (ರುಚಿಭಿಃ)
ವಚೋಭಿರ್ವಾಗ್ದೇವೀವದನಕಮಲಾಮೋದಮಧುರೈಃ ೧೭

[ಹೇ ಜನನಿ! ವಾಚಾಂ ಸವಿತ್ರೀಭಿಃ ಶಶಿಮಣಿಶಿಲಾಭಂಗರುಚಿಭಿಃ ವಶಿನ್ಯಾದ್ಯಾಭಿಃ ಸಹ ತ್ವಾಂ ಯಃ ಸಂಚಿಂತಯತಿ ಸಃ ಮಹತಾಂ ಭಂಗಿಸುಭಗೈಃ ವಾಗ್ದೇವೀವದನಕಮಲಾಮೋದಮಧುರೈಃ ವಚೋಭಿಃ ಕಾವ್ಯಾನಾಂ ಕರ್ತಾ ಭವತಿ.]

ಹೇ ಜನನಿ—ಏ ತಾಯೇ! ವಾಚಾಂ ಸವಿತ್ರೀಭಿಃ ಶಶಿಮಣಿಶಿಲಾಭಂಗರುಚಿಭಿಃ ವಶಿನ್ಯಾದ್ಯಾಭಿಃ ಸಹ ತ್ವಾಂ—ವಾಕ್ಕುಗಳ ಹುಟ್ಟಿಸುವಂಥಾ ಚಂದ್ರಕಾಂತಕಲ್ಲಿನ ವಡಕಿನ ಕಾಂತಿಯುಹಾಗೆ ಇಹ ವಶಿನ್ಯಾದಿಗಳಕೂಡೆ ಇದ್ದಂಥಾ ನಿನ್ನನು, ಯಃ ಸಂಚಿಂತಯತಿ—ಆವನಾವನೊಬ್ಬನು ಧ್ಯಾನವ ಮಾಡಿಯಾನು, ಸಃ ಮಹತಾಂ ಭಂಗಿಸುಭಗೈಃ—ಅವನು ಕಾಳಿದಾಸ ಮೊದಲಾದವರು ಹೇಳಿದ ಪ್ರಕಾರದ ಸ್ವಾದುಕೂಡಿ ಇದ್ದಂಥಾ, ವಾಗ್ದೇವೀವದನಕಮಲಾಮೋದಮಧುರೈಃ ವಚೋಭಿಃ—ಸರಸ್ವತೀದೇವಿಯ ಬಾಯಿ ಎಂಬ ಕಮಲಪರಿಮಳದ ರುಚಿ ವುಂಟಾದ ವಾಕ್ಕುಗಳಿಂದ, ಕಾವ್ಯಾನಾಂ ಕರ್ತಾ ಭವತಿ—ಕಾವ್ಯಗಳಿಗೆ ಕರ್ತನಹನು

ಇಲ್ಲಿಗೆ ಬರೆಯತಕ್ಕ ಅರ್ಥ—ವಶಿನ್ಯಾದಿ ಎಂಬ ಶಬ್ದಕ್ಕೆ ಅರ್ಥ—ವಶಿನ್ಯಾದಿ ಶಕ್ತಿಗಳು ಎಂಟು, ಯೋಗಿನ್ಯಾದಿಶಕ್ತಿಗಳು ಹನ್ನೆರಡು, ಗಂಧಾಕರ್ಷಿಣ್ಯಾದಿ ಶಕ್ತಿಗಳು ನಾಲ್ಕು, ಈ ಇಪ್ಪತ್ತನಾಲ್ಕುಶಕ್ತಿಗಳ ಹೆಸರು—ವಶಿನೀ, ಕಾಮೇಶ್ವರೀ, ಮೋದಿನೀ ವಿಮಲೆ, ಅರುಣೆ, ಜಯಿನೀ, ಸರ್ವೇಶ್ವರೀ, ಕೌಲಿನೀ—ಈ ಎಂಟು ವಶಿನ್ಯಾದಿ ಶಕ್ತಿಗಳು. ವಿದ್ಯಾಯೋಗಿನೀ, ರೇಚಿಕಾಯೋಗಿನೀ, ಮೋಚಿಕಾಯೋಗಿನೀ, [1]ಮಾತೃಕಾಯೋಗಿನೀ,[1] ದೀಪಿಕಾಯೋಗಿನೀ, ಜ್ಞಾನಯೋಗಿನೀ, ಆಪ್ಯಾಯನೀಯೋಗಿನೀ, ವ್ಯಾಪಿನೀಯೋಗಿನೀ, ಮೇಧಾಯೋಗಿನೀ, ವ್ಯೋಮರೂಪಾಯೋಗಿನೀ, ಸಿದ್ಧರೂಪಾಯೋಗಿನೀ, ಲಕ್ಷ್ಮೀಯೋಗಿನೀ—ಈ ಹನ್ನೆರಡು ಯೋಗಿನೀಶಕ್ತಿಗಳು. ಗಂಧಾಕರ್ಷಿಣೀ, ರಸಾಕರ್ಷಿಣೀ, ಸ್ಪರ್ಶಾಕರ್ಷಿಣೀ, ರೂಪಾಕರ್ಷಿಣೀ—ಈ ನಾಲ್ಕು ಗಂಧಾಕರ್ಷಿಣ್ಯಾದಿಗಳು. ತ್ವಾಂ ಎಂಬ ಶಬ್ದದಿಂದ ಭಗವತಿಯ ಸ್ವರೂಪವು ಹೇಳಲ್ಪಟ್ಟಿತು. ಭಗವತಿಯ ಸ್ವರೂಪವು ಎಂಥಾದ್ದೆಂದರೆ ಐವತ್ತು ಅಕ್ಷರವಾಗಿ ಇದ್ದಂಥಾ ಮಾತೃಕೆ. ಈ ಅರ್ಥವನು 'ಶಿವಃ ಶಕ್ತಿಃ ಕಾಮಃ' (ಶ್ಲೋ ೩೧) ಎಂಬ ಶ್ಲೋಕದ ಟೀಕಿನಲ್ಲಿ ವಿವರವಾಗಿ ಬರದೇನು.

---

[1] ಅಮೃತಾಯೋಗಿನೀ ಎಂದಿರಬೇಕು.

ಈ ಐವತ್ತು ಅಕ್ಷರವಾಗಿ ಇದ್ದಂಥಾ ಮಾತೃಕೆ ಎಂಟು ವರ್ಗವಾಗಿ ಇಹದು. ಅ ಕ ಚ ಟ ತ ಪ ಯ ಶ ಎಂಬ ಅಕ್ಷರಗಳು ಆದಿಯಾಗಿಹವು. ಮೊದಲವರ್ಗ ಅಕಾರಾದಿಯಾದ ಸ್ವರ ಹದಿನಾರು. ಎರಡನೆವರ್ಗ ಕಕಾರಾದಿಯಾದವು ಐದು. ಮೂರನೆವರ್ಗ ಚಕಾರಾದಿಯಾದವು ಐದು. ನಾಲ್ಕನೆ ವರ್ಗ ಟಕಾರಾದಿಯಾದವು ಐದು. ಐದನೆವರ್ಗ ತಕಾರಾದಿಯಾದವು ಐದು. ಆರನೆವರ್ಗ ಪಕಾರಾದಿಯಾದವು ಐದು. ಏಳನೆವರ್ಗ ಯಕಾರಾದಿಯಾದವು ನಾಲ್ಕು. ಎಂಟನೆವರ್ಗ ಶಕಾರಾದಿಯಾದವು ಐದು. ಅಂತು ಐವತ್ತು ಅಕ್ಷರವು ಎಂಟುವರ್ಗಾತ್ಮಕವಾದ ಭಗವತಿಯು ಹೆಸರು ಮಾತೃಕಾತ್ರಿಪುರಸುಂದರಿಯು. ಅ ಕ ಚ ಟ ತ ಪ ಯ ಶ ಈ ಎಂಟುವರ್ಗಗಳು ವಶಿನ್ಯಾದಿ ಎಂಟು ಶಕ್ತಿಗಳ ಕೂಡಾ ಕೂಡಿಸಿ ಬಿಂದುತ್ರಿಕೋಣಾತ್ಮಕವಾದ ಶಿವಚಕ್ರ ನಾಲ್ಕು, ಅಷ್ಟಕೋಣ ದಶಕೋಣ ಮತ್ತೊಂದುದಶಕೋಣ ಚತುರ್ದಶಕೋಣವಾದ ಈ ಶಕ್ತಿಚಕ್ರ ನಾಲ್ಕು, ಉಭಯವು ಎಂಟುಚಕ್ರದಲ್ಲಿಯೂ ಕೂಡಿಸಿ ಈ ಪ್ರಕಾರದಲ್ಲಿ ಮಾತೃಕಾತ್ರಿಪುರಸುಂದರಿಯ ಧ್ಯಾನವ ಮಾಡುವವನು ಕಾವ್ಯ ಮೊದಲಾದ ಗ್ರಂಥಕಲ್ಪನೆಗಳ ಮಾಡುವುದಕ್ಕೆ ಸಮರ್ಥನಹನು. ಎಂಟು ವಶಿನ್ಯಾದಿ ಶಕ್ತಿಗಳನು, ಹನ್ನೆರಡು ಯೋಗಿನೀಶಕ್ತಿಗಳನು, ಕೂಡಾ ಇಪ್ಪತ್ತನ್ನೂ ಎರಡು ಹತ್ತು ಕೋಣಗಳಲ್ಲಿಯೂ ಶುದ್ಧಸ್ಪಟಿಕದ ಹಾಗೆ ಧ್ಯಾನವ ಮಾಡಿದರೆ ವಿದ್ಯವುಂಟಾಗುವುದು. ಗಂಧಾಕರ್ಷಿಣ್ಯಾದಿ ನಾಲ್ಕು ಶಕ್ತಿಗಳನು ಚಕ್ರದ ನಾಲ್ಕು ದ್ವಾರದಲ್ಲಿ–ಧ್ಯಾನವ ಮಾಡಿದರೆ ಅದು ವಿದ್ಯಾಪ್ರದ. ಇದಕ್ಕೆ ಸಮ್ಮತಿವಚನ (ಶಂಭು ವಚನ)—

'ಮಾತೃಕಾಂ ವಶಿನೀಯುಕ್ತಾಂ ಯೋಗಿನೀಭಿಃ ಸಮನ್ವಿತಾಮ್
ಗಂಧಾದ್ಯಾಕರ್ಷಿಣೀಯುಕ್ತಾಂ ಸಂಸ್ಮರೇತ್ತ್ರಿಪುರಾಂಬಿಕಾಮ್'

ವಶಿನ್ಯಾದಿ ಶಕ್ತಿಗಳು ಐವತ್ತು ಅಕ್ಷರ ಸ್ವರೂಪವೆಂದು ಹೇಳಿದೆ. ಅದರಲ್ಲಿ ಅಕಾರಾತ್ಮಿಕೆಯಾದ ಶಕ್ತಿಯ ಮಂಡಲವು ಎಂಭತ್ತುಲಕ್ಷಯೋಜನೆ ವಿಸ್ತಾರವುಳ್ಳದ್ದು. ಒಂದು ಕೋಟಿ ಅರವತ್ತುಲಕ್ಷಯೋಜನೆ ವಿಸ್ತಾರವುಳ್ಳದ್ದು ಆಕಾರಶಕ್ತಿಯ ಮಂಡಲವು. ಇಕಾರಶಕ್ತಿಯ ಮಂಡಲವು ತೊಂಭತ್ತುಲಕ್ಷ ಯೋಜನೆ ವಿಸ್ತಾರವುಳ್ಳದ್ದು. ಒಂದು ಕೋಟಿ ಎಂಭತ್ತು ಲಕ್ಷ ಯೋಜನೆ ವಿಸ್ತಾರವುಳ್ಳದ್ದು ಈಕಾರಶಕ್ತಿಯ ಮಂಡಲವು, ಉಕಾರಶಕ್ತಿಯ ಮಂಡಲವು ಒಂದು ಕೋಟಿ ಯೋಜನೆ ವಿಸ್ತಾರವುಳ್ಳದ್ದು. ಎರಡು ಕೋಟಿ ಯೋಜನೆ ವಿಸ್ತಾರವುಳ್ಳದ್ದು ಊಕಾರ ಶಕ್ತಿಯ ಮಂಡಲವು. ಋಕಾರಶಕ್ತಿಯ ಮಂಡಲವು ಐವತ್ತುಲಕ್ಷ ಯೋಜನೆ ವಿಸ್ತಾರವುಳ್ಳದ್ದು. ಇದರ ಎರಡರಷ್ಟು ವಿಸ್ತಾರವುಳ್ಳದ್ದು ೠಕಾರಶಕ್ತಿಯ ಮಂಡಲವು. ಇದರ ಎರಡರಷ್ಟು ವಿಸ್ತಾರವುಳ್ಳದ್ದು ಌ ೡ ಕಾರ ಶಕ್ತಿಗಳ ಮಂಡಲವು. ಏ ಐ ಓ ಔ ಕಾರ ಶಕ್ತಿಗಳ ಮಂಡಲವು ಒಂದುವರೆ ಕೋಟಿ ವಿಸ್ತಾರವುಳ್ಳದ್ದು. ಬಿಂದುವಿಸರ್ಗಶಕ್ತಿಗಳ ಮಂಡಲವು ಒಂದುಕೋಟಿ ಅರವತ್ತು

ಲಕ್ಷಯೋಜನೆ ವಿಸ್ತಾರವುಳ್ಳದ್ದು. ವ್ಯಂಜನ ಶಕ್ತಿಗಳ ಮಂಡಲವು ನಲವತ್ತು ಲಕ್ಷಯೋಜನೆ ವಿಸ್ತಾರವುಳ್ಳದ್ದು. ಅಕಾರಾದಿ ಸ್ವರಶಕ್ತಿಗಳು ತಮ್ಮ ಎಂಟು ಕೈಗಳಲ್ಲಿಯೂ ಪಾಶ ಅಂಕುಶ ವರದಾನಮುದ್ರೆ ಅಭಯಮುದ್ರೆ ಪುಸ್ತಕ ಅಕ್ಷಮಾಲೆ ಕಮಂಡಲು ವ್ಯಾಖ್ಯಾಮುದ್ರೆ ಇವುಗಳನ್ನು ಧರಿಸಿರುವರು. ವ್ಯಂಜನ ಶಕ್ತಿಗಳು ತಮ್ಮ ನಾಲ್ಕು ಕೈಗಳಲ್ಲಿ ಪಾಶ ಅಂಕುಶ ಅಕ್ಷಮಾಲಾ ಕಮಂಡಲು ಇವುಗಳನ್ನು ಧರಿಸಿರುವರು. ಯ ರ ಲ ವ ಕಾರಶಕ್ತಿಗಳು ಪಾಶ ಅಂಕುಶ ಅಭಯ ಮುದ್ರೆ ವರದಾನಮುದ್ರೆ ಇವುಗಳನ್ನು ಧರಿಸಿರುವರು. ಶ ಷ ಸ ಹ ಕಾರ ಶಕ್ತಿಗಳು ಪಾಶ ಅಂಕುಶ ಅಕ್ಷಮಾಲಾ ವರದಾನಮುದ್ರೆ ಇವುಗಳನ್ನು ಧರಿಸಿರುವರು. ಹಕ್ಷಕಾರಶಕ್ತಿಗಳು ಪಾಶ ಅಂಕುಶ ಕಬ್ಬಿನಬಿಲ್ಲು ಪುಷ್ಪಬಾಣಗಳನ್ನು ಧರಿಸಿರುವರು, ಇವು ಸನತ್ಕುಮಾರ ಸಂಹಿತೆಯಲ್ಲಿ ಹೇಳಿವೆ.

ಈ ಅರ್ಥ ವೇದಶಾಸ್ತ್ರಗಳಲ್ಲಿ ಪ್ರತಿಪಾದಿಸಿದೇ.

ತನುಚ್ಛಾಯಾಭಿಸ್ತೇ ತರುಣತರಣಿಶ್ರೀಸರಣಿಭಿಃ
ದಿವಂ ಸರ್ವಾಮುರ್ವೀ ಮರುಣಿಮನಿ ಮಗ್ನಾಂ ಸ್ಮರತಿ ಯಃ
ಭವಂತ್ಯಸ್ಯ ತ್ರಸ್ಯದ್ವನಹರಿಣಶಾಲೀನನಯನಾಃ
ಸಹೋರ್ವಶ್ಯಾ ವಶ್ಯಾಃ ಕತಿ ಕತಿ ನ ಗೀರ್ವಾಣಗಣಿಕಾಃ ೧೮

[ಹೇ ಭಗವತಿ ! ತೇ ತರುಣತರಣಿಶ್ರೀಸರಣಿಭಿಃ ತನುಚ್ಛಾಯಾಭಿಃ ಸರ್ವಾಂ ದಿವಮುರ್ವೀಂ ಚ ಅರುಣಿಮನಿ ಮಗ್ನಾಂ ಯಃ ಸ್ಮರತಿ ಅಸ್ಯ ತ್ರಸ್ಯದ್ವನಹರಿಣಶಾಲೀನನಯನಾಃ ಗೀರ್ವಾಣಗಣಿಕಾಃ ಊರ್ವಶ್ಯಾ ಸಹ ಕತಿ ಕತಿ ವಶ್ಯಾ ನ ಭವಂತಿ.]

ಹೇ ಭಗವತಿಯೇ ! ತೇ ತರುಣತರಣಿಶ್ರೀ ಸರಣಿಭಿಃ ತನುಚ್ಛಾಯಾಭಿಃ— ನಿನ್ನ ಬಾಲಸೂರ್ಯನ ಕಿರಣಗಳ ಹಾಗೆ ಇದ್ದ ಕೆಂಪಿನ ಶರೀರಕಾಂತಿಯಿಂದ, ಸರ್ವಾಂ ದಿವಮುರ್ವೀಂ ಚ ಅರುಣಿಮನಿ ಮಗ್ನಾಂ ಯಃ ಸ್ಮರತಿ–ಸರ್ವ ಆಕಾಶ ಭೂಮಿಯನು ನಿನ್ನಕಾಂತಿಯೆಂಬ ಅಲತಿಗೆಯ ಸಮುದ್ರದಲ್ಲಿ ಚನ್ನಾಗಿ ಮುಳುಗಿ ಇಹ ಹಾಗೆ ಆವನೊಬ್ಬನು ಸ್ಮರಣೆಯ ಮಾಡುತ್ತಾ ಇದ್ದಾನು, ಅಸ್ಯ ತ್ರಸ್ಯದ್ವನ ಹರಿಣಶಾಲೀನನಯನಾಃ ಗಿರ್ವಾಣಗಣಿಕಾಃ ಊರ್ವಶ್ಯಾ ಸಹ–ಹಾಗೆ ಧ್ಯಾನ ಮಾಡುವಂಥಾವರಿಗೆ ಬೆದರಿದ ಅಡವಿಯ ಎರಳೆಯ ಕಣ್ಣಹಾಗೆ ಕಣ್ಣು ಉಂಟಾದ ಸ್ವರ್ಗದಸೂಳೆಯರು ಊರ್ವಶೀಸಹ, ಕತಿತತಿ ನ ವಶ್ಯಾ ಭವಂತಿ–ಆರಾರು ವಶ್ಯ ರಾಗರು. ಮೂರು ಲೋಕದಲ್ಲಿ ಇದ್ದ ಸ್ತ್ರೀಯರು ವಶ್ಯರಹರೇ. ಸಮ್ಮತಿ ಶಂಭುವಾಕ್ಯ–

'ಯಾವಕಾಬ್ಧೌ ನಿಮಗ್ನಾಂ ಯೋ ದಿವಂ ಭೂಮಿಂ ಚ ಚಿಂತಯೇತ್
ತಸ್ಯ ಸರ್ವಾ ವಶಂ ಯಾತಾಃ ತ್ರೈಲೋಕ್ಯವನಿತಾ ಧ್ರುವಮ್'

ಮುಖಂ ಬಿಂದುಂ ಕೃತ್ವಾ ಕುಚಯುಗಮಧಸ್ತಸ್ಯ ತದಧೋ
ಹರಾರ್ಧಂ ಧ್ಯಾಯೇದ್ಯೋ ಹರಮಹಿಷಿ ತೇ ಮನ್ಮಥಕಲಾಮ್
ಸ ಸದ್ಯಃ ಸಂಕ್ಷೋಭಂ ನಯತಿ ವನಿತಾ ಇತ್ಯತಿಲಘು
ತ್ರಿಲೋಕೀಮಪ್ಯಾಶು ಭ್ರಮಯತಿ ರವೀಂದುಸ್ತನಯುಗಾಮ್ ೧೯

[ಹೇ ಹರಮಹಿಷಿ! ಮುಖಂ ಬಿಂದುಂ ಕೃತ್ವಾ ತಸ್ಯಾಧಃ ಕುಚಯುಗಂ ಕೃತ್ವಾ ತದಧಃ ಹರಾರ್ಧಂ ಕೃತ್ವಾ ತತ್ರ ತೇ ಮನ್ಮಥಕಲಾಂ ಯೋ ಧ್ಯಾಯೇತ್ ಸ ಸದ್ಯೋ ವನಿತಾಃ ಸಂಕ್ಷೋಭಂ ನಯತೀತಿ ಯತ್ ತತ್ ಅತಿಲಘು, ಕಿಂತು ರವೀಂದುಸ್ತನಯುಗಾಂ ತ್ರಿಲೋಕೀಮಪಿ ಆಶು ಭ್ರಮಯತಿ.]

ಹೇ ಹರಮಹಿಷಿ–ಹೇ ಹರನಸ್ತ್ರೀಯೇ! ಮುಖಂ ಬಿಂದುಂ ಕೃತ್ವಾ–ಚಕ್ರದ ಬಿಂದುಸ್ಥಾನದಲ್ಲಿ ತನಗೆ ಬೇಕಾದ ಸ್ತ್ರೀಯ ಮುಖದ ಧ್ಯಾನವಮಾಡಿ, ತಸ್ಯಾಧಃ ಕುಚಯುಗಂ ಕೃತ್ವಾ–ಆ ಮುಖದ ಕೆಳಗೆ ಎರಡು ಕುಚಗಳ ಧ್ಯಾನವ ಮಾಡಿ, ತದಧಃ ಹರಾರ್ಧಂ ಕೃತ್ವಾ–ಆಸ್ತನಗಳ ಕೆಳಗೆ ಯೋನಿಯ ದ್ಯಾನಮಾಡಿ, ತತ್ರ ತೇ ಮನ್ಮಥಕಲಾಂ ಯಃ ಧ್ಯಾಯೇತ್–ತನಗೆ ಬೇಕಾದ ಸ್ತ್ರೀಯ ಮುಖಕುಚ ಯೋನಿಸ್ಥಾನಗಳಲ್ಲಿ ನಿನ್ನ ಕಾಮಬೀಜವನು ಆವನೊಬ್ಬನು ಧ್ಯಾನವಮಾಡಿ ಯಾನು, ಸಃ ಸದ್ಯೋ ವನಿತಾಃ ಸಂಕ್ಷೋಭಂ ನಯತೀತಿ ಯತ್ ತತ್ ಅತಿಲಘು– ಅಂಥಾ ಸಾಧಕನು ಸ್ತ್ರೀಯ ಸಂಕ್ಷೋಭವ ಮಾಡುವನೆಂಬುದು ಆವುದುಂಟು ಅದು ಅತಿತುಚ್ಛ, ಕಿಂತು ರವೀಂದುಸ್ತನಯುಗಾಂ ತ್ರಿಲೋಕೀಮಪ್ಯಾಶು ಭ್ರಮಯತಿ–ಮತ್ತೋಯೆಂದರೆ ಸೂರ್ಯಚಂದ್ರರು ಎರಡು ಸ್ತನವುಂಟಾಗಿ ಇದ್ದ ತ್ರಿಲೋಕಿ ಎಂಬ ಸ್ತ್ರೀಯನಾದರೂ ಶೀಘ್ರದಲ್ಲಿ ಭ್ರಮಿಸುವನು.

ಕಿರಂತೀ ಮಂಗೇಭ್ಯಃ ಕಿರಣನಿಕುರುಂಬಾಮೃತರಸಂ
ಹೃದಿ ತ್ವಾಮಾಧತ್ತೇ ಹಿಮಕರಶಿಲಾಮೂರ್ತಿಮಿವ ಯಃ
ಸ ಸರ್ಪಾಣಾಂ ದರ್ಪಂ ಶಮಯತಿ ಶಕುಂತಾಧಿಪ ಇವ
ಜ್ವರಪ್ಲುಷ್ಟಾನ್ ದೃಷ್ಟ್ಯಾ ಸುಖಯತಿ ಸುಧಾಧಾರಸಿರಯಾ ೨೦

[ಹೇ ಭಗವತಿ! ಯಃ ಅಂಗೇಭ್ಯಃ ಕಿರಣನಿಕುರುಂಬಾಮೃತರಸಂ ಕಿರಂತೀಂ ಹಿಮಕರಶಿಲಾಮೂರ್ತಿಮಿವ ತ್ವಾಂ ಹೃದಿ ಆಧತ್ತೆ ಸಃ ಶಕುಂತಾಧಿಪ ಇವ ದೃಷ್ಟ್ಯಾ ಸರ್ಪಾಣಾಂ ದರ್ಪಂ ಶಮಯತಿ. ಸುಧಾಧಾರಸಿರಯಾ ದೃಷ್ಟ್ಯಾ ಜ್ವರಪ್ಲುಷ್ಟಾನ್ ಸುಖಯತಿ.]

ಹೇ ಭಗವತಿಯೇ! ಯಃ–ಆವನಾನೊಬ್ಬ ಸಾಧಕನು, ಅಂಗೇಭ್ಯಃ ಕಿರಣನಿಕುರುಂಬಾಮೃತರಸಂ ಕಿರಂತೀಂ–ಅಂಗಗಳಿಂದ ಹುಟ್ಟಿದ ಕಿರಣಸಮೂಹಗಳಿಂದ ಅಮೃತರಸವನು ಸುರಿವುತಿದ್ದಂಥಾ, ಹಿಮಕರಶಿಲಾಮೂರ್ತಿಮಿವ ತ್ವಾಂ

ಹೃದಿ ಆಧತ್ತೇ–ಚಂದ್ರಕಾಂತದ ಪ್ರತಿಮೆಯಹಾಗೆ ನಿನ್ನನು ಹೃದಯಕಮಲದಲ್ಲಿ ಧ್ಯಾನವ ಮಾಡಿಯಾನು, ಸಃ ಶಕುಂತಾಧಿಪ ಇವ ದೃಷ್ಟ್ಯಾ ಸರ್ಪಾಣಾಂ ದರ್ಪಂ ಶಮಯತಿ -ಆ ಸಾಧಕನು ಗುರುತ್ಮನಹಾಗೆ ದೃಷ್ಟಿಯಿಂದ ಸರ್ಪಗಳ ಗರ್ವವನು ನಿಲಿಸುವನು, ಸುಧಾಧಾರಸ್ಸಿರಯಾ ದೃಷ್ಟ್ಯಾ ಜ್ವರಪ್ಲುಷ್ಟಾನ್ ಸುಖಯತಿ–ಅಮೃತಕ್ಕೆ ಆಧಾರಭೂತವಾಗಿ ಇದ್ದ ನಾಡಿಗಳುಉಳ್ಳಂಥಾ ದೃಷ್ಟಿಯಿಂದ ಜ್ವರಾದಿ ವ್ಯಾಧಿಗಳಿಂದ ನೊಂದಂಥಾಪರು ಸುಖವುಂಟಾಗುವಹಾಗೆ ಮಾಡುವನು. ಈ ಅರ್ಥಕ್ಕೆ ಸಮ್ಮತಿವಚನ ಚತುಶ್ಶತಿಯಲ್ಲಿ—

'[1]ಷಣ್ಮಾಸಧ್ಯಾನಯೋಗೇನ ಜಾಯತೇ ಗರುಡೋಪಮಃ (ಮದನೋಪಮಃ)
ದೃಷ್ಟ್ಯಾ ಕರ್ಷಯತೇ ಲೋಕಂ ದೃಷ್ಟ್ಯೈವ ಕುರುತೇ ವಶಮ್
ದೃಷ್ಟ್ಯಾ ಸಂಕ್ಷೋಭಯೇನ್ನಾರೀಂ ದೃಷ್ಟ್ಯೈವ ಹರತೇ ವಿಷಮ್
ದೃಷ್ಟ್ಯಾ ಚಾತುರ್ಥಿಕಾದೀಂಶ್ಚ ಜ್ವರಾನ್ನಾಶಯತೇ ಕ್ಷಣಾತ್
ಚಂದ್ರಕಾಂತಶಿಲಾಮೂರ್ತಿಂ ಚಿಂತಯಿತ್ವಾ ವಿನಾಶಯೇತ್
ತಾಪಜ್ವರಾನಶೇಷಾಂಶ್ಚ ಶೀಘ್ರಂ ತಾರ್ಕ್ಷ್ಯ ಇವಾಪರಃ
ಗರುಡಧ್ಯಾನಯೋಗೇನ ಸ್ಮರಣಾನ್ನಾಶಯೇದ್ವಿಷಮ್'

ತಟಿಲ್ಲೇಖಾತನ್ವೀಂ ತಪನಶಶಿವೈಶ್ವಾನರಮಯೀಂ
ನಿಷಣ್ಣಾಂ ಷಣ್ಣಾಮಪ್ಯುಪರಿ ಕಮಲಾನಾಂ ತವ ಕಲಾಮ್
ಮಹಾಪದ್ಮಾಟವ್ಯಾಂ ಮೃದಿತಮಲಮಾಯೇನ ಮನಸಾ
ಮಹಾನ್ತಃ ಪಶ್ಯಂತೋ ದಧತಿ ಪರಮಾಹ್ಲಾದಲಹರೀಮ್ ೨೧

[ಹೇ ಭಗವತಿ ! ತಟಿಲ್ಲೇಖಾತನ್ವೀಂ ತಪನಶಶಿವೈಶ್ವಾನರಮಯೀಂ ಷಣ್ಣಾಂ ಕಮಲಾನಾಮಪ್ಯುಪರಿ ಮಹಾಪದ್ಮಾಟವ್ಯಾಂ ನಿಷಣ್ಣಾಂ ತವ ಕಲಾಂ ಮೃದಿತಮಲಮಾಯೇನ ಮನಸಾ ಪಶ್ಯಂತೋ ಮಹಾಂತಃ ಪರಮಾಹ್ಲಾದಲಹರೀಂ ದಧತಿ.]

ತಟಿಲ್ಲೇಖಾತನ್ವೀಂ ತಪನಶಶಿವೈಶ್ವಾನರಮಯೀಂ–ಮಿಂಚಿನ ಹಾಗೆ ದೀರ್ಘಸೂಕ್ಷ್ಮವಾಗಿ ಜ್ಯೋತಿರ್ಮಯವಾಗಿ ಇದ್ದಂಥಾ, ಸೂರ್ಯಚಂದ್ರ ಅಗ್ನಿಸ್ವರೂಪವಾಗಿ ಇದ್ದಂಥಾ, ಷಣ್ಣಾಂ ಕಮಲಾನಾಮಪ್ಯುಪರಿ ಮಹಾಪದ್ಮಾಟವ್ಯಾಂ ನಿಷಣ್ಣಾಂ ತವ ಕಲಾಂ–ಮೂಲಾಧಾರ ಸ್ವಾಧಿಷ್ಠಾನ ಮಣಿಪೂರ ಅನಾಹತ ವಿಶುದ್ಧಿ ಆಜ್ಞಾ ಎಂಬ ಕಮಲಗಳು ರುದ್ರಗ್ರಂಥಿ ವಿಷ್ಣುಗ್ರಂಥಿ ಬ್ರಹ್ಮ

---

[1] ಮೇಲೆಕಂಡ ಶ್ಲೋಕಗಳಲ್ಲಿ ಹೇಳಿದ ಪ್ರಕಾರ ಸಾಧಕನು ಆರು ತಿಂಗಳು ಧ್ಯಾನಮಾಡುವದರಿಂದ ಗರುಡನಂತೆ (ಮನ್ಮಥನಂತೆ) ಆಗಿ ತನ್ನ ದೃಷ್ಟಿಯಿಂದ ಸರ್ವಲೋಕವನ್ನು ಆಕರ್ಷಣ ಮಾಡುವನು, ಎಲ್ಲರನ್ನೂ ವಶಪಡಿಸಿಕೊಳ್ಳುವನು ಹೆಂಗಸಿನ ಮನದಲ್ಲಿ ಕ್ಷೋಭವನ್ನುಂಟುಮಾಡುವನು, ವಿಷ ಮತ್ತು ನಾಲ್ಕನೆ ಮುಂತಾದ ಜ್ವರವನ್ನು ಅಡಗಿಸುವನು ಎಂದರ್ಥ.

ಗ್ರಂಥಿ ಎಂಬ ಈ ಗ್ರಂಥಿತ್ರಯವು ಇದರಮೇಲೆ ಇಹಂಥಾ ಸಹಸ್ರಕಮಲದಲ್ಲಿ ಇದ್ದ ನಿನ್ನ ಸಾದಾಖ್ಯಕಲೆಯನು, ಮೃದಿತಮಲಮಾಯೇನ ಮನಸಾ ಪಶ್ಯಂತೋ ಮಹಾಂತಃ–ಬಿಡಲ್ಪಟ್ಟ ಕಾಮಕ್ರೋಧಾದಿ ಅವಿದ್ಯಾ ಅಹಂಕಾರಾದಿಗಳ ಮನಸ್ಸಿನಿಂದ ಅನುಭವಿಸುವಂಥಾ ಯೋಗೀಶ್ವರರು, ಪರಮಾಹ್ಲಾದಲಹರೀಂ ದಧತಿ–ಪರಮಾನಂದಪ್ರವಾಹನವನು ಧರಿಸುವರು.

ಭವಾನಿ ತ್ವಂ ದಾಸೇ ಮಯಿ ವಿತರ ದೃಷ್ಟಿಂ ಸಕರುಣಾಂ
ಇತಿ ಸ್ತೋತುಂ ವಾಂಛ್ರ್ ಕಥಯತಿ ಭವಾನಿತ್ವಮಿತಿ ಯಃ
ತದೈವ ತ್ವಂ ತಸ್ಮೈ ದಿಶಸಿ ನಿಜಸಾಯುಜ್ಯಪದವೀಂ
ಮುಕುಂದಬ್ರಹ್ಮೇಂದ್ರಸ್ಫುಟಮುಕುಟನೀರಾಜಿತಪದಾಮ್ ೨೨

[ಭವಾನಿ ತ್ವಂ ದಾಸೇ ಮಯಿ ವಿತರ ದೃಷ್ಟಿಂ ಸಕರುಣಾಮಿತಿ ಸ್ತೋತುಂ ವಾಂಛ್ರ್ ಭವಾನಿತ್ವಮಿತಿ ಯಃ ಕಥಯತಿ ತಸ್ಮೈ ತದೈವ ತ್ವಂ ಮುಕುಂದ ಬ್ರಹ್ಮೇಂದ್ರಸ್ಫುಟಮುಕುಟ ನೀರಾಜಿತಪದಾಂ ನಿಜಸಾಯುಜ್ಯಪದವೀಂ ದಿಶಸಿ.]

ಭವಾನಿ ತ್ವಂ ದಾಸೇ ಮಯಿ ವಿತರ ದೃಷ್ಟಿಂ ಸಕರುಣಾಂ–ಹೇ ಭವಾನಿಯೇ! ನೀನು ಕಿಂಕರನಾಗಿ ಇದ್ದಂಥಾ ನನ್ನಲ್ಲಿ ಕರುಣಾಕಟಾಕ್ಷವನು ಇಡೆಂದು, ಇತಿ ಸ್ತೋತುಂ ವಾಂಛ್ರ್ ಭವಾನಿತ್ವಮಿತಿ ಯಃ ಕಥಯತಿ–ಈ ಪ್ರಕಾರದಲ್ಲ ಸ್ತೋತ್ರವ ಮಾಡುವದಕ್ಕೆ ಇಚ್ಛೈಸಿದವನಾಗಿ ಭವಾನಿತ್ವಂ ಎಂಬ ಮಾತ್ರವ ಆವನಾನೊಬ್ಬನು ಹೇಳಿಹಾನು, ತಸ್ಮೈ ತದೈವ ತ್ವಂ–ಅವನಿಗೋಸ್ಕರ ಆಗಲೆ ನೀನು, ಮುಕುಂದಬ್ರಹ್ಮೇಂದ್ರಸ್ಫುಟಮುಕುಟನೀರಾಜಿತಪದಾಂ ನಿಜಸಾಯುಜ್ಯ ಪದವೀಂ ದಿಶಸಿ–ವಿಷ್ಣು ಬ್ರಹ್ಮ ಇಂದ್ರಾದಿಗಳಾದಿದೇವತೆಗಳ ಕಾಂತಿ ಉಂಟಾದ ಕಿರೀಟಗಳಿಂದ ಆರತಿಯ ಮಾಡಿಸಿಕೊಳುತಿದ್ದಂಥಾ ಪಾದಗಳುಳ್ಳ ನಿನ್ನ ಸಾಯುಜ್ಯ ಪದವಿಯನು ಕೊಡುವೆ.

ಈ ಶ್ಲೋಕದ ಅಭಿಪ್ರಾಯ–'ಭವಾನಿ ತ್ವಂ ದಾಸೇ ಮಯಿ ವಿತರ ದೃಷ್ಟಿಂ ಸಕರುಣಾಂ' ಎಂದು ಈ ಪರಿಯಂತರ ಸ್ತೋತ್ರವ ಮಾಡಿದೆನೆಂದು ಉದ್ಯೋಗವ ಮಾಡಿ 'ಭವಾನಿತ್ವಂ' ಎಂಬಷ್ಟು ವಾಕ್ಯವ ಹೇಳುವಷ್ಟರೊಳಗೆ ಭವಾನಿಯೆಂಬ ಕ್ರಿಯಾಪದದೊಳಗೆ ಉತ್ತಮಪುರುಷ 'ತ್ವಂ ಭವಾನಿ' ನೀನೂ ಆದೇನು ಎಂದು ಐಕ್ಯಧ್ಯಾನವ ಮಾಡುವಂಥಾವನೆ ಎಂದು ತಿಳಿದು ಅವನ ಮನಸ್ಸಿನಲ್ಲಿ ಈ ಅರ್ಥವ ಅರಿಯದಿದ್ದರು ನಿನ್ನ ಸಾಯುಜ್ಯಪದವಿಯು ಕೊಡುವೆ ಎಂಬುದರಿಂದ ಜಪ ಹೋಮಾರ್ಚನೆಗಳಿಂದಲೂ ಐಕ್ಯಧ್ಯಾನ ಶೀಘ್ರಫಲವೆಂಬುದು ಸೂಚನೆ. ಬಯು ಸದ ಅರ್ಥವ ಹೇಗೆ ಕೊಟ್ಟಾವೆಂದರೆ—

'ಅನಿಚ್ಛಯಾಪಿ ಸಂಸ್ಪೃಷ್ಟೋ ದಹತ್ಯೇವ ಹಿ ಪಾವಕಃ'

ಎಂಬ ನ್ಯಾಯದಿಂದ. 'ಭವಾನಿತ್ವಂ' ಎಂಬ ಮಹಾವಾಕ್ಯೋಚ್ಚಾರಣಮಹಿಮೆ ಅಂಥಾದ್ದು.

ತ್ವಯಾ ಹೃತ್ವಾ ವಾಮಂ ವಪುರಪರಿತೃಪ್ತೇನ ಮನಸಾ
ಶರೀರಾರ್ಧಂ ಶಂಭೋರಪರಮಪಿ ಶಂಕೇ ಹೃತಮಭೂತ್
ಯದೇತತ್ತ್ವದ್ರೂಪಂ ಸಕಲಮರುಣಾಭಂ ತ್ರಿನಯನಂ
ಕುಚಾಭ್ಯಾಮಾನಮ್ರಂ ಕುಟಿಲಶಶಿಚೂಡಾಲಮಕುಟಮ್ ೨೩

[ಹೇ ಭಗವತಿ! ಶಂಭೋರ್ವಾಮಂ ವಪುರರ್ಧಂ ತ್ವಯಾ ಹೃತ್ವಾ ಅಪರಿತೃಪ್ತೇನ ಮನಸಾ ಅಪರಮಪಿ ಶರೀರಾರ್ಧಂ ಹೃತಮಭೂದಿತಿ ಶಂಕೇ, ಯತ್ ಏತತ್ತ್ವದ್ರೂಪಂ ಸಕಲಂ ಅರುಣಾಭಂ ತ್ರಿನಯನಂ ಕುಚಾಭ್ಯಾಮಾನಮ್ರಂ ಕುಟಿಲಶಶಿಚೂಡಾಲಮಕುಟಮ್.]

ಹೇ ಭಗವತಿಯೇ! ಶಂಭೋರ್ವಾಮಂ ವಪುರರ್ಧಂ ತ್ವಯಾ ಹೃತ್ವಾ–ಶಿವನ ಎಡದ ಶರೀರವನು ನಿನ್ನಿಂದ ಅಪಹರಿಸಿ, ಅಪರಿತೃಪ್ತೇನ ಮನಸಾ ಅಪರಮಪಿ ಶರೀರಾರ್ಧಂ ಹೃತಮಭೂದಿತಿ ಶಂಕೇ–ತೃಪ್ತಿಯಾಗದ ಮನಸ್ಸಿನಿಂದ ದಕ್ಷಿಣಾರ್ಧವ ಅಪಹರಿಸಲ್ಪಟ್ಟುದೆಂದು ತಿಳಿದೇನು. ಯತ್ ಏತತ್ ತ್ವದ್ರೂಪಂ ಸಕಲಮರುಣಾಭಂ ತ್ರಿನಯನಂ ಕುಚಾಭ್ಯಾಮಾನಮ್ರಂ ಕುಟಿಲಶಶಿಚೂಡಾಲ ಮಕುಟಮ್–ಅವದಾನೊಂದುಕಾರಣದಿಂದ ಹೃದಯಕಮಲದಲ್ಲಿ ಕಾಣಿಸುವ ನಿನ್ನ ರೂಪು ಎಡದ ಬಲದ ಭಾಗಸಹಿತ ಸರ್ವಶರೀರವು ರಕ್ತವರ್ಣವಾಗಿ ಮೂರು ಕಣ್ಣುಗಳು ಸಹ ಸ್ತನಭಾರಗಳಿಂದ ಒಂದಿಷ್ಟು ಬಾಗಿ ಚಂದ್ರಕಲಾ ಸಹಿತವಾದ ಕಿರೀಟವ ಧರಿಸಿಕೊಂಡು ಇದ್ದಿತು.

ಈ ಶ್ಲೋಕದಲ್ಲಿ ಉತ್ತರಕೌಲಸಿದ್ಧಾಂತಪ್ರತಿಪಾದಕವು. ಅವರ ಸಿದ್ಧಾಂತ ದಲ್ಲಿ ಶಕ್ತಿತತ್ತ್ವ ಹೊರತಾಗಿ ಶಿವತತ್ತ್ವ ಇಲ್ಲ. ಶಕ್ತಿತತ್ತ್ವದೊಳಗೆ ಶಿವತತ್ತ್ವಾ ನ್ತರ್ಭಾವ. ಈ ಅರ್ಥವನು 'ಮನಸ್ತ್ವಂ ವ್ಯೋಮ ತ್ವಂ' (ಶ್ಲೋ. ೩೪) ಎಂಬ ಶ್ಲೋಕದ ಟೀಕಿನಲ್ಲಿ ಬರದೇನು.

ಜಗತ್ಸೂತೇ ಧಾತಾ ಹರಿರವತಿ ರುದ್ರಃ ಕ್ಷಪಯತೇ
ತಿರಸ್ಕುರ್ವನ್ನೇತತ್ಸ್ವಮಪಿ ವಪುರೀಶಸ್ತಿರಯತಿ
ಸದಾಪೂರ್ವಃ ಸರ್ವಂ ತದಿದಮನುಗೃಹ್ಣಾತಿ ಚ ಶಿವಃ
ತವಾಜ್ಞಾಮಾಲಂಬ್ಯ ಕ್ಷಣಚರಿತಯೋರ್ಭ್ರೂಲತಿಕಯೋಃ ೨೪

[ಹೇ ಭಗವತಿ! ಧಾತಾ ಜಗತ್ಸೂತೇ, ಹರಿಃ ಜಗದವತಿ, ರುದ್ರೋ ಜಗತ್ ಕ್ಷಪಯತೇ, ಈಶಃ ಏತತ್ತಿರಸ್ಕುರ್ವನ್ ಸ್ವಮಪಿ ವಪುಸ್ತಿರಯತಿ, ಸದಾಪೂರ್ವಃ ಶಿವಃ ತದಿದಂ ಸರ್ವಂ ತವ ಕ್ಷಣಚರಿತಯೋಃ ಭ್ರೂಲತಿಕಯೋಃ ಆಜ್ಞಾ ಮಾಲಂಬ್ಯ ಅನುಗೃಹ್ಣಾತಿ.]

ಹೇ ಭಗವತಿಯೇ ! ಧಾತಾ ಜಗತ್ಸೂತೇ ಹರಿಃ ಜಗದವತಿ ರುದ್ರೋ ಜಗತ್ ಕ್ಷಪಯತೇ–ಬ್ರಹ್ಮನು ಸ್ಥಾವರಜಂಗಮಾತ್ಮಕವಾದ ಜಗತ್ತ ಸೃಷ್ಟಿಸುವನು, ವಿಷ್ಣು ಆ ಜಗತ್ತ ರಕ್ಷಿಸುವನು, ರುದ್ರನು ಆ ಜಗತ್ತ ಸಂಹಾರವ ಮಾಡುವನು, ಈಶಃ ಏತತ್ತಿರಸ್ಕುರ್ವನ್ ಸ್ವಮಪಿ ವಪುಃ ತಿರಯತಿ–ಈಶ್ವರನು ಸೃಷ್ಟಿಸ್ಥಿತಿಪ್ರಲಯಕ್ಕೆ ಕರ್ತರಾದ ಬ್ರಹ್ಮ ವಿಷ್ಣು ರುದ್ರ ಈ ಮೂರು [1]ಶರೀರವನು ತನ್ನಲ್ಲಿ ಲಯವ ಮಾಡಿಕೊಂಡು ತನ್ನ [1]ಶರೀರವನು ಸದಾಶಿವನಲ್ಲಿ ಲಯವಮಾಡುವನು, ಸದಾ ಪೂರ್ವಃ ಶಿವಃ ತದಿದಂ ಸರ್ವಂ ತವ ಕ್ಷಣಚರಿತಯೋಃ ಭ್ರೂಲತಿಕಯೋಃ ಆಜ್ಞಾ ಮವಲಂಬ್ಯ ಅನುಗೃಹ್ಣಾತಿ–ಆ ತರುವಾಯ ಸದಾಶಿವನು ಬ್ರಹ್ಮಾಂಡದ ಉತ್ಪತ್ತಿ ಗಾಗಿ ಬ್ರಹ್ಮ ವಿಷ್ಣು ರುದ್ರ ಈಶ್ವರ ಈ ನಾಲ್ವರನೂ ನಿನ್ನ ಕ್ಷಣಮಾತ್ರ ಚಲನವುಂಟಾದ ಭ್ರೂಲತಿಕೆಯ ಆಜ್ಞೆಯ ತೆಕ್ಕೊಂಡು ಸೃಷ್ಟಿಮಾಡುವನು.

[2]ಸದಾಶಿವನು ಸರ್ವೇಶ್ವರಿಯ ಭ್ರೂಚಲನಮಾತ್ರವ ಸಹಾಯಮಾಡಿ ಕೊಂಡು ಜಗತ್ತಿನ ಸೃಷ್ಟಿ ಸ್ಥಿತಿ ಪ್ರಲಯಕ್ಕೆ ಕಾರಣರಾದ ಬ್ರಹ್ಮ ವಿಷ್ಣು ರುದ್ರ ಈ ಮೂರರಕ್ಕೂ ಕಾರಣವಾದ ಈಶ್ವರನನೂ ಸೃಷ್ಟಿಮಾಡುವನು, ಸರ್ವೇಶ್ವರಿಯ ಹುಬ್ಬಿನ ಗಂಟ ಸಹಾಯವ ಮಾಡಿಕೊಂಡು ಸದಾಶಿವನು ಇವರ ಸಂಹಾರವ ಮಾಡುವನು. ಅನೇಕ ಕೋಟಿ ಬ್ರಹ್ಮಾಂಡಗಳ ಉತ್ಪತ್ತಿ ವಿನಾಶಗಳಿಗೆ ಸರ್ವೇಶ್ವ ರಿಯ ಭ್ರೂವಿಕ್ಷೇಪ ಭ್ರುಕುಟೀಕರಣ ಮಾತ್ರ ಸದಾಶಿವನಿಗೆ ಸಹಾಯವೆಂದು ಈ ಶ್ಲೋಕಕ್ಕೆ ತಾತ್ಪರ್ಯ.

ತ್ರಯಾಣಾಂ ದೇವಾನಾಂ ತ್ರಿಗುಣಜನಿತಾನಾಂ ತವ ಶಿವೇ
ಭವೇತ್ಪೂಜಾ ಪೂಜಾ ತವ ಚರಣಯೋರ್ಯಾ ವಿರಚಿತಾ
ತಥಾ ಹಿ ತ್ವತ್ಪಾದೋದ್ವಹನಮಣಿಪೀಠಸ್ಯ ನಿಕಟೇ
ಸ್ಥಿತಾಃ ಹ್ಯೇತೇ ಶಶ್ವನ್ಮುಕುಳಿತಕರೋತ್ತಂಸಮುಕುಟಾಃ ೨೫

[ಹೇ ಶಿವೇ ! ತವ ತ್ರಿಗುಣಜನಿತಾನಾಂ ತ್ರಯಾಣಾಂ ದೇವಾನಾಂ ತವ ಚರಣಯೋರ್ಯಾ ಪೂಜಾ ವಿರಚಿತಾ ಭವೇತ್ ಸೈವ ಪೂಜಾ, ತಥಾ ಹಿ ತ್ವತ್ಪಾದೋದ್ವಹನಮಣಿಪೀಠಸ್ಯ ನಿಕಟೇ ಹಿ ಯಸ್ಮಾದೇತೇ ಮುಕುಳಿತಕರೋ ತ್ತಂಸಮುಕುಟಾಃ ಶಶ್ವತ್ ಸ್ಥಿತಾಃ.]

ಹೇ ಶಿವೇ !–ಏ ಮಂಗಳಾಕಾರೇ ! ತವ ತ್ರಿಗುಣಜನಿತಾನಾಂ ತ್ರಯಾಣಾಂ ದೇವಾನಾಂ–ನಿನ್ನ ರಜಸ್ಸತ್ತ್ವತಮೋಗುಣಗಳಿಂದ ಹುಟ್ಟಿದಂಥಾ ಬ್ರಹ್ಮ ವಿಷ್ಣು ರುದ್ರರಿಗೆ, ತವ ಚರಣಯೋರ್ಯಾ ಪೂಜಾ ವಿರಚಿತಾ ಭವೇತ್ ಸೈವ ಪೂಜಾ–

---

[1] ತತ್ತ್ವವನ್ನು ಎಂದರ್ಥ. ಶರೀರಕ್ಕೆ ಲಯವಾದರೆ, ಭಗವತಿಯ ಮಂಚಕ್ಕೆ ಈ ನಾಲ್ವರ ಶರೀರವನ್ನು ಕಾಲಾಗಿ ಹೇಳಿರುವುದು ಕೂಡುವುದಿಲ್ಲ. [2]ಸದಾಶಿವನು ಸೃಷ್ಟಿ ಸ್ಥಿತಿ ಸಂಹಾರ ತಿರೋಧಾನ ಕರ್ತರಾದ ಬ್ರಹ್ಮ ವಿಷ್ಣು ರುದ್ರ ಈಶ್ವರ ಈ ನಾಲ್ವರ ಉತ್ಪತ್ತಿಸ್ಥಿತಿನಾಶ ಗಳನು ಮಾಡುವುದಕ್ಕೆ ಭಗವತಿಯ ಭ್ರೂಚಲನಮಾತ್ರವೆ ಸಹಾಯವೆಂದು ಇದರ ಸಾರ.

[1] ನಿನ್ನ ಪಾದಗಳಿಗೆ ಆವದಾನೊಂದು ಪೂಜೆಯು ಮಾಡಿದವರಿಗೆ ಆಗುವದು ಆ ಪೂಜೆ,[1] ತಥಾ ಹಿ ತ್ವತ್ಪಾದೋದ್ವಹನಮಣಿಪೀಠಸ್ಯ ನಿಕಟೇ–ಹಾಗೆ ಯಹುದೆ ಅಲ್ಲಾ, ನಿನ್ನ ಪಾದಪದ್ಮಂಗಳ ಇಡುವದಕ್ಕಾಗಿ ಇಟ್ಟು ಇದ್ದಂಥಾ ಮಣಿಪೀಠಗಳ ಸಮೀಪದಲ್ಲಿ, ಹಿ ಯಸ್ಮಾದೇತೇ ಮುಕುಳಿತಕರೋತ್ತಂಸಮಕುಟಾಃ ಶಶ್ವತ್ ಸ್ಥಿತಾಃ–ಆವದಾನೊಂದು ಕಾರಣದಿಂದ ಬ್ರಹ್ಮವಿಷ್ಣುರುದ್ರರು ತಮ್ಮ ಪಾದಪೀಠಗಳ ಮೇಲೆ ಕೈಮುಗಿವಂಥಾ ಕಿರೀಟಗಳನುಳ್ಳವರಾಗಿ ಅನವರತವು ಇದ್ದಾರು. ಅದುಕಾರಣ ನಿನ್ನ ಪಾದಪೂಜೆಯೆ ಅದೆ ಅವರ ಪೂಜೆ.[2]

ವಿರಿಂಚಿಃ ಪಂಚತ್ವಂ ವ್ರಜತಿ ಹರಿರಾಪ್ನೋತಿ ವಿರತಿಂ
ವಿನಾಶಂ ಕೀನಾಶೋ ಭಜತಿ ಧನದೋ ಯಾತಿ ನಿಧನಮ್
ವಿತಂದ್ರೀ ಮಾಹೇಂದ್ರೀವಿತತಿರಪಿ ಸಂಮೀಲಿತದೃಶಾ
ಮಹಾಸಂಹಾರೇಽಸ್ಮಿನ್ ವಿಹರತಿ ಸತಿ ತ್ವತ್ಪತಿರಸೌ ೨೬

[ವಿರಿಂಚಿಃ ಪಂಚತ್ವಂ ವ್ರಜತಿ, ಹರಿರಾಪ್ನೋತಿ ವಿರತಿಂ, ಕೀನಾಶೋ ವಿನಾಶಂ ಭಜತಿ, ಧನದೋ ನಿಧನಂ ಯಾತಿ, ಮಾಹೇಂದ್ರೀ ವಿತತಿರಪಿ ಸಂಮೀಲಿತದೃಶಾ ವಿತಂದ್ರೀ, ಅಸ್ಮಿನ್ ಮಹಾಸಂಹಾರೇ ಸತಿ ! ಅಸೌ ತ್ವತ್ಪತಿಃ ವಿಹರತಿ.]

ವಿರಿಂಚಿಃ ಪಂಚತ್ವಂ ವ್ರಜತಿ ಹರಿರಾಪ್ನೋತಿ ವಿರತಿಂ ಕೀನಾಶೋ ವಿನಾಶಂ ಭಜತಿ ಧನದೋ ನಿಧನಂ ಯಾತಿ–ಬ್ರಹ್ಮನು ಮರಣವ ಐದುವನು ವಿಷ್ಣುವು ಮರಣವ ಐದುವನು ಯಮನು ವಿನಾಶವನ್ನೈದುವನು ಕುಬೇರನು ಮರಣವ ಐದುವನು, ಮಾಹೇಂದ್ರೀವಿತತಿರಪಿ ಸಂಮೀಲಿತದೃಶಾ ವಿತಂದ್ರೀ–ಇಂದ್ರರುಗಳು ಮನುಗಳು ಮರಣವನ್ನೈದುವರು. ಅಸ್ಮಿನ್ ಮಹಾಸಂಹಾರೇ–ಇಂಥಾ ಬ್ರಹ್ಮಪ್ರಳಯದಲ್ಲಿ, ಹೇ ಸತಿ–ಏ ಪತಿವ್ರತೆ! ಅಸೌ ತ್ವತ್ಪತಿಃ ವಿಹರತಿ–ಇಂಥಾ ನಿನ್ನ ಪತಿಯಾಗಿದ್ದ ಸದಾಶಿವನು ಸಹಸ್ರಕಮಲದಲ್ಲಿ ಕ್ರೀಡೆಯ ಮಾಡಿಕೊಂಡು ಇಹನು. ಬ್ರಹ್ಮಾದಿಸರ್ವದೇವತೆಗಳ ಮರಣಕಾಲದ ಬ್ರಹ್ಮಾಂಡವೊಡದ ಸಮಯದಲ್ಲಿ ನಿನ್ನ ಕೂಡೆ ನಿನ್ನ ಪತಿಯ ಕ್ರೀಡೆ, ನಿನ್ನ ಪತಿವ್ರತಾಮಹಿಮೆ ಯೆಂಬುದು ಈ ಶ್ಲೋಕದ ಅಭಿಪ್ರಾಯ.

---

[1] ನಿನ್ನ ಪಾದಗಳಿಗೆ ಆವದಾನೊಂದು ಪೂಜೆಯು ಮಾಡಲ್ಪಡುತ್ತದೆಯೋ ಅದೇ ಪೂಜೆ ಅವರಿಗೂ ಆಗುವುದು ಎಂದರ್ಥ. [2] ಬ್ರಹ್ಮವಿಷ್ಣುರುದ್ರೇಶ್ವರರು ತಮ್ಮ ಕಿರೀಟಗಳ ಮೇಲೆ ಕೈಮುಗಿದುಕೊಂಡು ಯಾವಾಗಲೂ ನಿನ್ನ ಪಾದಪೀಠದ ಸಮೀಪದಲ್ಲಿ ನಿಂತಿರುವದರಿಂದ ನಾನು ನಿನ್ನ ಪಾದಗಳಲ್ಲಿ ಮಾಡಿದ ಪೂಜೆಯೆ ಅವರಿಗೂ ಆಗುವದು. ಅವರಿಗೆ ಬೇರೆ ಪೂಜೆ ಬೇಕಾಗಿಲ್ಲ ಎಂದು ತಾತ್ಪರ್ಯ.

ಜಪೋ ಜಲ್ಪಃ ಶಿಲ್ಪಂ ಸಕಲಮಪಿ ಮುದ್ರಾವಿರಚನಾ
ಗತಿಃ ಪ್ರಾದಕ್ಷಿಣ್ಯಕ್ರಮಣಮಶನಾದ್ಯಾಹುತಿವಿಧಿಃ
ಪ್ರಣಾಮಃ ಸಂವೇಶಃ ಸುಖಮಖಿಲಮಾತ್ಮಾರ್ಪಣದೃಶಾ
ಸಪರ್ಯಾಪರ್ಯಾಯಸ್ತವ ಭವತು ಯನ್ಮೇ ವಿಲಸಿತಮ್ ೨೭

[ಹೇ ಭಗವತಿ! ಮೇ ಆತ್ಮಾರ್ಪಣದೃಶಾ ಜಲ್ಪಃ ಜಪಃ, ಸಕಲಮಪಿ ಶಿಲ್ಪಂ ಮುದ್ರಾವಿರಚನಾ, ಗತಿಃ ಪ್ರಾದಕ್ಷಿಣ್ಯಕ್ರಮಣಂ, ಅಶನಾದಿ ಆಹುತಿವಿಧಿಃ, ಸಂವೇಶಃ ಪ್ರಣಾಮಃ, ಯನ್ಮೇ ವಿಲಸಿತಂ ಅಖಿಲಂ ಸುಖಂ ತವ ಸಪರ್ಯಾಪರ್ಯಾಯೋ ಭವತು.]

ಹೇ ಭಗವತಿಯೇ! ಮೇ ಆತ್ಮಾರ್ಪಣದೃಶಾ–ನನ್ನ ಆತ್ಮಕ್ಕೆ ಬೇಕಾದ ಬುದ್ಧಿಯಿಂದ, ಯಃ ಜಲ್ಪಃ ಜಪಃ–ಆವ ನುಡಿವುಂಟು ಅದು ಜಪ, ಸಕಲಮಪಿ ಶಿಲ್ಪಂ ಮುದ್ರಾವಿರಚನಾ–ಕೈಗಳಿಂದ ಮಾಡುವಂಥಾ ಪ್ರಯೋಜನವೆಲ್ಲವು ಸಂಕ್ಷೋಭಣ ದ್ರಾವಣ ಆಕರ್ಷಣ ವಶ್ಯ ಉನ್ಮಾದ ಅಂಕುಶ ಖೇಚರೀ ಇವು ಮೊದಲಾದ ಮುದ್ರೆಗಳ ಮಾಡುವಂಥಾದ್ದು, ಗತಿಃ ಪ್ರಾದಕ್ಷಿಣ್ಯಕ್ರಮಣಂ–ತನ್ನ ಮನಸ್ಸಿಗೆ ಬಂದ ಹಾಗೆ ತಿರುಗೂದೆಲ್ಲಾ ಪ್ರದಕ್ಷಿಣವಾಗಿ ನಡೆವದು, ಅಶನಾದಿ ಆಹುತಿವಿಧಿಃ–ತನ್ನ ಜೀವನಾರ್ಥವಾಗಿ ಭಕ್ಷಿಸುವದೆಲ್ಲಾ ನಿನಗೆ ಹೋಮದ ಆಹುತಿಯ ಮಾಡುವದು, ಸಂವೇಶಃ ಪ್ರಣಾಮಃ–ತನಗೆ ಇಚ್ಛೆಯಾದ ಹಾಗೆ ಕಾಲ ನೀಡಿ ಮಲಗಿಕೊಂಬುದು ಸಾಷ್ಟಾಂಗನಮಸ್ಕಾರ, ಯನ್ಮೇ ವಿಲಸಿತಂ ಅಖಿಲಂ ಸುಖಂ ತವ ಸಪರ್ಯಾಪರ್ಯಾಯೋ ಭವತು–ಆವದಾನೊಂದು ನನ್ನ ಶಬ್ದ ಸ್ಪರುಶರೂಪುರಸಗಂಧಾದಿಗಳಿಂದ ಸಕಲಸುಖವು ನಿನ್ನ ಧೂಪದೀಪಾದಿಷೋಡಶೋಪಚಾರಪೂಜಾಭೇದವು.

ಇಲ್ಲಿ ಬರೆಯತಕ್ಕ ಅರ್ಥ—ಸಮಯಿಗಳ ಮತದಲ್ಲಿ ಸಾದಾಖ್ಯತತ್ತ್ವದ ಪೂಜೆಯು ಸಹಸ್ರಕಮಲದಲ್ಲಿಯೆ, ಬಾಹ್ಯದ ಪೀಠಾದಿಗಳಲ್ಲಿ ಇಲ್ಲಾ. ಸಮಯಿಗಳ ಯೋಗೀಶ್ವರರಾಗಿ ಇದ್ದಂಥಾ ಜೀವನ್ಮುಕ್ತರು ಸಂಸಾರಯಾತ್ರೆಯ ಅನುವರ್ತಿಸುತಲೆ ಸಾದಾಖ್ಯತತ್ತ್ವವನು ಧ್ಯಾನವ ಮಾಡುವರು. ಆ ಸಾದಾಖ್ಯಕಲೆಯನೆ ಧ್ಯಾನಮಾಡಿಕೊಂಡು ಇಹ ಅವರಿಗೆ 'ಜಪೋ ಜಲ್ಪಃ' ಎಂಬ ಇವು ಮೊದಲಾದ (ಪೂಜಾ) ಪ್ರಕಾರವ ಹೇಳಲ್ಪಟ್ಟಿತು. ಸಮಯಮತದ ಕೆಲವರು ಯೋಗೀಶ್ವರರು ಏಕಾಂತದ ಗುಹೆಗಳಲ್ಲಿ ಪದ್ಮಾಸನ ಮಾಡಿಕೊಂಡು ಜಿತೇಂದ್ರಿಯರಾಗಿ ಸಾದಾಖ್ಯತತ್ತ್ವವನೆ ಧ್ಯಾನ ಮಾಡಿಕೊಂಡು ಇಹಂಥಾ ಆ ಯೋಗೀಶ್ವರರಿಗೆ (ನಾಲ್ಕು ವಿಧ) ಆರುವಿಧದ ಐಕ್ಯಾನುಸಂಧಾನವೆ ಭಗವತಿಯ ಪೂಜೆ. ಸಮಯಮತದ ಆರು ವಿಧದ ನಾಲ್ಕು ವಿಧದ ಐಕ್ಯಾನುಸಂಧಾನವ ಮಾಡುವಂಥಾ ಯೋಗೀಶ್ವರರಿಗೆ ಬಾಹ್ಯಪೂಜೆಯ ಷೋಡಶೋಪಚಾರಕ್ಕೆ ಬೇಕಾದ ದ್ರವ್ಯಾರ್ಜನ ಪ್ರಯಾಸವಿಲ್ಲ. ಸಮಯಮತಸ್ವರೂಪವನ್ನು ಮುಂದೆ ವಿವರವಾಗಿ ಬರದೇನು (೩೨ನೆ ಶ್ಲೋಕದಲ್ಲಿ).

ಸುಧಾಮಪ್ಯಾಸ್ವಾದ್ಯ ಪ್ರತಿಭಯಜರಾಮೃತ್ಯುಹರಿಣೀಂ
ವಿಪದ್ಯಂತೇ ವಿಶ್ವೇ ವಿಧಿಶತಮಖಾದ್ಯಾ ದಿವಿಷದಃ
ಕರಾಳಂ ಯತ್ ಕ್ಷ್ವೇಳಂ ಕಬಳಿತವತಃ ಕಾಲಕಲನಾ
ನ ಶಂಭೋಸ್ತನ್ಮೂಲಂ ಜನನಿ ತವ ತಾಟಂಕಮಹಿಮಾ ೧೮

[ಹೇ ಜನನಿ! ವಿಶ್ವೇ ವಿಧಿಶತಮಖಾದ್ಯಾಃ ದಿವಿಷದಃ ಪ್ರತಿಭಯಜರಾ ಮೃತ್ಯುಹರಿಣೀಂ ಸುಧಾಮಾಸ್ವಾದ್ಯಾಪಿ ವಿಪದ್ಯಂತೇ. ಕರಾಳಂ ಕ್ಷ್ವೇಳಂ ಕಬಳಿತವತಃ ಶಂಭೋಃ ಕಾಲಕಲನಾ ನಾಸ್ತೀತಿ ಯತ್ ತನ್ಮೂಲಂ ತವ ತಾಟಂಕ ಮಹಿಮಾ.]

ಹೇ ಜನನಿ–ಎ ತಾಯೇ!, ವಿಶ್ವೇ ವಿಧಿಶತಮಖಾದ್ಯಾಃ ದಿವಿಷದಃ–ಸಕಲ ಬ್ರಹ್ಮಾದಿದೇವತೆಗಳು, ಪ್ರತಿಭಯಜರಾಮೃತ್ಯುಹರಿಣೀಂ ಸುಧಾಮಾಸ್ವಾದ್ಯಾಪಿ–ಭಯಂಕರವಾಗಿ ಇದ್ದಂಥಾ ಜರೆಯನು ಮರಣವನು ಪರಿಹರಿಸುವಂಥಾ ಅಮೃತವನು ಪಾನವ ಮಾಡಿ ಇದ್ದು, ವಿಪದ್ಯಂತೇ–ಮರಣವನ್ನೈದುವರು ಕರಾಳಂ ಕ್ಷ್ವೇಳಂ ಕಬಳಿತವತಃ ಶಂಭೋಃ–ಅತ್ಯುಗ್ರವಾಗಿ ಇದ್ದ ಕಾಲಕೂಟ ವಿಷ ವನು ಭಕ್ಷಿಸಿದ ಶಿವಗೆ, ಕಾಲಕಲನಾ ನಾಸ್ತೀತಿ ಯತ್–ಮರಣವಿಲ್ಲವೆಂಬುದು ಆವುದುಂಟು, ತನ್ಮೂಲಂ ತವ ತಾಟಂಕಮಹಿಮಾ–ಆ ಮರಣವಿಲ್ಲದಕ್ಕೆ ಕಾರಣ ನಿನ್ನ ಕಿವಿಯಲ್ಲಿ ಇದ್ದ ಓಲೆಯ ಮಹಿಮೆ.

ಶಿವಗೆ ಮರಣವುಂಟಾದರೆ ಸರ್ವೇಶ್ವರಿಯು ಕರ್ಣಪತ್ರವ ತೆಗೆಯಬೇಕು. ಪ್ರಳಯಕಾಲಕ್ಕೆ ಸರ್ವೇಶ್ವರಿಯ ಕಿವಿಯ ಓಲೆಯ ತೆಗೆಸುವಷ್ಟು ಸಾಮರ್ಥ್ಯ ವಿಲ್ಲ. ಅದು ಹೇಗೆಂದರೆ ಪ್ರಳಯಕಾಲದ ಉತ್ಪತ್ತಿಸ್ಥಿತಿಲಯಗಳು ಸರ್ವೇಶ್ವರಿಯ ಕಿವಿಯ ಓಲೆಗಳಿಂದ ಉಂಟಾಗುವುದೆಂಬುದು ಈ ಶ್ಲೋಕದ ಅಭಿಪ್ರಾಯ.

ಕಿರೀಟಂ ವೈರಿಂಚಂ ಪರಿಹರ ಪುರಃ ಕೈಟಭಭಿದಃ
ಕಠೋರೇ ಕೋಟೀರೇ ಸ್ಖಲಸಿ ಜಹಿ ಜಂಭಾರಿಮಕುಟಮ್
ಪ್ರಣಮ್ರೇಷ್ವೇತೇಷು ಪ್ರಸಭಮುಪಯಾತಸ್ಯ ಭವನಂ
ಹರಸ್ಯಾಭ್ಯುತ್ಥಾನೇ ತವ ಪರಿಜನೋಕ್ತಿರ್ವಿಜಯತೇ ೧೯

[ಹೇ ಭಗವತಿ! ಪುರಃ ವೈರಿಂಚಂ ಕಿರೀಟಂ ಪರಿಹರ, ಕೈಟಭಭಿದಃ ಕಠೋರೇ ಕೋಟೀರೇ ಸ್ಖಲಸಿ, ಜಂಭಾರಿಮಕುಟಂ ಜಹಿ, ಇತ್ಯೇವಂ ರೂಪ ಮೇತೇಷು ಪ್ರಣಮ್ರೇಷು ಸತ್ಸು ಭವನಮುಪಯಾತಸ್ಯ ಭವಸ್ಯ ಪ್ರಸಭಂ ತವಾಭ್ಯುತ್ಥಾನೇ ಪರಿಜನೋಕ್ತಿಃ ವಿಜಯತೇ.]

ಎ ಭಗವತಿಯೇ! ಪುರಃ ವೈರಿಂಚಂ ಕಿರೀಟಂ ಪರಿಹರ–ಮುಂದೆ ಬ್ರಹ್ಮನ ಕಿರೀಟವ ಪರಿಹರಿಸು. ಕೈಟಭಭಿದಃ ಕಠೋರೇ ಕೋಟೀರೇ ಸ್ಖಲಸಿ–ವಿಷ್ಣುವಿನ

ಕಠೋರವಾದ ಕಿರೀಟವ ಎಡಹಿ, ಜಂಭಾರಿಮುಕುಟಂ ಜಹಿ–ದೇವೇಂದ್ರ ಕಿರೀಟವ ಬಿಡು, ಇತ್ಯೇವಂ ರೂಪಂ ಏತೇಷು ಪ್ರಣಮ್ರೇಷು ಸತ್ಸು–ಎಂಬ ಈ ಪ್ರಕಾರದ ಬ್ರಹ್ಮವಿಷ್ಣು ಇಂದ್ರರು ಸಾಷ್ಟಾಂಗ ನಮಸ್ಕಾರವಮಾಡಿ ಇರಲಾಗಿ, ಭವನ ಮುಪಯಾತಸ್ಯ ಭವಸ್ಯ–ಮನೆಗೆ ಬಹಂಥಾ ಶಿವಗೆ, ಪ್ರಸಭಂ ತವಾಭ್ಯುತ್ಥಾನೆ ಪರಿಜನೋಕ್ತಿಃ ವಿಜಯತೇ–ಶೀಘ್ರದಲ್ಲಿ ನೀನು ಇದಿರಾಗಿಹೋಹಸಮಯದಲ್ಲಿ ಸೇವಕರ ವಚನಗಳು ಒಪ್ಪುತ್ತಿದ್ದಾವು.[1]

ಚತುಃಷಷ್ಟ್ಯಾ ತಂತ್ರೈಃ ಸಕಲಮತಿಸಂಧಾಯ ಭುವನಂ
ಸ್ಥಿತಸ್ತತ್ತತ್ಸಿದ್ಧಿಪ್ರಸವಪರತಂತ್ರೈಃ ಪಶುಪತಿಃ
ಪುನಸ್ತ್ವನ್ನಿರ್ಬಂಧಾದಖಿಲಪುರುಷಾರ್ಥೈಕಘಟನಾ-
ಸ್ವತಂತ್ರಂ ತೇ ತಂತ್ರಂ ಕ್ಷಿತಿತಲಮವಾತೀತರದಿದಮ್ ೩೦

[ಹೇ ಭಗವತಿ! ಪಶುಪತಿಃ ಸಕಲಂ ಭುವನಂ ತತ್ತತ್ಸಿದ್ಧಿಪ್ರಸವ ಪರತಂತ್ರೈಃ ಚತುಃಷಷ್ಟ್ಯಾ ತಂತ್ರೈಃ ಅತಿಸಂಧಾಯ ಸ್ಥಿತಃ, ಪುನಃ ತ್ವನ್ನಿರ್ಬಂಧಾತ್ ಅಖಿಲಪುರುಷಾರ್ಥೈಕಘಟನಾಸ್ವತಂತ್ರಂ ತೇ ತಂತ್ರಂ ಇದಂ ಕ್ಷಿತಿತಲಂ ಅವಾತೀತರತ್.]

ಏ ಭಗವತಿಯೇ! ಪಶುಪತಿಃ ಸಕಲಂ ಭುವನಂ ತತ್ತತ್ಸಿದ್ಧಿಪ್ರಸವ ಪರತಂತ್ರೈಃ ಚತುಃಷಷ್ಟ್ಯಾ ತಂತ್ರೈಃ ಅತಿಸಂಧಾಯ ಸ್ಥಿತಃ–ಶಿವನು ಸಕಲಲೋಕವನು ಅನೇಕ ಬಗೆಯ ಸಿದ್ಧಿಗಳು ಉಂಟಾಗುವ ಮಹಾಮಾಯಾ ಶಂಬರಾದಿ ಅರವತ್ತನಾಲ್ಕು ತಂತ್ರಗಳಿಂದ ವಂಚನೆಯಮಾಡಿ ಇಹಂಥಾ ಶಿವನು, ಪುನಃ ತ್ವನ್ನಿರ್ಬಂಧಾತ್–ತಿರುಗಿ ನಿನ್ನ ನಿರ್ಬಂಧದ ದೆಸೆಯಿಂದ, ಅಖಿಲಪುರುಷಾರ್ಥೈಕಘಟನಾಸ್ವತಂತ್ರಂ ತೇ ತಂತ್ರಂ–ಅನೇಕ ಪುರುಷಾರ್ಥ ಗಳ ಶೀಘ್ರವಾಗಿ ಕೊಡುವ ಸ್ವತಂತ್ರವುಂಟಾಗಿದ್ದಂಥಾ ನಿನ್ನ ತಂತ್ರವನು, ಇದಂ–ಈ ಸ್ವತಂತ್ರವಾದ ತಂತ್ರವನು, ಕ್ಷಿತಿತಲಮವಾತೀತರತ್–ಭೂಲೋಕದಲ್ಲಿ ವಿಸ್ತಾರವಮಾಡಿದನು.

ಇಲ್ಲಿಗೆ ಬರೆಯಬೇಕಾದ ಅರ್ಥ—ಅರವತ್ತನಾಲ್ಕು ತಂತ್ರಗಳ ನಾಮ ಅವಾವೆಂದರೆ ಚತುಶ್ಶತಿಯಲ್ಲಿ—

'ಚತುಃಷಷ್ಟಿಶ್ಚ ತಂತ್ರಾಣಿ ಮಾತೃಣಾಮುತ್ತಮಾನಿ ಚ
ಮಹಾಮಾಯಾಶಂಬರಂ ಚ ಯೋಗಿನೀಜಾಲಶಂಬರಮ್

---

[1] "ತ್ರಯಾಣಾಂ ದೇವಾನಾಂ" (ಶ್ಲೋ. ೨೫) ಎಂಬ ಶ್ಲೋಕದಲ್ಲಿ ಹೇಳಿದಂತೆ ಬ್ರಹ್ಮಾದಿ ದೇವತೆಗಳು ಯಾವಾಗಲೂ ದೇವೀಪಾದಾರವಿಂದದಲ್ಲಿ ಪ್ರಣತರಾಗಿರುವರೆಂದು ತಾತ್ಪರ್ಯ.

ತತ್ರ್ಯಂಶಂಬರಕಂ ಚೈವ ಭೈರವಾಷ್ಟಕಮೇವ ಚ
ಬಹುರೂಪಾಷ್ಟಕಂ ಚೈವ [1]ಯಾಮಳಾಷ್ಟಕಮೇವ ಚ

ಚಂದ್ರಜ್ಞಾನಂ *ಮಾಲಿನೀ ಚ ಮಹಾಸಂಮೋಹನಂ ತಥಾ
[2]ವಾಮಜುಷ್ಟಂ[2] ಮಹಾದೇವಂ ವಾತುಲಂ ವಾತುಲೋತ್ತರಮ್

ಹೃದ್ಭೇದಂ ತಂತ್ರಭೇದಂ ಚ ಗುಹ್ಯತಂತ್ರಂ ಚ ಕಾಮಿಕಮ್
ಕಲಾವಾದಂ ಕಲಾಸಾರಂ ತಥಾ [3]ನೃತ್ಯುಕಂಡಿಕಾ[3] ಮತಮ್

[4]ಮತೋತ್ತರಂ[4] ಚ ವೀಣಾಖ್ಯಂ ತ್ರೋತಲಂ ತ್ರೋತಲೋತ್ತರಮ್
ಪಂಚಾಮೃತಂ ರೂಪಭೇದಂ [5]ಭೂತೋತ್ಥಾಪನ[5]ಮೇವ ಚ

[6]ಕಲಾಸಾರಂ ಕುಲಾಚಾರಂ[6] ಕುಲಚೂಡಾಮಣಿಸ್ತಥಾ
ಸರ್ವಜ್ಞಾನೋತ್ತರಂ ಚೈವ [7]ಮಹಾಕಾಪಾಲಿಕಂ[7] ತಥಾ

[8]ಅರುಣೇಶಂ ಮೇದಿನೀಶಂ ವಿಕುಂಡೀಶ್ವರಮೇವ ಚ
ಪೂರ್ವಪಶ್ಚಿಮದಕ್ಷಂ ಚ ಉತ್ತರಂ ಚ ನಿರುತ್ತರಮ್

ವಿಮಲಂ ವಿಮಲೋತ್ಥಂ ಚ ದೇವೀಮತಮತಃ ಪರಮ್

ಶಿವನು ಲೋಕವ ಭ್ರಮೆಯ ಮಾಡುವುದಕ್ಕಾಗಿ ವೈದಿಕಮಾರ್ಗವಿರುದ್ಧವಾದ ಈ ಅರವತ್ತುನಾಲ್ಕು ತಂತ್ರಗಳು ಪಾರ್ವತಿಯಕೂಡೇ ಹೇಳಿದನು. ಅದು ಕಾರಣ ಶಂಕರಭಗವತ್ಪಾದರು ' ಚತುಃಷಷ್ಟ್ಯಾ ತಂತ್ರೈಃ ಸಕಲಮತಿ ಸಂಧಾಯ ' ಎಂದು ಹೇಳಿದರು—ಅರವತ್ತುನಾಲ್ಕು ತಂತ್ರಗಳು ವೈದಿಕಾಚಾರ ವಲ್ಲ. ಅದು ಹೇಗೆಂದರೆ—

ಮಹಾಮಾಯಾಶಂಬರತಂತ್ರದಲ್ಲಿ ಮೋಹಿನೀಮಾಯಾಪ್ರಧಾನವು.
ಯೋಗಿನೀಜಾಲಶಂಬರದಲ್ಲಿ ಶ್ಮಶಾನಾದಿಗಳಲ್ಲಿ ಅನುಷ್ಠಾನವು.

---

* ವಾಸುಕಿಂ ಚ.

[1] ಬ್ರಹ್ಮಯಾಮಳಂ, ವಿಷ್ಣುಯಾಮಳಂ, ರುದ್ರಯಾಮಳಂ, ಲಕ್ಷ್ಮೀಯಾಮಳಂ, ಉಮಾಯಾಮಳಂ, ಸ್ಕಂದಯಾಮಳಂ, ಗಣೇಶಯಾಮಳಂ, ಜಯದ್ರಥಯಾಮಳಂ, ಎಂಬುದಾಗಿ ಎಂಟು ಯಾಮಳಗಳು [2] ಮಹೋಚ್ಛುಷ್ಯಂ [3] ನೃತ್ಯುಕ್ಬಿಕಾ [4] ತಂತ್ರೋತ್ತರಂ [5] ಭೂತೋಡ್ಡಾಮರ [6] ಕುಲಸಾರಂ ಕುಲೋಡ್ಡೀಶಂ. [7] ಮಹಾಕಾಳೀಮತಂ.

[8] ಮಹಾಲಕ್ಷ್ಮೀಮತಂ ಚೈವ ಸಿದ್ಧಯೋಗೀಶ್ವರೀಮತಮ್
ಕುರೂಪಿತಾಮತಂ ದೇವರೂಪಿಕಾಮತಮೇವ ಚ
ಸರ್ವವೀರಮತಂ ಚೈವ ವಿಮಲಾಮತಮುತ್ತಮಮ್
ಪೂರ್ವ ಪಶ್ಚಿಮ ದಕ್ಷಂ ಚ ಉತ್ತರಂ ಚ ನಿರುತ್ತರಮ್
ಅರುಣೇಶಂ ಮೋಹಿನೀಶಂ ವಿಶುದ್ಧೇಶ್ವರಮೇವ ಚ

ಚತುಶ್ಶತಿಯಲ್ಲಿರುವ ಪಾಠ. ಭೈರವಾಷ್ಟಕವೆಂಬುದು ಒಂದೆ ತಂತ್ರ ಎಂಬುದಾಗಿ ಈ ತಂತ್ರದ ಅಭಿಪ್ರಾಯ.

ಭೈರವಾಷ್ಟಕತಂತ್ರ—ಸಿದ್ಧಭೈರವ ವಟುಕಭೈರವ ಕಂಕಾಳಭೈರವ ಶಕ್ತಿಭೈರವ ಯೋಗಿನೀಭೈರವ ಮಹಾಭೈರವ ಕಾಲಭೈರವ ಕಾಲಾಗ್ನಿಭೈರವ ಮೊದಲಾದ ಎಂಟುತಂತ್ರಗಳು ಐಹಿಕಫಲಮಾತ್ರಸಾಧನವಾದ ಕಾಪಾಲಿಕ ಮತ ಪ್ರವೇಶವು. [1] ಬಹುರೂಪಾಷ್ಟಕ ಬ್ರಹ್ಮಾದಿಶಿವದೂತಿಅಂತವಾದ ಎಂಟು ತಂತ್ರವು ವೈದಿಕ ಮಾರ್ಗವಲ್ಲ. ಚಂದ್ರಜ್ಞಾನತಂತ್ರ ಹದಿನಾರು ನಿತ್ಯೆಗಳ ಪ್ರತಿಪಾದಿಸಿ ಉಂಟಾದರೂ ಕಾಪಾಲಿಕಮತ ಪ್ರವೇಶವು.[1]

ಮಾಲಿನೀವಿದ್ಯಾ—ಸಮುದ್ರದಲ್ಲಿ ನಡೆವುದಕ್ಕೆ ಕಾರಣ. ಅದು ವೈದಿಕ ವಿರೋಧ.

ಮಹಾಸಂಮೋಹನತಂತ್ರ—ಬಾಲರುಗಳ ನಾಲಗೆಯ ಕೊಯಿದು ಸಾಧ್ಯವಮಾಡುವದರಿಂದ ನಿಷಿದ್ಧವಾದದ್ದು.

ವಾಮಜುಷ್ಟ, ಮಹಾದೇವ ಎರಡು ತಂತ್ರವು ವಾಮಾಚಾರ.

ವಾತುಲ ವಾತುಲೋತ್ತರ ಕಾಮಿಕ—ಈ ಮೂರು ತಂತ್ರವು ವೈದಿಕ ಮಾರ್ಗವಲ್ಲ.

ಹೃದ್ಭೇದತಂತ್ರ ಕಾಪಾಲಿಕ ಮತವು.

ತತ್ವಭೇದ ಗುಹ್ಯತಂತ್ರ—ಎರಡು ಬಹುಜಂತುಗಳ ಹಿಂಸೆ ಕೂಡಿ ಇಹದರಿಂದ ವೇದಮಾರ್ಗವಲ್ಲ.

ಕಲಾವಾದತಂತ್ರ—ಪರಸ್ತ್ರೀಯ ಗಮನಾದಿಗಳಿಂದ ವೈದಿಕಮಾರ್ಗವಲ್ಲ.

ಕಲಾಸಾರ ತಂತ್ರ—ವಾಮಾಚಾರ.

ಕುಂಡಿಕಾಮತ—ಘುಟಿಕಾಸಿದ್ಧಿ—ಅದು ವಾಮಾಚಾರ.

ಮತೋತ್ತರಮತ—ಅದು ರಸಸಿದ್ಧಿ.

ವೀಣಾಖ್ಯತಂತ್ರ, ಸಂಭೋಗಯಕ್ಷಿಣೀಸಿದ್ಧಿ. ಈ ಎರಡುತಂತ್ರವು ವಾಮಾಚಾರ.

ತ್ರೋತಲ ತ್ರೋತಲೋತ್ತರ ಪಂಚಾಮೃತತಂತ್ರ ಐದು ರೂಪಭೇದಾದಿ ತಂತ್ರ ಭೂತೋತ್ಥಾಪನ ಕಲಾಸಾರ ಕುಲಾಚಾರ ಕುಲಚೂಡಾಮಣಿ ಸರ್ವಜ್ಞಾನ ಮಹಾಕಾಪಾಲಿಕ ಅರುಣೇಶ ವಿಕುಂಡೀಶ್ವರ ಪೂರ್ವ ಪಶ್ಚಿಮ ದಕ್ಷಿಣ ಉತ್ತರ ವಿಮಲ ವಿಮಲಾರ್ಧ ದೇವೀಮತ ಈ ತಂತ್ರಗಳು ಕೂಡಾ ಅರವತ್ತುನಾಲ್ಕುತಂತ್ರವು ಸಕಲವೇದಶಾಸ್ತ್ರಗಳ ಬಲ್ಲಂಥಾವರನು ಭ್ರಮಿಸುವುದು, ಆದರೆ ಪರಮದಯಾಳುವಾಗಿದ್ದಂಥಾ ಶಿವನು ಈ ತಂತ್ರಗಳ ನಿರ್ಮಿಸಿ ಲೋಕವ ಕೆಡಿಸಿಯಾನೆ ಎಂದರೆ ಕೆಡಿಸೋದಿಲ್ಲ. ಅದು ಹೇಗೆ ಎಂದರೆ—ಈ ಅರವತ್ತುನಾಲ್ಕು ತಂತ್ರವು ಶೂದ್ರಾದಿಗಳಿಗೆ ಹೇಳಿದ್ದು. ಚಂದ್ರಕಲಾಷ್ಟಕ—

[1] ಕ ಪುಸ್ತಕದಲ್ಲಿ ಈ ಪಾಠ ಇಲ್ಲ.

ಚಂದ್ರಕಲಾ ಜ್ಯೋತ್ಸ್ನಾವತೀ ಕಲಾನಿಧಿ ಕುಲಾರ್ಣವ ಕುಲೇಶ್ವರೀ ಭುವನೇಶ್ವರೀ ಬಾರ್ಹಸ್ಪತ್ಯ ದೂರ್ವಾಸಮತ ಈ ಎಂಟು ತಂತ್ರದಲ್ಲಿಯೂ ಬ್ರಹ್ಮ ಕ್ಷತ್ರಿಯ ವೈಶ್ಯರಿಗೆ ದಕ್ಷಿಣಾಚಾರದಲ್ಲಿ ಅನುಷ್ಠಾನ, ಶೂದ್ರರಿಗೆ ವಾಮಾಚಾರದಲ್ಲಿ ಅನುಷ್ಠಾನ. ಶುಭಾಗಮತಂತ್ರ ಐದರಲ್ಲಿ ಶೂದ್ರರು ಹೊರಗಾಗಿ ಬ್ರಹ್ಮಕ್ಷತ್ರಿಯವೈಶ್ಯರು ಮೂರು ವರ್ಣದವರಿಗೂ ಅಧಿಕಾರವುಂಟು. ಶುಭಾಗಮಪಂಚಕ ವೈದಿಕಾಚಾರದಲ್ಲಿ ಅನುಷ್ಠಾನ, ಐದು—ವಸಿಷ್ಠ ಸನಕ ಶುಕ ಸನಂದನ ಸನತ್ಕುಮಾರರಿಂದ ಹೇಳಲ್ಪಟ್ಟಿತ್ತು. ಇದೆ ಸಮಯಾಚಾರವೆಂಬುದು. ಲಕ್ಷ್ಮೀಧರಾಚಾರ್ಯರು ಶುಭಾಗಮಪಂಚಕವನು ಭಗವತ್ಪಾದಾಚಾರ್ಯರ ಸಮಯಮತವನು ಅನುಸರಿಸಿ ವ್ಯಾಖ್ಯಾನವ ಮಾಡಿದರು. ಚಂದ್ರಕಲಾವಿದ್ಯೆ ಕುಲಸಮಯಾಚಾರ ಎರಡು ಮಾರ್ಗವು ಹೇಳಿದ್ದರಿಂದ ಮಿಶ್ರಕವೆಂದು ವಿದ್ವಾಂಸರು ಹೇಳುವರು. ಅಲ್ಲಿ

[1] ತಂತ್ರಾಣಿ ಕುಲಮಾರ್ಗಂ ಚ[1] ಪರಿತ್ಯಾಜ್ಯಂ ಹಿ ಶಾಂಕರಿ

ಎಂಬ ಈಶ್ವರವಚನದಿಂದ ಚತುಃಷಷ್ಟಿತಂತ್ರದ ಚಂದ್ರಕಲಾಷ್ಟಕವಿದ್ಯದಲ್ಲಿ ಇದ್ದ ಕೌಲಾಚಾರವನು ಸಮಯಾಚಾರದವರು ಬಿಡುವದು. ಸಮಯತತ್ತ್ವರೂಪವನು 'ತವಾಧಾರೇ ಮೂಲೇ' (ಶ್ಲೋ. ೪೦) ಎಂಬ ಶ್ಲೋಕದ ಟೀಕಿನಲ್ಲಿ ವಿವರವಾಗಿ ಬರದೇನು. ಚಂದ್ರಕಲಾವಿದ್ಯಾಷ್ಟಕದಲ್ಲಿ ಹದಿನಾರು ನಿತ್ಯೆಗಳನು ಪ್ರಧಾನವಾಗಿ ಹೇಳಿ ಇಹದು. ಅದರಿಂದ ಕುಲಸಮಯಾಚಾರ ಕೂಡಿ ಇಹದು. ಶುಭಾಗಮ ಪಂಚಕದಲ್ಲಿ ಹದಿನಾರು ನಿತ್ಯೆಗಳು ಪ್ರಧಾನವಲ್ಲ. ಅಂಗಮಾತ್ರವಾಗಿ ಹೇಳಿ ಇಹದರಿಂದ ಕೇವಲ ಸಮಯಾಚಾರ ಪ್ರತಿಪಾದಕ. ಶುಭಾಗಮ ಪಂಚಕದ ವಸಿಷ್ಠಸಂಹಿತೆಯಲ್ಲಿ ಶಿವನು ಈಶ್ವರಿಗೆ ಹೇಳಿದ ವಚನ—

'ಶೃಣು ದೇವಿ ಪ್ರವಕ್ಷ್ಯಾಮಿ ನಿತ್ಯಾಷೋಡಶಿಕಂ ತಥಾ
ನ ಕಸ್ಯಚಿನ್ಮಯಾಖ್ಯಾತಂ ಸರ್ವತಂತ್ರೇಷು ಗೋಪಿತಮ್

ತತ್ರಾದೌ ಪ್ರಥಮಾ ನಿತ್ಯಾ ಮಹಾತ್ರಿಪುರಸುಂದರೀ
ತತಃ ಕಾಮೇಶ್ವರೀ ನಿತ್ಯಾ ನಿತ್ಯಾ ಚ ಭಗಮಾಲಿನೀ

ನಿತ್ಯಕ್ಲಿನ್ನಾ ತಥಾ ಚೈವ ಭೇರುಂಡಾ ವಹ್ನಿವಾಸಿನೀ
ಮಹಾವಿಶ್ವೇಶ್ವರೀ ರೌದ್ರೀ ತ್ವರಿತಾ ಕುಲಸುಂದರೀ

ನಿತ್ಯಾ ನೀಲಪತಾಕಾ ಚ ವಿಜಯಾ ಸರ್ವಮಂಗಳಾ
ಜ್ವಾಲಾಮಾಲಿನಿಚಿದ್ರೂಪಾ ಏತಾ ನಿತ್ಯಾಸ್ತು ಷೋಡಶ

ಪ್ರತಿಪತ್ಪ್ರಭೃತೌ ದೇವ್ಯಾಃ ಪೌರ್ಣಮಾಸ್ಯಂತಮರ್ಚಯೇತ್
ಏಕಾದಿವೃದ್ಧ್ಯಾ ಹಾನ್ಯಾ ಚ ದರ್ಶಾಸ್ತಂ ದೇವಿ ವಿಗ್ರಹಮ್'

[1] ಮಿಶ್ರಕಂ ಕೌಲಮಾರ್ಗಂ ಚ.

ಈ ಹದಿನಾರು ನಿತ್ಯೆಗಳು ಅಷ್ಟವರ್ಗಾತ್ಮಕವಾಗಿ ಶಿವಚಕ್ರದ ಅಷ್ಟದಳದಲ್ಲಿ ಮೂಡಲಾದಿಯಾಗಿ ಇಹದು. ಶಕ್ತಿಚಕ್ರದ ಅಷ್ಟಕೋಣದಲ್ಲಿ ಒಂದೊಂದು ಕೋಣದಲ್ಲಿ ತ್ರಿಪುರಸುಂದರ್ಯಾದಿ ಎರಡೆರಡು ಶಕ್ತಿಗಳು ಕ್ರಮದಲ್ಲಿ ಇಹದು. ಈ ಹದಿನಾರು ನಿತ್ಯೆಗಳೆ ಹದಿನಾರು ಸ್ವರಾತ್ಮಕವಾಗಿ ಶಿವಚಕ್ರದ ಹದಿನಾರುದಳಗಳಲ್ಲಿ ಇಹದು. ಶಕ್ತಿಚಕ್ರದ ದ್ವಿದಶಾರದಲ್ಲಿ [1] ಇಹವು.[1] ಶಿವಚಕ್ರದ ಮೇಖಲಾತ್ರಯಭೂಪುರತ್ರಯವು ಬಿಂದುತ್ರಿಕೋಣದಲ್ಲಿ ಅಂತರ್ಭಾವ. ಈ ಪ್ರಕಾರದಲ್ಲಿ ನಿತ್ಯೆಗಳು ಚಕ್ರದಲ್ಲಿ ಅಂತರ್ಭಾವ. ಇದು ಮೇರು ಪ್ರಸ್ತಾರವೆಂಬುದು. ಅದುಕಾರಣ ಚಂದ್ರಕಲಾವಿದ್ಯದಲ್ಲಿ ಪ್ರಧಾನವಾದ ನಿತ್ಯೆಗಳು ಸಮಯಮತದ ಚಕ್ರವಿದ್ಯದಲ್ಲಿ ಅಂಗವಾಗಿ ಇಹದು.

ಸನಂದನಸಂಹಿತೆಯಲ್ಲಿ ಋಷಿಗಳಿಗೆ ಸನಂದನ ಹೇಳಿದ ಪ್ರಕಾರ ಈ ಹದಿನಾರು ನಿತ್ಯಾತ್ಮಕವಾದ ಪಂಚಾಶದ್ವರ್ಣವು ಚಕ್ರದಲ್ಲಿ ಅಂತರ್ಭಾವ. ಅದು ಹೇಗೆ ಎಂದರೆ—[2] ಪಂಚದಶಾಕ್ಷರೀ ಮಂತ್ರದ ಮೊದಲಕ್ಷರದಲ್ಲಿ ಇದ್ದ ಅಕಾರಾದಿ ವಿಸರ್ಗದಿಂದ ಸಂಗೃಹೀತವಾದ[2] ಹದಿನಾರು ಸ್ವರಾಕ್ಷರವು ಬಿಂದುಸ್ಥಾನದಲ್ಲಿ ಅಂತರ್ಭೂತವಾಗಿ ಇಹದು. ಕಕಾರಾದಿ ಮಕಾರಪರಿಯಂತರವಾದ ಇಪ್ಪತ್ತೈದಕ್ಷರವು ಪಾಶಾಂಕುಶಬೀಜಯುಕ್ತವಾಗಿ ಅಷ್ಟಕೋಣದಲ್ಲಿಯೂ ದಶಕೋಣದ್ವಯದಲ್ಲಿಯೂ ಅಂತರ್ಭೂತವಾಗಿ ಇಹವು. ಮಿಕ್ಕ ಯಕಾರಾದಿಯಾದ ಒಂಭತ್ತಕ್ಷರವು ಎರಡಾವೃತ್ತಿಯಾಗಿ ಹದಿನಾಲ್ಕು ಕೋಣದಲ್ಲಿಯೂ ಶಿವಚಕ್ರ ನಾಲ್ಕರಲ್ಲಿಯೂ ಇಹವು. ಈ ಪ್ರಕಾರ ಪಂಚಾಶದ್ವರ್ಣಾತ್ಮಕವಾದ ನಿತ್ಯೆಗಳಿಗೆ ಚಕ್ರದಲ್ಲಿ [3]ಅಂತರ್ಗತತ್ವವ[3] ಹೇಳಿದ ಕೈಲಾಸಪ್ರಸ್ತಾರವೆಂಬುದು.

ಸನತ್ಕುಮಾರಸಂಹಿತೆಯಲ್ಲಿ ನಿತ್ಯೆಗಳಿಗೆ ಚಕ್ರದ ಅಂಗತ್ವವ ಹೇಳಿದ ಪ್ರಕಾರ—ನಿತ್ಯೆಗಳು ಹದಿನಾರು, ಯೋಗಿನೀಗಳು ಹನ್ನೆರಡು, ವಶಿನ್ಯಾದಿ ಎಂಟು, ಈ ಮೂವತ್ತಾರು ಬಿಂದು ತ್ರಿಕೋಣವ ಬಿಟ್ಟು ಅಷ್ಟಕೋಣದಲ್ಲಿ ಒಂದೊಂದು ಕೋಣಕ್ಕೆ ನಾಲ್ಕು ನಾಲ್ಕು ಆಗಿ ಮೂವತ್ತೆರಡ ಅಂತರ್ಭಾವಿಸಿ ಮಿಕ್ಕ ನಾಲ್ಕನು ಮತ್ತೆಯೂ ಷೋಡಶ ನಿತ್ಯೆಗಳನು ದ್ವಾದಶಯೋಗಿನೀಗಳನು ಅಷ್ಟವಶಿನೀಗಳನು ನಾಲ್ಕು ಗಂಧಾಕರ್ಷಿಣೀಮೊದಲಾದವರನು ಕೂಡಾ ನಾಲ್ವತ್ತನಾಲ್ಕನು ಬಿಂದುಸ್ಥಾನದಲ್ಲಿಯೂ ನಾಲ್ವತ್ತುಮೂರು ಕೋಣದಲ್ಲಿಯೂ ಅಂತರ್ಭಾವಿಸುವುದು. ಈ ಪ್ರಕಾರ ಭೂಪ್ರಸ್ತಾರವೆಂಬುದು.

ಯೋಗಿನೀದ್ವಾದಶ ವಶಿನ್ಯಷ್ಟಕ ಗಂಧಾಕರ್ಷಿಣೀ ಮೊದಲಾದ ನಾಲ್ಕು ಇವರ ನಾಮಗಳು 'ಸವಿತ್ರೀಭಿರ್ವಾಚಾಂ' (ಶ್ಲೋ. ೧೭) ಎಂಬ ಶ್ಲೋಕದ ಟೀಕಿನಲ್ಲಿ ಬರದು ಅದೆ.

---

[1] ಅಂತರ್ಭೂತವೆಂದರ್ಥ [2] ಪಂಚದಶಾಕ್ಷರೀ ಮಂತ್ರದಲ್ಲಿರುವ ಏಕಾರಾದಿಯಾದ ಅಕಾರ ವಿಸರ್ಗರೂಪವಾದ ಸಕಾರಗಳಿಂದ—ಎಂದರ್ಥ [3] ಅಂಗತ್ವವ (ಖ).

ಈ ಶ್ಲೋಕದಲ್ಲಿ 'ಅಖಿಲಪುರುಷಾರ್ಥೈಕಘಟನಾಸ್ವತಂತ್ರಂ ತೇ ತಂತ್ರಂ ಪಶುಪತಿಃ ಕ್ಷಿತಿತಲಮವಾತೀತರತ್' ಎಂದು ಹೇಳಲ್ಪಟ್ಟ ಸರ್ವೇಶ್ವರಿಯ ತಂತ್ರವನು ಮೇಲಿನ ಶ್ಲೋಕದಲ್ಲಿ ಹೇಳುತ್ತಾರೆ—

ಶಿವಃ ಶಕ್ತಿಃ ಕಾಮಃ ಕ್ಷಿತಿರಥ ರವಿಃ ಶೀತಕಿರಣಃ
ಸ್ಮರೋ ಹಂಸಃ ಶಕ್ರಸ್ತದನು ಚ ಪರಾಮಾರಹರಯಃ
ಅಮೀ ಹೃಲ್ಲೇಖಾಭಿಸ್ತಿಸೃಭಿರವಸಾನೇಷು ಘಟಿತಾಃ
ಭಜಂತೇ ವರ್ಣಾಸ್ತೇ ಜನನಿ ತವ ನಾಮಾವಯವತಾಮ್ ೩೧

[ಹೇ ಜನನಿ! ಶಿವಃ ಶಕ್ತಿಃ ಕಾಮಃ ಕ್ಷಿತಿಃ ಅಥ ರವಿಃ ಶೀತಕಿರಣಃ ಸ್ಮರಃ ಹಂಸಃ ಶಕ್ರಃ ತದನು ಚ ಪರಾಮಾರಹರಯಃ ಇತ್ಯಮೀ ವರ್ಣಾಃ ತಿಸೃಭಿಃ ಹೃಲ್ಲೇಖಾಭಿಃ ಅವಸಾನೇಷು ಘಟಿತಾಃ ತೇ ವರ್ಣಾಃ ತವ ನಾಮಾವಯವತಾಂ ಭಜಂತೇ.]

ಹೇ ಜನನಿ—ಏ ತಾಯೇ! ಶಿವಃ—ಶಿವಶಬ್ದದಿಂದ ಶಿವತತ್ತ್ವಾತ್ಮಕವಾದ ಪ್ರಥಮನಿತ್ಯಾಸ್ವರೂಪವಾಗಿದ್ದ ತ್ರಿಪುರಸುಂದರೀ ಹೇಳಲ್ಪಟ್ಟಿತು. ಆ ತ್ರಿಪುರಸುಂದರಿಗೆ ಪ್ರಕೃತಿಭೂತವಾದ ಕಕಾರವುಂಟಾಯಿತು. ಶಕ್ತಿಃ—ಶಕ್ತಿ ಶಬ್ದದಿಂದ ಶಕ್ತಿತತ್ತ್ವಾತ್ಮಕವಾದ ಏಕಾರವುಂಟಾಯಿತು. ಕಾಮಃ—ಕಾಮಶಬ್ದದಿಂದ ಕಾಮಬೀಜಾತ್ಮಕವಾದ ಈಕಾರವುಂಟಾಯಿತು. ಕ್ಷಿತಿಃ—ಕ್ಷಿತಿಶಬ್ದದಿಂದ ಭೂಮಿಬೀಜವಾದ ಲಕಾರವುಂಟಾಯಿತು. ಅಥ—ಅಥಶಬ್ದದಿಂದ ಮೊದಲ ಖಂಡ ಮುಗಿದುದಕ್ಕೆ ಗುರುತು. ರವಿಃ—ರವಿಶಬ್ದದಿಂದ ಸೂರ್ಯಖಂಡಾತ್ಮಕವಾದ ಹಕಾರವುಂಟಾಯಿತು. ಶೀತಕಿರಣಃ–ಶೀತಕಿರಣಶಬ್ದದಿಂದ ಚಂದ್ರನ ಬೀಜವಾದ ಸಕಾರವುಂಟಾಯಿತು. ಸ್ಮರಃ—ಸ್ಮರಶಬ್ದದಿಂದ ಮನ್ಮಥಬೀಜಕ್ಕೆ ಪ್ರಕೃತಿಭೂತವಾದ ಕಕಾರವುಂಟಾಯಿತು. ಹಂಸಃ–ಹಂಸಶಬ್ದದಿಂದ ಸೂರ್ಯಗೆ ಪ್ರಕೃತಿಭೂತವಾದ ಹಕಾರವುಂಟಾಯಿತು. ಶಕ್ರಃ–ಶಕ್ರಶಬ್ದದಿಂದ ಇಂದ್ರಬೀಜವಾದ ಲಕಾರವುಂಟಾಯಿತು. ತದನುಚ ಶಬ್ದದಿಂದ ಎರಡನೆಯ ಖಂಡ ಮುಗಿದುದಕ್ಕೆ ಗುರುತು. ಪರಾಮಾರ ಹರಯಃ—ಪರಾಶಬ್ದದಿಂದ ಚಂದ್ರಬೀಜವಾದ ಸಕಾರವುಂಟಾಯಿತು. ಮಾರಶಬ್ದದಿಂದ ಕಾಮಬೀಜಪ್ರಕೃತಿಭೂತವಾದ ಕಕಾರವುಂಟಾಯಿತು. ಹರಿಶಬ್ದದಿಂದ ಇಂದ್ರಬೀಜವಾದ ಲಕಾರವುಂಟಾಯಿತು. ಇತ್ಯಮೀ ವರ್ಣಾಃ–ಹನ್ನೆರಡು ಅಕ್ಷರಗಳು. ತಿಸೃಭಿಃ ಹೃಲ್ಲೇಖಾಭಿಃ ಅವಸಾನೇಷು ಘಟಿತಾಃ–ಮೂರು ಹ್ರೀಂಕಾರಗಳಿಂದ ಮೂರು ಖಂಡಗಳ ಕಡೆಯಲ್ಲಿ ಕೂಡಿಸಿಕೊಂಡು. ತೇ ವರ್ಣಾಃ ತವ ನಾಮಾವಯವತಾಂ ಭಜಂತೇ–ಕಕಾರಾದಿಯಾದ ಹನ್ನೆರಡು ಅಕ್ಷರವು ನಿನ್ನ ತ್ರಿಪುರಸುಂದರೀಮಂತ್ರದ ಅವಯವವನು ಕೂಡುವದು.

ಇಲ್ಲಿಗೆ ಬರೆಯತಕ್ಕ ಅರ್ಥ—ಕಕಾರ ಏಕಾರ ಈಕಾರ ಲಕಾರ ಈ ನಾಲ್ಕು ಅಕ್ಷರವು ಅಗ್ನಿಖಂಡವು. ಹಕಾರ ಸಕಾರ ಕಕಾರ ಹಕಾರ ಲಕಾರ ಈ ಐದು ಅಕ್ಷರವು ಸೂರ್ಯಖಂಡವು. ಅಗ್ನಿ ಸೂರ್ಯಖಂಡದ ಮಧ್ಯದ ರುದ್ರಗ್ರಂಥಿ ಸ್ಥಾನದಲ್ಲಿ ಹ್ರೀಂಕಾರವ ಕೂಡುವದು. ಸಕಾರ ಕಕಾರ ಲಕಾರ ಈ ಮೂರು ಅಕ್ಷರವು ಸೋಮ ಖಂಡವು. ಈ ಸೂರ್ಯಸೋಮಖಂಡದ ಮಧ್ಯದ ವಿಷ್ಣು ಗ್ರಂಥಿಸ್ಥಾನದಲ್ಲಿ ಮತ್ತೆ ಒಂದು ಹ್ರೀಂಕಾರವ ಕೂಡುವದು. ತುರೀಯವಾದ ಹದಿನಾರನೆ ಅಕ್ಷರ ರಹಸ್ಯ. ಅದು ಚಂದ್ರಕಲಾಖಂಡ. ಸೋಮಖಂಡ ಚಂದ್ರ ಕಲಾಖಂಡದ ಮಧ್ಯದ ಬ್ರಹ್ಮಗ್ರಂಥಿ ಸ್ಥಾನದಲ್ಲಿ ಮತ್ತೆ ಒಂದು ಹ್ರೀಂಕಾರವ ಕೂಡುವದು. ಇದಕ್ಕೆ ಸಮ್ಮತಿವಚನ—

'ತ್ರಿಖಂಡೋ ಮಾತೃಕಾಮಂತ್ರಃ ಸೋಮಸೂರ್ಯಾನಲಾತ್ಮಕಃ'

ಎಂದು ಅವರೋಹಣ ಕ್ರಮದಲ್ಲಿ ಹೇಳಿದ್ದರಿಂದ ಮೂರುಖಂಡ ಹೇಳಲ್ಪಟ್ಟಿತ್ತು. ಆ ತ್ರಿಖಂಡವು ಜ್ಞಾನಶಕ್ತಿ ಇಚ್ಛಾಶಕ್ತಿ ಕ್ರಿಯಾಶಕ್ತ್ಯಾತ್ಮಕವು. ಜಾಗ್ರತ್ಸ್ವಪ್ನ ಸುಷುಪ್ತ್ಯವಸ್ಥಾತ್ರಯಾತ್ಮಕವು. ಸತ್ತ್ವರಜಸ್ತಮೋಗುಣಾತ್ಮಕವು. ವಿಶ್ವ ತೈಜಸ ಪ್ರಾಜ್ಞವೆಂಬ ಮೂರುವಿಧ ಜೀವರೂಪಾತ್ಮಕವು. ಇಂಥಾ ತ್ರಿಪುರ ಸುಂದರಿಯ ಮಂತ್ರಕ್ಕೆ ಹದಿನಾರು ಅಕ್ಷರಗಳು ಹದಿನಾರು ನಿತ್ಯಾತ್ಮಕವಾದ ಚಂದ್ರಕಲೆಗಳ ಹೇಳೊದು. ಹದಿನಾರನೆ ಅಕ್ಷರದಿಂದ ಪ್ರತಿಪಾದಿಸಿದ ನಿತ್ಯಾತ್ಮಕ ವಾದ ಚಂದ್ರಕಲೆ ಜ್ಞಾನಾನಂದಸ್ವರೂಪವಾಗಿ ಇಹದು. ಆ ಕಲೆಯ ಛಾಯೆ ವಿಶುದ್ಧಿಚಕ್ರದ ಹದಿನಾರು ದಳಗಳಲ್ಲಿ ಕಲಾಸ್ವರೂಪವಾಗಿ ತಿರುಗುವುದು. ಅದರಿಂದ ಹದಿನಾರನೆ ಕಲೆ ಪ್ರಧಾನವಾಗಿ ಇಹದು. ಆ ಕಲೆಗೆ ತ್ರಿಪುರ ಸುಂದರ್ಯಾದಿ ಹದಿನೈದು ನಿತ್ಯೆಗಳು ಅಂಗಭೂತವೆಂದು ಮೊದಲ ಶ್ಲೋಕದಲ್ಲಿ ಹೇಳಿದೆ. ಪ್ರಥಮನಿತ್ಯಕ್ಕೆ ತ್ರಿಪುರಸುಂದರಿಯೆಂದು ನಾಮ ಮಾತ್ರವೆ, ಹದಿನಾರನೆ ಕಲೆಯಾದ ತ್ರಿಪುರಸುಂದರಿಯಲ್ಲ. ಹದಿನಾರನೆ ಕಲೆಯು ಗುರುಮುಖದಿಂದ ತಿಳಿಯಬೇಕು. ಹಾಗೆಂದು ಬರೆಯದಿದ್ದರೆ ವ್ಯಾಖ್ಯಾನವು ಪೂರ್ಣವಾಗದು. ಅದರಿಂದ ಆ ಕಲೆಯನು ಸನ್ಮಾರ್ಗವಾದ ಒಳ್ಳೆಯ ಶಿಷ್ಯನಿಗೆ ಉಪದೇಶವಮಾಡಿ ದೇವೆಂದು ಲಕ್ಷ್ಮೀಧರಾಚಾರ್ಯರು ನಿರೂಪಿಸಿ ಇದ್ದಾರೆ. ಆರು ಈ ಟೀಕ ನೋಡಿ ಆ ಕಲೆಯ ತಿಳಿದುಕೊಂಡಾರು ಅವರು ಲಕ್ಷ್ಮೀಧರಾಚಾರ್ಯರ ಗುರು ಭಾವನೆಯ ಮಾಡಿಕೊಂಡು ಶಕಾರರೇಫ ಈಕಾರ ಬಿಂದು ಕೂಡಿದ 'ಶ್ರೀಂ' ಎಂಬ ವರ್ಣವ ತಿಳಿದುಕೊಂಬರು. ಅದಕ್ಕೆ ಶ್ರೀಬೀಜವೆಂದು ನಾಮ, ಶ್ರೀಬೀಜ ಪ್ರಧಾನವಾದ ವಿದ್ಯೆಯಾಗಲಾಗಿ ಶ್ರೀ ವಿದ್ಯೆಯೆಂದು ಪ್ರಸಿದ್ಧ. ಮಂತ್ರದ ಹದಿನಾರಕ್ಷರಾತ್ಮಕವಾದ ಹದಿನಾರು ನಿತ್ಯೆಗಳು ಶುಕ್ಲಪಕ್ಷ ಕೃಷ್ಣಪಕ್ಷದಲ್ಲಿ ಪಾಡ್ಯ ವಾದಿಯಾದ ತಿಥಿರೂಪಗಳಾಗಿ ಇಹವು. ಅವು ಚಂದ್ರಕಲಾಪ್ರಧಾನವಾದ ಕಾರಣ ಚಂದ್ರನೆ ತಿಥಿರೂಪವೆಂದು ಜ್ಯೋತಿಶ್ಶಾಸ್ತ್ರದಲ್ಲಿ ಸಮ್ಮತಿ—

'ಪ್ರತಿಪನ್ನಾಮ ವಿಜ್ಞೇಯಾ ಚಂದ್ರಸ್ಯ ಪ್ರಥಮಾ ಕಲಾ
[1]ದ್ವಿತೀಯಾದ್ಯಾಃ ಕಲಾ ಏವಂ[1] ಪಕ್ಷಯೋಃ ಶುಕ್ಲಕೃಷ್ಣಯೋಃ'

ಇದರ ಅರ್ಥ—ಸೂರ್ಯಮಂಡಲದಿಂದ ಹೊರಟ ಚಂದ್ರನ ಮೊದಲನೆ ಕಲೆ ಶುಕ್ಲಪಕ್ಷದ ಪಾಡ್ಯ, ಎರಡನೆ ಕಲೆ ಶುಕ್ಲಪಕ್ಷ ಬಿದಿಗೆ. ಈ ಪ್ರಕಾರದಲ್ಲಿ ಸೂರ್ಯಮಂಡಲವ ಬಿಟ್ಟು ಹೊರಟ ಹದಿನೈದನೆ ಕಲೆ ಪೌರ್ಣಮಿಯೆಂಬ ನಾಮಧೇಯ. ಕೃಷ್ಣಪಕ್ಷದಲ್ಲಿ ಸೂರ್ಯಮಂಡಲವ ಪ್ರವೇಶಿಸಿದ ಚಂದ್ರನ ಮೊದಲನೆ ಕಲೆ ಕೃಷ್ಣಪಕ್ಷದ ಪಾಡ್ಯ. ಎರಡನೆ ಪ್ರವೇಶಿಸಿದ ಕಲೆ ದ್ವಿತೀಯೆ. ಈ ಪ್ರಕಾರದಲ್ಲಿ ಸೂರ್ಯಮಂಡಲವ ಪ್ರವೇಶಿಸಿದ ಚಂದ್ರನ ಹದಿನೈದನೆ ಕಲೆ ಅಮಾವಾಸ್ಯೆ ಎಂಬ ನಾಮ. ಅದುಕಾರಣ ಕೌಲಮತದವರಿಗೆ ಚಂದ್ರಕಲಾತ್ಮಕವಾದ ಹದಿನಾರು ನಿತ್ಯೆಗಳಿಗೆ ಒಂದೊಂದು ದಿವಸದಲ್ಲಿ ಒಂದು ಒಂದು ನಿತ್ಯಕ್ಕೆ ಪೂಜೆ. ಸಮಯ ಮತದಲ್ಲಿ ತ್ರಿಪುರಸುಂದರೀ ಆದಿಯಾದ ಹದಿನೈದು ನಿತ್ಯೆಗಳಿಗೆ ಚಿದ್ರೂಪ ಎಂಬ ಹದಿನಾರನೆ ಕಲೆಗೆ ಹದಿನೈದು ದಿನದಲ್ಲಿಯೂ ಪೂಜೆ.

ಈ ಚಂದ್ರಕಲಾತ್ಮಕವಾದ ಹದಿನಾರುನಿತ್ಯೆಗಳು ವಿಶುದ್ಧಿಚಕ್ರದ ಹದಿನಾರು ದಳಗಳಲ್ಲಿ ಮೂಡಲು ಆದಿಯಾಗಿ ಇಹವು. ಆ ವಿಶುದ್ಧಿಚಕ್ರದ ಕೆಳಗೆ ಅನಾಹತ ಚಕ್ರದ ಹನ್ನೆರಡು ದಳಗಳಲ್ಲಿಯೂ ಪ್ರದಕ್ಷಿಣವಾಗಿ ದ್ವಾದಶ ಸೂರ್ಯರು ಇಹರು. ಆ ದ್ವಾದಶ ಸೂರ್ಯರು ಹನ್ನೆರಡು ಮಾಸಗಳಿಗೂ ಅಧಿಕಾರರು.

ಇದು ಸನತ್ಕುಮಾರಸಂಹಿತೆಯಲ್ಲಿ ಇಪ್ಪತ್ತೊಂದು ಶ್ಲೋಕದಲ್ಲಿ ಹೇಳಿದೆ. ಅದರ ಅರ್ಥವ ಸಂಕ್ಷೇಪದಲ್ಲಿ ಹೇಳಿಹೇನು. ಸೂರ್ಯಚಂದ್ರರು ದೇವಯಾನ ಪಿತೃಯಾನಾತ್ಮಕವಾದ ಇಡಾಪಿಂಗಳಾನಾಡೀಮಾರ್ಗದಿಂದ ದಿವಾರಾತ್ರಿ ಸಂಚರಿಸುವರು. ಚಂದ್ರನು ವಾಮನಾಡೀಮಾರ್ಗದಿಂದ ಸಂಚರಿಸಿ ಎಪ್ಪತ್ತೆರಡು ಸಾವಿರನಾಡೀಮಾರ್ಗವ ಅಮೃತದಿಂದ ನನೆಸುವನು. ಸೂರ್ಯನು ದಕ್ಷಿಣ ನಾಡೀಮಾರ್ಗದಿಂದ ಸಂಚರಿಸಿ ಆ ಚಂದ್ರನಿಂದ ಉಂಟಾದ ಅಮೃತವರುಷವನು ಗ್ರಹಿಸುವನು. ಈ ಚಂದ್ರಸೂರ್ಯರು ಆಧಾರ ಚಕ್ರದಲ್ಲಿ ಕೂಡಿ ಇಹರು. ಅದು ಅಮಾವಾಸ್ಯೆ, ಅದು ಕೃಷ್ಣಪಕ್ಷದ ತಿಥಿಗಳ ರೂಪಾಗಿ ಇಹದು. ಅದರಿಂದ ಕುಂಡಲಿನೀಶಕ್ತಿಯು ಆಧಾರಕುಂಡದಲ್ಲಿ ಸೂರ್ಯನಲ್ಲಿ ಐಕ್ಯವಾದ ಚಂದ್ರ ಮಂಡಲಮಧ್ಯದಿಂದ ಸುರಿವ ಅಮೃತಪರಿಪೂರಿತವಾದ ಕುಂಡದಲ್ಲಿ ನಿದ್ರೆ ಮಾಡುತ್ತಿಹಳು ಕುಂಡಲಿನೀಶಕ್ತಿಯ ನಿದ್ರಾವಸ್ಥೆ ಕೃಷ್ಣಪಕ್ಷವೆಂದು ಹೇಳುವರು. ಯೋಗಿಯಾದವನು ಆವಾಗ ಸಮಾಹಿತಚಿತ್ತನಾಗಿ ಚಂದ್ರಸ್ಥಾನದಲ್ಲಿ ಸೂರ್ಯನನು ಸೂರ್ಯಸ್ಥಾನದಲ್ಲಿ ಚಂದ್ರನನು ವಾಯುವಿನಿಂದ ವಿಪರೀತ ಮಾಡಿಯಾನು. ಆಗ ಚಂದ್ರಸೂರ್ಯರಿಗೆ ಅಮೃತವ ಸುರಿವುದಕ್ಕೂ ಗ್ರಹಿಸುವುದಕ್ಕೂ ಸಾಮರ್ಥ್ಯವಿಲ್ಲ. ವಾಯುವಿನಿಂದ ಸ್ವಾಧಿಷ್ಠಾನಾಗ್ನಿಯ

[1] ದ್ವಿತೀಯಾದ್ಯಾ ದ್ವಿತೀಯಾದ್ಯಾಃ ಎಂಬ ಪಾಠ.

ಪ್ರಜ್ವಲನವಮಾಡಿ ಆಧಾರದಲ್ಲಿ ಇದ್ದ ಅಮೃತಕುಂಡವ ಶುಷ್ಕೀಭೂತವ ಮಾಡಿದರೆ ಅಲ್ಲಿಯ ಕುಂಡಲಿನೀಶಕ್ತಿ ನಿರಾಹಾರದಿಂದ ನಿದ್ರೆಯ ಬಿಟ್ಟು ಸರ್ಪದಹಾಗೆ ಫೂತ್ಕಾರವಮಾಡಿ ಗ್ರಂಥಿತ್ರಯವನು ಭೇದಿಸಿಕೊಂಡು ಸಹಸ್ರ ಕಮಲದಲ್ಲಿ ಇದ್ದ ಚಂದ್ರಮಂಡಲವ ಕಚ್ಚುವಳು. ಆ ಚಂದ್ರಮಂಡಲದಿಂದ ಸುರಿವಂಥಾ ಅಮೃತಧಾರೆಗಳಿಂದ ಸರ್ವದೇಹವು ನನೆವದು. ಆಜ್ಞಾಚಕ್ರದ ಮೇಲೆ ಇದ್ದ ಚಂದ್ರನ ಹದಿನೈದು ಕಲಾತ್ಮಕವಾದ ನಿತ್ಯೆಗಳು ಅದರ ಕೆಳಗೆ ಇದ್ದ ವಿಶುದ್ಧಿಚಕ್ರವ ಆಶ್ರಯಿಸಿ ಇಹವು. ಸಹಸ್ರಕಮಲದ ಮಧ್ಯದಲ್ಲಿ ಇಹ ಚಂದ್ರಮಂಡಲವು ಬಿಂದುಸ್ಥಾನವು. ಅಲ್ಲಿ ಇಹ ಕಲೆಯೂ ಜ್ಞಾನಾನಂದ ಸ್ವರೂಪವಾದ ಬ್ರಹ್ಮವೆಂದು ಹೇಳಲ್ಪಡುವದು. ಅದು ತ್ರಿಪುರಸುಂದರೀ ದೇವಿಯು. ಯೋಗೀಶ್ವರರಿಗೆ ಕುಂಡಲಿನೀ ಶಕ್ತಿಯು ಎಬ್ಬಿಸುವದಕ್ಕೆ ಶುಕ್ಲಪಕ್ಷದಲ್ಲಿ ಕೂಡುವದು. ಕೃಷ್ಣಪಕ್ಷದಲ್ಲಿ ಕೂಡದು. ಶುಕ್ಲಪಕ್ಷದ ಹದಿನೈದು ತಿಥಿಗಳು ಪೌರ್ಣಿಮೆಯೆನಿಸುವದು. ಕೃಷ್ಣಪಕ್ಷದ ಹದಿನಾರು ತಿಥಿಗಳು ಅಮಾವಾಸ್ಯೆಯೆನಿಸುವದು. ಅದರಿಂದ ಆಧಾರಚಕ್ರಸ್ಥಾನ ಕೇವಲ ಕತ್ತಲೆಯಾಗಿಹದು. ಸ್ವಾಧಿಷ್ಠಾನಚಕ್ರಸ್ಥಾನದಲ್ಲಿ ಸೂರ್ಯಕಿರಣಸಂಬಂಧದಿಂದ ಕತ್ತಲೆಯೂ ಬೆಳಕೂ ಕೂಡಿ ಇಹದು. ಮಣಿಪೂರ ಅಗ್ನಿಸ್ಥಾನವಾದರೂ ಅಲ್ಲಿ ಇದ್ದ ಜಲದಲ್ಲಿ ಸೂರ್ಯಕಿರಣಪ್ರತಿಬಿಂಬದಿಂದ ಅದು ಕತ್ತಲೆಯೂ ಬೆಳಕೂ ಕೂಡಿ ಇಹದು. ಅನಾಹತಚಕ್ರ ಸೂರ್ಯನಿಹದರಿಂದ ಜ್ಯೋತಿರ್ಲೋಕ. ವಿಶುದ್ಧಿಚಕ್ರವು ಚಂದ್ರಲೋಕ. ಆಜ್ಞಾಚಕ್ರವು ಚಂದ್ರಸ್ಥಾನವಾದಕಾರಣ ಸುಧಾಲೋಕ. ಆ ಎರಡು ಲೋಕದಲ್ಲಿಯೂ ಅನಾಹತಚಕ್ರದಲ್ಲಿ ಇದ್ದ ಸೂರ್ಯನ ಕಿರಣಸಂಪರ್ಕದಿಂದ ಬೆಳುದಿಂಗಳು ಇಲ್ಲ. ಸಹಸ್ರಕಮಲವು ಬೆಳುದಿಂಗಳು ತುಂಬಿ ಇಹ ಲೋಕ. ಅಲ್ಲಿ ಇಹ ಚಂದ್ರನು ನಿತ್ಯಕಲಾಯುಕ್ತನು. ಆ ಚಂದ್ರಬಿಂಬವೆ ಶ್ರೀಚಕ್ರವು. ಅಲ್ಲಿ ಇಹ ಕಲೆ ಸಾದಾಖ್ಯವು, ಅದರಿಂದ ಆಧಾರಚಕ್ರ ತ್ರಿಕೋಣವು, ಸ್ವಾಧಿಷ್ಠಾನಚಕ್ರವು ಅಷ್ಟಕೋಣವು, ಮಣಿಪೂರಚಕ್ರವು ದಶಕೋಣವು, ಅನಾಹತಚಕ್ರವು ಮತ್ತೊಂದು ದಶಕೋಣವು, ವಿಶುದ್ಧಿಚಕ್ರವು ಹದಿನಾಲ್ಕು ಕೋಣವು. ಆಜ್ಞಾಚಕ್ರವು ಶಿವಚಕ್ರ ನಾಲ್ಕು, ಸಹಸ್ರಕಮಲ ನಾಲ್ಕು ಕೋಣವಾದ ಬಿಂದುಸ್ಥಾನ. ಆಜ್ಞಾಚಕ್ರದಮೇಲೆ ಇಹ ಚಂದ್ರನಿಗೆ ಹದಿನೈದು ಕಲೆಗಳು, ಸಹಸ್ರಕಮಲದಲ್ಲಿ ಶ್ರೀಚಕ್ರರೂಪವಾದ ಚಂದ್ರಬಿಂಬದಲ್ಲಿ ಒಂದು ಕಲೆ. ಆ ಕಲೆಯೆ ಆಜ್ಞಾಚಕ್ರದಲ್ಲಿ ಇಹ ಹದಿನೈದುಕಲಾಯುಕ್ತವಾದ ಚಂದ್ರನಲ್ಲಿ ಪ್ರತಿಪಾದಿಸಿ ಇಹದು. ಅದರಿಂದ ಚಂದ್ರನಿಗೆ ಹದಿನಾರು ಕಲೆ. ಇದಕ್ಕೆ ಸಮ್ಮತಿವಚನ.

> ' ಷೋಡಶೇಂದೋಃ ಕಲಾ ಭಾನೋರ್ದ್ವಿರ್ದ್ವಾದಶ ದಶಾನಲೇ
> ಸಾ ಪಂಚಾಶತ್ಕಲಾ ಜ್ಞೇಯಾ ಮಾತೃಕಾಚಕ್ರರೂಪಿಣೀ '

ಇದಕ್ಕೆ ಅರ್ಥ—ಚಂದ್ರನಕಲೆ ಹದಿನಾರು. ಸೂರ್ಯನಕಲೆ ಇಪ್ಪತ್ತನಾಲ್ಕು. ಅಗ್ನಿಯ ಕಲೆ ಹತ್ತು. ಇವು ಕೂಡಾ ಐವತ್ತು ಮಾತೃಕಾಚಕ್ರಾತ್ಮಕ

ವಾದ ಐವತ್ತು ಅಕ್ಷರವಾಗಿ ಇಹವು. ಐವತ್ತು ಅಕ್ಷರವು ಪಂಚದಶಾಕ್ಷರೀ ಮಂತ್ರದಲ್ಲಿ ಅಂತರ್ಭಾವ. ಅದು ಹೇಗೆಂದರೆ—ಮಂತ್ರಾದಿಯಾದ ಕಕಾರ ದಿಂದಲೂ ಮಂತ್ರದ ಕಡೆಯ ಲಕಾರದಿಂದಲೂ ಉಂಟಾದ ಕಲಾಶಬ್ದದಿಂದ ಆ ಮಾತೃಕಾತ್ಮಕವಾದ ಐವತ್ತು ಅಕ್ಷರವು ಪಂಚದಶಾಕ್ಷರೀಮಂತ್ರದಲ್ಲಿ ಅಂತರ್ಭಾವ ಸನಕಾದಿಗಳಿಂದ ಹೇಳಲ್ಪಟ್ಟಿತ್ತು.

ಮಂತ್ರದಲ್ಲಿ ಇದ್ದ ನಾಲ್ಕು ಅನುಸ್ವಾರದಿಂದ ಬಿಂದುವೆಂದು ಹೇಳಲ್ಪಡುವುದು. ಆ ಬಿಂದುವಿನ ಮೇಲೆ ಇಹ ನಾದ ಬಿಂದುಲೀಲೆಯ ಸಂಗ್ರಹಿಸಿ ಇಹದು. ಈ ಪಂಚದಶಾಕ್ಷರೀಮಂತ್ರ ನಾದಬಿಂದುಕಲಾತ್ಮಕ. ಈ ಮಂತ್ರದಿಂದ ಪ್ರತಿಪಾದಕವಾದ ಶ್ರೀಚಕ್ರವು ನಾದಬಿಂದುಕಲಾತ್ಮಕವು ತ್ರಿಖಂಡವು. ಶ್ರೀಚಕ್ರದಮೇಲೆ ಇಹ ಸಾದಾಖ್ಯ ಕಲೆ ಶ್ರೀವಿದ್ಯೆಯೆಂದು ಹೇಳಲ್ಪಡುವದು. ಅದು ನಾದಬಿಂದುಕಲೆಗಳ ಅತಿಕ್ರಮಿಸಿ ಇಹದು.

ಈ ಐವತ್ತು ವರ್ಣಾತ್ಮಕವಾದ ಕಲೆಗಳು ಷೋಡಶನಿತ್ಯೆಗಳಲ್ಲಿ ಅಂತರ್ಭೂತವಾಗಿ ಇಹವು. ಅದು ಹೇಗೆಂದರೆ—ಸ್ವರ ಹದಿನಾರು, ಕಕಾರಾದಿ ತಕಾರ ಪರಿಯಂತರ ಹದಿನಾರು, ಥಕಾರ ಆದಿಯಾಗಿ ಸಕಾರಪರಿಯಂತರ ಹದಿನಾರು, ಈ ಮೂರು ಹದಿನಾರುಗಳು ಹದಿನಾರು ನಿತ್ಯೆಗಳಲ್ಲಿ ಅಂತರ್ಭೂತ. ಹಕಾರ ಆಕಾರ ಬೀಜವಾಗಲಾಗಿ ಹದಿನೈದನೆ ಸ್ವರದಮೇಲೆ ಇಹ ಬಿಂದುವಿನಲ್ಲಿ ಕೂಡಿ ಇಹದು. ಕ್ಷಕಾರವು ಕಕಾರ ಸಕಾರಗಳಲ್ಲಿ ಅಂತರ್ಭೂತವಾಗಿ ಇಹದು. ಈ ಹದಿನಾರು ನಿತ್ಯೆಗಳು ಮೂಲಮಂತ್ರದ ಹದಿನಾರು ಅಕ್ಷರಗಳಲ್ಲಿ ಐಕ್ಯವಾಗಿ ಇಹದು. ಆ ಮೂಲಮಂತ್ರ ಹದಿನಾರು ಅಕ್ಷರವು ಮಾತೃಕಾತ್ಮಕವಾದ ಐವತ್ತು ಅಕ್ಷರದಲ್ಲಿ ಐಕ್ಯವಾಗಿ ಇಹದು. ಐವತ್ತು ಅಕ್ಷರವು ಚಕ್ರದಲ್ಲಿ ಐಕ್ಯವಾಗಿ ಇಹದು.

ಅದು ಹೇಗೆಂದರೆ—ಯ ರ ಲ ವ ಶ ಷ ಸ ಹ ಎಂಬ ಅಂತಸ್ಥ ಊಷ್ಮಾಣಗಳು ಎಂಟು ಅಕ್ಷರವು ಅಷ್ಟಕೋಣದಲ್ಲಿ ಅಂತರ್ಭಾವ. ಕಕಾರಾದಿ ಯಾದ ಮಕಾರಪರಿಯಂತರವು ವರ್ಗಗಳ ಕಡೆಯ ಅಕ್ಷರ ಐದ ಬಿಟ್ಟು ಮಿಕ್ಕ ಇಪ್ಪತ್ತು ಅಕ್ಷರಗಳು ದಶಾರಯುಗ್ಮದಲ್ಲಿ ಅಂತರ್ಭೂತ. ವರ್ಗದ ಕಡೆಯ ಅಕ್ಷರಗಳು ಐದು, ಅನುಸ್ವಾರವಿಸರ್ಗಸಹಿತವಾದ ಸ್ವರಗಳು ಎರಡು, ಈ ಏಳು ಅಕ್ಷರ ಬಿಂದುಸ್ಥಾನದಲ್ಲಿ ಅಂತರ್ಭಾವ. ಕಡೆಯ ಹದಿನಾಲ್ಕು ಸ್ವರಗಳು ಚತುರ್ದಶಾರದಲ್ಲಿ ಅಂತರ್ಭಾವ. ಮೂಲಮಂತ್ರೈಕ್ಯವಾದ ಐವತ್ತು ಅಕ್ಷರವನು ಚಕ್ರದಲ್ಲಿ ಐಕ್ಯವ ಹೇಳಿದ್ದರಿಂದ ಮಂತ್ರಯಂತ್ರಕ್ಕೆ ಐಕ್ಯವೆಂದು ಸುಭಗೋದಯ ಮತಾನುಸಾರದಿಂದ ಹೇಳಲ್ಪಟ್ಟಿತ್ತು.

ಪೂರ್ಣೋದಯ ಮತಾನುಸಾರದಲ್ಲಿ ಮಂತ್ರಯಂತ್ರಕ್ಕೆ ಐಕ್ಯವ ಹೇಳಿದ ಪ್ರಕಾರ—[1] ಮೂಲಮಂತ್ರದ ಐಕ್ಯವಾದ ಐವತ್ತು ಅಕ್ಷರವು ಸೋಮಸೂರ್ಯಾ ನಲಾತ್ಮಕವಾದ ಖಂಡತ್ರಯವು ಚಕ್ರವು.[1] ಸ್ವರಾತ್ಮಕವಾದ ಚಂದ್ರನ ಹದಿನಾರು

---

[1] ಮೂಲಮಂತ್ರ ಮತ್ತು ಶ್ರೀಚಕ್ರ ಎರಡು ಸೋಮಸೂರ್ಯಾನಲಾತ್ಮಕವಾದ ತ್ರಿಖಂಡ ವೆಂದರ್ಥ

ಕಲೆ ಮಂತ್ರದ ಸೋಮಖಂಡದಲ್ಲಿ ಅಂತರ್ಭಾವ. ಕಕಾರಾದಿಯಾದ ಸೂರ್ಯನ ಇಪ್ಪತ್ತನಾಲ್ಕುಕಲೆ ಮಂತ್ರದ ಸೂರ್ಯಖಂಡದಲ್ಲಿ ಅಂತರ್ಭಾವ. ಆ ಮಂತ್ರದ (ಸೂರ್ಯಖಂಡ ಯಂತ್ರದ) ಸೂರ್ಯಖಂಡದಲ್ಲಿ ಅಂತರ್ಭಾವ. ಮಕಾರಾದಿಯಾದ ಅಗ್ನಿಯ ಹತ್ತುಕಲೆ ಮಂತ್ರದ ಅಗ್ನಿಖಂಡದಲ್ಲಿ ಅಂತರ್ಭಾವ. ಆ ಮಂತ್ರದ ಅಗ್ನಿಖಂಡ ಯಂತ್ರದ ಅಗ್ನಿಖಂಡದಲ್ಲಿ ಅಂತರ್ಭಾವ. ಈ ಪ್ರಕಾರದಲ್ಲಿ ಕಲೆಗಳಿಗೂ ಮಂತ್ರಕ್ಕೂ ಯಂತ್ರಕ್ಕೂ ಐಕ್ಯವು.

ಸುಭಗೋದಯದಲ್ಲಿ ನಿತ್ಯೆಗಳ ಸ್ವರೂಪ ಹೇಳಿದ ವಚನ—

[1] ದರ್ಶಾದ್ಯಾಃ ಪೂರ್ಣಿಮಾಂತಾಶ್ಚ ಕಲಾಃ ಪಂಚದಶೈವ ತು
ಷೋಡಶೀ ತು ಕಲಾ ಜ್ಞೇಯಾ ಸಚ್ಚಿದಾನಂದರೂಪಿಣೀ

ಈ ಅರ್ಥವೆಲ್ಲವು ವೇದದಲ್ಲಿ ಬಹು ವಿಸ್ತಾರವಾಗಿ ಹೇಳಿದೆ. ಪ್ರಾಕೃತ ಟೀಕಿನಲ್ಲಿ ಬರೆಯಬಾರದು.

ಅಂತರಪೂಜೆಯಿಲ್ಲದೆ ಬಾಹ್ಯಪೂಜೆಯ ಮಾಡಬಾರದೆಂಬುದು ಸನತ್ಕುಮಾರ ಸಂಹಿತೆಯ ವಚನ—

ಬಾಹ್ಯಪೂಜಾ ನ ಕರ್ತವ್ಯಾ ಕರ್ತವ್ಯಾ ಬಾಹ್ಯಜಾತಿಭಿಃ
ಸಾ ಕ್ಷುದ್ರಫಲದಾ ನೃಣಾಂ ಐಹಿಕಾರ್ಥೈಕಸಾಧನಾತ್
ಬಾಹ್ಯಪೂಜಾರತಾಃ ಕೌಲಾಃ ಕ್ಷಪಣಾಶ್ಚ ಕಪಾಲಿಕಾಃ
ದಿಗಂಬರಾಶ್ಚೇತಿಹಾಸಾ ವಾಮಕಾಸ್ತಂತ್ರವಾದಿನಃ
ಅಂತರಾರಾಧನಪರಾ ವೈದಿಕಾ ಬ್ರಹ್ಮವಾದಿನಃ
ಜೀವನ್ಮುಕ್ತಾಶ್ಚರಂತ್ಯೇತೇ ತ್ರಿಷು ಲೋಕೇಷು ಸರ್ವದಾ

ಇದಕ್ಕೆ ಅರ್ಥ—ಕೌಲರು ಆಧಾರ ಚಕ್ರಪೂಜಕರು. ಕ್ಷಪಣರು ತ್ರಿಕೋಣ ಪೂಜಕರು. ಕಾಪಾಲಿಕದಿಗಂಬರರಿಗೆ ಎರಡುವಿಧ ಪೂಜೆ ಉಂಟು. ಬ್ರಹ್ಮವಾದಿಗಳಾರು ಎಂದರೆ, ಶುಭಾಗಮತತ್ತ್ವವೇದಿಗಳು. ಶುಭಾಗಮ ಪಂಚಕವ ಮೊದಲೇ ಹೇಳಿದೆ. ಯಂತ್ರಪೂಜಾಪ್ರಕಾರವು ಮೊದಲೇ ಕೆಲವು ಹೇಳಿದೆ. ಇನ್ನು ವಿವರವಾಗಿ ಬರದೇನು.

ಸ್ಮರಂ ಯೋನಿಂ ಲಕ್ಷ್ಮೀಂ ತ್ರಿತಯಮಿದಮಾದೌ ತವ ಮನೋಃ
ನಿಧಾಯೈಕೇ ನಿತ್ಯೇ ನಿರವಧಿಮಹಾಭೋಗರಸಿಕಾಃ
ಭಜಂತಿ ತ್ವಾಂ ಚಿಂತಾಮಣಿಗುಣನಿಬದ್ಧಾಕ್ಷವಲಯಾಃ
ಶಿವಾಗ್ನೌ ಜುಹ್ವಂತಃ ಸುರಭಿಘೃತಧಾರಾಹುತಿಶತೈಃ ೩೨

[1] ಅಮಾವಾಸ್ಯಾನಂತರವಾದ ಪಾಡ್ಯ ಮೊದಲು ಹುಣ್ಣಿಮೆಪರಿಯಂತವಾದ ಹದಿನೈದು ಕಲೆಗಳು ಹದಿನೈದು ನಿತ್ಯಗಳಿಂದ ಅಧಿಷ್ಠಿತವಾದದ್ದು, ಹದಿನಾರನೆ ಕಲೆಯು ಸಚ್ಚಿದಾನಂದ ರೂಪಿಣಿಯಾದ 'ಸಾದ' ಎಂಬ ತತ್ತ್ವವಾದುದರಿಂದ ಅದಕ್ಕೆ ಬೇರೆ ಅಧಿಷ್ಠಾತೃ ಇಲ್ಲ ಎಂದು ತಾತ್ಪರ್ಯ.

[ಹೇ ನಿತ್ಯೇ! ತವ ಮನೋಃ ಆದೌ ಸ್ಮರಂ ಯೋನಿಂ ಲಕ್ಷ್ಮೀಂ ಇದಂ ತ್ರಿತಯಂ ನಿಧಾಯ ನಿರವಧಿಮಹಾಭೋಗರಸಿಕಾಃ ಏಕೇ ಚಿಂತಾಮಣಿ ಗುಣನಿಬದ್ಧಾಕ್ಷವಲಯಾಃ ಶಿವಾಗ್ನೌ ತ್ವಾಂ ಸುರಭಿಘೃತಧಾರಾಹುತಿಶತೈಃ ಜುಹ್ವಂತೋ ಭಜಂತಿ.]

ಹೇ ನಿತ್ಯೇ–ಆದ್ಯಂತವಿಲ್ಲದವಳೇ!, ತವ ಮನೋಃ ಆದೌ ಸ್ಮರಂ ಯೋನಿಂ ಲಕ್ಷ್ಮೀಂ ಇದಂ ತ್ರಿತಯಂ ನಿಧಾಯ-ನಿನ್ನ ಪಂಚದಶಾಕ್ಷರೀಮಂತ್ರದ ಆದಿಯಲ್ಲಿ ಕಾಮಬೀಜ 'ಕ್ಲೀಂ' ಕಾರವನು ಭುವನೇಶ್ವರೀಬೀಜ 'ಹ್ರೀಂ' ಕಾರವನು ಲಕ್ಷ್ಮೀ ಬೀಜ 'ಶ್ರೀಂ' ಕಾರವನು, ಈ ಮೂರನೂ [1] ಬಿಟ್ಟು, ನಿರವಧಿಮಹಾಭೋಗ ರಸಿಕಾಃ ಏಕೇ–ಕಡೆಯಿಲ್ಲದ ಮಹಾ ಆನಂದರಸವನು ಅನುಭವವುಳ್ಳ ಪರಮ ಯೋಗೀಶ್ವರರಾಗಿದ್ದಂಥಾ ಕೆಲವು ಸಮಯಮತಾಚಾರರು, ಚಿಂತಾಮಣಿಗುಣ ನಿಬದ್ಧಾಕ್ಷವಲಯಾಃ–ಚಿಂತಾಮಣಿಗಳ ಸಮೂಹದಿಂದ ಕಟ್ಟಲ್ಪಟ್ಟ ಅಕ್ಷಮಾಲೆ ಯುಳ್ಳಂಥಾವರು, ಶಿವಾಗ್ನೌ ಸುರಭಿಘೃತಧಾರಾಹುತಿಶತೈಃ ಜುಹ್ವಂತೋ ಭಜಂತಿ–ಹೃದಯಕಮಲದಲ್ಲಿ ಚಕ್ರದ ತ್ರಿಕೋಣಬಿಂದುಸ್ಥಾನದಲ್ಲಿ ಸ್ವಾಧಿಷ್ಠಾ ನಾಗ್ನಿಯನ್ನಿಟ್ಟು ಪಾಶಾಂಕುಶಗಳಿಂದ ನಿಲಿಸಿ ಭುವನೇಶ್ವರಿಯೆಂಬ ಹ್ರೀಂಕಾರ ದಿಂದ ಮುಚ್ಚಿ ಆ ಅಗ್ನಿಗೆ ಜಾತಕರ್ಮಾದಿಷೋಡಶಸಂಸ್ಕಾರ ಮಾಡಿದ್ದೀಗ ಶಿವಾಗ್ನಿಯೆಂಬುದು, ಅಂಥಾ ಶಿವಾಗ್ನಿಯಲ್ಲಿ ಸಹಸ್ರಕಮಲದ ಬಿಂದುಸ್ಥಾನದಲ್ಲಿ ಇದ್ದಂಥಾ ಕಾಮೇಶ್ವರಿಯನು ಇಳುಹಿ ತಂದು ಇಟ್ಟು ನಿನ್ನನು ಕಾಮಧೇನುವಿನ ಆಜ್ಯದ ಶತಾಹುತಿಗಳಿಂದ ಹೋಮವ ಮಾಡುತ್ತಿದ್ದವರಾಗಿಕೊಂಡು ಸೇವೆಯ ಮಾಡುತ್ತಿಹರು. ಸಹಸ್ರಕಮಲದ ಚತುಷ್ಕೋಣಮಧ್ಯ ಬಿಂದುಸ್ಥಾನ. ಹಾಗಾದರು ಪುರಶ್ಚರಣಸಮಯದಲ್ಲಿ ಹೃದಯಕಮಲದಲ್ಲಿ ತ್ರಿಕೋಣಮಧ್ಯದಲ್ಲಿ ಬಿಂದುವುಂಟಾದ ಶ್ರೀಚಕ್ರಧ್ಯಾನವ ಮಾಡಿ ಅ ಚಕ್ರತ್ರಿಕೋಣಬಿಂದುಸ್ಥಾನದಲ್ಲಿ ತ್ರಿಪುರಸುಂದರಿಯ ಧ್ಯಾನವ ಮಾಡುವದು. ಇದು ಸಮಯಿಗಳ ಜಪ ಹೋಮಾದಿ ಪುರಶ್ಚರಣಪ್ರಕಾರ.

ಸಮಯಿಗಳ ಮಂತ್ರಕ್ಕೆ ಬಾಹ್ಯಪುರಶ್ಚರಣೆ ಇಲ್ಲ. ಬಾಹ್ಯದಲ್ಲಿ ಪೂಜೆ ಗಳಿಲ್ಲ. ಜಪ ತರ್ಪಣ ಹೋಮ ಪೂಜಾದಿಗಳೆಲ್ಲವು ಹೃದಯಕಮಲದಲ್ಲಿಯೇ ಅನುಷ್ಠಾನ. ಇದು "ಜಪೋ ಜಲ್ಪಃ ಶಿಲ್ಪಂ" (ಶ್ಲೋ. ೨೭) ಎಂಬ ಶ್ಲೋಕದ ಟೀಕಿನಲ್ಲಿ ಕೆಲವು ಬರದದೆ. ಕಡಿಮೆಯೆಲ್ಲವನು "ತವಾಜ್ಞಾಚಕ್ರಸ್ಥಂ" (ಶ್ಲೋ. ೩೬) ಎಂಬ ಶ್ಲೋಕ ಆದಿಯಾದ ಆರು ಶ್ಲೋಕದ ಟೀಕಿನಲ್ಲಿ ಸಮಯ ಮತಸ್ವರೂಪವನು ವಿವರವಾಗಿ ಬರದೇನು.

ಕೌಲಮತದಲ್ಲಿ ಪೂರ್ವಕೌಲ ಉತ್ತರಕೌಲ ಎಂದು ಎರಡು ವಿಧ. ಆ ಮತಸ್ವರೂಪವನು ಕ್ರಮದಿಂದ ಹೇಳೇನು—

---

[1] ಇಟ್ಟು (ಖ).

ಶರೀರಂ ತ್ವಂ ಶಂಭೋಃ ಶಶಿಮಿಹಿರವಕ್ಷೋರುಹಯುಗಂ
ತವಾತ್ಮಾನಂ ಮನ್ಯೇ ಭಗವತಿ ನವಾತ್ಮಾನಮನಘಮ್
ಅತಃ ಶೇಷಃ ಶೇಷೀತ್ಯಯಮುಭಯಸಾಧಾರಣತಯಾ
ಸ್ಥಿತಃ ಸಂಬಂಧೋ ವಾಂ ಸಮರಸಪರಾನಂದಪರಯೋಃ ೩೩

[ಹೇ ಭಗವತಿ! ಶಂಭೋಸ್ತ್ವಂ ಶಶಿಮಿಹಿರವಕ್ಷೋರುಹಯುಗಂ ಶರೀರಂ, ಭವಸೀತಿ ಶೇಷಃ. ತವಾತ್ಮಾನಂ ಅನಘಂ ನವಾತ್ಮಾನಂ ಮನ್ಯೇ. ಅತಃ ಶೇಷಃ ಶೇಷೀತ್ಯಯಂ ಸಂಬಂಧಃ ಸಮರಸಪರಾನಂದಪರಯೋಃ ವಾಂ ಉಭಯ ಸಾಧಾರಣತಯಾ ಸ್ಥಿತಃ.]

ಹೇ ಭಗವತಿ !

'ಉತ್ಪತ್ತಿಂ ಚ ವಿನಾಶಂ ಚ ಭೂತಾನಾಮಾಗತಿಂ ಗತಿಮ್
ವೇತ್ತಿ ವಿದ್ಯಾಮವಿದ್ಯಾಂ ಚ ಸ ವಾಚ್ಯೋ ಭಗವಾನಿತಿ'

ಈ ವಚನದಲ್ಲಿ ಹೇಳಿದ ಆರಾರಜ್ಞಾನವುಂಟಾದವಳು ಭಗವತಿಯು. ಅಂಥಾ ಭಗವತಿಯೇ !, ಶಂಭೋಸ್ತ್ವಂ ಶಶಿಮಿಹಿರವಕ್ಷೋರುಹಯುಗಂ ಶರೀರಂ, ಭವಸೀತಿ ಶೇಷಃ–ಆನಂದಭೈರವನ ನೀನು ಚಂದ್ರ ಸೂರ್ಯರು ಸ್ತನಗಳೆರಡುಳ್ಳ ದೇಹವು ಆದೆಯೆಂದು ಹೇಳಿದ್ದರಿಂದ ಅಪ್ರಧಾನವು. ಸರ್ವೇಶ್ವರಿಯ ಸ್ತನಗಳು ಸೂರ್ಯಚಂದ್ರರು ಎಂಬುದಕ್ಕೆ ರೌದ್ರಿಕೀಶ್ರುತಿಯಲ್ಲಿ ಸಮ್ಮತಿ—

'ಸೂರ್ಯಚಂದ್ರೌ ಸ್ತನೌ ಯಸ್ಯಾಸ್ತಾವೇವ ನಯನೇ ಸ್ಮೃತೇ
ಉಭೌ ತಾಟಂಕಯುಗಲಮಿತ್ಯೇಷಾ ರೌದ್ರಿಕೀ (ವೈದಿಕೀ) ಶ್ರುತಿಃ'

ತವಾತ್ಮಾನಂ ಅನಘಂ ನವಾತ್ಮಾನಂ ಮನ್ಯೇ–ಮಹಾಭೈರವಿಯಾದ ನಿನ್ನ ಶರೀರವನು ನಿರ್ದೋಷವಾಗಿ ಇದ್ದಂಥಾ ನವವ್ಯೂಹಾತ್ಮಕವಾದ ಭೈರವ ನನ್ನಾಗಿ ತಿಳಿದೇನು. ಅದರಿಂದ ಆನಂದಭೈರವನು ಅಪ್ರಧಾನವು. ಅತಃ ಶೇಷಃ ಶೇಷೀತ್ಯಯಂ ಸಂಬಂಧಃ–ಅದುಕಾರಣದಿಂದ ಅಪ್ರಧಾನಪ್ರಧಾನಸಂಬಂಧವು, ಸಮರಸಪರಾನಂದಪರಯೋಃ ವಾಂ ಉಭಯಸಾಧಾರಣತಯಾ ಸ್ಥಿತಃ–ಚೆನ್ನಾಗಿ ಕೂಡಿದ ಆನಂದಭೈರವ ಮಹಾಭೈರವಿ ನಿಮ್ಮ ಇಬ್ಬರಿಗೂ ಸಮಾನ ವಾಗಿ ಇದ್ದಿತು. ಆನಂದಭೈರವನಿಗೆ ನವವ್ಯೂಹಾತ್ಮಕ ಹೇಗೆ ಎಂದರೆ—

'ಕಾಲವ್ಯೂಹಃ ಕುಲವ್ಯೂಹೋ ನಾಮವ್ಯೂಹಸ್ತಥೈವ ಚ
ಜ್ಞಾನವ್ಯೂಹಸ್ತಥಾ ಚಿತ್ತವ್ಯೂಹಃ ಸ್ಯಾತ್ತದನಂತರಮ್
ನಾದವ್ಯೂಹಸ್ತಥಾ ಬಿಂದುವ್ಯೂಹಃ ಸ್ಯಾತ್ತದನಂತರಮ್
ಕಲಾವ್ಯೂಹಸ್ತಥಾ ಜೀವವ್ಯೂಹಃ ಸ್ಯಾದಿತಿ ತೇ ನವ'

ಇಲ್ಲಿಗೆ ಬರೆಯತಕ್ಕ ಅರ್ಥ–ಆನಂದಭೈರವನ ನವವ್ಯೂಹಾತ್ಮಕದ ವಿವರ–

ಕಾಲವ್ಯೂಹವೆಂಬುದು—ನಿಮಿಷಾದಿಯಾಗಿ ಬ್ರಹ್ಮಕಲ್ಪಪರಿಯಂತರವಾದ ಕಾಲವು.[1]

ಕುಲವ್ಯೂಹವೆಂಬುದು—ನೀಲಾದಿಯಾದ ವರ್ಣವು.

ನಾಮವ್ಯೂಹವೆಂಬುದು—ಹೆಸರುಗಳ ಸಮುದಾಯ.

ಜ್ಞಾನವ್ಯೂಹವೆಂಬುದು—[2](ವಿಜ್ಞಾನ ಸಮುದಾಯ. ಅದು ಸಭಾಗ ವಿಭಾಗ ಎಂಬ ಎರಡು ವಿಧ. ಸಭಾಗವೆಂದರೆ ಸವಿಕಲ್ಪ. ವಿಭಾಗವೆಂದರೆ ನಿರ್ವಿಕಲ್ಪ.

ಚಿತ್ತವ್ಯೂಹವೆಂಬುದು—ಅಹಂಕಾರ ಐದರ ಸಮುದಾಯ. ಅಹಂಕಾರ, ಚಿತ್ತ, ಬುದ್ಧಿ, ಮಹತ್, ಮನ ಇವು ಅಹಂಕಾರಪಂಚಕ.

ನಾದವ್ಯೂಹವೆಂಬುದು—(ರಾಗ ಇಚ್ಛೆ ಕ್ರಿಯೆ ಪ್ರಯತ್ನಗಳು. ಇದು ಪರಾ ಪಶ್ಯಂತೀ ಮಧ್ಯಮೇ ವೈಖರೀ ಎಂಬುದು. [3]ಅದರಿಂದ ಶ್ರೀಚಕ್ರವ ಹೇಳಲ್ಪಟ್ಟಿತ್ತು.

ಬಿಂದುವ್ಯೂಹವೆಂಬುದು—ಮೂಲಾಧಾರಾದಿಯಾದ ಆರು ಚಕ್ರಸಮುದಾಯ.

ಕಲಾವ್ಯೂಹವೆಂಬುದು—[4]ಐವತ್ತುಕಲಾತ್ಮಕವಾದ ಅಕ್ಷರಸಮುದಾಯ.

ಜೀವವ್ಯೂಹವೆಂಬುದು—ಸುಖದುಃಖಶೀತೋಷ್ಣಗಳ ಅನುಭವಿಸುವವರ ಸಮುದಾಯ.

ಮಹಾಭೈರವನು ಇಂಥಾ ನವವ್ಯೂಹಾತ್ಮಕನೆಂದು ಪೂರ್ವಕೌಲರು ಹೇಳುವರು. ಸಮ್ಮತಿವಚನ—

‘ನವವ್ಯೂಹಾತ್ಮಕೋ ದೇವಃ ಪರಾನಂದಃ ಪರಾತ್ಮಕಃ
ತದಾತ್ಮಾ ಭೈರವೋ ದೇವೋ ಭುಕ್ತಿಮುಕ್ತಿಪ್ರದಾಯಕಃ
ಪರಾನಂದಪರಾ ಶಕ್ತಿಃ ಚಿದ್ರೂಪಾಽಽನಂದಭೈರವೀ
ತಯೋರ್ಯದಾ ಸಾಮರಸ್ಯಂ ಜಗದುತ್ಪದ್ಯತೇ ತದಾ’

ಪೂರ್ವಕೌಲಮತದಲ್ಲಿ ಪ್ರಧಾನಾಪ್ರಧಾನಭಾವವು ಆನಂದಭೈರವನು ಮಹಾಭೈರವಿಗೆ ಸಮಾನವೆಂದು ಹೇಳುವರು. ಅದು ಹೇಗೆಯೆಂದರೆ—ಜಗತ್ತಿನ

---

[1] ಸೂರ್ಯಚಂದ್ರರಿಗೂ ಕಾಲವ್ಯೂಹದಲ್ಲಿ ಅಂತರ್ಭಾವವು. [2] ಈ ವಾಕ್ಯಗಳು ಮಾತೃಕೆಯಲ್ಲಿ ಇಲ್ಲ. [3] ಶ್ರೀಚಕ್ರವ ತಿಳಿಯುವ ಕ್ರಮವನ್ನು ಸಂಸ್ಕೃತ ಟೀಕಿನಲ್ಲಿ ನೋಡಿಕೊಳ್ಳಬೇಕು. [4] ಅಕ್ಷರಾತ್ಮಕವಾದ ಐವತ್ತು ಕಲೆಗಳ ಸಮುದಾಯ ಎಂದಿರಬೇಕು.

ಸೃಷ್ಟಿಕಾಲದಲ್ಲಿ ಮಹಾಭೈರವಿ ಪ್ರಧಾನವು, ಆನಂದಭೈರವನು ಅಪ್ರಧಾನವು. ಸಂಹಾರಕಾಲದಲ್ಲಿ ಆನಂದಭೈರವ ಪ್ರಧಾನವು, ಮಹಾಭೈರವಿ ಅಪ್ರಧಾನವು.

ಮನಸ್ತ್ವಂ ವ್ಯೋಮ ತ್ವಂ ಮರುದಸಿ ಮರುತ್ಸಾರಥಿರಸಿ
ತ್ವಮಾಪಸ್ತ್ವಂ ಭೂಮಿಸ್ತ್ವಯಿ ಪರಿಣತಾಯಾಂ ನ ಹಿ ಪರಮ್
ತ್ವಮೇವ ಸ್ವಾತ್ಮಾನಂ ಪರಿಣಮಯಿತುಂ ವಿಶ್ವವಪುಷಾ
ಚಿದಾನನ್ದಾಕಾರಂ ಶಿವಯುವತಿಭಾವೇನ ಬಿಭೃಷೇ ೩೫

[ಹೇ ಭಗವತಿ! ಮನಸ್ತ್ವಂ ವ್ಯೋಮ ತ್ವಂ ಮರುದಸಿ ಮರುತ್ಸಾರಥಿರಸಿ ತ್ವಮಾಪಃ ತ್ವಂ ಭೂಮಿಃ ತ್ವಯಿ ಪರಿಣತಯಾಂ ಪರಂ ನ ಹಿ. ತ್ವಮೇವ ಸ್ವಾತ್ಮಾನಂ ವಿಶ್ವವಪುಷಾ ಪರಿಣಮಯಿತುಂ ಶಿವಯುವತಿಭಾವೇನ ಚಿದಾನಂದಾಕಾರಂ ಬಿಭೃಷೇ.]

ಹೇ ಭಗವತಿ–ಏ ಭಗವತಿಯೇ!, ಮನಸ್ತ್ವಂ–ಆಜ್ಞಾಚಕ್ರದಲ್ಲಿ ಇಹ ಮನಸ್ತತ್ತ್ವವು ನೀನೇ, ವ್ಯೋಮ ತ್ವಂ–ವಿಶುದ್ಧಿಚಕ್ರದಲ್ಲಿ ಇಹ ಆಕಾಶತತ್ತ್ವವು ನೀನೇ, ಮರುದಸಿ–ಅನಾಹತಚಕ್ರದಲ್ಲಿ ಇಹ ವಾಯುತತ್ತ್ವವು ನೀನೇ, ಮರುತ್ಸಾರಥಿರಸಿ–ಸ್ವಾಧಿಷ್ಠಾನಚಕ್ರದಲ್ಲಿ ಇಹ ಅಗ್ನಿತತ್ತ್ವವು ನೀನೇ, ತ್ವಮಾಪಃ—ಮಣಿಪೂರಚಕ್ರದಲ್ಲಿ ಇಹ ಜಲತತ್ವವು ನೀನೇ, ತ್ವಂ ಭೂಮಿಃ–ಮೂಲಾಧಾರಚಕ್ರದಲ್ಲಿ ಇಹ ಭೂತತ್ತ್ವವು ನೀನೇ. ತ್ವಯಿ ಪರಿಣತಾಯಾಂ ಪರಂ ನ ಹಿ–ಹೀಗೆ ನೀನು ಸರ್ವತತ್ತ್ವದಲ್ಲಿಯೂ ಐಕ್ಯವಾಗಲಾಗಿ ನೀನು ಅಲ್ಲದೆ ಮತ್ತೆ ಒಂದು ವಸ್ತುವಿಲ್ಲ. ತ್ವಮೇವ ಸ್ವಾತ್ಮಾನಂ ವಿಶ್ವವಪುಷಾ ಪರಿಣಮಯಿತುಂ ಶಿವಯುವತಿಭಾವೇನ ಚಿದಾನಂದಾಕಾರಂ ಬಿಭೃಷೇ–ನೀನೆ ನಿನ್ನ ಸ್ವರೂಪವನು ಜಗದಾಕಾರದಿಂದ ನಾನಾವಿಧರೂಪಮಾಡುವಂಥಾದಕ್ಕೋಸ್ಕರ ಶಿವನ ಸ್ತ್ರೀಸ್ವರೂಪದಿಂದ ಮಹಾಭೈರವಿ ಆನಂದಭೈರವನ ಇಬ್ಬರ ಆಕಾರವನು ಧರಿಸುತ್ತಿದ್ದೇ.

ಇಲ್ಲಿಗೆ ಬರೆಯತಕ್ಕ ಅರ್ಥ—ಮನಸ್ತ್ವಂ ಎಂದು ಮೊದಲಾಗಿ ತ್ವಂ ಭೂಮಿಃ ಎಂಬ ಪರಿಯಂತರ ಹೇಳಿದ್ದರಿಂದ ಪಂಚಭೂತಾತ್ಮಕವಾದ ಕಾರ್ಯರೂಪವು ಹೇಳಲ್ಪಟ್ಟಿತು. ತ್ವಯಿ ಪರಿಣತಾಯಾಂ ಎಂಬುದರಿಂದ ಪ್ರಕೃತಿಗೆ ಜಗತ್ಕಾರಣ ನೀನಲ್ಲದೆ ಒಂದು ವಸ್ತುವಲ್ಲ ಎಂದು ಹೇಳಲ್ಪಟ್ಟಿತು. ಇದಕ್ಕೆ ಸಮ್ಮತಿವಚನ ಚತುಶ್ಶತಿಯಲ್ಲಿ—

'ಶ್ರುಣು ದೇವಿ ಮಹಾಜ್ಞಾನಂ ಸರ್ವಜ್ಞಾನೋತ್ತಮಂ [1]ಪ್ರಿಯೇ
[2]ಯೇನ ವಿಜ್ಞಾನಮಾತ್ರೇಣ[2] ಭವಾಬ್ಧೌ ನ ನಿಮಜ್ಜತಿ
ತ್ರಿಪುರಾ ಪರಮಾ ಶಕ್ತಿರಾದ್ಯಾ[3] ಭೂತಾ ಮಹೇಶ್ವರೀ[3]
ಸ್ಥೂಲಸೂಕ್ಷ್ಮ[4]ವಿಭಾಗೇನ[4] ತ್ರೈಲೋಕ್ಯೋತ್ಪತ್ತಿಮಾತೃಕಾ

---

[1] ಪರಂ [2] ಯೇನಾನುಷ್ಠಿತಮಾತ್ರೇಣ [3] ಜ್ಞಾನಾದಿತಃ ಪ್ರಿಯೆ [4] ವಿಭೇದೇನ.

ಕಬಲೀಕೃತನಿಶ್ಶೇಷತತ್ತ್ವಗ್ರಾಮಸ್ವರೂಪಿಣೀ
[1] ಯಸ್ಯಾಂ ಪರಿಣತಾಯಾಂ ತು ನ ಕಿಂಚಿತ್ಪರಿಶಿಷ್ಯತೇ'

ಉತ್ತರಕೌಲಮತದಲ್ಲಿ ಶಕ್ತಿಯೆ ಜಗತ್ಕಾರಣವಾಗಲಾಗಿ ಪ್ರಧಾನವು. ಅವರ ಮತದಲ್ಲಿ ಶಿವನಿಲ್ಲದ ಕಾರಣವಾಗಲಾಗಿ ಮನಸ್ಸು ಮೊದಲಾದ ಕಾರ್ಯವು ಮಹಾಭೈರವಿಯ ಶಕ್ತಿಯಕಾರ್ಯವು. ತತ್ತ್ವಗಳೆಲ್ಲ ಮಹಾಭೈರವಿಯ ಕಾರ್ಯವು. ಹೀಗೆ ಕಾರ್ಯರೂಪಪ್ರಪಂಚವನು ತನ್ನಲ್ಲಿ ಐಕ್ಯವಮಾಡಿಕೊಂಡು ಇಹಳು. ಈ ಶಕ್ತಿಯೆ ಆಧಾರಕುಂಡಲಿನಿ ಎಂದು ಹೇಳಲ್ಪಡುವುದು. ಇನ್ನು ಕೌಲಮತವ ಬರೆಯತಕ್ಕ ಅರ್ಥವನು "ತವಾಧಾರೇ ಮೂಲೇ" (ಶ್ಲೋ. ೪೦) ಎಂಬ ಶ್ಲೋಕದ ಟೀಕಿನಲ್ಲಿ ವಿವರವಾಗಿ ಬರದೇನು.

ತವಾಜ್ಞಾಚಕ್ರಸ್ಥಂ ತಪನಶಶಿಕೋಟಿದ್ಯುತಿಧರಂ
ಪರಂ ಶಂಭುಂ ವಂದೇ ಪರಿಮಿಳಿತಪಾರ್ಶ್ವಂ ಪರಚಿತಾ
ಯಮಾರಾಧ್ಯ ಭಕ್ತ್ಯಾ ರವಿಶಶಿಶುಚೀನಾಮವಿಷಯೇ
ನಿರಾಲೋಕೇಽಲೋಕೇ ನಿವಸತಿ ಹಿ ಭಾಲೋಕಭುವನೇ ೩೬

[ಹೇ ಭಗವತಿ! ತವ ಆಜ್ಞಾಚಕ್ರಸ್ಥಂ ತಪನಶಶಿಕೋಟಿದ್ಯುತಿಧರಂ ಪರಂ ಶಂಭುಂ ಪರಚಿತಾ ಪರಿಮಿಳಿತಪಾರ್ಶ್ವಂ ವಂದೇ. ಯಂ ಭಕ್ತ್ಯಾ ಆರಾಧ್ಯ ರವಿಶಶಿಶುಚೀನಾಮವಿಷಯೇ ನಿರಾಲೋಕೇ ಅಲೋಕೇ ಭಾಲೋಕಭುವನೇ ನಿವಸತಿ ಹಿ.]

ಹೇ ಭಗವತಿ—ಎ ಭಗವತಿಯೇ!, ತವಾಜ್ಞಾಚಕ್ರಸ್ಥಂ—ನಿನ್ನ ಆಜ್ಞಾಚಕ್ರದಲ್ಲಿ ಇಹ, ಶ್ರೀಚಕ್ರದ ಶಿವಚಕ್ರ ನಾಲ್ಕರಲ್ಲಿ ಇದ್ದಂಥಾ, ತಪನಶಶಿಕೋಟಿದ್ಯುತಿಧರಂ ಪರಂ ಶಂಭುಂ ಪರಚಿತಾ ಪರಿಮಿಳಿತಪಾರ್ಶ್ವಂ ವಂದೇ—ಅನೇಕ ಚಂದ್ರಸೂರ್ಯರ ಕಾಂತಿಗೆ ಸಮಾನವಾದ ಕಾಂತಿಯ ಧರಿಸಿದಂಥಾ ಪರಶಿವನನು ಜ್ಞಾನಶಕ್ತಿಯ ಕೂಡ ಕೂಡಿಕೊಂಡು ಇದ್ದಂಥಾವನನು ನಮಸ್ಕಾರವಮಾಡೇನು, ಯಂ ಭಕ್ತ್ಯಾ ಆರಾಧ್ಯ ರವಿಶಶಿಶುಚೀನಾಮವಿಷಯೇ ನಿರಾಲೋಕೇ ಅಲೋಕೇ ಭಾಲೋಕಭುವನೇ ನಿವಸತಿ ಹಿ—ಆ ಶಕ್ತಿಯ ಕೂಡಿಕೊಂಡು ಇಹ ಪರಶಿವನನು ಭಕ್ತಿಯಿಂದ ಪೂಜೆಯ ಮಾಡುವನು ಸೂರ್ಯಚಂದ್ರಾಗ್ನಿಗಳಿಲ್ಲದ್ದರಿಂದ ಅವರ ಪ್ರಕಾಶವಿಲ್ಲದಂಥಾ ಏಕಾಂತವಾದ ಸ್ವಯಂಪ್ರಕಾಶವಾದ ಬೆಳ್ದಿಂಗಳುಮಯವಾದ ಸಹಸ್ರಕಮಲಲೋಕದಲ್ಲಿ ಇಹನು.

ಇಲ್ಲಿಗೆ ಬರೆಯತಕ್ಕ ಅರ್ಥ—ಸ್ವಾಧಿಷ್ಠಾನಾಗ್ರದಲ್ಲಿ ಅಗ್ನಿಖಂಡ, ಅನಾಹತಾಗ್ರದಲ್ಲಿ ಸೂರ್ಯಖಂಡ, ಆಜ್ಞಾಚಕ್ರಾಗ್ರದಲ್ಲಿ ಚಂದ್ರಖಂಡವೆಂದು ಮೊದಲೆ ಬಹಳವಾಗಿ ಹೇಳಿದೆ. ಆಗಲಾಗಿ ಅಗ್ನಿಸೂರ್ಯಚಂದ್ರರ ಮುನ್ನೂರ ಅರವತ್ತು

---

[1] ತಸ್ಯಾಂ. ಇವು ವಾಮಕೇಶ್ವರತಂತ್ರದಲ್ಲಿರುವ ಪಾಠಗಳು.

ಕಿರಣವು ಆಧಾರಚಕ್ರಮೊದಲಾಗಿ ಆಜ್ಞಾಚಕ್ರಪರಿಯಂತರ ಸಂಚರಿಸುವದು. ಆಜ್ಞಾಚಕ್ರದಲ್ಲಿ ಇಹ ಚಂದ್ರನಲ್ಲದೆ ಬೇರೆ ನಿತ್ಯಕಲಾಯುಕ್ತವಾದ ಶ್ರೀಚಕ್ರರೂಪ ವಾದ ಸಹಸ್ರಕಮಲದಲ್ಲಿ ಇಹಂಥಾ ಚಂದ್ರನು ಮತ್ತೊಬ್ಬನೆಂದು ಮೊದಲೆ ಹೇಳಿದೆ. ಅದರಿಂದ ಕೆಳಗೆ ಮೂರು ಖಂಡಗಳ ಮೇಲೆ ಇಹ ಅಗ್ನಿ ಸೂರ್ಯ ಚಂದ್ರಕಿರಣಗಳು ಸಹಸ್ರಕಮಲಕ್ಕೆ ಕೂಡದು. ಅಲ್ಲಿ ಇಹದು ನಿತ್ಯಕಲಾತ್ಮಕ ವಾದ ಚಂದ್ರನ ಕಾಂತಿಯು.[1]

ವಿಶುದ್ಧೌ ತೇ ಶುದ್ಧಸ್ಫಟಿಕವಿಶದಂ ವ್ಯೋಮಜನಕಂ
ಶಿವಂ ಸೇವೇ ದೇವೀಮಪಿ ಶಿವಸಮಾನವ್ಯವಸಿತಾಮ್
ಯಯೋಃ ಕಾಂತ್ಯಾ ಯಾಂತ್ಯಾ ಶಶಿಕಿರಣಸಾರೂಪ್ಯಸರಣೇಃ
ವಿಧೂತಾಂತರ್ಧ್ವಾಂತಾ ವಿಲಸತಿ ಚಕೋರೀವ ಜಗತೀ ೩೭

[ಹೇ ಭಗವತಿ! ತೇ ವಿಶುದ್ಧೌ ಶುದ್ಧಸ್ಫಟಿಕವಿಶದಂ ವ್ಯೋಮಜನಕಂ ಶಿವಂ ಶಿವಸಮಾನವ್ಯವಸಿತಾಂ ದೇವೀಮಪಿ ಸೇವೇ. ಯಯೋಃ ಯಾಂತ್ಯಾಃ ಶಶಿಕಿರಣಸಾರೂಪ್ಯಸರಣೇಃ ಕಾಂತ್ಯಾಃ ಸಕಾಶಾತ್ ಜಗತೀ ವಿಧೂತಾಂತ ರ್ಧ್ವಾಂತಾ ಚಕೋರೀವ ವಿಲಸತಿ.]

ಹೇ ಭಗವತಿ–ಏ ಭಗವತಿಯೇ !, ತೇ ವಿಶುದ್ಧೌ–ನಿನ್ನ ವಿಶುದ್ಧಿಚಕ್ರದಲ್ಲಿ ಇಹ ಶ್ರೀಚಕ್ರದ ಚತುರ್ದಶಾರದಲ್ಲಿ ಇದ್ದಂಥಾ, ಶುದ್ಧಸ್ಫಟಿಕವಿಶದಂ ವ್ಯೋಮ ಜನಕಂ ಶಿವಂ—[2]ತ್ರಾಸಪಟಲವಿದ್ದಂಥ[2] ಸ್ಫಟಿಕದಂತೆ ನಿರ್ಮಲವಾದ ಆಕಾಶ ತತ್ತ್ವವ ಹುಟ್ಟಿಸಿದಂಥಾ ಶಿವನು, ಶಿವಸಮಾನವ್ಯವಸಿತಾಂ ದೇವೀಮಪಿ ಸೇವೇ–ಶಿವನಪ್ರಯತ್ನಕ್ಕೆ ಸಮಾನವಾದ ಪ್ರಯತ್ನವುಳ್ಳಂಥಾ ಸರ್ವೇಶ್ವರಿಯನು ನಮಸ್ಕರಿಸೇನು, ಯಯೋಃ ಯಾಂತ್ಯಾಃ ಶಶಿಕಿರಣಸಾರೂಪ್ಯಸರಣೇಃ ಕಾಂತ್ಯಾಃ ಸಕಾಶಾತ್–ಶಿವಶಕ್ತಿಗಳ ಪ್ರಸಾರವುಳ್ಳ ಚಂದ್ರಕಿರಣಕ್ಕೆ ಸಮಾನವಾದ ಕಾಂತಿ ಯಿಂದ, ಜಗತೀ ವಿಧೂತಾಂತರ್ಧ್ವಾಂತಾ ಚಕೋರೀವ ವಿಲಸತಿ–[3]ಸಾಧಕನು ಹೊರಡಿಸಲ್ಪಟ್ಟ ಅಜ್ಞಾನವೆಂಬ ಕತ್ತಲೆಯ ಕೂಡಿ[4]ಕೊಂಡವನಾಗಿ ಚಕೋರಪಕ್ಷಿ ಯಹಾಗೆ ಒಪ್ಪು[5]ತಿದ್ದಾನು.

ಇಲ್ಲಿಗೆ ಬರೆಯತಕ್ಕ ಅರ್ಥ–ವಿಶುದ್ಧಿಚಕ್ರದಲ್ಲಿ ಶಿವಶಕ್ತಿಗಳ ಧ್ಯಾನವ ಮಾಡು ವಾಗ ವಿಶುದ್ಧಿಚಕ್ರದಲ್ಲಿ ಹದಿನಾರುದಳದಲ್ಲಿ ಇದ್ದ ತ್ರಿಪುರಸುಂದರೀ ಮೊದಲಾದ ಹದಿನಾರು [6]ನಿತ್ಯೆಗಳಾ[6]ತ್ಮಕವಾದ ಚಂದ್ರಕಲೆಗಳ ಬೆಳುದಿಂಗಳು ಅನಾಹತ ಚಕ್ರದ ಮೇಲೆ ಇದ್ದ ಸೂರ್ಯನ ಕಿರಣದಿಂದ ಶೋಷಣವಾಗಲಾಗಿ ಅಲ್ಲಿ ಬೆಳ್ದಿಂಗಳು ಇಲ್ಲ. ಆ ಚಕ್ರದಲ್ಲಿ ಇದ್ದ ಶಿವಶಕ್ತಿಗಳ ಪ್ರಭೆಯು ಬೆಳ್ದಿಂಗಳ ಧ್ಯಾನವ ಮಾಡುವುದು.

---

[1] ಎಂಬುದು ಮೊದಲೆ ಹೇಳಿದೆ, ಎಂದಿರಬೇಕು [2] ತ್ರಾಸಪಟಲವಿಲ್ಲದಿದ್ದಂಥ, ಎಂದಿರಬೇಕು ಮೂರುಲೋಕವು [4] ಕೊಂಡದ್ದಾಗಿ [5] ತಿದ್ದಾವು, ಎಂದಿರಬೇಕು [6] ನಿತ್ಯಕಲಾ (ಖ).

ಸಮುನ್ಮೀಲತ್ಸಂವಿತ್ಕಮಲಮಕರಂದೈಕರಸಿಕಂ
ಭಜೇ ಹಂಸದ್ವಂದ್ವಂ ಕಿಮಪಿ ಮಹತಾಂ ಮಾನಸಚರಮ್
ಯದಾಲಾಪಾದಷ್ಟಾದಶಗುಣಿತವಿದ್ಯಾಪರಿಣತಿಃ
ಯದಾದತ್ತೇ ದೋಷಾದ್ಗುಣಮಖಿಲಮದ್ಭ್ಯಃ ಪಯ ಇವ ೩೭

[ಹೇ ಭಗವತಿ! ತವ ಸಮುನ್ಮೀಲತ್ಸಂವಿತ್ಕಮಲಮಕರಂದೈಕರಸಿಕಂ ಮಹತಾಂ ಮಾನಸಚರಂ ಕಿಮಪಿ ಹಂಸದ್ವಂದ್ವಂ ಭಜೇ, ಯದಾಲಾಪಾದಷ್ಟಾದಶಗುಣಿತವಿದ್ಯಾಪರಿಣತಿಃ ಯದ್ದೋಷಾದಖಿಲಂ ಗುಣಂ ಅದ್ಭ್ಯಃ ಪಯ ಇವ ಆದತ್ತೇ.]

ಹೇ ಭಗವತಿ—ಏ ಭಗವತಿಯೇ!, ತವ ಸಮುನ್ಮೀಲತ್ಸಂವಿತ್ಕಮಲಮಕರಂದೈಕರಸಿಕಂ ಮಹತಾಂ ಮಾನಸಚರಂ ಕಿಮಪಿ ಹಂಸದ್ವಂದ್ವಂ ಭಜೇ—ನಿನ್ನ ವಿಕಸಿತವಾದ ಸಂವಿತ್ಕಮಲವೆಂಬ ನಾಮವುಂಟಾದ ಅನಾಹತಚಕ್ರದಲ್ಲಿಯ ಶ್ರೀಚಕ್ರದ ದ್ವಿತೀಯ ದಶಾರದ ಕಮಲಮಕರಂದರಸದಿಂದ ಮುಖ್ಯ [1]ವಶಜ್ಞರಾಗಿ ಇದ್ದಂಥಾ ಮಹಾತ್ಮರ ಮಾನಸವೆಂಬ ಮಾನಸಸರಸ್ಸಿನಲ್ಲಿ ಚರಿಸುವಂಥಾ [2]ಹೇಳಸಖ್ಯವಲ್ಲದಂಥಾ[2] ಶಿವಶಕ್ತಿಗಳೆಂಬ ಹಂಸೆಗಳೆರಡನು ಸೇವೆಯಮಾಡೇನು, ಯದಾಲಾಪಾದಷ್ಟಾದಶಗುಣಿತವಿದ್ಯಾಪರಿಣತಿಃ—ಅವುದಾನೊಂದು ಹಂಸದ್ವಂದ್ವಗಳ ನುಡಿಯಿಂದ ಹದಿನೆಂಟು ವಿದ್ಯೆಗಳು ಉಂಟಾಗುವವು, ಯತ್ ದೋಷಾತ್ ಅಖಿಲಂ ಗುಣಂ ಅದ್ಭ್ಯಃ ಪಯ ಇವ ಆದತ್ತೇ—ಅವುದಾನೊಂದು ಹಂಸದ್ವಂದ್ವವು ದೋಷವ ಬಿಟ್ಟು ಸಮಸ್ತಗುಣವನು [3]ನೀರುಕೂಡಿದ ಹಾಲಿನಹಾಗೆ[3] ಗ್ರಹಿಸುವುದು ಅಂಥಾ ಹಂಸದ್ವಂದ್ವವೆಂಬ ಶಿವಶಕ್ತಿಗಳನು ಸೇವೆಯ ಮಾಡೇನು.

ಇಲ್ಲಿಗೆ ಬರೆಯತಕ್ಕ ಅರ್ಥ—ಕೆಲವು ಸಮಯಮತಸಾಧಕರು ಪರಹಂಸ ಮಿಥುನವೆಂಬ ಶಿವಶಕ್ತಿಗಳ ಅನಾಹತಚಕ್ರದಲ್ಲಿ ಉಪಾಸನೆಮಾಡುವರು. ಅದಕ್ಕಾಗಿ ಮಹತಾಂ ಮಾನಸಚರವೆಂದು ಹೇಳಲ್ಪಟ್ಟಿತ್ತು. ಶ್ರೀಶಂಕರಾಚಾರ್ಯರ ಮತ—ದೀಪಜ್ವಾಲಾರೂಪವಾದ ಪರಮೇಶ್ವರನು ಆ ಜ್ವಾಲೆ ಕೂಡಿದ ದೀಪದ ಹಾಗೆ ಇದ್ದಂಥಾ ಶಕ್ತಿಯೊಡನೆ ಕೂಡಿಕೊಂಡು ಅನಾಹತಚಕ್ರದಲ್ಲಿ ದೀಪದಹಾಗೆ ಕಾಣಬರುವನು. ಇದಕ್ಕೆ ಸಮ್ಮತಿ ಸುಭಗೋದಯದಲ್ಲಿ—

'ಶಿಖಿಜ್ವಾಲಾರೂಪಃ ಸಮಯ ಇಹ ಸೈವಾತ್ರ ಸಮಯಾ
ತಯೋಃ ಸಂಭೇದೋ ಯೋ ದಿಶತು ಹೃದಯಾಬ್ಜೈಕನಿಲಯಃ'

---

[1] ವಶ್ಯಕರಾಗಿ (ಖ) [2] ಹೇಳಲಶಕ್ಯವಾದಂಥಾ (ಖ) [3] ನೀರನ್ನು ಬಿಟ್ಟು ಹಾಲನ್ನು ಮಾತ್ರ ತೆಗೆದುಕೊಳ್ಳುವಹಾಗೆ, ಎಂದರ್ಥ.

ತವ ಸ್ವಾಧಿಷ್ಠಾನೇ ಹುತವಹಮಧಿಷ್ಠಾಯ ನಿರತಂ
ತಮೀಡೇ ಸಂವರ್ತಂ ಜನನಿ ಮಹತೀಂ ತಾಂ ಚ ಸಮಯಾಮ್
ಯದಾಲೋಕೇ ಲೋಕಾನ್ ದಹತಿ ಮಹತಿ ಕ್ರೋಧಕಲಿತೇ
ದಯಾರ್ದ್ರಾ ಯಾ ದೃಷ್ಟಿಃ ಶಿಶಿರಮುಪಚಾರಂ ರಚಯತಿ ೩೮

[ಹೇ ಜನನಿ! ತವ ಸ್ವಾಧಿಷ್ಠಾನೇ ಹುತವಹಂ ಸಂವರ್ತಂ ಅಧಿಷ್ಠಾಯ ನಿರತಂ ತಂ ಈಡೇ, ಸಮಯಾಂ ತಾಂ ಮಹತೀಂ ಚ ಈಡೇ, ಯದಾ ಮಹತಿ ಕ್ರೋಧಕಲಿತೇ ಆಲೋಕೇ ಲೋಕಾನ್ ದಹತಿ ಸತಿ ಯಾ ದಯಾರ್ದ್ರಾ ದೃಷ್ಟಿಃ ಶಿಶಿರಮುಪಚಾರಂ ರಚಯತಿ.]

ಹೇ ಜನನಿ–ಎ ತಾಯೇ! ತವ ಸ್ವಾಧಿಷ್ಠಾನೇ ಹುತವಹಂ ಸಂವರ್ತಂ ಅಧಿಷ್ಠಾಯ ನಿರತಂ ತಂ ಈಡೇ–ನಿನ್ನ ಸ್ವಾಧಿಷ್ಠಾನಚಕ್ರದಲ್ಲಿಯ ಶ್ರೀಚಕ್ರದ ಪ್ರಥಮದಶಾರದಲ್ಲಿ ಅಗ್ನಿತತ್ತ್ವವನ್ನು ಧ್ಯಾನವ ಮಾಡಿ ಸಂವರ್ತಾಗ್ನಿ ಎಂಬ ಪರಮೇಶ್ವರನನ್ನು ಸದಾ ಸ್ತೋತ್ರವಮಾಡೇನು. ಸಮಯಾಂ ತಾಂ ಮಹತೀಂ ಚ ಈಡೇ––[1]ಸಂವರ್ತಾಗ್ನಿರೂಪಾಗಿ ಇದ್ದ ಅಧಿಕವಾದ ಶಕ್ತಿಯನು ಸ್ತೋತ್ರವ ಮಾಡೇನು,[1] ಯದಾ ಮಹತಿ ಕ್ರೋಧಕಲಿತೇ ಆಲೋಕೇ ಲೋಕಾನ್ ದಹತಿ ಸತಿ–ಆವಾಗ ಮಹಾಕೋಪವಮಾಡಿಕೊಂಡ ಪರಮೇಶ್ವರನ ನೋಟವು ಲೋಕಗಳನು ಸುಡುತಿರಲಾಗಿ, ಯಾ ದಯಾರ್ದ್ರಾ ದೃಷ್ಟಿಃ ಶಿಶಿರಮುಪಚಾರಂ ರಚಯತಿ–ಆವುದಾನೊಂದು ದಯಾರಸದಿಂದ ನನಸಿದ ದೃಷ್ಟಿಯು ಶೈತ್ಯೋಪಚಾರವ ಮಾಡುತದೆ ಆ ದೃಷ್ಟಿ ನಿನ್ನದು.

ತಟಿತ್ತ್ವಂತಂ ಶಕ್ತ್ಯಾ ತಿಮಿರಪರಿಪಂಥಿಸ್ಫುರಣಯಾ
ಸ್ಫುರನ್ನಾನಾರತ್ನಾಭರಣಪರಿಣದ್ಧೇಂದ್ರಧನುಷಮ್
ತವ ಶ್ಯಾಮಂ ಮೇಘಂ ಕಮಪಿ ಮಣಿಪೂರೈಕಶರಣಂ
ನಿಷೇವೇ ವರ್ಷಂತಂ ಹರಮಿಹಿರತಪ್ತಂ ತ್ರಿಭುವನಮ್ ೩೯

[ಹೇ ಭಗವತಿ! ತವ ಮಣಿಪೂರೈಕಶರಣಂ ತಿಮಿರಪರಿಪಂಥಿಸ್ಫುರಣಯಾ ಶಕ್ತ್ಯಾ ತಟಿತ್ತ್ವಂತಂ ಸ್ಫುರನ್ನಾನಾರತ್ನಾಭರಣಪರಿಣದ್ಧೇಂದ್ರಧನುಷಂ ಶ್ಯಾಮಂ ಹರಮಿಹಿರತಪ್ತಂ ತ್ರಿಭುವನಂ ವರ್ಷಂತಂ ಕಮಪಿ ಮೇಘಂ ನಿಷೇವೇ.]

ಹೇ ಭಗವತಿ–ಏ ಭಗವತಿಯೇ!, ತವ ಮಣಿಪೂರೈಕಶರಣಂ ತಿಮಿರಪರಿಪಂಥಿಸ್ಫುರಣಯಾ ಶಕ್ತ್ಯಾ ತಟಿತ್ತ್ವಂತಂ–ನಿನ್ನ ಮಣಿಪೂರಚಕ್ರದಲ್ಲಿಯೆ ಶ್ರೀಚಕ್ರದ

---

[1] ಮಹತೀಂ ಎಂಬ ಶಬ್ದದಿಂದ ಹೇಳಲ್ಪಡುವ ಸಂವರ್ತಾಗ್ನಿರೂಪವಾದ ಸಮಯೆಯನ್ನೂ ಸ್ತೋತ್ರವ ಮಾಡೇನು ಎಂದು ತಾತ್ಪರ್ಯ.

ಅಷ್ಟಕೋಣವೆ ಮುಖ್ಯಗೃಹವುಳ್ಳಂಥಾ ಅಂಧಕಾರಕ್ಕೆ ಶತ್ರುವಾದ ಪ್ರಕಾಶಶಕ್ತಿ ಎಂಬ ಮಿಂಚುಕೂಡಿಕೊಂಡು ಇಹಂಥಾ, ಸ್ಫುರನ್ನಾನಾರತ್ನಾಭರಣಪರಿಣದ್ಧೇಂದ್ರಧನುಷಂ–ಪ್ರಕಾಶವುಂಟಾದ ನಾನಾರತ್ನದಿಂದ ನಿರ್ಮಿತವಾದ ಆಭರಣದಿಂದ ಹುಟ್ಟಿದ ಇಂದ್ರಚಾಪವ ಕೂಡಿಕೊಂಡು ಇಹಂಥಾ, ಶ್ಯಾಮಂ ಹರಮಿಹಿರತಪ್ತಂ ತ್ರಿಭುವನಂ ವರ್ಷಂತಂ ಕಮಪಿ ಮೇಘಂ ನಿಷೇವೇ–ಕಪ್ಪಾಗಿ ಇದ್ದಂಥಾ ಹರಸೂರ್ಯನೆಂಬ ಸಂವರ್ತಾಗ್ನಿಯಿಂದ ತಪ್ತವಾದ ಮೂರುಲೋಕವನು ಮಳೆಯಿಂದ ನನಸುವಂಥಾ ಹೇಳ ಶಕ್ಯವಲ್ಲದಂಥಾ ಶಿವಸ್ವರೂಪವಾದ ಮೇಘವನು ಚೆನ್ನಾಗಿ ಸೇವೆಯ ಮಾಡೇನು.

ಇಲ್ಲಿಗೆ ಬರೆಯಬೇಕಾದ ಅರ್ಥ—ತಿಮಿರಪರಿಪಂಥಿಸ್ಫುರಣಯಾ ಎಂಬುದರಿಂದ ಮಣಿಪೂರಚಕ್ರ ಕತ್ತಲೆಯಾದ ಲೋಕವೆಂದು ಮೊದಲೆ ಬರದದೆ, ಈ ವಿಶೇಷಣದಿಂದ ಸರ್ವೇಶ್ವರಿಗೆ ಮಣಿಪೂರಚಕ್ರದಲ್ಲಿ ಸ್ಥಿರವಾಗ ಮಿಂಚನು ಶಿವನಿಗೆ ಮಳೆಗಾಲದ ಮೇಘವನು ಹೇಳಲ್ಪಟ್ಟಿತು. ಇದಕ್ಕೆ ಸಮ್ಮತಿವಚನ ಸಿದ್ಧ ಘುಟಿಕೆ ಎಂಬ ಆಗಮದಿಂದ––

'ಮಣಿಪೂರೈಕವಸತಿಃ ಪ್ರಾವೃಷೇಣ್ಯಃ ಸದಾಶಿವಃ
ಅಂಬುದಾತ್ಮತಯಾ ಭಾತಿ ಸ್ಥಿರಸೌದಾಮಿನೀ ಶಿವಾ'

ಮಣಿಪೂರಸ್ಥಾನದಲ್ಲಿ ಜಲತತ್ತ್ವ ಹುಟ್ಟಿತೆಂದು ಮೊದಲೆ ಬರೆದದೆ. ಅದು ಹೇಗೆ ಎಂದರೆ–ಸೂರ್ಯಕಿರಣವೆ ಅಗ್ನಿಯಕೂಡೆ ಕೂಡಿಕೊಂಡು ಮೇಘಾಕಾರ(ವ ಜಲರೂಪ)ವಾಗಿ ಆಧಾರಸ್ವಾಧಿಷ್ಠಾನಮಧ್ಯದ ಮಣಿಪೂರಕ್ಕೆ ಹೋಗಿ ಜಲರೂಪಾಗಿ ಆ ಜಲದಿಂದ ಸ್ವಾಧಿಷ್ಠಾನಾಗ್ನಿಯಿಂದ ಸುಡಲ್ಪಟ್ಟ ಲೋಕವನು ನನಸು[1]ವಯೆಂದು[1] ಆಗಮರಹಸ್ಯ. ಸ್ಫುರನ್ನಾನಾರತ್ನಾಭರಣಪರಿಣದ್ಧೇಂದ್ರಧನುಷಂ ಎಂಬ ವಿಶೇಷಣದಿಂದ ನಾರಿಯಿಲ್ಲದ ಬಿಲ್ಲೆಂದು ಹೇಳುವರು. ಅದರ ಅರ್ಥವು ವೇದದ ಅರುಣೋಪನಿಷತ್ತಿನಲ್ಲಿ ಬಹಳವಾಗಿ ಹೇಳಿದೆ. ಪ್ರಾಕೃತ ಟೀಕಿನಲ್ಲಿ ಬರೆಯಬಾರದು.

ತವಾಧಾರೇ ಮೂಲೇ ಸಹ ಸಮಯಯಾ ಲಾಸ್ಯಪರಯಾ
ನವಾತ್ಮಾನಂ ಮನ್ಯೇ ನವರಸಮಹಾತಾಂಡವನಟಮ್
ಉಭಾಭ್ಯಾಮೇತಾಭ್ಯಾಮುದಯವಿಧಿಮುದ್ದಿಶ್ಯ ದಯಯಾ
ಸನಾಥಾಭ್ಯಾಂ ಜಜ್ಞೇ ಜನಕಜನನೀಮಜ್ಜಗದಿದಮ್ ೪೦

[ಹೇ ಭಗವತಿ! ತವ ಮೂಲೇ ಆಧಾರೇ ಲಾಸ್ಯಪರಯಾ ಸಮಯಯಾ ಸಹ ನವರಸಮಹಾತಾಂಡವನಟಂ ನವಾತ್ಮಾನಂ ಮನ್ಯೇ. ಉದಯವಿಧಿಮುದ್ದಿಶ್ಯ ಏತಾಭ್ಯಾಂ ದಯಯಾ ಸನಾಥಾಭ್ಯಾಂ ಉಭಾಭ್ಯಾಂ ಜನಕಜನನೀಮತ್ ಇದಂ ಜಗತ್ ಜಜ್ಞೇ.]

[1] ವದೆಂದು (ಖ).

ಹೇ ಭಗವತಿ–ಏ ಭಗವತಿಯೇ!, ತವ ಮೂಲೇ ಆಧಾರೇ–ನಿನ್ನ ಮೂಲಾಧಾರದಲ್ಲಿಯ ಶ್ರೀಚಕ್ರದ ತ್ರಿಕೋಣದಲ್ಲಿ, ಲಾಸ್ಯಪರಯಾ ಸಮಯಯಾ ಸಹ–[1]ನೃತ್ಯವಮಾಡುವ ಸಮಯೆ ಎಂಬ ಹೆಸರುಂಟಾದ ಶಕ್ತಿಯೊಡನೆ ಕೂಡಿಕೊಂಡು, ನವರಸಮಹಾತಾಂಡವನಟಂ ನವಾತ್ಮಾನಂ ಮನ್ಯೇ–ಶೃಂಗಾರಾದಿ ನವರಸಗಳಿಂದ ಅದ್ಭುತತಾಂಡವಮಾಡುವ ಆನಂದಭೈರವನ ತಿಳಿದೇನು. ಉದಯವಿಧಿಮುದ್ದಿಶ್ಯ ಏತಾಭ್ಯಾಂ ದಯಯಾ ಸನಾಥಾಭ್ಯಾಂ ಉಭಾಭ್ಯಾಂ–ಲೋಕದ ಉತ್ಪತ್ತಿಗೋಸ್ಕರ ದಯೆಯಿಂದ ಸಂಯೋಗವಾದ ಆನಂದಭೈರವ ಮಹಾಭೈರವಿ ಇಬ್ಬರಿಂದ, ಜನಕಜನನೀಮತ್ ಇದಂ ಜಗತ್ ಜಜ್ಞೇ–ತಂದೆ ತಾಯಿಗಳುಂಟಾದ ಈ ಜಗತ್ತು ಹುಟ್ಟಿತ್ತು. ಇಲ್ಲಿಗೆ ಬರೆಯತಕ್ಕ ಅರ್ಥ—

ಆಧಾರಸ್ವಾಧಿಷ್ಠಾನ ಕತ್ತಲೆಯಲೋಕವಾಗಲಾಗಿ, ಅಲ್ಲಿಯ ಪೂಜೆ ಕೌಲಮತದವರಿಗಲ್ಲದೆ ಸಮಯಮತದವರಿಗೆ ಇಲ್ಲ. ಆದರೂ ಸಹಸ್ರಕಮಲದಲ್ಲಿ [2]ಇಹ ಸಾದಾಖ್ಯ ಕಲೆಯ[2] ಆಧಾರಸ್ವಾಧಿಷ್ಠಾನದಲ್ಲಿ ಸಮಯಮತದವರು ಮಹಾಭೈರವಿಯಾಗಿ ಧ್ಯಾನವ ಮಾಡಬಹುದೆಂದು ಆಚಾರ್ಯರು ಈ ಶ್ಲೋಕಗಳ ಹೇಳಿದರು.

ಆಧಾರಚಕ್ರದ ತ್ರಿಕೋಣದಲ್ಲಿ ಬಿಂದು ಇಹದೆಂಬುದು ಪ್ರಸಿದ್ಧ, ಈ ಕೌಲಮತದಲ್ಲಿ ತ್ರಿಕೋಣ ಬಿಂದುಸ್ಥಾನವು. ಅಲ್ಲಿ ಕೌಲರು ಭಗವತಿಯ ಪೂಜೆ ಮಾಡುವರು. ಆ ತ್ರಿಕೋಣ ಎರಡುವಿಧ. [3]ಒಂಭತ್ತು ಯೋನ್ಯಾತ್ಮಕವಾದ ಶ್ರೀಚಕ್ರದ ಮಧ್ಯದಲ್ಲಿ ಇದ್ದದ್ದು ಒಂದು,[3] ಪ್ರತ್ಯಕ್ಷ ಸ್ತ್ರೀಯೋನಿ ಒಂದು. ಶ್ರೀಚಕ್ರ ಮಧ್ಯದ ತ್ರಿಕೋಣವನು ಭುಜಪತ್ರೆ ಚಿನ್ನದತಗಡು ಮೊದಲಾದ ಶುದ್ಧ ವಸ್ತುಗಳಲ್ಲಿ ಬರದು ಪೂಜೆಯಮಾಡುವರು ಪೂರ್ವಕೌಲರು. ಪ್ರತ್ಯಕ್ಷ ಸ್ತ್ರೀಯೋನಿಯಲ್ಲಿ ಪೂಜೆಯಮಾಡುವರು ಉತ್ತರಕೌಲರು. ಈ ಎರಡು [4]ಪೂಜೆಯೂ[4] ಬಾಹ್ಯವೆ ಆಗಲಾಗಿ, ಆ ಕೌಲಮತದವರಿಗೆ ಆಧಾರಚಕ್ರದಲ್ಲಿಯೆ ಪೂಜೆ. ಅಲ್ಲಿ ಇಹಂಥಾ ಶಕ್ತಿಗೆ ಕುಂಡಲಿನೀ ಎಂಬ ಹೆಸರು. ಆ ಶಕ್ತಿಯನೆ ಪೂಜೆಯಮಾಡುವರು ತ್ರಿಕೋಣಪೂಜಕರಾದ ಕೌಲರು. ಕುಂಡಲಿನೀಶಕ್ತಿ ಆಧಾರಚಕ್ರದಲ್ಲಿ ಸರ್ವದಾ ನಿದ್ರೆಯ ಮಾಡಿಕೊಂಡು ಇಹಳು. ಅಂಥಾ ಶಕ್ತಿಯನು ಆವಾಗ ಎಬ್ಬಿಸಿಯಾರು ಆ ಕ್ಷಣದಲ್ಲಿ ಮುಕ್ತಿಯೆಂದು ಅವರ ಮತವು. ಅದಕ್ಕಾಗಿ ಕೌಲಮತದಲ್ಲಿ ಕ್ಷಣಮುಕ್ತಿಯೆಂದು ವ್ಯವಹಾರ. ಅಲ್ಲಿ ಮದ್ಯಮಾಂಸಮೊದಲಾದ ದ್ರವ್ಯಗಳಿಂದ ಪ್ರತ್ಯಕ್ಷಯೋನಿಯಲ್ಲಿ ಮನುಮಥನಮಾಡಿ ಉತ್ತರಕೌಲರು ಪೂಜೆಯ ಮಾಡುವರು. *ಬಾಹ್ಯಚಕ್ರ ಶ್ರೀಚಕ್ರ ಅಧೋಮುಖ ತ್ರಿಕೋಣದಲ್ಲಿ ಬಿಂದುವ ಪೂಜೆಯಮಾಡುವರು.* ಇನ್ನು ಕೌಲಮತಕ್ಕೆ ಬರೆಯತಕ್ಕದುಂಟು. ಅದು ವೈದಿಕಮಾರ್ಗವಲ್ಲದ

[1] ಸ್ತ್ರೀಕರ್ತೃಕವಾದ ನೃತ್ಯಕ್ಕೆ ಲಾಸ್ಯವೆಂದೂ ಪುರುಷಕರ್ತೃಕವಾದ ನೃತ್ಯಕ್ಕೆ ತಾಂಡವವೆಂದೂ ಹೆಸರು [2] ಧ್ಯಾನಿಸಲ್ಪಡುವ ಸಾದಾಖ್ಯಕಲೆಯನ್ನೇ—ಎಂದರ್ಥ [3] ಶ್ರೀಚಕ್ರದ ಒಂಭತ್ತು ಯೋನಿಗಳ ಮಧ್ಯದಲ್ಲಿ ಯೋನಿ ಒಂದು ಎಂದರ್ಥ [4] ಯೋನಿಯೂ, ಎಂದಿರಬೇಕು.
* ಈ ಪಾಠವು (ಕ) ಪುಸ್ತಕದಲ್ಲಿ ಇಲ್ಲ.

ಕಾರಣ ಸ್ಮರಣೆಗೂ ಯೋಗ್ಯವಲ್ಲ. ಆದರೂ ಆ ಮಾರ್ಗವು ಸಮಯಮತದವರಿಗೆ ಗ್ರಾಹ್ಯವಲ್ಲವೆಂಬುದಕ್ಕೆ ಕೆಲವ ಬರೆದೇನು.

ಸಮಯಮತಸ್ವರೂಪವ ಬರೆದೇನು—ಮೂಲಾಧಾರಚಕ್ರದಲ್ಲಿ ಶ್ರೀಚಕ್ರದ ತ್ರಿಕೋಣ, ಸ್ವಾಧಿಷ್ಠಾನಚಕ್ರದಲ್ಲಿ ಶ್ರೀಚಕ್ರದ ಅಷ್ಟಕೋಣ, ಮಣಿಪೂರದಲ್ಲಿ ಶ್ರೀಚಕ್ರದ ದಶಕೋಣ, ಅನಾಹತದಲ್ಲಿ ಚಕ್ರದ ಮತ್ತೊಂದು ದಶಕೋಣ, ವಿಶುದ್ಧಿಯಲ್ಲಿ ಚಕ್ರದ ಹದಿನಾಲ್ಕುಕೋಣ, ಆಜ್ಞಾಚಕ್ರದಲ್ಲಿ ಶಿವಚಕ್ರ ನಾಲ್ಕು, ಹೀಗೇ ಚಕ್ರದ ತ್ರಿಕೋಣ, ಅಷ್ಟಕೋಣ, ದಶಕೋಣ, ಮತ್ತೊಂದು ದಶಕೋಣ, ಚತುರ್ದಶಕೋಣ, ಶಿವಚಕ್ರಗಳು ನಾಲ್ಕುಕೂಡಾ ಒಂದು, ಎಲ್ಲಾ ಕೂಡ ಈ ಆರುಚಕ್ರಗಳು ಆಧಾರಾದಿಷಟ್ಚಕ್ರಸ್ವರೂಪವಾಗಿ ಇಹವೆಂದು ಮೊದಲೇ ಬರೆದದೆ. ಶ್ರೀಚಕ್ರದ ತ್ರಿಕೋಣದಲ್ಲಿ ಬಿಂದುವೆಂದು ಪ್ರಸಿದ್ಧ. ಅಲ್ಲಿ ಮೂರು ತ್ರಿಕೋಣದಿಂದ ಎಂಟು ಕೋಣವ ನಿರ್ಮಾಣವಮಾಡುವಾಗ ತ್ರಿಕೋಣದ ಒಳಗೆ ಬಿಂದುಸ್ಥಾನವು. ಅದು ನಾಲ್ಕುಕೋಣ, ಅದನು ಸಹಸ್ರಕಮಲದ ಮಧ್ಯದಲ್ಲಿ ಇದ್ದ ಚಂದ್ರಮಂಡಲವೆಂದು ಮೊದಲೆ ಬರೆದದೆ. ಆ ನಾಲ್ಕುಕೋಣ ಮಧ್ಯದ ಬಿಂದುಸ್ಥಾನವು ಸುಧಾಸಮುದ್ರವು ಸರಘೆಯೆಂದು ಹೇಳಲ್ಪಟ್ಟಿತು. ಸಮಯಿಗಳಿಗೆ ನಾಲ್ಕುಕೋಣಮಧ್ಯದಲ್ಲಿ ಬಿಂದುವಾದಕಾರಣ ಬಾಹ್ಯಚಕ್ರತ್ರಿಕೋಣವು ತರುಣೀತ್ರಿಕೋಣ ಪೂಜೆಯೂ ಇಲ್ಲ. ಸಮಯಿಗಳು ಸಹಸ್ರಕಮಲದಲ್ಲಿ ಸಮಯೆ ಎಂಬ ಶಕ್ತಿಯನು ಸದಾಶಿವನನು ಪೂಜೆಯಮಾಡುವರು. ಆ ಶಕ್ತಿಗೆ ಶಿವನಕೂಡಾ ಐದುವಿಧ ಸರಿಯಾಗಿ ಇದ್ದುದರಿಂದ ಸಮಯೆ ಎಂಬ ಹೆಸರು, ಶಿವನಿಗೂ ದೇವಿಯಕೂಡಾ ಐದು ವಿಧ ಸಾಮ್ಯದಿಂದ [1]ಸಮಯೆ ಎಂದು ಹೆಸರಾಗಲಾಗಿ ಶಿವಶಕ್ತಿಗಳು ಸರಿಯಾದಂಥಾವರು.

ಐದು ವಿಧ ಸಾಮ್ಯ ಹೇಗೆಂದರೆ—ಅಧಿಷ್ಠಾನಸಾಮ್ಯ, ಅನುಷ್ಠಾನಸಾಮ್ಯ, ಅವಸ್ಥಾನಸಾಮ್ಯ ನಾಮಸಾಮ್ಯ, ರೂಪಸಾಮ್ಯ, ಹೀಗೆಂಬ ಐದುವಿಧಸಾಮ್ಯವು ಶಿವಶಕ್ತಿಗಳಿಗೆ ಸಮಾನ. ಅದು ಹೇಗೆಂದರೆ—'ತವಾಧಾರೇ' ಎಂಬುದರಿಂದ ಆಧಾರಚಕ್ರದಲ್ಲಿ ಇಬ್ಬರು ಇರಲಾಗಿ ಅಧಿಷ್ಠಾನಸಾಮ್ಯ ಹೇಳಲ್ಪಟ್ಟಿತ್ತು. 'ಜನಕಜನನೀಮಜ್ಜಗದಿದಂ' ಎಂಬುದರಿಂದ ಇಬ್ಬರು ಜಗತ್ತಿಗೆ ಕಾರಣವಾಗಲಾಗಿ ಅನುಷ್ಠಾನಸಾಮ್ಯ ಹೇಳಲ್ಪಟ್ಟಿತ್ತು. ಲಾಸ್ಯ ತಾಂಡವಶಬ್ದದಿಂದ ಅವಸ್ಥಾನಸಾಮ್ಯ ಹೇಳಲ್ಪಟ್ಟಿತ್ತು. 'ನವಾತ್ಮಾನಂ' ಎಂಬುದರಿಂದ ರೂಪಸಾಮ್ಯ ಹೇಳಲ್ಪಟ್ಟಿತ್ತು. ರೂಪನಾಮಸಾಮ್ಯ ತಂತ್ರಾಂತರದಲ್ಲಿ ವಚನ—

'ಜಪಾಕುಸುಮಸಂಕಾಶೌ [2]ಮಧುಘೂರ್ಣಿತಲೋಚನೌ
ಜಗತಃ ಪಿತರೌ ವಂದೇ ಭೈರವೀಭೈರವಾತ್ಮಕೌ'

ಹೀಗೆ ಕಡಮೆಯ [3]ಚಕ್ರಗಳಲ್ಲಿಯು[3] ತಿಳಿದುಕೊಂಬುದು. ಮಣಿಪೂರಚಕ್ರದಲ್ಲಿ 'ಮಣಿಪೂರೈಕಶರಣಂ' ಎಂಬುದರಿಂದ ಅಧಿಷ್ಠಾನಸಾಮ್ಯ. 'ಸ್ಫುರನ್ನಾನಾ

---

[1] ಸಮಯಾ, ಎಂದಿರಬೇಕು [2] ಮದ—ಪಾಠ [3] ಸ್ಥಳಗಳಲ್ಲಿಯು, ಎಂದಿರಬೇಕು.

ರತ್ನಾಭರಣಪರಿಣದ್ಧೇಂದ್ರಧನುಷಂ' ಎಂಬುದರಿಂದ ಅವಸ್ಥಾನಸಾಮ್ಯವು, ಸ್ವಾಧಿಷ್ಠಾನಚಕ್ರದಲ್ಲಿ 'ತವ ಸ್ವಾಧಿಷ್ಠಾನೇ' ಎಂಬುದರಿಂದ ಅಧಿಷ್ಠಾನಸಾಮ್ಯವು, 'ಮಹತೀಂ' ಎಂಬುದರಿಂದ ರೂಪನಾಮಸಾಮ್ಯವು, 'ಲೋಕಾನ್ ದಹತಿ' ಎಂಬುದರಿಂದ ಅನುಷ್ಠಾನಸಾಮ್ಯವು. ಅನಾಹತ ಚಕ್ರದಲ್ಲಿ ಅನಾಹತ ಅಧಿಷ್ಠಾನವೆಂದು ಅಧಿಷ್ಠಾನಸಾಮ್ಯವು, ಅಗ್ನಿಯಹಾಗೆ ಇಹದರಿಂದ ರೂಪಸಾಮ್ಯವು, ಘಾಳಿ ಇಲ್ಲದ ದೀಪದಹಾಗೆ ಇಹದೆಂಬುದರಿಂದ ಅವಸ್ಥಾನಸಾಮ್ಯವು. ವಿಶುದ್ಧಿ ಚಕ್ರದಲ್ಲಿ ವಿಶುದ್ಧಿ ಅಧಿಷ್ಠಾನವೆಂಬುದರಿಂದ [1]ಅಧಿಷ್ಠಾನಸಾಮ್ಯವು, 'ಶುದ್ಧ ಸ್ಫಟಿಕವಿಶದಂ' ಎಂಬುದರಿಂದ[1] ರೂಪಸಾಮ್ಯವು, 'ವ್ಯೋಮಜನಕಂ' ಎಂಬುದರಿಂದ ಅನುಷ್ಠಾನಸಾಮ್ಯವು. 'ಶಿವಂ ಸೇವೇ' ಎಂಬುದರಿಂದ ನಾಮಸಾಮ್ಯವು, 'ಶಶಿಕಿರಣಸಾರೂಪ್ಯಸರಣೇಃ' ಎಂಬುದರಿಂದ ಅವಸ್ಥಾನಸಾಮ್ಯವು. ಆಜ್ಞಾಚಕ್ರದಲ್ಲಿ 'ತವಾಜ್ಞಾಚಕ್ರಸ್ಥಂ' ಎಂಬುದರಿಂದ ಅಧಿಷ್ಠಾನಸಾಮ್ಯವು, 'ತಪನಶಶಿಕೋಟಿದ್ಯುತಿಧರಂ' ಎಂಬುದರಿಂದ ರೂಪ ಸಾಮ್ಯವು, 'ಪರಂ ಶಂಭುಂ' ಎಂಬುದರಿಂದ ನಾಮಸಾಮ್ಯವು, 'ಯಮಾರಾಧ್ಯನ್ ಭಕ್ತ್ಯಾ' ಎಂಬುದರಿಂದ ಅವಸ್ಥಾನಸಾಮ್ಯವು, ಮುಕ್ತಿಪ್ರದತ್ವವು, ಅನುಷ್ಠಾನಸಾಮ್ಯವು. ಈ ಪ್ರಕಾರದಲ್ಲಿ ಮೂಲಾಧಾರಾದಿ ಆಜ್ಞಾಚಕ್ರಪರಿಯಂತವಾದ ಆರುಚಕ್ರಗಳಲ್ಲಿಯೂ ಶಿವಶಕ್ತಿಗಳಿಗೆ ಐದುವಿಧ ಸಾಮ್ಯವ ತಿಳಿದುಕೊಂಬುದು, ಇದು ಮಹಾರಹಸ್ಯ. ಆದರೂ ಲಕ್ಷ್ಮೀಧರಾಚಾರ್ಯರು ಶಿಷ್ಯರುಗಳ ರಕ್ಷಿಸಬೇಕೆಂದು ಹೇಳಿದರು.

ಅದುಕಾರಣ ಶಿವಶಕ್ತಿಗಳ ಸಮವಾಗಿ ಪೂಜೆಯಮಾಡುವರು ಸಮಯಿಗಳು. ಅವರಿಗೆ ಆರುಚಕ್ರಗಳಲ್ಲಿಯೂ ಪೂಜೆ ಇಲ್ಲ. ಸಹಸ್ರಕಮಲದಲ್ಲಿಯೆ ಪೂಜೆ. ಸಹಸ್ರಕಮಲಪೂಜೆ ಹೇಗೆಂದರೆ—ಸಹಸ್ರಕಮಲವೆ ಬಿಂದುಸ್ಥಾನವಾಗಲಾಗಿ ಆ ಕಮಲದ ಮಧ್ಯದಲ್ಲಿ ಶ್ರೀಚಕ್ರಾಕಾರ ಚಂದ್ರಮಂಡಲವು, ಆ ಮಂಡಲದ ಮಧ್ಯದಲ್ಲಿ ನಾಲ್ಕುಮೂಲೆಯು, ಅದರ ಮಧ್ಯದಲ್ಲಿ ಇಹದು ಇಪ್ಪತ್ತೈದುತತ್ತ್ವಾತೀತವಾದ ಇಪ್ಪತ್ತಾರನೆ ತತ್ತ್ವವು ಶಿವಶಕ್ತಿಗಳ ಐಕ್ಯದರೂಪವಾದ ಸಾದಾಖ್ಯಕಲೆ. ಅದರ ಧ್ಯಾನವೀಗ ಶಿವಶಕ್ತಿಗಳ ಪೂಜೆ. ಅದರಿಂದ ಸಮಯಮತದವರಿಗೆ ಬಾಹ್ಯಾರಾಧನೆ ಇಲ್ಲ. ಷೋಡಶೋಪಚಾರಪೂಜೆಯೂ ಇಲ್ಲ.

ಸಮಯಿಗಳ ಪೂಜೆ ಮತ್ತೆ ಹೇಗೆಂದರೆ—ಮೂಲಾಧಾರಾದಿಯಾದ ಆರು ಚಕ್ರಕ್ಕೆ ಶ್ರೀಚಕ್ರದ ತ್ರಿಕೋಣ ಆದಿಯಾದ ಆರುಚಕ್ರಗಳೊಡನೆ ಐಕ್ಯವು. ಬಿಂದುಸ್ಥಾನವಾದ ನಾಲ್ಕುಮೂಲೆಗೆ ಸಹಸ್ರಕಮಲದ ಕೂಡೆ ಐಕ್ಯವು. ಬಿಂದುವಿಗೆ ಶಿವಶಕ್ತಿಗಳ ಕೂಡೆ ಐಕ್ಯವು. ಹೀಗೆ ಸಾಧಕನ ದೇಹಕ್ಕು ಶಿವಶಕ್ತಿಗಳ ಕೂಡೆ ಐಕ್ಯವು. ಈ ಮೂರುವಿಧ ಐಕ್ಯವು ಚಕ್ರಮಂತ್ರದ ಐಕ್ಯ ಒಂದು ಕೂಡಾ ಈ ನಾಲ್ಕುವಿಧ ಐಕ್ಯಧ್ಯಾನವೆ ಸಮಯಿಗಳ ಪೂಜೆ.

---

[1] ಕೋಶದಲ್ಲಿ ಬಿಟ್ಟುಹೋಗಿದೆ.

ಕೆಲವು ಸಮಯಮತದವರು ಆರುವಿಧೈಕ್ಯಧ್ಯಾನವು ಪೂಜೆ ಎಂದು ಹೇಳು ವರು. ಅದು ಹೇಗೆಂದರೆ—ನಾದಬಿಂದುಕಲೆಗಳಿಗೆ ಭಗವತಿಯ ತತ್ತ್ವ ಅತಿ ಕ್ರಮಿಸಿ ಇಹದೆಂದು ಸರ್ವಾಗಮದಲ್ಲಿ ಹೇಳಿ[1]ಇಹದು. ನಾದವೆಂಬುದು—ಪರಾ ಪಶ್ಯಂತೀ ಮಧ್ಯಮಾ ವೈಖರೀ ಎಂಬ ಭೇ[2]ದದಲ್ಲಿ ನಾಲ್ಕುವಿಧವಾಗಿ ಇಹದು, ಪರಾ ಎಂಬುದಕ್ಕು ಚಕ್ರದ ತ್ರಿಕೋಣಕ್ಕು ಐಕ್ಯ, ಪಶ್ಯಂತೀ ಎಂಬುದಕ್ಕು ಚಕ್ರದ ಅಷ್ಟ ಕೋಣಕ್ಕು ಐಕ್ಯ, ಮಧ್ಯಮೆ ಎಂಬುದಕ್ಕು ಚಕ್ರದ ಎರಡದಶಾರಕ್ಕು ಐಕ್ಯ, ವೈಖರೀ ಎಂಬುದಕ್ಕು ಚಕ್ರದ ಚತುರ್ದಶಾರಕ್ಕು ಐಕ್ಯ, ಶಿವಚಕ್ರ ನಾಲ್ಕು ಶಕ್ತಿ ಚಕ್ರನಾಲ್ಕರೊಳಗೆ ಅಂತರ್ಭಾವ. [3]ಹೀಗೆ ಚಕ್ರಾತ್ಮಕವಾದ [3]ಶ್ರೀಚಕ್ರವು ನಾದ ವೆಂದು ಹೇಳಲ್ಪಡುವುದು. ಬಿಂದುವೆಂಬುದು ಮೂಲಾಧಾರ ಆದಿಯಾಗಿ ಆಜ್ಞಾ ಚಕ್ರಪರಿಯಂತದ ಆರುಚಕ್ರವು. ಕಲಾ ಎಂಬುದು ಐವತ್ತು ಅಕ್ಷರಾತ್ಮಕವಾದ ಮಾತೃಕೆ, ಸೋಮಸೂರ್ಯಾಗ್ನಿಗಳ ಮುನ್ನೂರರವತ್ತು ಕಿರಣಗಳು ಕಲೆಯೆಂದು ಹೇಳಲ್ಪಡುವುದು. ಈ ಪ್ರಕಾರದಲ್ಲಿ ಭಗವತಿಯು ನಾದಬಿಂದುಕಲೆಗಳಿಗೆ ಅತಿಕ್ರಾಂತ. ಸಹಸ್ರಕಮಲವು ಷಟ್ಚಕ್ರಾತ್ಮಕವಾದ ಬಿಂದುವಿಗೆ ಅತೀತವು ಶ್ರೀಚಕ್ರರೂಪವಾದ ಬಿಂದುಸ್ಥಾನವು, ಅದೆ ಸುಧಾಸಿಂಧುವೆಂಬದು, ಅದೆ ಸರಘಾ ಎಂಬುದು. ಶ್ರೀಚಕ್ರವೆಂಬ [4]ನಾಮಾತೀತ[4] ಹೇಗೆಂದರೆ—ತ್ರಿಪುರಸುಂದರ್ಯಾದಿ ನಿತ್ಯೆಗಳ ಶಬ್ದದಿಂದ ಹೇಳಲ್ಪಟ್ಟ ಚಂದ್ರಕಲಾತ್ಮಕವಾದ, 'ಕಏಈಲಹ್ರೀಂ' ಎಂಬ ವಾದಿಯಾದ ಪಂಚದಶಾಕ್ಷರೀಮಂತ್ರವರ್ಣಾತ್ಮಕವಾದ, ಪಂಚಾಶದ್ವರ್ಣಾ ತ್ಮಕ, ಮುನ್ನೂರ ಅರವತ್ತುಕಿರಣಾತ್ಮಕವಾದ, ಮಹಾಕಲಾತ್ಮಕವಾದ, ಇವನೆಲ್ಲ ವನು ಅತಿಕ್ರಮಿಸಿ ಸಾದಾಖ್ಯ ಶ್ರೀವಿದ್ಯೆ ಎಂಬ ಜ್ಞಾನಕಲೆ ಎಂದು ಹೇಳಲ್ಪಡುವ ಬ್ರಹ್ಮವಿದ್ಯೆಯೆನಿಸಿಕೊಂಬ ಭಗವತಿಯೂ, ನಾದಬಿಂದುಕಲೆಗಳಿಗೆ ಅತಿಕ್ರಾಂತವು ಭಗವತಿಯ ತತ್ತ್ವವೆಂಬುದು ರಹಸ್ಯ.

ಇಲ್ಲಿ ನಾದಬಿಂದುಕಲೆಗಳ ಒಂದರಲ್ಲಿ ಒಂದ ಐಕ್ಯಧ್ಯಾನವ ಮಾಡುವಾಗ ಅದು ಆರುವಿಧವಾಗುವುದು. ಈ ಪ್ರಕಾರ ಆರುವಿಧ ಐಕ್ಯದಿಂದ [5]ಭಗವತಿಯ ಧ್ಯಾನ ಪೂಜೆಯ ಮಾಡಿದ ಸಾದಾಖ್ಯಕಲೆಯಲ್ಲಿ ಐಕ್ಯವಾದ ಭಗವತಿಯನು.[5] ಆ ತರುವಾಯ ಆರುವಿಧ ಐಕ್ಯಧ್ಯಾನವಮಾಡಿದ ಮಹಿಮೆಯಿಂದಲೂ ಗುರುವಿನ ಕಟಾಕ್ಷದಲ್ಲಿ ಹುಟ್ಟಿದ ಮಹಾವೇಧೆ ಮಹಿಮೆಯಿಂದಲೂ ಭಗವತಿಯು ಶೀಘ್ರದಲ್ಲಿ ಮೂಲಾಧಾರ ಸ್ವಾಧಿಷ್ಠಾನ ಎರಡು ಚಕ್ರವನು ಭೇದಿಸಿಕೊಂಡು ಮಣಿಪೂರ ಚಕ್ರದಲ್ಲಿ ಪ್ರತ್ಯಕ್ಷವಾಗಿ ಭಕ್ತರಿಗೆ ಕಾಣಬರುವಳು.

ಮಹಾವೇಧೆಪ್ರಕಾರ ಹೇಗೆಂದರೆ—ಪ್ರಥಮವಾಗಿ ಅಭ್ಯಾಸಮಾಡುವಾಗ ಗುರುವಿನಲ್ಲಿ ಭಕ್ತಿಯುಂಟಾಗಿ ಮಹಾವಿದ್ಯೆಯಾದ ಶ್ರೀವಿದ್ಯೆಯನು ಗುರುಮುಖ ದಿಂದ ಉಪದೇಶವ ಮಾಡಿಸಿಕೊಂಡು ಛಂದ ಋಷಿ ದೇವತೆ ಮೊದಲಾಗಿ ಮೂಲ

---

[1] ಅದೆ (ಖ) [2] ದದಿಂದ (ಖ) [3] ಹೀಗೆ ನಾಲ್ಕುಚಕ್ರಾತ್ಮಕವಾದ, ಎಂದಿರಬೇಕು. [4] ನಾದಾತೀತ, ಎಂದಿರಬೇಕು. [5] ಧ್ಯಾನವಮಾಡಿ ಭಗವತಿಯನು ಪೂಜಿಸಿ ಸಾದಾಖ್ಯಕಲೆಯಲ್ಲಿ ಐಕ್ಯವಾಗುವನು.

ಮಂತ್ರಜಪವನು ಗುರು ಉಪದೇಶವ ಮಾಡಿದಪ್ರಕಾರದಲ್ಲಿ ಕೆಲವುದಿನ ಮಾಡಿ, ಆಶ್ವಯುಜಮಾಸದ ಮಹಾನವಮಿಯ ಮೊದಲ ಅರ್ಧರಾತ್ರಿಯಲ್ಲಿ ಗುರುವಿನ ಪಾದಗಳಿಗೆ ನಮಸ್ಕಾರವ ಮಾಡಿದರೆ, ಆ ಗುರುವು ಆಗ ತಮ್ಮ ಕೈಯಿಂದ ಶಿಷ್ಯನ ತಲೆಯಮುಟ್ಟಿ ತಿರುಗಿ ಮಂತ್ರ ಉಪದೇಶವನು ಆರು ಚಕ್ರಪೂಜಾಪ್ರಕಾರವನು ಆರುವಿಧ ಐಕ್ಯಧ್ಯಾನವನು ಉಪದೇಶವ ಮಾಡಲಾಗಿ ಸಾದಾಖ್ಯಕಲೆಯ ಪ್ರಕಾಶವಾದ ಮಹಾವೇಧೆ ಹುಟ್ಟುವುದು. ಹೀಗೆ ಸಾದಾಖ್ಯಕಲೆಯ ಪ್ರಕಾಶವಾದ ಮಹಾವೇಧೆ ಹುಟ್ಟಿದರೆ ಮಣಿಪೂರಚಕ್ರದಲ್ಲಿ ಭಗವತಿಯು ಪ್ರತ್ಯಕ್ಷವಾಗುವಳು. ಭಗವತಿಯನು ಮಣಿಪೂರಚಕ್ರದಲ್ಲಿ ಅರ್ಘ್ಯಪಾದ್ಯಾದಿ ಆಭರಣ ಸಮರ್ಪಣಪರಿಯಂತರವಾದ ಪೂಜೆಗಳನು ಮಾಡಿ, ಆ ತರುವಾಯ ಅನಾಹತ ಚಕ್ರಕ್ಕೆ ಭಗವತಿಯ ಕೊಂಡುಬಂದು ಧೂಪಾದಿ ನೈವೇದ್ಯ ಕೈತೊಳದುಕೊಂಬ ಪರಿಯಂತರವಾದ ಪೂಜೆಗಳನು ಮಾಡಿ, ಆ ತರುವಾಯ ವಿಶುದ್ಧಿಚಕ್ರಕ್ಕೆ ತಂದು ಆ ಭಗವತಿಯನು ಸಿಂಹಾಸನದಲ್ಲಿ ಇಟ್ಟು ಸಖಿಸ್ತ್ರೀಯರೊಡನೆ ನಗುತ ಮಾತನಾಡುತಿಹಂಥಾವಳನು ವಿಶುದ್ಧಿಚಕ್ರದ ಹದಿನಾರುದಳದಲ್ಲಿ ಇದ್ದ ಶುದ್ಧ ಸ್ಫಟಿಕದಹಾಗೆ ನಿರ್ಮಲವಾದ ಚಂದ್ರಕಲೆಗಳ ಮಣಿಗಳಿಂದ ಪೂಜೆಯ ಮಾಡುವದು. ಆ ತರುವಾಯ ಆಜ್ಞಾಚಕ್ರಕ್ಕೆ ತಂದು ಆ ಕಾಮೇಶ್ವರಿಯನು ಆರತಿಗಳು ಮೊದಲಾದ ಅನೇಕ ದೀಪಂಗಳಿಂದ ಪೂಜೆಯ ಮಾಡುವುದು. ಆಜ್ಞಾಚಕ್ರದಲ್ಲಿ ಆರತಿಯ ಮಾಡಬೇಕು ಎಂಬುದಕ್ಕೆ ಲಕ್ಷ್ಮೀಧರಾಚಾರ್ಯರು ಕರ್ಣಾವತಂಸ ಸ್ತುತಿಯಲ್ಲಿ ಹೇಳಿದ ಸಮ್ಮತಿವಚನ—

'[1] ಆಜ್ಞಾಗತದ್ವಿದಳಪದ್ಮಗತೇ ತದಾನೀಂ
ವಿದ್ಯುನ್ನಿಭೇ ರವಿಶಶಿಪ್ರಯತೋತ್ಕಟಾಭೇ
ಗಂಡಸ್ಥಲಪ್ರತಿಫಲತ್ಕರದೀಪಜಾಲ-
ಕರ್ಣಾವತಂಸಕಲಿಕೇ ಕಮಲಾಯತಾಕ್ಷಿ'

[2] [ಹೀಗೆ ಆರತಿಯನು ಮಾಡಿ ಆ ದೇವಿಯನು ತೃಪ್ತಿಗೊಳಿಸಬೇಕು.][2]

ಆ ತರುವಾಯ ಮಿಂಚಿನಹಾಗೆ ಶೀಘ್ರದಲ್ಲಿ ಸಹಸ್ರಕಮಲವನು ಪ್ರವೇಶಿಸಿದ ಭಗವತಿಯನು ಅಮೃತಸಮುದ್ರದ ಮಧ್ಯದ ಐದು ದೇವವೃಕ್ಷಗಳ ನೆಳಲುಳ್ಳ ರತ್ನದ್ವೀಪದ ಸರಘಾಮಧ್ಯದಲ್ಲಿ ಸದಾಶಿವನಕೂಡೆ ಕ್ರೀಡಿಸಿಕೊಂಡು [3]ಇಹಂಥಾವಳ ಧ್ಯಾನವ ಮಾಡುವದು. ಆ ತರುವಾಯ ತೆರೆಯ ಸೀರೆಯ ಹಾಕಿ ತಾನು ಸಮೀಪಗೃಹದಲ್ಲಿ ಇಹದು. ಭಗವತಿ ಎಷ್ಟುಹೊತ್ತಿಗೆ ಸಹಸ್ರಕಮಲವ ಬಿಟ್ಟು ಮೂಲಾಧಾರಕುಂಡವ ಪ್ರವೇಶಿ[4]ಸಿಹಾಳು ಅಷ್ಟುಹೊತ್ತು ಇಲ್ಲಿ ಇಹದೆಂದು ಸಮಯಮತರಹಸ್ಯ.

---

[1] ಆಜ್ಞಾತ್ಮಕ [2] ಪ್ರತಿಗಳಲ್ಲ ಬಿಟ್ಟುಹೋಗಿದೆ [3] ಇಹಂಥಾ ಅವಳ (ಖ) [4] ಸಿಯಹಾಳು (ಖ).

ಇಲ್ಲಿ ಶ್ರೀ ಶಂಕರಾಚಾರ್ಯರ ನಾಲ್ಕುವಿಧ ಧ್ಯಾನಾನಂತರದಲ್ಲಿ ಮಣಿಪೂರ ಚಕ್ರದಲ್ಲಿ ಕಾಣಿಸುವ ಭಗವತಿಯು [1] ಸ್ವರೂಪವನ್ನು 'ಕ್ವಣತ್ಕಾಂಚೀದಾಮಾ' (ಶ್ಲೋ. ೭) ಎಂಬ ಶ್ಲೋಕದಲ್ಲಿ ಹೇಳಲ್ಪಟ್ಟಂಥಾ ನಾಲ್ಕುಭುಜದ ಧನುರ್ಬಾಣ ಪಾಶಾಂಕುಶಕೂಡಿದ ಹಸ್ತಗಳುಳ್ಳಂಥಾವಳು. [1]

ಲಕ್ಷ್ಮೀಧರಾಚಾರ್ಯರ ಆರುವಿಧ ಐಕ್ಯಧ್ಯಾನಾನಂತರದಲ್ಲಿ ಮೂಲಾಧಾರ ಸ್ವಾಧಿಷ್ಠಾನವ ಬಿಟ್ಟು ಮಣಿಪೂರಚಕ್ರದಲ್ಲಿ ಕಾಣಬರುವಂಥಾ ದೇವಿಯು ಹತ್ತು ಭುಜ. ಕರ್ಣಾವತಂಸಸ್ತುತಿಯಲ್ಲಿ ಸಮ್ಮತಿವಚನ—

'ಭವಾನಿ ಶ್ರೀಹಸ್ತೈರ್ವಹಸಿ ಫಣಿಪಾಶಂ ಸೃಣಿಮಥೋ
ಧನುಃ ಪೌಂಡ್ರಂ ಪೌಷ್ಪಂ ಶರಮಥ ಜಪಸ್ರಕ್ಶುಕವರಮ್
ಅಥ ದ್ವಾಭ್ಯಾಂ ಮುದ್ರಾಮಭಯವರದಾನೈಕ[2]ರಸಿಕಾಂ
ಕ್ವಣದ್ವೀಣಾಂ ದ್ವಾಭ್ಯಾಮುರಸಿ ಚ ಕರಾಭ್ಯಾಂ ಚ ಬಿಭೃಷೇ'

'ಭವಾನಿ ಶ್ರೀಹಸ್ತೈಃ' ಎಂಬ ಶ್ಲೋಕಕ್ಕೆ ಅರ್ಥ—ಬಲದ ಭಾಗದ ನಾಲ್ಕು ಹಸ್ತಗಳಲ್ಲಿ ಅಂಕುಶ, ಪುಷ್ಪಬಾಣ, ಜಪಮಾಲೆ, ಅಭಯಮುದ್ರೆ. ಎಡದ ಭಾಗದ ನಾಲ್ಕುಹಸ್ತಗಳಲ್ಲಿ ನಾಗಪಾಶ, ಕಬ್ಬಿನಬಿಲ್ಲು, ಗಿಣಿ, ವರದಮುದ್ರೆ. ಈ ಪ್ರಕಾರ ಎಂಟು ಕೈಯಲ್ಲಿಯೂ ಒಂದರ ಕೆಳಗೆ ಒಂದು ಕ್ರಮದಲ್ಲಿಯೂ, ಎಡ ಬಲವಾದ ಐದನೆ ಎರಡು ಕೈಗಳಿಂದಲೂ ವೀಣೆಯನು ಧರಿಸಿಕೊಂಡು ಇರುವ ಈ ಹತ್ತುಭುಜದ ದೇವಿಯನು ಧ್ಯಾನವಮಾಡುವುದು.

ಈ ಪ್ರಕಾರದಲ್ಲಿ ಪ್ರತ್ಯಕ್ಷವಾಗಿ ಕಾಣಬರುವಂಥಾ ಭಗವತಿಯನು ಮಣಿಪೂರಾದಿ ಸಹಸ್ರಕಮಲಪರಿಯಂತರ ಮಾನಸಪೂಜೆಯ ಮಾಡುವದು. ಸಹಸ್ರಕಮಲದಲ್ಲಿ ತೆರೆಯಸೀರೆಯ ಹಾಕುವಪರಿಯಂತರ ಭಗವತಿಯ ನೋಡಿಕೊಂಡು ಇಹದೆ ಪೂಜೆ. ಇದು ಸಮಯಮತದ ರಹಸ್ಯವು. ಸುಭಗೋದಯದಲ್ಲಿ—

'ಸೂರ್ಯಮಂಡಲಮಧ್ಯಸ್ಥಾಂ ದೇವೀಂ ತ್ರಿಪುರಸುಂದರೀಮ್
ಪಾಶಾಂಕುಶಧನುರ್ಬಾಣಹಸ್ತಾಂ ಧ್ಯಾಯೇತ್ಸುಸಾಧಕಃ
[3] ತ್ರೈಲೋಕ್ಯಂ ಮೋಹಯಾಮಾಸ ಶತನಾರೀಗಣೈರ್ಯುತಮ್'

ಚರ್ಚಾಸ್ತೋತ್ರದಲ್ಲಿ—

ಯೇ ಚಿಂತಯಂತ್ಯರುಣಮಂಡಲಮಧ್ಯವರ್ತಿ
ರೂಪಂ ತವಾಂಬ! ನವಯಾವಕಪಂಕರಮ್ಯಮ್

---

[1] ಸ್ವರೂಪವು "ಕ್ವಣತ್ಕಾಂಚೀದಾಮಾ" ಎಂಬ ಶ್ಲೋಕದಲ್ಲಿ ಹೇಳಿದಂತೆ ನಾಲ್ಕುಭುಜವುಳ್ಳದ್ದು, ಧನುರ್ಬಾಣಪಾಶಾಂಕುಶಕೂಡಿದ ಹಸ್ತಗಳುಳ್ಳಂಥಾದ್ದು, ಎಂದಿರಬೇಕು [2] ರಸಿಕೆ [3] ತ್ರೈಲೋಕ್ಯಂ ಮೋಹಯೇದಾಶು ನರನಾರೀಗಣೈರ್ಯುತಮ್

ತೇಷಾಂ ಸದ್ಯೈವ ಕುಸುಮಾಯುಧಬಾಣಭಿನ್ನ
ವಕ್ಷಸ್ಥಲಾ ಮೃಗದೃಶೋ ವಶಗಾ ಭವಂತಿ

[1] ಹೀಗೆ ಕೆಲವು ಸಮಯಮತದವರು ಬಾಹ್ಯಪೂಜೆ ನಿಷಿದ್ಧವಾದರು ಸೂರ್ಯಮಂಡಲದಲ್ಲಿ ದೇವಿಯ ಬಾಹ್ಯಪೂಜೆ ನಿಷಿದ್ಧವಲ್ಲವೆಂದು ಹೇಳುವರು. ಅದಲ್ಲ, ಬ್ರಹ್ಮಾಂಡದ ಸೂರ್ಯನಿಗು ಪಿಂಡಾಂಡದ ಅನಾಹತಚಕ್ರದಮೇಲೆ ಇಹ ಸೂರ್ಯನಿಗೆ ಐಕ್ಯದಿಂದ ಆ ಅನಾಹತ ಚಕ್ರದಮೇಲೆ ಇಹ ಸೂರ್ಯಮಂಡಲದಲ್ಲಿ ದೇವಿಯ ಪೂಜೆಯೆಂದು ಆ ಶ್ಲೋಕಗಳ ತಾತ್ಪರ್ಯ.

ಹೀಗೆ ಹೃದಯಕಮಲದಲ್ಲಿ ಭಗವತಿಯ ಪೂಜೆಯ ಮಾಡಿದರೆ ಐಹಿಕವಾಂಛಿತ ಫಲಗಳ ಕೊಡುವಳು. ಹೃದಯಕಮಲದಲ್ಲಿ ವಶಿನ್ಯಾದಿಶಕ್ತಿಗಳು ಸಹಿತವಾದ ದೇವಿಯ ಧ್ಯಾನ ವಿದ್ಯಾಪ್ರದ. ಅಲತಿಗೆಯ ವರ್ಣದ ಕೆಂಪಿನಹಾಗೆ ಧ್ಯಾನವ ಮಾಡಿದರೆ ವಶ್ಯ. "ಮುಖಂ ಬಿಂದುಂ ಕೃತ್ವಾ" (ಶ್ಲೋ. ೧೯) ಎಂಬ ಶ್ಲೋಕದ ಧ್ಯಾನವಮಾಡಿದರೆ ಅದರ ಫಲವುಂಟು. ಐಹಿಕ ಫಲಾಪೇಕ್ಷೆಯವರು ಹೃದಯ ಕಮಲದಲ್ಲಿಯೆ ಹೋಮತರ್ಪಣಾದಿಗಳ ಮಾಡುವದು. ಅದುಕಾರಣ ಇಹಪರ ಸಾಧನೋಪಾಯ ಸಮಯಿಗಳಿಗೆ ಮಾನಸಪೂಜೆಯೇ.

ಶ್ರೀ ಶಂಕರಾಚಾರ್ಯರು ಆಧಾರಾದಿ ಚಕ್ರಕ್ರಮಗಳ ಬಿಟ್ಟು ಆಜ್ಞಾ ಚಕ್ರಾದಿ ಅವರೋಹಕ್ರಮವಾಗಿ ಪೂಜೆಯ ಹೇಳಿದ್ದು ವೇದದಲ್ಲಿ—ಆತ್ಮನಿಂದ ಆಕಾಶ ಹುಟ್ಟಿತು, ಆಕಾಶದಿಂದ ವಾಯು ಹುಟ್ಟಿತು, ವಾಯುವಿನಿಂದ ಅಗ್ನಿ, ಅಗ್ನಿಯಿಂದ ಜಲ, ಜಲದಿಂದ ಭೂಮಿಯೆಂಬ ಕ್ರಮವ ಅವಲಂಬಿಸಿ ಹೇಳಿದರು. ಅದರಿಂದ ಮೂಲಾಧಾರ ಸ್ವಾಧಿಷ್ಠಾನಾನಂತರ ಮಣಿಪೂರವೆಂದು ಸರ್ವಯೋಗ ಶಾಸ್ತ್ರಸಿದ್ಧವಾದರು ಸ್ವಾಧಿಷ್ಠಾನಾಗ್ನಿಯಿಂದ ದಗ್ಧವಾದ ಭೂಮಿಯನು ಉಳುಹ ಬೇಕಾಗಿ ಮೂಲಾಧಾರದಮೇಲೆ ಮಣಿಪೂರವ ಹೇಳಿದರು.

ಈ ಪ್ರಕಾರದಲ್ಲಿ ಸಮಯಮತವ ಚನ್ನಾಗಿ ನಿರೂಪಿಸಿ ಸಮಯೆ ಎಂಬ ದೇವಿಯ ಕಿರೀಟ ಮೊದಲಾಗಿ ಪಾದಪರಿಯಂತರ ವರ್ಣನೆಮಾಡುತ್ತಾರೆ.

---

[1] ಹೀಗೆ ಕೆಲವು—ಇದು ಮೊದಲು ಆ ಶ್ಲೋಕಗಳ ತಾತ್ಪರ್ಯವೆಂಬುವ ಗ್ರಂಥಕ್ಕೆ ಬದಲಾಗಿ—'ಇಲ್ಲಿ ಕೆಲವು ಸಮಯಮತದವರು ಬಾಹ್ಯಪೂಜೆ ನಿಷಿದ್ಧವಾದುದರಿಂದ ಸೂರ್ಯ ಮಂಡಲದಲ್ಲಿ ದೇವಿಯ ಬಾಹ್ಯಪೂಜೆ ನಿಷಿದ್ಧವೆಂದು ಹೇಳುವರು. ಅದಲ್ಲ, ಪಿಂಡಾಂಡದಲ್ಲಿರುವ ಚಂದ್ರಸೂರ್ಯರಿಗೆ ಬ್ರಹ್ಮಾಂಡದಲ್ಲಿರುವ ಚಂದ್ರಸೂರ್ಯರೊಡನೆ ಐಕ್ಯವಿರುವುದರಿಂದ ಬ್ರಹ್ಮಾಂಡದಲ್ಲಿರುವ ಸೂರ್ಯಮಂಡಲವು ಬಾಹ್ಯವಾಗುವುದಿಲ್ಲ. ಅದರಿಂದಲೆ ಚಂದ್ರಮಂಡಲ ದಲ್ಲಿ ಚಂದ್ರಕಲಾವಿದ್ಯೆಗೆ ಪೂಜೆ ಹೇಳಿರುವದು ಕೂಡುವುದು. ಚಂದ್ರಮಂಡಲದಲ್ಲಿ ದೇವಿಯ ಪೂಜೆಮಾಡಬಾರದೆಂಬ ವಚನಗಳಿಗೆ ಆಜ್ಞಾಚಕ್ರದ ಮೇಲೆ ಇರುವ ಅಂತರವಾದ ಚಂದ್ರನಿಗೆ ಸಹಸ್ರಕಮಲದಲ್ಲಿ ಇಹ ಚಂದ್ರಕಲೆಗಳ ಅಮೃತಪ್ರವಾಹಗಳಿಂದ ಉಜ್ಜೀವನವಾಗುವದರಿಂದ ಅಲ್ಲಿ ದೇವಿಗೆ ಪೂಜೆಯ ನಿರ್ಬಂಧವಿಲ್ಲವೆಂದು ತಾತ್ಪರ್ಯ' ಎಂದಿರಬೇಕೆಂದು ತೋರುತ್ತದೆ.

ಕಿರೀಟ ವರ್ಣನೆ—

ಗತೈರ್ಮಾಣಿಕ್ಯತ್ವಂ ಗಗನಮಣಿಭಿಃ ಸಾಂದ್ರಘಟಿತಂ
ಕಿರೀಟಂ ತೇ ಹೈಮಂ ಹಿಮಗಿರಿಸುತೇ ಕೀರ್ತಯತಿ ಯಃ
ಸ ನೀಡೇಯಚ್ಛಾಯಾಚ್ಛುರಣಶಬಲಂ ಚಂದ್ರಶಕಲಂ
ಧನುಃ ಶೌನಾಸೀರಂ ಕಿಮಿತಿ ನ ನಿಬಧ್ನಾತಿ ಧಿಷಣಾಮ್ ೪೧

[ಹೇ ಹಿಮಗಿರಿಸುತೇ! ಮಾಣಿಕ್ಯತ್ವಂ ಗತೈಃ ಗಗನಮಣಿಭಿಃ ಸಾಂದ್ರಘಟಿತಂ ಹೈಮಂ ತೇ ಕಿರೀಟಂ ಯಃ ಕೀರ್ತಯತಿ ಸಃ ನೀಡೇಯಚ್ಛಾಯಾಚ್ಛುರಣಶಬಲಂ ಚಂದ್ರಶಕಲಂ ಶೌನಾಸೀರಂ ಧನುರಿತಿ ಧಿಷಣಾಂ ಕಿಂ ನ ನಿಬಧ್ನಾತಿ.]

ಹೇ ಹಿಮಗಿರಿಸುತೇ—ಹೇ ಹಿಮವತ್ಪರ್ವತನ ಮಗಳೇ! ಮಾಣಿಕ್ಯತ್ವಂಗತೈಃ ಗಗನಮಣಿಭಿಃ—ರತ್ನಭಾವಹೊಂದಿದ ದ್ವಾದಶಸೂರ್ಯರಿಂದ, ಸಾಂದ್ರಘಟಿತಂ ಹೈಮಂ ತೇ ಕಿರೀಟಂ—ದಟ್ಟವಾಗಿ ಕೆತ್ತಿ ಇದ್ದಂಥಾ ಭಂಗಾರದ ನಿನ್ನ ಕಿರೀಟವನು, ಯಃ ಕೀರ್ತಯತಿ—ಆವ ಕವೀಶ್ವರನು ವರ್ಣಿಸಿಯಾನು, ಸಃ—ಆ ಕವೀಶ್ವರನು, ನೀಡೇಯಚ್ಛಾಯಾಚ್ಛುರಣಶಬಲಂ ಚಂದ್ರಶಕಲಂ—ರತ್ನಸಂಬಂಧವಾದ ಕಾಂತಿಗಳಿಂದ ವ್ಯಾಪಿಸಿ ಇದ್ದುದರಿಂದ ನಾನಾವರ್ಣವಾಗಿ ಇದ್ದಂಥಾ ಚಂದ್ರಖಂಡವನು, ಶೌನಾಸೀರಂ ಧನುರಿತಿ ಧಿಷಣಾಂ ಕಿಂ ನ ನಿಬಧ್ನಾತಿ—ಇಂದ್ರಸಂಬಂಧವಾದ ಬಿಲ್ಲೆಂದು ಬುದ್ಧಿಯ ಮಾಡದೆ ಇಹನೆ. ಇಂದ್ರಚಾಪವೆಂದು ಬುದ್ಧಿಯ ಮಾಡುವನು. ಸರ್ವೇಶ್ವರಿಯ ಕಿರೀಟದಲ್ಲಿ ಇದ್ದ ಚಂದ್ರಖಂಡವ ಇಂದ್ರಚಾಪವೆಂದುದರಿಂದ ಉತ್ಪ್ರೇಕ್ಷಾಲಂಕಾರ ಪ್ರಧಾನ.

ಕೇಶವರ್ಣನೆ—

ಧುನೋತು ಧ್ವಾಂತಂ ನಸ್ತುಲಿತದಲಿತೇಂದೀವರವನಂ
ಘನಸ್ನಿಗ್ಧಶ್ಲಕ್ಷ್ಣಂ ಚಿಕುರನಿಕುರುಂಬಂ ತವ ಶಿವೇ
ಯದೀಯಂ ಸೌರಭ್ಯಂ ಸಹಜಮುಪಲಬ್ಧುಂ ಸುಮನಸಃ
ವಸಂತ್ಯಸ್ಮಿನ್ಮನ್ಯೇ ಬಲಮಥನವಾಟೀವಿಟಪಿನಾಮ್ ೪೨

[ಹೇ ಶಿವೇ! ತುಲಿತದಲಿತೇಂದೀವರವನಂ ಘನಸ್ನಿಗ್ಧಶ್ಲಕ್ಷ್ಣಂ ತವ ಚಿಕುರನಿಕುರುಂಬಂ ನಃ ಧ್ವಾಂತಂ ಧುನೋತು. ಯದೀಯಂ ಸಹಜಂ ಸೌರಭ್ಯಂ ಉಪಲಬ್ಧುಂ ಅಸ್ಮಿನ್ ಬಲಮಥನವಾಟೀವಿಟಪಿನಾಂ ಸುಮನಸಃ ವಸಂತೀತಿ ಮನ್ಯೇ.]

ಹೇ ಶಿವೇ—ಹೇ ಮಂಗಳೇ! ತುಲಿತದಲಿತೇಂದೀವರವನಂ ಘನಸ್ನಿಗ್ಧಶ್ಲಕ್ಷ್ಣಂ ತೇ ಚಿಕುರನಿಕುರುಂಬಂ—ಸದೃಶವಮಾಡಲ್ಪಟ್ಟ ಅರಳಿದ ಕನ್ನೈದಿಲ ಸಮೂಹದ ಹಾಗೆ ಇದ್ದಂಥಾ ನಿನ್ನ ತುರುಬು, ನಃ ಧ್ವಾಂತಂ ಧುನೋತು—ನಮ್ಮ ಅಂತಃ

ಕರಣದ ಅಜ್ಞಾನವೆಂಬ ಕತ್ತಲೆಯನು ಪರಿಹರಿಸಲಿ. ಯದೀಯಂ ಸಹಜಂ ಸೌರಭ್ಯಂ ಉಪಲಬ್ಧುಂ–ಆವದಾನೊಂದು ತುರುಬಿನ ಕೂಡಾಹುಟ್ಟಿದಂಥಾ ಪರಿಮಳವನು ತೆಕ್ಕೊಂಬುದಕ್ಕಾಗಿ, ಅಸ್ಮಿನ್ ಬಲಮಥನವಾಟೀವಿಟಪಿನಾಂ ಸುಮನಸಃ ವಸಂತೀತಿ ಮನ್ಯೇ–ಈ ತುರುಬಿನಲ್ಲಿ ದೇವೇಂದ್ರನ ನಂದನದ ಪಾರಿಜಾತ ಮೊದಲಾದ ವೃಕ್ಷಗಳ ಹೂವುಗಳು ಇದ್ದಾವೆಂದು ತಿಳಿದೇನು.

ಈ ಶ್ಲೋಕದಲ್ಲಿ ಸರ್ವೇಶ್ವರಿಯ ತುರುಬಿನಲ್ಲಿ ಶೃಂಗಾರಾರ್ಥವಾಗಿ ಮುಡಿದ ಪಾರಿಜಾತ ಮೊದಲಾದ ಹೂವುಗಳು ಸರ್ವೇಶ್ವರಿಯ ಕೇಶದ ಕೂಡಾ ಹುಟ್ಟಿದ ಪರಿಮಳವ ತೆಕ್ಕೊಂಬುದಕ್ಕಾಗಿ ಬಂದವೆಂದು ಉತ್ಪ್ರೇಕ್ಷಿಸಿದ್ದದರಿಂದ ಉತ್ಪ್ರೇಕ್ಷಾಲಂಕಾರ.

ಬೈತಲೆಯ ರೇಖೆಯ ವರ್ಣನೆ—

ತನೋತು ಕ್ಷೇಮಂ ನಸ್ತವ ವದನಸೌಂದರ್ಯಲಹರೀ
ಪರೀವಾಹಸ್ರೋತಸ್ಸರಣಿರಿವ ಸೀಮಂತಸರಣಿಃ
ವಹಂತೀ ಸಿಂದೂರಂ ಪ್ರಬಲಕಬರೀಭಾರತಿಮಿರ
ದ್ವಿಷಾಂ ಬೃಂದೈರ್ಬಂದೀಕೃತಮಿವ ನವೀನಾರ್ಕಕಿರಣಮ್ ೪೪

[ಹೇ ಭಗವತಿ! ವದನಸೌಂದರ್ಯಲಹರೀಪರೀವಾಹಸ್ರೋತಸ್ಸರಣಿರಿವ ಸ್ಥಿತಾ ತವ ಸೀಮಂತಸರಣಿಃ ಪ್ರಬಲಕಬರೀಭಾರತಿಮಿರದ್ವಿಷಾಂ ಬೃಂದೈಃ ಬಂದೀಕೃತಂ ನವೀನಾರ್ಕಕಿರಣಮಿವ ಸಿಂದೂರಂ ವಹಂತೀ ನಃ ಕ್ಷೇಮಂ ತನೋತು.]

ಹೇ ಭಗವತಿ–ಎ ಭಗವತಿಯೇ! ವದನಸೌಂದರ್ಯಲಹರೀಪರೀವಾಹ ಸ್ರೋತಸ್ಸರಣಿರಿವ ಸ್ಥಿತಾ ತವ ಸೀಮಂತಸರಣಿಃ–ಮುಖಲಾವಣ್ಯರಸದ ಅಧಿಕ ವಾದ ಪ್ರವಾಹದ ದಾರಿಯು ಹಾಗೆ ಇದ್ದಂಥಾ ನಿನ್ನ ಬೈತಲೆಯ ರೇಖೆಯು, ಪ್ರಬಲಕಬರೀಭಾರತಿಮಿರದ್ವಿಷಾಂ ಬೃಂದೈಃ ಬಂದೀಕೃತಂ ನವೀನಾರ್ಕಕಿರಣ ಮಿವ ಸಿಂದೂರಂ ವಹಂತೀ–ಪ್ರಬಲವಾದ ಕತ್ತಲೆಯೆಂಬ ಶತ್ರುಗಳ ಸಮೂಹ ದಿಂದ ಹಿಡಿಯಲುಪಟ್ಟ ಬಾಲಸೂರ್ಯನ ಕಿರಣದೋಪಾದಿಯಲ್ಲಿ ಇದ್ದಂಥಾ ಕುಂಕುಮತುಂಬಿ ಇದ್ದಂಥಾ ಬೈತಲೆಯು, ನಃ ಕ್ಷೇಮಂ ತನೋತು–ನಮಗೆ ಶುಭವ ಕೊಡಲಿ.

ಈ ಶ್ಲೋಕದಲ್ಲಿ ಸರ್ವೇಶ್ವರಿಯ ಬೈತಲೆಯ ರೇಖೆಯು ಲಾವಣ್ಯರಸ ಪ್ರವಾಹದ ದಾರಿಯೆಂದು, ಅಲ್ಲಿ ತುಂಬಿ ಇದ್ದ ಕುಂಕುಮದ ರಜವ ಬಾಲ ಸೂರ್ಯನ ಕಿರಣವೆಂದು ಉತ್ಪ್ರೇಕ್ಷಿಸಿದ್ದದರಿಂದ ಉತ್ಪ್ರೇಕ್ಷಾಲಂಕಾರ ಪ್ರಧಾನ.

ಮುಖವರ್ಣನೆ--

ಅರಾಲೈಃ ಸ್ವಾಭಾವ್ಯಾದಲಿಕಲಭಸಶ್ರೀಭಿರಲಕೈಃ
ಪರೀತಂ ತೇ ವಕ್ತ್ರಂ ಪರಿಹಸತಿ ಪಂಕೇರುಹರುಚಿಮ್
ದರಸ್ಮೇರೇ ಯಸ್ಮಿನ್ ದಶನರುಚಿಕಿಂಜಲ್ಕರುಚಿರೇ
ಸುಗಂಧೌ ಮಾದ್ಯಂತಿ ಸ್ಮರದಹನಚಕ್ಷುರ್ಮಧುಲಿಹಃ ೪೪

[ಹೇ ಭಗವತಿ! ಸ್ವಾಭಾವ್ಯಾತ್ ಅರಾಲೈಃ ಅಲಿಕಲಭಸಶ್ರೀಭಿಃ ಅಲಕೈಃ ಪರೀತಂ ತೇ ವಕ್ತ್ರಂ ಪಂಕೇರುಹರುಚಿಂ ಪರಿಹಸತಿ. ದರಸ್ಮೇರೇ ದಶನರುಚಿ ಕಿಂಜಲ್ಕರುಚಿರೇ ಸುಗಂಧೌ ಯಸ್ಮಿನ್ ಸ್ಮರದಹನಚಕ್ಷುರ್ಮಧುಲಿಹಃ ಮಾದ್ಯಂತಿ.]

ಹೇ ಭಗವತಿ--ಏ ಭಗವತಿಯೇ! ಸ್ವಾಭಾವ್ಯಾತ್ ಅರಾಲೈಃ ಅಲಿಕಲಭ ಸಶ್ರೀಭಿಃ ಅಲಕೈಃ--ಸ್ವಭಾವದಿಂದ ನೀಲಿಯಾಗಿ ಇದ್ದಂಥಾ ಮರಿದುಂಬಿಗಳ ಸಮಾನಕಾಂತಿಯುಳ್ಳಂಥಾ ಮುಂಗುರುಳುಗಳಿಂದ, ಪರೀತಂ ತೇ ವಕ್ತ್ರಂ ಪಂಕೇರುಹ ರುಚಿಂ ಪರಿಹಸತಿ--ಬಳಸಿ ಇದ್ದಂಥಾ ನಿನ್ನ ಮುಖವು ತಾವರೆಯ ಚಲುವಿಕೆಯ ನಗುತಲದೆ. ದರಸ್ಮೇರೇ ದಶನರುಚಿಕಿಂಜಲ್ಕರುಚಿರೇ ಸುಗಂಧೌ ಯಸ್ಮಿನ್-- ಮುಗುಳುನಗೆಯ ವಿಕಾಸವುಳ್ಳಂಥಾ ಹಲ್ಲುಗಳ ಕಾಂತಿಯೆಂಬ ಕೇಸರಗಳುಳ್ಳಂಥಾ ಒಳ್ಳೆಯ ಪರಿಮಳವುಳ್ಳಂಥಾ ತಾವರೆಯ ಚಲುವಿಕೆಯನು ನಗುತಿದ್ದಂಥಾ ನಿನ್ನ ಮುಖಕಮಲದಲ್ಲಿ, ಸ್ಮರದಹನಚಕ್ಷುರ್ಮಧುಲಿಹಃ ಮಾದಂತಿ--ಮನ್ಮಥನ ದಹಿಸಿದಂಥಾ ಶಿವನ ಕಣ್ಣುಗಳೆಂಬ ತುಂಬಿಗಳು ಮದವಮಾಡಿಕೊಂಡು ಅವೆ.

ಮನ್ಮಥನ ಗೆದ್ದು ಇದ್ದಂಥಾ ಶಿವನಿಗೂ ಸರ್ವೇಶ್ವರಿಯ ಮುಖದರ್ಶನ ದಿಂದ ಮನ್ಮಥೋದ್ರೇಕವುಂಟಾಗುವದೆಂದು ಈ ಶ್ಲೋಕದ ಅಭಿಪ್ರಾಯ. ಸರ್ವೇಶ್ವರಿಯ ಮುಖ ತಾವರೆಯ ಚಲುವಿಕೆಯ ನಕ್ಕಿತೆಂದು ತಾವರೆಯ ಹಾಗೆ ಅದೆ ಎಂದದರಿಂದ ಉಪಮಾಲಂಕಾರ ಪ್ರಧಾನ.

ಲಲಾಟವರ್ಣನೆ--

ಲಲಾಟಂ ಲಾವಣ್ಯದ್ಯುತಿವಿಮಲಮಾಭಾತಿ ತವ ಯತ್
ದ್ವಿತೀಯಂ ತನ್ಮನ್ಯೇ ಮುಕುಟಘಟಿತಂ ಚಂದ್ರಶಕಲಮ್
ವಿಪರ್ಯಾಸನ್ಯಾಸಾದುಭಯಮಪಿ ಸಂಭೂಯ ಚ ಮಿಥಃ
ಸುಧಾಲೇಪಸ್ಯೂತಿಃ ಪರಿಣಮತಿ ರಾಕಾಹಿಮಕರಃ ೪೫

[ಹೇ ಭಗವತಿ! ತವ ಯತ್ ಲಲಾಟಂ ಲಾವಣ್ಯದ್ಯುತಿವಿಮಲಂ ಆಭಾತಿ ತತ್ ಮುಕುಟಘಟಿತಂ ಚಂದ್ರಶಕಲಂ ದ್ವಿತೀಯಂ ಮನ್ಯೇ. ಯತ್ ಯಸ್ಮಾದು ಭಯಂ ವಿಪರ್ಯಾಸನ್ಯಾಸಾತ್ ಮಿಥಃ ಸಂಭೂಯ ಚ ಸುಧಾಲೇಪಸ್ಯೂತಿಃ ರಾಕಾಹಿಮಕರಃ ಪರಿಣಮತಿ.]

ಹೇ ಭಗವತಿ—ಏ ಭಗವತಿಯೇ! ತವ ಯತ್ ಲಲಾಟಂ ಲಾವಣ್ಯ ದ್ಯುತಿವಿಮಲಂ ಆಭಾತಿ—ನಿನ್ನ ಆವುದಾನೊಂದು ಅರ್ಧಚಂದ್ರಾಕಾರವಾದ ಲಲಾಟವು ಚಲುವಿಕೆಯು ಕಾಂತಿಯಿಂದ ನಿರ್ಮಲವಾಗಿ ಒಪ್ಪುತದೆ, ತತ್ ಮಕುಟಘಟಿತಂ ಚಂದ್ರಶಕಲಂ ದ್ವಿತೀಯಂ ಮನ್ಯೇ——ಆ ಕಿರೀಟದಲ್ಲಿ ಇದ್ದ ಅರ್ಧಚಂದ್ರನನ್ನು ಎರಡನೆಯ ಖಂಡವಾಗಿ ತಿಳಿದೇನು, ಯದ್ಯಸ್ಮಾದುಭಯ ಮಪಿ ವಿಪರ್ಯಾಸನ್ಯಾಸಾನ್ಮಿಥಃ ಸಂಭೂಯ ಚ ಸುಧಾಲೇಪಸ್ಯೂತಿಃ ರಾಕಾ ಹಿಮಕರಃ ಪರಿಣಮತಿ–ಆವುದಾನೊಂದು ಕಾರಣದಿಂದ ಲಲಾಟಾಕಾರವಾದ ಅರ್ಧಚಂದ್ರನು ಕಿರೀಟದಲ್ಲಿ ಊರ್ಧ್ವಶೃಂಗವಾಗಿ ಇದ್ದಂಥಾ ಅರ್ಧಚಂದ್ರನು ಎರಡು ವ್ಯತ್ಯಾಸದಿಂದ ಅನ್ಯೋನ್ಯವಾಗಿ ಕೂಡಿಕೊಂಡು ಅಮೃತದ್ರವವುಂಟಾದ ಪೂರ್ಣಚಂದ್ರನಾಗಿ ಒಪ್ಪುತ್ತದೆ.

ಈ ಶ್ಲೋಕದಲ್ಲಿ ಸರ್ವೇಶ್ವರಿಯ ಲಲಾಟವ ಕಿರೀಟದಲ್ಲಿ ಇದ್ದ ಚಂದ್ರ ಖಂಡದ ಹಾಗೆಂದು ಎರಡು ಕೂಡಾ ಪೂರ್ಣಚಂದ್ರನೆಂದು ಉತ್ಪ್ರೇಕ್ಷಿಸಿದ್ದದ ರಿಂದ ಉತ್ಪ್ರೇಕ್ಷಾಲಂಕಾರ ಪ್ರಧಾನ.

ಹುಬ್ಬುಗಳ ವರ್ಣನೆ—

ಭ್ರುವೌ ಭುಗ್ನೇ ಕಿಂಚಿದ್ಭುವನಭಯಭಂಗವ್ಯಸನಿನಿ
ತ್ವದೀಯೇ ನೇತ್ರಾಭ್ಯಾಂ ಮಧುಕರರುಚಿಭ್ಯಾಂ ಧೃತಗುಣಮ್
ಧನುರ್ಮನ್ಯೇ ಸವ್ಯೇತರಕರಗೃಹೀತಂ ರತಿಪತೇಃ
ಪ್ರಕೋಷ್ಠೇ ಮುಷ್ಟೌ ಚ ಸ್ಥಗಯತಿ ನಿಗೂಢಾಂತರಮುಮೇ ೪೭

[ಹೇ ಉಮೇ! ಭುವನಭಯಭಂಗವ್ಯಸನಿನಿ ತ್ವದೀಯೇ ಕಿಂಚಿತ್ ಭುಗ್ನೇ ಭ್ರುವೌ ಮಧುಕರರುಚಿಭ್ಯಾಂ ನೇತ್ರಾಭ್ಯಾಂ ಧೃತಗುಣಂ ರತಿಪತೇಃ ಸವ್ಯೇ ತರಕರಗೃಹೀತಂ ಪ್ರಕೋಷ್ಠೇ ಮುಷ್ಟೌ ಚ ಸ್ಥಗಯತಿ ನಿಗೂಢಾಂತರಂ ಧನುರ್ಮನ್ಯೇ.]

ಹೇ ಉಮೇ—ಏ ಪಾರ್ವತಿಯೇ! ಭುವನಭಯಭಂಗವ್ಯಸನಿನಿ–ಲೋಕದ ಭಯುವ ಕೆಡಿಸುವದರಲ್ಲಿ ವ್ಯಸನವುಂಟಾದವಳೇ! ತ್ವದೀಯೇ ಕಿಂಚಿತ್ ಭುಗ್ನೇ ಭ್ರುವೌ–ನಿನ್ನ ಸಂಬಂಧವಾಗಿ ಇದ್ದಂಥಾ ಒಂದಿಷ್ಟು ಬಾಗಿಯಿದ್ದ ಎರಡು ಹುಬ್ಬುಗಳನು, ಮಧುಕರರುಚಿಭ್ಯಾಂ ನೇತ್ರಾಭ್ಯಾಂ ಧೃತಗುಣಂ–ತುಂಬಿಗಳ ಕಾಂತಿಯುಳ್ಳಂಥಾ ಕಣ್ಣುಗಳ ನಾರಿಯುಳ್ಳಂಥಾ, ರತಿಪತೇಃ ಸವ್ಯೇತರಕರ ಗೃಹೀತಂ ಪ್ರಕೋಷ್ಠೇ ಮುಷ್ಟೌ ಚ ಸ್ಥಗಯತಿ ನಿಗೂಢಾನ್ತರಂ ಧನು ರ್ಮನ್ಯೇ–ಮನ್ಮಥನ ಎಡದ ಮುಂಗೈಮುಷ್ಟಿಯಲ್ಲಿ ಹಿಡಿಯಲಾಗಿ ಕಾಣಬಾರದ ಮಧ್ಯವುಂಟಾದ ಬಿಲ್ಲು ಎಂದು ತಿಳಿದೇನು.

ಈ ಶ್ಲೋಕದಲ್ಲಿ ಸರ್ವೇಶ್ವರಿಯ ಹುಬ್ಬುಗಳ ಮನ್ಮಥನ ಎಡದ ಕೈಯಲ್ಲಿ ಹಿಡಿದು ಇದ್ದ ಧನುವು ಎಂದು ಹೇಳಿದ್ದರಿಂದ ಉತ್ಪ್ರೇಕ್ಷಾಲಂಕಾರ ಪ್ರಧಾನ.

ಕಣ್ಣುಗಳ ವರ್ಣನೆ—(೧)

ಅಹಃ ಸೂತೇ ಸವ್ಯಂ ತವ ನಯನಮರ್ಕಾತ್ಮಕತಯಾ
ತ್ರಿಯಾಮಾಂ ವಾಮಂ ತೇ ಸೃಜತಿ ರಜನೀನಾಯಕಮಯಮ್
ತೃತೀಯಾ ತೇ ದೃಷ್ಟಿರ್ದರದಲಿತಹೇಮಾಂಬುಜರುಚಿಂ
ಸಮಾಧತ್ತೇ ಸಂಧ್ಯಾಂ ದಿವಸನಿಶಯೋರಂತರಚರೀಮ್ ೪೭

[ಹೇ ಭಗವತಿ! ತವ ಸವ್ಯಂ ನಯನಂ ಅರ್ಕಾತ್ಮಕತಯಾ ಅಹಃ ಸೂತೇ. ಹೇ ಭಗವತಿ! ತೇ ವಾಮಂ ನಯನಂ ರಜನೀನಾಯಕಮಯಂ ಸತ್ ತ್ರಿಯಾಮಾಂ ಸೃಜತಿ. ಹೇ ಭಗವತಿ! ತೇ ತೃತೀಯಾ ದೃಷ್ಟಿಃ ದರದಲಿತ ಹೇಮಾಂಬುಜರುಚಿಂ ದಿವಸನಿಶಯೋರಂತರಚರೀಂ ಸಂಧ್ಯಾಂ ಸಮಾಧತ್ತೇ.]

ಹೇ ಭಗವತಿ ತವ ಸವ್ಯಂ ನಯನಂ ಅರ್ಕಾತ್ಮಕತಯಾ ಅಹಃ ಸೂತೇ—ಏ ಭಗವತಿಯೇ! ನಿನ್ನ ಬಲದ ಕಣ್ಣು ಸೂರ್ಯನ ರೂಪಾಗಿ ಹಗಲ ಮಾಡುತದೆ. ಹೇ ಭಗವತಿ ತೇ ವಾಮಂ ನಯನಂ ರಜನೀನಾಯಕಮಯಂ ಸತ್ ತ್ರಿಯಾಮಾಂ ಸೃಜತಿ—ಏ ಭಗವತಿಯೇ! ನಿನ್ನ ಎಡದ ಕಣ್ಣು ಚಂದ್ರನ ರೂಪಾಗಿ ರಾತ್ರಿಯ ಮಾಡುತದೆ. ಹೇ ಭಗವತಿ ತೇ ತೃತೀಯಾ ದೃಷ್ಟಿಃ ದರದಲಿತಹೇಮಾಂಬುಜರುಚಿಂ ದಿವಸನಿಶಯೋರಂತರಚರೀಂ ಸಂಧ್ಯಾಂ ಸಮಾಧತ್ತೇ—ಏ ಭಗವತಿಯೇ! ನಿನ್ನ ಲಲಾಟದಲ್ಲಿ ಇದ್ದ ಮೂರನೆ ಕಣ್ಣು ಅಗ್ನಿ ರೂಪಾಗಿ ಬಿರಿಮುಗುಳಾದ ಕೆಂದಾವರೆಯ ಕಾಂತಿಯುಳ್ಳ ದಿವಾರಾತ್ರೆಗಳ ನಡುವೆ ಇದ್ದಂಥಾ ಸಂಧ್ಯಾಕಾಲವನು ಮಾಡುತದೆ.

ಇಲ್ಲಿ ಸರ್ವೇಶ್ವರಿಯ ಅಂಗದ ನೇತ್ರಮಾತ್ರದ ಸೂರ್ಯಚಂದ್ರಾಗ್ನಿಗಳಿಂದ ಹಗಲು ಇರುಳು ಸಂಧ್ಯಾಕಾಲ ಈ ಮೂರರಿಂದ ಪಕ್ಷಮಾಸ ರುತು ಅಯನ ಸಂವತ್ಸರ ಯುಗ ಕಲ್ಪಪರಿಯಂತರ ಕಾಲೋತ್ಪತ್ತಿಯ ಹೇಳಿದ್ದು. ಅದರಿಂದ ಸರ್ವೇಶ್ವರಿಗೆ ನಿತ್ಯತ್ವ ಎಂಬುದು ಸೂಚನೆ.

ಕಣ್ಣುಗಳ ವರ್ಣನೆ—(೨)

ವಿಶಾಲಾ ಕಲ್ಯಾಣೀ ಸ್ಫುಟರುಚಿರಯೋಧ್ಯಾ ಕುವಲಯೈಃ
ಕೃಪಾಧಾರಾಧಾರಾ ಕಿಮಪಿ ಮಧುರಾಭೋಗವತಿಕಾ
ಅವಂತೀ ದೃಷ್ಟಿಸ್ತೇ ಬಹುನಗರವಿಸ್ತಾರವಿಜಯಾ
ಧ್ರುವಂ ತತ್ತನ್ನಾಮವ್ಯವಹರಣಯೋಗ್ಯಾ ವಿಜಯತೇ ೪೮

[ಹೇ ಭಗವತಿ! ತೇ ದೃಷ್ಟಿಃ ವಿಶಾಲಾ ಕಲ್ಯಾಣೀ ಸ್ಫುಟರುಚಿಕುವಲಯೈಃ ಅಯೋಧ್ಯಾ ಕೃಪಾಧಾರಾಧಾರಾ ಕಿಮಪಿ ಮಧುರಾ ಆಭೋಗವತಿಕಾ ಅವಂತೀ ಬಹುನಗರವಿಸ್ತಾರವಿಜಯಾ ತತ್ತನ್ನಾಮವ್ಯವಹರಣಯೋಗ್ಯಾ ಧ್ರುವಂ ವಿಜಯತೇ.]

ಹೇ ಭಗವತಿ–ಏ ಭಗವತಿಯೇ ! ತೇ ದೃಷ್ಟಿಃ–ನಿನ್ನ ಕಣ್ಣು, ವಿಶಾಲಾ–ಅಗಲವಾಗಿ ಇದ್ದಂಥಾದ್ದು, ಕಲ್ಯಾಣೀ—ಮಂಗಳವಾಗಿ ಇದ್ದಂಥಾದ್ದು, [1] ಸ್ಫುಟರುಚಿಕುವಲಯೈಃ ಅಯೋಧ್ಯಾ—ಚನ್ನಾಗಿ ಕಾಂತಿಯುಳ್ಳ ಕನ್ನೈದಿಲುಗಳಿಂದ ಗೆಲುವದಕ್ಕೆ ಶಕ್ಯವಲ್ಲದೆ ಇದ್ದಂಥಾದ್ದು, ಕೃಪಾಧಾರಾಧಾರಾ—ದಯವೆಂಬ ಧಾರೆಗೆ ಆಧಾರವಾಗಿ ಇದ್ದಂಥಾದ್ದು, [2] (ಕಿಮಪಿ ಮಧುರಾ—ಅವ್ಯಕ್ತಮಧುರವಾಗಿ ಇದ್ದಂಥಾದ್ದು), ಆಭೋಗವತಿಕಾ—ಸೋಗೆಯಾಗಿ ಇದ್ದಂಥಾದ್ದು, ಅವಂತೀ—ರಕ್ಷಿಸುವಂಥಾದ್ದು, ಬಹುನಗರವಿಸ್ತಾರವಿಜಯಾ–ಅನೇಕ ಪಟ್ಟಣಗಳ ನಾಮಗ್ರಹಣ ಸಾಮರ್ಥ್ಯದಿಂದ ಸರ್ವೋತ್ಕೃಷ್ಟವಾಗಿ ಒಪ್ಪುತ್ತಿದ್ದಂಥಾದ್ದು, ತತ್ತನ್ನಾಮವ್ಯವಹರಣಯೋಗ್ಯಾ ವಿಜಯತೇ ಧ್ರುವಂ–ವಿಶಾಲಾಪಟ್ಟಣ, ಕಲ್ಯಾಣೀಪಟ್ಟಣ, ಅಯೋಧ್ಯಾಪಟ್ಟಣ, ಧಾರಾಪಟ್ಟಣ, ಮಧುರಾಪಟ್ಟಣ, ಭೋಗವತೀಪಟ್ಟಣ, ಅವಂತೀಪಟ್ಟಣ, ವಿಜಯಾಪಟ್ಟಣ, ಈ ಎಂಟು ಪಟ್ಟಣಗಳ ನಾಮವ್ಯವಹಾರಯೋಗ್ಯವು ನಿಶ್ಚಯವಾಗಿ ಇದ್ದಂಥಾದ್ದು.

ಇಲ್ಲಿಗೆ ಬರೆಯತಕ್ಕ ಅರ್ಥ—ವಿಶಾಲಾಪಟ್ಟಣ ಮೊದಲಾದ ಎಂಟು ನಾಮವು ಎಂಟು ದೃಷ್ಟಿ ವಿಶೇಷ. ವಕ್ರದೃಷ್ಟಿ, ವಿಕಾಸದೃಷ್ಟಿ, ಆಶ್ಚರ್ಯದೃಷ್ಟಿ, ಆಲಸ್ಯದೃಷ್ಟಿ, ಸ್ಥಿರದೃಷ್ಟಿ, ಚಂಚಲದೃಷ್ಟಿ, ಮುಗ್ಧಾದೃಷ್ಟಿ, ಕೇಕರದೃಷ್ಟಿ, ಈ ಎಂಟು ಬಗೆಯ ದೃಷ್ಟಿಗಳು ಸರ್ವಸ್ತ್ರೀಸಾಧಾರಣ. ಸರ್ವೇಶ್ವರಿಯ ಈ ಎಂಟುವಿಧ ದೃಷ್ಟಿಭೇದವನು ಸಂಕ್ಷೋಭಣ, ಆಕರ್ಷಣ, ದ್ರಾವಣ, ಉನ್ಮಾದನ, ವಶ್ಯ, ಉಚ್ಚಾಟನ, ವಿದ್ವೇಷಣ, ಮಾರಣವೆಂಬ ಅಷ್ಟಕರ್ಮದಲ್ಲಿ ಪ್ರಯೋಗದಲ್ಲಿ ಧ್ಯಾನವ ಮಾಡುವದು. ಸಹಜಾಲಂಕಾರ.

ಕಣ್ಣುಗಳ ವರ್ಣನೆ—(೩)

ಕವೀನಾಂ ಸಂದರ್ಭಸ್ತಬಕಮಕರಂದೈಕರಸಿಕಂ
ಕಟಾಕ್ಷವ್ಯಾಕ್ಷೇಪಭ್ರಮರಕಲಭೌ ಕರ್ಣಯುಗಲಮ್
ಅಮುಂಚಂತೌ ದೃಷ್ಟ್ವಾ ತವ ನವರಸಾಸ್ವಾದತರಲೌ
ಅಸೂಯಾಸಂಸರ್ಗಾದಲಿಕನಯನಂ ಕಿಂಚಿದರುಣಮ್ ೪೯

---

[1] ಗ್ರಂಥಕರ್ತರು ಈ ರೀತಿ ವ್ಯಾಖ್ಯಾನ ಮಾಡಿದ್ದಾರೆ. ಸಂಸ್ಕೃತವ್ಯಾಖ್ಯಾನಾನುಸಾರವಾಗಿ, ಸ್ಫುಟರುಚಿಃ—ಸ್ಫುಟವಾದ ಕಾಂತಿಯುಳ್ಳದ್ದು, ಕುವಲಯೈಃ ಅಯೋಧ್ಯಾ—ಕನ್ನೈದಿಲು ಹೂವುಗಳಿಂದ ಗೆಲುವದಕ್ಕೆ ಶಕ್ತವಲ್ಲದೆ ಇದ್ದಂಥಾದ್ದು, ಎಂಬುದಾಗಿ ಇರಬೇಕು [2] ಈ ಕುಂಡಲಿತವಾದ ಪಾಠ ಮಾತೃಕೆಯಲ್ಲಿ ಬಿಟ್ಟುಹೋಗಿದೆ.

[ಹೇ ಭಗವತಿ! ಕವೀನಾಂ ಸಂದರ್ಭಸ್ತಬಕಮಕರಂದೈಕರಸಿಕಂ ತವ ಕರ್ಣಯುಗಲಂ ಅಮುಂಚಂತೌ ನವರಸಾಸ್ವಾದತರಲೌ ಕಟಾಕ್ಷವ್ಯಾಕ್ಷೇಪಭ್ರಮರಕಲಭೌ ದೃಷ್ಟ್ವಾ ಅಸೂಯಾಸಂಸರ್ಗಾದಲಿಕನಯನಂ ಕಿಂಚಿದರುಣಮ್.]

ಹೇ ಭಗವತಿ–ಏ ಭಗವತಿಯೇ! ಕವೀನಾಂ ಸಂದರ್ಭಸ್ತಬಕಮಕರಂದೈಕರಸಿಕಂ ತವ ಕರ್ಣಯಗಲಂ––ಕವೀಶ್ವರುಗಳ ಕಾವ್ಯಗಳೆಂಬ ಹೂವಿನ ಗೊಂಚಲ ಮಕರಂದರಸದ ರುಚಿಯನು ಚನ್ನಾಗಿ ಆಸ್ವಾದಿಸುವಂಥಾ ನಿನ್ನ ಎರಡು ಕಿವಿಗಳನು, ಅಮುಂಚಂತೌ ನವರಸಾಸ್ವಾದತರಲೌ ಕಟಾಕ್ಷ ವ್ಯಾಕ್ಷೇಪಭ್ರಮರಕಲಭೌ ದೃಷ್ಟ್ವಾ––ಎಡಬಿಡದೆ ಶೃಂಗಾರಾದಿ ನವರಸಗಳ ಪಾನವ ಮಾಡುವಲ್ಲಿ ಆಸೆವುಂಟಾದಂಥಾ ಕಡೆಗಣ್ಣುಗಳ ಥಾಳವೆಂಬ ಎರಡು ಮರಿದುಂಬಿಗಳನು ನೋಡಿ, ಅಸೂಯಾಸಂಸರ್ಗಾದಲಿಕನಯನಂ ಕಿಂಚಿದರುಣಂ–ಅಸೂಯದಿಂದ ತಾಳಲಾರದೆ ಹಣೆಗಣ್ಣು ಕೋಪದಿಂದ ಕೆಂಪಾಯಿತು.

[1] ಸರ್ವೇಶ್ವರಿಯ ಮೂರು ಕಣ್ಣುಗಳೊಳಗೆ ಎರಡು ಕಣ್ಣಿಗೆ ಸಾಹಿತ್ಯ ಸಂಗೀತಾಮೃತರಸಾಸ್ವಾದನವು ಉಂಟುಮಾಡಿ ಲಲಾಟದಲ್ಲಿ ಇದ್ದ ಮೂರನೆ ಕಣ್ಣು ಸ್ವಭಾವರಕ್ತವರ್ಣವಾಗಿ ಇದ್ದಂಥ ಕೋಪದಿಂದ ರಕ್ತವರ್ಣವೆಂದು ಉತ್ಪ್ರೇಕ್ಷೆ. ಆ ಎರಡು ಕಣ್ಣುಗಳು ಸೋಗೆಯಾಗಿ ಕಿವಿ ಪರಿಯಂತರದಲ್ಲೂ ಅವೆ ಎಂಬುದು ಅಭಿಪ್ರಾಯ.

ಕಣ್ಣುಗಳ ವರ್ಣನೆ—(೪)

ಶಿವೇ ಶೃಂಗಾರಾರ್ದ್ರಾ ತದಿತರಜನೇ ಕುತ್ಸನಪರಾ
ಸರೋಷಾ ಗಂಗಾಯಾಂ ಗಿರಿಶನಯನೇ ವಿಸ್ಮಯವತೀ
ಹರಾಹಿಭ್ಯೋ ಭೀತಾ ಸರಸಿರುಹಸೌಭಾಗ್ಯಜಯಿನೀ
ಸಖೀಷು ಸ್ಮೇರಾ ತೇ ಮಯಿ ಜನನಿ ದೃಷ್ಟಿಃ ಸಕರುಣಾ ೫೦

[ಹೇ ಜನನಿ! ತೇ ದೃಷ್ಟಿಃ ಶಿವೇ ಶೃಂಗಾರಾರ್ದ್ರಾ, ತದಿತರಜನೇ ಕುತ್ಸನಪರಾ, ಗಂಗಾಯಾಂ ಸರೋಷಾ, ಗಿರಿಶನಯನೇ ವಿಸ್ಮಯವತೀ, ಹರಾಹಿಭ್ಯೋ ಭೀತಾ, ಸರಸಿರುಹಸೌಭಾಗ್ಯಜಯಿನೀ, ಸಖೀಷು ಸ್ಮೇರಾ, ಮಯಿ ಸಕರುಣಾ.]

---

[1] ಸರ್ವೇಶ್ವರಿಯ ಮೂರು ಕಣ್ಣುಗಳೆಲ್ಲಿ ಮಧ್ಯದಲ್ಲಿರುವ ಅಗ್ನಿನೇತ್ರವು ಸ್ವಭಾವವಾಗಿ ಕೆಂಪಾಗಿದೆ, ಇತರ ಎರಡು ಕಣ್ಣುಗಳು ಕಿವಿಯ ಪರ್ಯಂತರ ವಿಸ್ತಾರವಾಗಿದೆ. ಇದನ್ನು ಆಚಾರ್ಯರು ಇತರ ಎರಡು ಕಣ್ಣುಗಳಿಗೂ ಕವಿಗಳ ಕಾವ್ಯಾಮೃತಪಾನವ ಮಾಡುವ ಕಿವಿಗಳ ಸಂಬಂಧದಿಂದ ಅಮೃತಪಾನ ಉಂಟಾಗಿದೆ, ತನಗಿಲ್ಲವಲ್ಲಾ ಎಂಬ ಅಸೂಯೆಯಿಂದ ಮೂರನೆ ಕಣ್ಣು ಕೆಂಪಾಗಿದೆ ಎಂದು ಉತ್ಪ್ರೇಕ್ಷಿಸುತ್ತಾರೆ.

ಹೇ ಜನನಿ–ಏ ತಾಯೇ ! ತೇ ದೃಷ್ಟಿಃ–ನಿನ್ನ ದೃಷ್ಟಿಯು, ಶಿವೇ ಶೃಂಗಾರಾದ್ರಾ–ಸದಾಶಿವನಲ್ಲಿ ಶೃಂಗಾರರಸಯುಕ್ತವಾಗಿ ಇಹದು. [1] ಗಿರಿಶ ನಯನೇ[2] ವಿಸ್ಮಯವತೀ–ಶಿವನ ಲಲಾಟನೇತ್ರದಲ್ಲಿ ತ್ರಿಪುರಮನ್ಮಥದಹನದಿಂದ ಅದ್ಭುತರಸಯುಕ್ತವಾಗಿ ಇಹದು. ಹರಾಹಿಭ್ಯೋ ಭೀತಾ–ಶಿವನ ಆಭರಣ ಸರ್ಪಗಳಿಂದ ಭಯರಸಯುಕ್ತವಾಗಿ ಇಹದು. ಸರಸಿರುಹಸೌಭಾಗ್ಯ ಜಯಿನೀ–ತಾವರೆಯ ಚಲುವಿಕೆಯ ಗೆಲುವಂಥಾ ವೀರರಸಯುಕ್ತವಾಗಿ ಇಹದು. ಸಖೀಷು ಸ್ಮೇರಾ–ಕೆಳದಿಯಲ್ಲಿ ಹಾಸ್ಯರಸಯುಕ್ತವಾಗಿ ಇಹದು. ಮಯಿ ಸಕರುಣಾ–ಭಕ್ತನಾಗಿ ಇದ್ದಂಥಾ ನನ್ನಲ್ಲಿ ಕರುಣರಸಯುಕ್ತವಾಗಿ ಇಹದು. ಇಲ್ಲಿ ಒಂದಕ್ಕೆ ಒಂದು ವಿರೋಧವಾದ ರಸಗಳು [3]ಎಂಟನು ಸರ್ವೇಶ್ವರಿಯ ದೃಷ್ಟಿಯಲ್ಲಿ ಒಂದೆ ಠಾವಿನಲ್ಲಿ ಆವಾಸವ ಹೇಳಿದ್ದರಿಂದ ವಿರೋಧಾಲಂಕಾರ.

ಕಣ್ಣುಗಳ ವರ್ಣನೆ––(೫)

ಗತೇ ಕರ್ಣಾಭ್ಯರ್ಣಂ ಗರುತ ಇವ ಪಕ್ಷ್ಮಾಣಿ ದಧತೀ
ಪುರಾಂ ಭೇತ್ತುಶ್ಚೇತಃ ಪ್ರಶಮರಸವಿದ್ರಾವಣಫಲೇ
ಇಮೇ ನೇತ್ರೇ ಗೋತ್ರಾಧರಪತಿಕುಲೋತ್ತಂಸಕಲಿಕೇ
ತವಾಕರ್ಣಾಕೃಷ್ಟಸ್ಮರಶರವಿಲಾಸಂ ಕಲಯುತಃ ೫೧

[ಹೇ ಗೋತ್ರಾಧರಪತಿಕುಲೋತ್ತಂಸಕಲಿಕೇ ! ತವ ಇಮೇ ನೇತ್ರೇ ಕರ್ಣಾಭ್ಯರ್ಣಂ ಗತೇ ಪಕ್ಷ್ಮಾಣಿ ಗರುತ ಇವ ದಧತೀ ಪುರಾಂ ಭೇತ್ತುಃ ಚೇತಃ ಪ್ರಶಮರಸವಿದ್ರಾವಣಫಲೇ ಆಕರ್ಣಾಕೃಷ್ಟಸ್ಮರಶರವಿಲಾಸಂ ಕಲಯತಃ.]

ಹೇ ಗೋತ್ರಾಧರಪತಿಕುಲೋತ್ತಂಸಕಲಿಕೇ!–ಹಿಮವತ್ಪರ್ವತನ ಕುಲಕ್ಕೆ ಅಲಂಕಾರವಾಗಿ ಇದ್ದಂಥಾವಳೇ ! ತವ ಇಮೇ ನೇತ್ರೇ–ಹೃದಯಕಮಲದಲ್ಲಿ ಕಾಣಬರುವ ನಿನ್ನ ಈ ಎರಡು ಕಣ್ಣುಗಳು, ಕರ್ಣಾಭ್ಯರ್ಣಂ ಗತೇ–ಕರ್ಣ ಸಮೀಪವಹೊಂದಿ ಇದ್ದಂಥಾವು, ಪಕ್ಷ್ಮಾಣಿ ಗರುತ ಇವ ದಧತೀ–ರೆಪ್ಪೆಗಳ ಅಂಬಿನ ಗರಿಗಳಹಾಗೆ ಧರಿಸಿದ್ದಂಥಾವು, ಪುರಾಂ ಭೇತ್ತುಃ ಚೇತಃ ಪ್ರಶಮರಸ ವಿದ್ರಾವಣಫಲೇ–ತ್ರಿಪುರಾಂತಕನ ಅಂತಃಕರಣದ ಶಾಂತರಸವ ಕೆಡಿಸಿ ರಾಗೋದ್ರೇಕವ ಮಾಡುವಂಥಾ ಫಲವುಂಟಾದವು, ಫಲವೆಂಬ ಶಬ್ದ ಅಂಬಿನ ಕೊನೆಯು

---

[1] 'ತದಿತರಜನೇ ಕುತ್ಸನಪರಾ—ಸದಾಶಿವನ ಬಿಟ್ಟು ಇತರ ಜನರಲ್ಲಿ ಬೀಭತ್ಸರಸಯುಕ್ತವಾಗಿ ಇಹದು. ಗಂಗಾಯಾಂ ಸರೋಷಾ—ಸಪತ್ನಿಯಾದ ಗಂಗೆಯ ವಿಷಯದಲ್ಲಿ ರೌದ್ರ ರಸಯುಕ್ತವಾಗಿ ಇಹದು'. ಇಷ್ಟು ಗ್ರಂಥ ಮಾತೃಕೆಗಳಲ್ಲಿ ಗಳಿತವಾಗಿದೆ. [2] ಗಿರಿಶ ಚರಿತೆ ಎಂಬ ಪಾಠದಲ್ಲಿ ಸದಾಶಿವನ ತ್ರಿಪುರವಿಜಯ ಮೊದಲಾದ ಚರಿತ್ರೆಯಲ್ಲಿ ಅದ್ಭುತರಸಯುಕ್ತವಾಗಿ ಇಹುದು, ಎಂದರ್ಥ. [3] "ಶಾಂತಸ್ಯ ನಿರ್ವಿಕಾರತ್ವಾನ್ನ ಶಾಂತಂ ಮೇನಿರೆ ರಸಮ್" ಎಂಬುದಾಗಿ ಶಾಂತವನ್ನು ರಸವೆಂಬುದಾಗಿ ಗಣನೆಮಾಡದೆ ಇರುವದರಿಂದ ಇಲ್ಲಿ ಎಂಟು ರಸಗಳನ್ನು ಮಾತ್ರ ಹೇಳಿದೆ.

ಅಲಗಿಗು ಹೆಸರುಂಟು. ಆಕರ್ಣಾಕೃಷ್ಟಸ್ಮರಶರವಿಲಾಸಂ ಕಲಯತಃ–ಆಕರ್ಣಾಂತವಾಗಿ ತೆಗದ ಮನ್ಮಥನ ಅಂಬಿನ ವಿಲಾಸವನು ಮಾಡುತ್ತವೆ (ನಿನ್ನ ಕಣ್ಣುಗಳು).

ಮನ್ಮಥನಿಗೆ ಸ್ತ್ರೀಯರ ದೃಷ್ಟಿ ಆರನೇಯ ಬಾಣ. ಆ ಕಟಾಕ್ಷವೆಂಬ ಆರನೇಯಬಾಣ ಐದು ಬಾಣಗಳ ಸರಿ. ಅದರಿಂದ ಐದೆ ಬಾಣವೆಂದು ಪ್ರಸಿದ್ಧ. ಈ ಶ್ಲೋಕದಲ್ಲಿ ನಿದರುಶನಾಲಂಕಾರ.

ಕಣ್ಣುಗಳ ವರ್ಣನೆ—(೬)

ವಿಭಕ್ತಂ ತ್ರೈವರ್ಣ್ಯಂ ವ್ಯತಿಕಲಿತಲೀಲಾಂಜನತಯಾ
ವಿಭಾತಿ ತ್ವನ್ನೇತ್ರತ್ರಿತಯಮಿದಮೀಶಾನದಯಿತೇ
ಪುನಃ ಸ್ರಷ್ಟುಂ ದೇವಾನ್ ದ್ರುಹಿಣಹರಿರುದ್ರಾನುಪರತಾನ್
ರಜಃಸತ್ತ್ವಂ ಬಿಭ್ರತ್ತಮ ಇತಿ ಗುಣಾನಾಂ ತ್ರಯಮಿವ ೫೨

[ಹೇ ಈಶಾನದಯಿತೇ! ಇದಂ ತ್ವನ್ನೇತ್ರತ್ರಿತಯಂ ವ್ಯತಿಕಲಿತಲೀಲಾಂಜನತಯಾ ವಿಭಕ್ತಂ ತ್ರೈವರ್ಣ್ಯಂ ಉಪರತಾನ್ ದ್ರುಹಿಣಹರಿರುದ್ರಾನ್ ದೇವಾನ್ ಪುನಃ ಸ್ರಷ್ಟುಂ ರಜಃ ಸತ್ತ್ವಂ ತಮ ಇತಿ ಗುಣಾನಾಂ ತ್ರಯಮಿವ ಬಿಭ್ರದ್ವಿಭಾತಿ.]

ಹೇ ಈಶಾನದಯಿತೇ–ಏ ಮಹಾದೇವನ ಪ್ರಿಯೆಯೇ! ಇದಂ ತ್ವನ್ನೇತ್ರತ್ರಿತಯಂ ವ್ಯತಿಕಲಿತಲೀಲಾಂಜನತಯಾ[1] ವಿಭಕ್ತಂ ತ್ರೈವರ್ಣ್ಯಂ–ಹೃದಯ ಕಮಲದಲ್ಲಿ ತೋರಿ ಇಹ ನಿನ್ನ ಮೂರು ಕಣ್ಣುಗಳು ವಿಲಾಸಾರ್ಥವಾಗಿ ಅಲಂಕರಿಸಲ್ಪಟ್ಟ ಕಣ್ಣಕಪ್ಪಿನಿಂದಲೂ ಕೂಡಿ ವಿಂಗಡವಾಗಿ ಇದ್ದಂಥಾ ಬಿಳಿದು ಕೆಂಪು ಕಪ್ಪು ಈ ಮೂರು ವರ್ಣವು, ಉಪರತಾನ್ ದ್ರುಹಿಣಹರಿರುದ್ರಾನ್ ದೇವಾನ್ ಪುನಃ ಸ್ರಷ್ಟುಂ–ಬ್ರಹ್ಮಾಂಡಭಂಗಸಮಯದಲ್ಲಿ ನಿನ್ನಲ್ಲಿ ಐಕ್ಯವಾದಂಥಾ ಬ್ರಹ್ಮ ವಿಷ್ಣು ರುದ್ರ ದೇವತೆಗಳನು ತಿರುಗಿ ಸೃಷ್ಟಿಸಬೇಕಾಗಿ, ರಜಸ್ಸತ್ವಂ ತಮ ಇತಿ ಗುಣಾನಾಂ ತ್ರಯಮಿವ ಬಿಭ್ರದ್ವಿಭಾತಿ–ರಜಃಸತ್ವಂತಮಃ ಎಂಬ ಗುಣತ್ರಯವನು ಧರಿಸಿದ ಹಾಗೆ ಒಪ್ಪುತ್ತದೆ.

[2] ಇಲ್ಲಿ ಸರ್ವೇಶ್ವರಿಯ ಕಣ್ಣುಗಳ ಬಿಳಿದು ಕೆಂಪು ನೀಲ ಈ ಮೂರು ವರ್ಣವನು ಗುಣತ್ರಯ ಸತ್ತ್ವಗುಣ ಶ್ವೇತವರ್ಣ, ರಜೋಗುಣ ಕೆಂಪುವರ್ಣ, ತಮೋಗುಣ ನೀಲವರ್ಣವೆಂಬುದರಿಂದ ಉತ್ಪ್ರೇಕ್ಷಾಲಂಕಾರ.

---

[1] ಈ ಶ್ಲೋಕದಲ್ಲಿ ವಿಭಕ್ತತ್ರೈವರ್ಣ್ಯಂ ಎಂದು ಒಂದೆ ಪದ, ಇದು ಕಣ್ಣುಗಳಿಗೆ ವಿಶೇಷಣ. ವಿಲಾಸಾರ್ಥವಾಗಿ ಅಲಂಕರಿಸಲ್ಪಟ್ಟ ಕಣ್ಣಕಪ್ಪಿನಿಂದ ಕೂಡಿ ವಿಂಗಡವಾಗಿ ಇದ್ದಂಥಾ ಬಿಳಿದು ಕೆಂಪು ಕಪ್ಪು ಈ ಮೂರು ವರ್ಣವನು ಉಳ್ಳಂಥಾ ನನ್ನ ಹೃದಯಕಮಲದಲ್ಲಿ ತೋರಿ ಇಹ ಮೂರು ಕಣ್ಣುಗಳು. [2] ಮಹಾಪ್ರಳಯದಲ್ಲಿ ಸದಾಶಿವನಲ್ಲಿ ಅಡಕವಾದ ಬ್ರಹ್ಮಾದಿಗಳ ಸೃಷ್ಟಿಗೆ ಶ್ರೀದೇವಿಯ ಕಟಾಕ್ಷಮಾತ್ರವೆ ಕಾರಣವೆಂದು ಮುಖ್ಯ ತಾತ್ಪರ್ಯ.

ಕಣ್ಣುಗಳ ವರ್ಣನೆ—(೭)

ಪವಿತ್ರೀಕರ್ತುಂ ನಃ ಪಶುಪತಿಪರಾಧೀನಹೃದಯೇ
ದಯಾಮಿತ್ರೈರ್ನೇತ್ರೈರರುಣಧವಲಶ್ಯಾಮರುಚಿಭಿಃ
ನದಃ ಶೋಣೋ ಗಂಗಾ ತಪನತನಯೇತಿ ಧ್ರುವಮಮುಂ
ತ್ರಯಾಣಾಂ ತೀರ್ಥಾನಾಮುಪನಯತಿ ಸಂಭೇದಮನಘಮ್ ೫೩

[ಹೇ ಪಶುಪತಿಪರಾಧೀನಹೃದಯೇ! ದಯಾಮಿತ್ರೈಃ ಅರುಣಧವಲಶ್ಯಾಮರುಚಿಭಿಃ ನೇತ್ರೈಃ ಶೋಣೋ ನದಃ ಗಂಗಾ ತಪನತನಯೇತಿ ತ್ರಯಾಣಾಂ ತೀರ್ಥಾನಾಂ ಅಮುಂ ಅನಘಂ ಸಂಭೇದಂ ನಃ ಪವಿತ್ರೀಕರ್ತುಂ ಉಪನಯಸಿ ಧ್ರುವಮ್.]

ಹೇ ಪಶುಪತಿಪರಾಧೀನಹೃದಯೇ–ಏ ಶಿವನಲ್ಲಿ ಮನಸ್ಸುಂಟಾದವಳೇ! ದಯಾಮಿತ್ರೈಃ ಅರುಣಧವಲಶ್ಯಾಮರುಚಿಭಿಃ ನೇತ್ರೈಃ–ಕೃಪಾರಸವುಂಟಾದ ಕೆಂಪು ಬಿಳಿದು ಕಪ್ಪುಗಳ ಕೂಡಿಕೊಂಡ ಕಣ್ಣುಗಳಿಂದ, ಶೋಣೋ ನದಃ ಗಂಗಾ ತಪನ ತನಯೇತಿ ತ್ರಯಾಣಾಂ ತೀರ್ಥಾನಾಂ–ಶೋಣನದವು ಗಂಗಾನದಿಯು ಕಾಳಿಂದೀನದಿಯು ಎಂಬಂಥಾ ಮೂರು ತೀರ್ಥಗಳ, ಅಮುಂ ಅನಘಂ ಸಂಭೇದಂ ನಃ ಪವಿತ್ರೀಕರ್ತುಂ ಉಪನಯಸಿ ಧ್ರುವಂ–ಈ ಪರಿಶುದ್ಧವಾದ ಸಂಗಮವ ನಮ್ಮನು ಪವಿತ್ರಮಾಡುವುದಕ್ಕೋಸ್ಕರ ಸಂಗ್ರಹವ ಮಾಡುತ್ತಿರುವುದು ನಿಶ್ಚಯ.

ಸರ್ವೇಶ್ವರಿಯು ಭಕ್ತವತ್ಸಲೆ ಎಂಬುದು ಭಾವ. ಕಣ್ಣಲ್ಲಿ ಇದ್ದ ಕೆಂಪು ಬಿಳಿದು ಕಪ್ಪು ಈ ಮೂರು ವರ್ಣವನು ಶೋಣಭದ್ರಗಂಗಾಯಮುನಾಸಂಗಮವೆಂದು ಉತ್ಪ್ರೇಕ್ಷಿಸಿದ್ದರಿಂದ ಉತ್ಪ್ರೇಕ್ಷಾಲಂಕಾರ.

ಕಣ್ಣುಗಳ ವರ್ಣನೆ—(೮)

ನಿಮೇಷೋನ್ಮೇಷಾಭ್ಯಾಂ ಪ್ರಲಯಮುದಯಂ ಯಾತಿ ಜಗತೀ
ತವೇತ್ಯಾಹುಃ ಸಂತೋ ಧರಣಿಧರರಾಜನ್ಯತನಯೇ!
ತ್ವದುನ್ಮೇಷಾಜ್ಜಾತಂ ಜಗದಿದಮಶೇಷಂ ಪ್ರಲಯತಃ
ಪರಿತ್ರಾತುಂ ಶಂಕೇ ಪರಿಹೃತನಿಮೇಷಾಸ್ತವ ದೃಶಃ ೫೪

[ಹೇ ಧರಣಿಧರರಾಜನ್ಯತನಯೇ! ತವ ನಿಮೇಷೋನ್ಮೇಷಾಭ್ಯಾಂ ಜಗತೀ ಪ್ರಲಯಮುದಯಂ ಯಾತೀತಿ ಸಂತಃ ಆಹುಃ. ಅತಃ ತ್ವದುನ್ಮೇಷಾಜ್ಜಾತಂ ಅಶೇಷಂ ಇದಂ ಜಗತ್ ಪ್ರಲಯತಃ ಪರಿತ್ರಾತುಂ ತವ ದೃಶಃ ಪರಿಹೃತನಿಮೇಷಾ ಇತಿ ಶಂಕೇ.]

ಹೇ ಧರಣಿಧರರಾಜನ್ಯತನಯೇ !–ಏ ಹಿಮವತ್ಪರ್ವತನ ಮಗಳೇ ! ತವ ನಿಮೇಷೋನ್ಮೇಷಾಭ್ಯಾಂ ಜಗತೀ ಪ್ರಲಯಮುದಯಂ ಯಾತೀತಿ ಸಂತಃ ಆಹುಃ–ನಿನ್ನ ಕಣ್ಣು ಮುಚ್ಚಿ ತೆರವದರಿಂದ ಜಗವು ಸಂಹಾರವನು ಉದಯುವನು ಹೊಂದುತದೆ ಎಂದು ವ್ಯಾಸಾದಿ ಸತ್ಪುರುಷರು ಹೇಳುವರು. ಅತಃ ತ್ವದುನ್ಮೇಷಾಜ್ಜಾತಂ ಅಶೇಷಮಿದಂ ಜಗತ್–ಅದುಕಾರಣ ನಿನ್ನ ಕಣ್ಣ ತೆರದದರಿಂದ ಹುಟ್ಟಿದಂಥಾ ಸಕಲವಾದ ಈ ಜಗವನು, ಪ್ರಲಯತಃ ಪರಿತ್ರಾತುಂ ತವ ದೃಶಃ ಪರಿಹೃತನಿಮೇಷಾ ಇತಿ ಶಂಕೇ–ಸಂಹಾರದಿಂದ ರಕ್ಷಿಸುವದಕ್ಕೋಸ್ಕರ ನಿನ್ನ ಕಣ್ಣುಗಳು ಮುಚ್ಚದ ಕಣ್ಣುರಪ್ಪೆಯುಂಟಾದವುಗಳೆಂದು ತಿಳಿದೇನು.

ಈ ಶ್ಲೋಕದ ಭಾವ—ದೇವತೆಗಳಿಗೆ ಕಣ್ಣುಮುಚ್ಚುವಂಥಾದ್ದು ಇಲ್ಲವೆಂಬುದು ಸಹಜ. ಅದನು ಜಗತ್ಸಂರಕ್ಷಣಾರ್ಥವೆಂದು ಉತ್ಪ್ರೇಕ್ಷಿಸಿದ್ದದರಿಂದ ಫಲೋತ್ಪ್ರೇಕ್ಷಾಲಂಕಾರ. ಕಣ್ಣುಮುಚ್ಚಿತೆರವದರಿಂದಲೆ ಸಂಹಾರಸೃಷ್ಟಿಯ ಹೇಳಿದ್ದರಿಂದ ಸರ್ವೇಶ್ವರಿಯ ಮಹಿಮೆ ಅವಾಙ್ಮನಸಗೋಚರ.

ಕಣ್ಣುಗಳ ವರ್ಣನೆ—(೯)

ತವಾಪರ್ಣೇ ಕರ್ಣೇಜಪನಯನಪೈಶುನ್ಯಚಕಿತಾಃ
ನಿಲೀಯಂತೇ ತೋಯೇ ನಿಯತಮನಿಮೇಷಾಃ ಶಫಲಿಕಾಃ
ಇಯಂ ಚ ಶ್ರೀರ್ಬದ್ಧಚ್ಛದಪುಟಕವಾಟಂ ಕುವಲಯಂ
ಜಹಾತಿ ಪ್ರತ್ಯೂಷೇ ನಿಶಿ ಚ ವಿಘಟಯ್ಯ ಪ್ರವಿಶತಿ ॥೫೫॥

[ಹೇ ಅಪರ್ಣೇ! ತವ ಕರ್ಣೇಜಪನಯನಪೈಶುನ್ಯಚಕಿತಾಃ ಶಫಲಿಕಾಃ ಅನಿಮೇಷಾಸ್ತೋಯೇ ನಿಲೀಯಂತೇ. ನಿಯತಂ. ಕಿಂಚ ಇಯಂಚ ಶ್ರೀಃ ಬದ್ಧಚ್ಛದಪುಟಕವಾಟಂ ಕುವಲಯಂ ಪ್ರತ್ಯೂಷೇ ಜಹಾತಿ ನಿಶಿ ಚ ವಿಘಟಯ್ಯ ಪ್ರವಿಶತಿ.]

ಹೇ ಅಪರ್ಣೇ–ಏ ಪಾರ್ವತಿಯೇ! ತವ ಕರ್ಣೇಜಪನಯನ ಪೈಶುನ್ಯ ಚಕಿತಾಃ ಶಫಲಿಕಾಃ–ನಿನ್ನ ಕಿವಿಯ ಸಮೀಪದಲ್ಲಿ ಇದ್ದ ಕಣ್ಣೆಂಬ ಚಾಡಿಗಾರರಿಂದ ಅಂಜಿದಂಥಾ ಹೆಣ್ಣುಮೀನುಗಳು, ಅನಿಮೇಷಾಸ್ತೋಯೇ ನಿಲೀಯಂತೇ–ಎವೆಯ ಹಳಚದೆ ನೀರೊಳಗೆ ಮುಳುಗಿ ಇದ್ದಾವೆ, ನಿಯತಂ–ಯುಕ್ತವೆ. ಕಿಂಚ ಇಯಂ ಚ ಶ್ರೀಃ ಬದ್ಧಚ್ಛದಪುಟಕವಾಟಂ ಕುವಲಯಂ ಪ್ರತ್ಯೂಷೇ ಜಹಾತಿ ನಿಶಿ ಚ ವಿಘಟಯ್ಯ ಪ್ರವಿಶತಿ–ಮತ್ತು ಈ ನೈದಿಲಕಾಂತಿಯು ಮುಚ್ಚಿಕೊಂಡ ದಳಗಳ ಕವಾಟವುಳ್ಳಂಥಾ ಕನ್ನೈದಿಲನು ಉದಯಕಾಲದಲ್ಲಿ ಬಿಡುತದೆ, ಇರುಳೆ ಅರಳಿಸಿ ಪ್ರವೇಶಿಸುತ್ತದೆ.

ಇದರ ಅರ್ಥ—ಲೋಕದಲ್ಲಿ ಕಣ್ಣಿಗೆ ಮೀನುಗಳನ್ನು ನೈದಿಲನ್ನು ಸಮವಾಗಿ ಹೇಳುವುದರಿಂದ ಆ ಎರಡರ ಶೋಭೆಯು ತಕ್ಕೊಳ್ಳಬೇಕಾಗಿ ಸರ್ವೇಶ್ವರಿಯ

ಕಣ್ಣುಗಳು ಪಿಸುಣತ್ವದಿಂದ ಚಾಡಿಯು ಹೇಳುವಹಾಗೆ ಕಿವಿಯ ಸಮೀಪಕ್ಕೇ ಬರಲಾಗಿ ಅಂಜಿ ಮೀನುಗಳು ನೀರೊಳಗೆ ಕಣ್ಣುಮುಚ್ಚದೆ ಮುಳುಗಿದವು. ನೈದಿಲಲಕ್ಷ್ಮಿ ಹಗಲೆ ಬಾಗಿಲ ಮುಚ್ಚಿಕೊಂಡು ಹೊರಟುಹೋಗಿ ಇರುಳೆ ಬಾಗಿಲ ತೆಗೆದುಕೊಂಡು ಬರುತ್ತದೆ. ಇಲ್ಲಿ ಮೀನುಗಳು ನೀರೊಳಗೆ ಕಣ್ಣುಮುಚ್ಚದೆ ಮುಳುಗಿ ಇಹದು ಸ್ವಭಾವ. ನೈದಿಲು ಹಗಲೆ ಮುಕುಳಿತವಾಗಿ ಇರುಳೆ ಅರಳುವದು ಸ್ವಭಾವ. ಅವನು ಸರ್ವೇಶ್ವರಿಯ ಕರ್ಣಾಂತವಾದ ಕಣ್ಣಿಗೆ ಅಂಜಿ ಹಾಗಾದವೆಂದು ಉತ್ಪ್ರೇಕ್ಷಿಸಿದ್ದದರಿಂದ ಅತಿಶಯೋಕ್ತಿ ಅಲಂಕಾರ ಪ್ರಧಾನ.

ಕಣ್ಣುಗಳ ವರ್ಣನೆ—(೧೦)

ದೃಶಾ ದ್ರಾಘೀಯಸ್ಯಾ ದರದಲಿತನೀಲೋತ್ಪಲರುಚಾ
ದವೀಯಾಂಸಂ ದೀನಂ ಸ್ನಪಯ ಕೃಪಯಾ ಮಾಮಪಿ ಶಿವೇ
ಅನೇನಾಯಂ ಧನ್ಯೋ ಭವತಿ ನ ಚ ತೇ ಹಾನಿರಿಯತಾ
ವನೇ ವಾ ಹರ್ಮ್ಯೇ ವಾ ಸಮಕರನಿಪಾತೋ ಹಿಮಕರಃ ॥೬

[ಹೇ ಶಿವೇ! ತವ ದ್ರಾಘೀಯಸ್ಯಾ ದರದಲಿತನೀಲೋತ್ಪಲರುಚಾ ದೃಶಾ ದವೀಯಾಂಸಂ ದೀನಂ ಮಾಮಪಿ ಕೃಪಯಾ ಸ್ನಪಯ. ಅಯಂ ಜನಃ ಅನೇನ ಧನ್ಯೋ ಭವತಿ, ಇಯತಾ ತೇ ಹಾನಿರ್ನ ಚ. ತಥಾಹಿ--ಹಿಮಕರಃ ವನೇ ವಾ ಹರ್ಮ್ಯೇ ವಾ ಸಮಕರನಿಪಾತೋ ಹಿ.]

ಹೇ ಶಿವೇ—ಏ ಮಂಗಳೇ! ತವ ದ್ರಾಘೀಯಸ್ಯಾ ದರದಲಿತನೀಲೋತ್ಪಲ ರುಚಾ ದೃಶಾ—ನಿನ್ನ ದೀರ್ಘವಾದ ಒಂದಿಷ್ಟು ಅರಳಿದ ಕನ್ನೈದಿಲ ಕಾಂತಿಯುಳ್ಳಂಥಾ ಕಟಾಕ್ಷದಿಂದ, ದವೀಯಾಂಸಂ ದೀನಂ ಮಾಮಪಿ ಕೃಪಯಾ ಸ್ನಪಯ—ಅತಿದೂರದಲ್ಲಿ ಇದ್ದಂಥಾ ದರಿದ್ರನಾಗಿ ಇದ್ದಂಥಾ ನನ್ನಂಥಾವನನ್ನು ಸ್ನಾನವ ಮಾಡಿಸು. ಅಯಂ ಜನಃ ಅನೇನ ಧನ್ಯೋ ಭವತಿ ಇಯತಾ ತೇ ಹಾನಿರ್ನ ಚ—ಈ ನಾನು ಈ ಕಟಾಕ್ಷಸ್ನಾನದಿಂದ ಕೃತಾರ್ಥನು ಅಹೇನು, ಈ ಕಟಾಕ್ಷಸ್ನಾನವ ಮಾಡಿಸಿದ್ದರಿಂದ ನಿನಗೆ ನಷ್ಟವಿಲ್ಲ. ತಥಾಹಿ—ಹಿಮಕರಃ ವನೇ ವಾ ಹರ್ಮ್ಯೇ ವಾ ಸಮಕರನಿಪಾತೋ ಹಿ—ಹಾಗೆ ತಾನೆ ಅಹುದಲ್ಲ, ಚಂದ್ರನು ಅಡವಿಯಲ್ಲೂ ಉಪ್ಪರಿಗೆಗಳಲ್ಲೂ ಸಮವಾಗಿ ಇದ್ದಂಥಾ ಕಿರಣಗಳ ಪಾತವನುಳ್ಳವನಲ್ಲಾ.

ನಿರ್ಮಲವಾದ ಮನಸ್ಸುಳ್ಳವರಿಗೆ ಸರ್ವರಲ್ಲಿಯೂ ಸಮಾನವೆಂಬುದು ಭಾವ. ಅರ್ಥಾಂತರನ್ಯಾಸಾಲಂಕಾರ. ನಿನ್ನ ಸ್ವರೂಪವ ಬಲ್ಲಂಥಾ ಜ್ಞಾನಾಧಿಕರಲ್ಲಿ ಕಟಾಕ್ಷವನಿಟ್ಟು ರಕ್ಷಿಸುವೆಯಲ್ಲಾ. ನನ್ನಂಥಾ ಅಜ್ಞಾನಿಯಲ್ಲಿಯೂ ಕೃಪಾಕಟಾಕ್ಷವನಿಟ್ಟು ರಕ್ಷಿಸಬೇಕೆಂದು ಸರ್ವೇಶ್ವರಿಯ ಬೇಡಿಕೊಂಬುದು ಭಕ್ತನ ತಾತ್ಪರ್ಯ.

ಕಣ್ಣುಗಳ ವರ್ಣನೆ—(೧೧)

ಅರಾಲಂ ತೇ ಪಾಲೀಯುಗಲಮಗರಾಜನ್ಯತನಯೇ
ನ ಕೇಷಾಮಾಧತ್ತೇ ಕುಸುಮಶರಕೋದಂಡಕುತುಕಮ್
ತಿರಶ್ಚೀನೋ ಯತ್ರ ಶ್ರವಣಪಥಮುಲ್ಲಂಘ್ಯ ವಿಲಸ
ನ್ನಪಾಂಗವ್ಯಾಸಂಗೋ ದಿಶತಿ ಶರಸಂಧಾನಧಿಷಣಾಮ್ ೫೭

[ಹೇ ಅಗರಾಜನ್ಯತನಯೇ ! ತೇ ಪಾಲೀಯುಗಲಂ ಅರಾಲಂ ಕುಸುಮಶರಕೋದಂಡಕುತುಕಂ ಕೇಷಾಂ ನಾಧತ್ತೇ, ಯಸ್ಮಾತ್ ಯತ್ರ ತಿರಶ್ಚೀನಃ ವಿಲಸನ್ನಪಾಂಗವ್ಯಾಸಂಗಃ ಶ್ರವಣಪಥಮುಲ್ಲಂಘ್ಯ ಶರಸಂಧಾನಧಿಷಣಾಂ ದಿಶತಿ.]

ಹೇ ಅಗರಾಜನ್ಯತನಯೇ—ಎ ಹಿಮವತ್ಪರ್ವತನ ಮಗಳೇ! ತೇ ಪಾಲೀಯುಗಲಂ ಅರಾಲಂ ಕುಸುಮಶರಕೋದಂಡಕುತುಕಂ ಕೇಷಾಂ ನಾಧತ್ತೇ—ನಿನ್ನ ಎರಡು ಕಿವಿಗಳ ಬಾಗು ಮನ್ಮಥನ ಬಿಲ್ಲಿನ ವಿನೋದವನು ಆರಿಗೆ ಮಾಡದು. ಎಲ್ಲರಿಗೂ ಮಾಡುವದೇ ಯಸ್ಮಾತ್ ಯತ್ರ ತಿರಶ್ಚೀನಃ ವಿಲಸನ್ನಪಾಂಗವ್ಯಾಸಂಗಃ ಶ್ರವಣಪಥಮುಲ್ಲಂಘ್ಯ ಶರಸಂಧಾನಧಿಷಣಾಂ ದಿಶತಿ—ಅವದರಿಂದ ಕಿವಿಗಳಲ್ಲಿ ಅಡ್ಡಲಾಗಿ ಒಪ್ಪುತಿದ್ದಂಥಾ ಕಡೆಗಣ್ಣುಗಳ ಕೂಟವು ಕಿವಿಯ ದಾಟಿ ಇದ್ದಂಥಾ ಅಂಬುಹೂಡಿದ ಬುದ್ಧಿಯನು ಮಾಡುತ್ತಲಿದೆ.

ಆದರಿಂದ ಸರ್ವೇಶ್ವರಿಯ ಕಿವಿಯು ಬಾಗಿ ಇದ್ದ ಮನ್ಮಥನ ಬಿಲ್ಲು, ಕಿವಿಯಮುಟ್ಟಿದ್ದ ಕಣ್ಣು ಬಿಲ್ಲಿನಲ್ಲಿ ಹೂಡಿದ ಅಂಬು ಎಂಬುದು ಭಾವ. ಸಂದೇಹಾಲಂಕಾರ

ಕಿವಿಯ ಓಲೆಗಳ ಕೂಡಿದ ಮುಖವರ್ಣನೆ—

ಸ್ಫುರದ್ಗಂಡಾಭೋಗಪ್ರತಿಫಲಿತತಾಟಂಕಯುಗಲಂ
ಚತುಶ್ಚಕ್ರಂ ಮನ್ಯೇ ತವ ಮುಖಮಿದಂ ಮನ್ಮಥರಥಮ್
ಯಮಾರುಹ್ಯ ದ್ರುಹ್ಯತ್ಯವನಿರಥಮರ್ಕೇಂದುಚರಣಂ
ಮಹಾವೀರೋ ಮಾರಃ ಪ್ರಮಥಪತಯೇ ಸಜ್ಜಿತವತೇ ೫೮

[ಹೇ ಭಗವತಿ! ತವ ಇದಂ ಮುಖಂ ಸ್ಫುರದ್ಗಂಡಾಭೋಗಪ್ರತಿಫಲಿತತಾಟಂಕಯುಗಲಂ ಚತುಶ್ಚಕ್ರಂ ಮನ್ಮಥರಥಂ ಮನ್ಯೇ. ಯಮಾರುಹ್ಯ ಮಾರೋ ಮಹಾವೀರಃ ಸನ್ ಅರ್ಕೇಂದುಚರಣಂ ಅವನಿರಥಂ ಸಜ್ಜಿತವತೇ ಪ್ರಮಥಪತಯೇ ದ್ರುಹ್ಯತಿ.]

ಹೇ ಭಗವತಿ—ಎ ಭಗವತಿಯೇ! ತವ ಇದಂ ಮುಖಂ ಸ್ಫುರದ್ಗಂಡಾಭೋಗಪ್ರತಿಫಲಿತತಾಟಂಕಯುಗಲಂ ಚತುಶ್ಚಕ್ರಂ ಮನ್ಮಥರಥಂ ಮನ್ಯೇ—ಹೃದಯಕಮಲ

ದಲ್ಲಿ ತೋರುತಿದ್ದಂಥಾ ನಿನ್ನ ಮುಖವನು ಮಿಂಚುತಿದ್ದಂಥಾ ಗಲ್ಲಗಳಲ್ಲಿ ಪ್ರತಿಬಿಂಬವಾಗಿ ಇದ್ದಂಥಾ ರತ್ನಗಳ ಓಲೆ ಎರಡು. ಕಿವಿಯಲ್ಲಿ ಧರಿಸಿ ಇದ್ದ ಬಿಂಬವಾದ ಓಲೆ ಎರಡು, ಕೂಡಾ ನಾಲ್ಕು ಬಂಡಿಯ ಗಾಲೆಯುಂಟಾದ ಮನ್ಮಥನ ರಥವೆಂದು ತಿಳಿದೇನು. ಯಮಾರುಹ್ಯ ಮಾರೋ ಮಹಾವೀರಃ ಸ್ಸ-ಆವುದಾನೊಂದು [1] ನಾಲ್ಕೆ ಗಾಲಿಯುಂಟಾದ ರಥವನು ಏರಿಕೊಂಡು ಮಾರನು ಮಹಾವೀರನಾಗುತ, ಅರ್ಕೇಂದುಚರಣಂ ಅವನಿರಥಂ ಸಜ್ಜಿತವತೇ ಪ್ರಮಥಪತಯೇ ದ್ರುಹ್ಯತಿ-ಸೂರ್ಯಚಂದ್ರರು ಗಾಲೆಗಳಾದ ಭೂಮಿಯ ರಥವನು ಹೂಡಿಕೊಂಡಿದ್ದು ಪ್ರಮಥಪತಿಯಾದ ಮಹಾದೇವರಿಗೋಸ್ಕರ ಮನ್ಮಥನು ವಿರೋಧವ ಮಾಡುತ್ತಾನೆ.

ಈ ಶ್ಲೋಕದಲ್ಲಿ ಸರ್ವೇಶ್ವರಿಯ ಮುಖ ಮನ್ಮಥನ ನಾಲ್ಕು ಗಾಲಿಯುಂಟಾದ ರಥವೆಂದು ಉತ್ಪ್ರೇಕ್ಷಿಸಿದ್ದದರಿಂದ ಉತ್ಪ್ರೇಕ್ಷಾಲಂಕಾರ ಪ್ರಧಾನ.

ಪ್ರೌಢೋಕ್ತಿಯ ವರ್ಣನೆ—

ಸರಸ್ವತ್ಯಾಃ ಸೂಕ್ತೀರಮೃತಲಹರೀಕೌಶಲಹರೀಃ
ಪಿಬಂತ್ಯಾಃ ಶರ್ವಾಣಿ! ಶ್ರವಣಚುಲಿಕಾಭ್ಯಾಮವಿರಲಮ್
ಚಮತ್ಕಾರಶ್ಲಾಘಾಚಲಿತಶಿರಸಃ ಕುಂಡಲಗಣೋ
ಝುಣತ್ಕಾರೈಸ್ತಾರೈಃ ಪ್ರತಿವಚನಮಾಚಷ್ಟ ಇವತೇ ೬೯

[ಹೇ ಶರ್ವಾಣಿ! ತೇ ಅಮೃತಲಹರೀಕೌಶಲಹರೀಃ ಸೂಕ್ತೀಃ ಶ್ರವಣಚುಲಿಕಾಭ್ಯಾಂ ಅವಿರಲಂ ಪಿಬಂತ್ಯಾಃ ಚಮತ್ಕಾರಶ್ಲಾಘಾಚಲಿತಶಿರಸಃ ಸರಸ್ವತ್ಯಾಃ ಕುಂಡಲಗಣಃ ಝುಣತ್ಕಾರೈಸ್ತಾರೈಃ ಪ್ರತಿವಚನಮಾಚಷ್ಟ ಇವ.]

ಹೇ ಶರ್ವಾಣಿ-ಏ ಶರ್ವನ ಪತ್ನಿಯೇ! ತೇ ಅಮೃತಲಹರೀಕೌಶಲಹರೀಃ ಸೂಕ್ತೀಃ-ನಿನ್ನ ಕರುಣವೆಂಬ ಅಮೃತಪ್ರವಾಹದ ಸೌಭಾಗ್ಯವ ಹರಿಸುವಂಥಾ ಒಳ್ಳೆಯ ನುಡಿಗಳನು, ಶ್ರವಣಚುಲಿಕಾಭ್ಯಾಮವಿರಲಂ ಪಿಬಂತ್ಯಾಃ ಚಮತ್ಕಾರಶ್ಲಾಘಾಚಲಿತಶಿರಸಃ—ಶ್ರವಣವೆಂಬ ಬಗಸೆಯಿಂದ ಎಡೆಬಿಡದೆ ಪಾನವಮಾಡಿ ಅತಿಶಯಾಶ್ಚರ್ಯದಿಂದ ಶಿರವನಲ್ಲಾಡುವ, ಸರಸ್ವತ್ಯಾಃ ಕುಂಡಲಗಣಃ ಝುಣತ್ಕಾರೈಃ ತಾರೈಃ ಪ್ರತಿವಚನಮಾಚಷ್ಟ ಇವ—ಸರಸ್ವತೀದೇವಿಯ ಕುಂಡಲಸಮೂಹದ ಝುಣತ್ಕಾರದ ಧ್ವನಿಗಳಿಂದ ಸಂತೋಷಿಸಿ ಹೇಳಿದ ಪ್ರತಿವಚನದ ಹಾಗೆ ಇದ್ದಿತು. ಇಲ್ಲಿ ಸರಸ್ವತೀದೇವಿಯ ಕುಂಡಲಝುಣತ್ಕಾರವ ಪ್ರತಿವಚನವೆಂದು ಉತ್ಪ್ರೇಕ್ಷಿಸಿದ್ದದರಿಂದ ಉತ್ಪ್ರೇಕ್ಷಾಲಂಕಾರ ಪ್ರಧಾನ.

---

[1] ನಾಲ್ಕು (ಖ).

ಮೂಕುತಿಯ ಮಣಿಯ ವರ್ಣನೆ—

ಅಸೌ ನಾಸಾವಂಶಸ್ತುಹಿನಗಿರಿವಂಶಧ್ವಜಪಟಿ!
ತ್ವದೀಯೋ ನೇದೀಯಃ ಫಲತು ಫಲಮಸ್ಮಾಕಮುಚಿತಮ್
ವಹತ್ಯಂತರ್ಮುಕ್ತಾಃ ಶಿಶಿರಕರನಿಶ್ವಾಸಗಲಿತಂ
ಸಮೃದ್ಧ್ಯಾ ಯತ್ತಾಸಾಂ ಬಹಿರಪಿ ಚ ಮುಕ್ತಾಮಣಿಧರಃ ೬೦

[ಹೇ ತುಹಿನಗಿರಿವಂಶಧ್ವಜಪಟಿ! ತ್ವದೀಯಃ ಅಸೌ ನಾಸಾವಂಶಃ ಅಸ್ಮಾಕಂ ಉಚಿತಂ ನೇದೀಯಃ ಫಲಂ ಫಲತು. ಸಃ ಮುಕ್ತಾಃ ಅನ್ತರ್ವಹತಿ. ಯದ್ಯಸ್ಮಾತ್ ಕಾರಣಾತ್ ತಾಸಾಂ ಸಮೃದ್ಧ್ಯಾ ಶಿಶಿರಕರನಿಶ್ವಾಸಗಲಿತಂ ಬಹಿರಪಿ ಚ ಮುಕ್ತಾಮಣಿಧರಃ.]

ಹೇ ತುಹಿನಗಿರಿವಂಶಧ್ವಜಪಟಿ—ಏ ಹಿಮವತ್ಪರ್ವತನ ವಂಶಕ್ಕೆ ಶ್ರೇಷ್ಠಳಾದವಳೇ! ತ್ವದೀಯಃ ಅಸೌ ನಾಸಾವಂಶಃ ಅಸ್ಮಾಕಂ ಉಚಿತಂ ನೇದೀಯಃ ಫಲಂ ಫಲತು—ಹೃದಯಕಮಲದಲ್ಲಿ ತೋರುವ ನಿನ್ನ ಸಂಬಂಧವಾಗಿ ಇದ್ದಂಥಾ ಮೂಗೆಂಬ ಬಿದಿರು ನನಗೆ [1] ಇಷ್ಟವಾಗಿ ಇದ್ದಂಥಾ ಶೀಘ್ರಫಲವನು ಕೊಡಲಿ, ಸಃ ಅಂತಃ ಮುಕ್ತಾಃ ವಹತಿ—ಆ ಮೂಗೆಂಬ ಬಿದಿರು ಮುತ್ತುಗಳನೂ ಒಳಗೆ ಧರಿಸಿ ಇಹದು. ಯದ್ಯಸ್ಮಾತ್ಕಾರಣಾತ್ ತಾಸಾಂ ಸಮೃದ್ಧ್ಯಾ ಶಿಶಿರಕರನಿಶ್ವಾಸಗಲಿತಂ ಬಹಿರಪಿ ಮುಕ್ತಾಮಣಿಧರಃ—ಆವದಾನೊಂದುಕಾರಣ ಮುತ್ತಿನ ಮಣಿಗಳು ತುಂಬಿ ಇಹದರಿಂದ ಮೂಗಿನ ಎಡದ ಪಾರ್ಶ್ವದ ಚಂದ್ರನಾಡಿಯ ನಿಶ್ವಾಸದಿಂದ ಹೊರಟಂಥಾ ಮುತ್ತಿನ ಮಣಿಯನು ಧರಿಸಿದ್ದು ನಿನ್ನ ಮೂಗೆಂಬ ಬಿದಿರು. ಬಿದಿರಿನಲ್ಲಿ ಮುತ್ತು ಹುಟ್ಟುವದೆಂದು ಲೋಕಪ್ರಸಿದ್ಧ. ಸರ್ವೇಶ್ವರಿಯ ಮೂಕುತಿಯನಿಟ್ಟುಕೊಂಡು ಇದ್ದ ಮೂಗ ಮುತ್ತಿನ ಮಣಿಗಳು ತುಂಬಿ ಹೊರಗೆ ಒಂದು ಮಣಿಹೊರಟ ಬಿದಿರೆಂದು ಹೇಳಿದ್ದರಿಂದ ರೂಪಕಾಲಂಕಾರ.

ಅಧರ ವರ್ಣನೆ—

ಪ್ರಕೃತ್ಯಾ ರಕ್ತಾಯಾಸ್ತವ ಸುದತಿ ದಂತಚ್ಛದರುಚೇಃ
ಪ್ರವಕ್ಷ್ಯೇ ಸಾದೃಶ್ಯಂ ಜನಯತು ಫಲಂ ವಿದ್ರುಮಲತಾ
ನ ಬಿಂಬಂ ತದ್ಬಿಂಬಪ್ರತಿಫಲನರಾಗಾದರುಣಿತಂ
ತುಲಾಮಧ್ಯಾರೋಢುಂ ಕಥಮಿವ ವಿಲಜ್ಜೇತ ಕಲಯಾ ೬೧

[ಹೇ ಸುದತಿ! ತವ ಪ್ರಕೃತ್ಯಾ ರಕ್ತಾಯಾಃ ದಂತಚ್ಛದರುಚೇಃ ಸಾದೃಶ್ಯಂ ಪ್ರವಕ್ಷ್ಯೇ. ವಿದ್ರುಮಲತಾ ಫಲಂ ಜನಯತು. ಬಿಂಬಂ ಪುನಃ ತದ್ಬಿಂಬಪ್ರತಿ

[1] ಯೋಗ್ಯವಾದ ಇಷ್ಟಾರ್ಥವನ್ನು ಶೀಘ್ರದಲ್ಲಿ ಕೊಡಲಿ, ಎಂದರ್ಥ.

ಫಲನರಾಗಾದರುಣಿತಂ ಕಲಯಾಪಿ ತುಲಾಂ ಅಧ್ಯಾರೋಢುಂ ಕಥಮಿವ ನ ವಿಲಜ್ಜೇತ.]

ಹೇ ಸುದತಿ–ಏ ಶೋಭನವಾದ ಹಲ್ಲುಗಳುಂಟಾದವಳೇ! ತವ ಪ್ರಕೃತ್ಯಾ ರಕ್ತಾಯಾಃ ದಂತಚ್ಛದರುಚೇಃ ಸಾದೃಶ್ಯಂ ಪ್ರವಕ್ಷ್ಯೇ–ನಿನ್ನ ಸಹಜವಾದ ಕೆಂಪುಗಳ ತುಟಿಯ ಕಾಂತಿಯ ಸಮಾನವ ಹೇಳೇನು, ವಿದ್ರುಮಲತಾ ಫಲಂ ಜನಯತು–ಹವಳದ ಬಳ್ಳಿಯು ಫಲವನು ಹುಟ್ಟಿಸುವದು, ಇಲ್ಲಿ ಸರ್ವೇಶ್ವರಿಯ ತುಟಿಯ ಕಾಂತಿಗೆ ಹವಳಬಳ್ಳಿಯ ಕಾಂತಿ ಸರಿಯಲ್ಲ. ಹವಳದ ಬಳ್ಳಿಯಲ್ಲಿ ಒಂದು ಫಲ ಹುಟ್ಟಿದರೆ ಸರಿಯಹುದೆಂದು ಅರ್ಥ. ಬಿಂಬಂ ಪುನಃ ತದ್ಬಿಂಬ ಪ್ರತಿಫಲನ ರಾಗಾದರುಣಿತಂ ಕಲಯಾಪಿ ತುಲಾಮಧ್ಯಾರೋಢುಂ ಕಥಮಿವ ನ ವಿಲಜ್ಜೇತ–ಸರ್ವೇಶ್ವರಿಯ ಕೆಂಪಿನ ಅಧರದ [1]ಪ್ರತಿಬಿಂಬ ಫಲನದಿಂದ ಬಿಂಬವೆಂಬ ಹೆಸರುಂಟಾದರು ತೊಂಡೆಯ ಹಣ್ಣು ಲೇಶಮಾತ್ರವಾದರು ಸರಿಯಾಗುವುದಕ್ಕೆ ಹೇಗೆ [2]ನಾಚುವದು ನಾಚದೆ[2]. ಸ್ತ್ರೀಯರ ಅಧರಕಾಂತಿಗೆ ಹವಳವನು ತೊಂಡೆಯ ಹಣ್ಣನು ಸರಿಯಾಗಿ ಹೇಳುವರು. ಸರ್ವೇಶ್ವರಿಯ ತುಟಿಗೆ ಈ ಎರಡು ಸರಿಯಲ್ಲ ಎಂಬುದರಿಂದ ಅತಿಶಯೋಕ್ತಿ ಅಲಂಕಾರ.

ಮುಖಕಾಂತಿಯ ವರ್ಣನೆ—

ಸ್ಮಿತಜ್ಯೋತ್ಸ್ನಾಜಾಲಂ ತವ ವದನಚಂದ್ರಸ್ಯ ಪಿಬತಾಂ
ಚಕೋರಾಣಾಮಾಸೀದತಿರಸತಯಾ ಚಂಚುಜಡಿಮಾ
ಅತಸ್ತೇ ಶೀತಾಂಶೋರಮೃತಲಹರೀಮಾಮ್ಲರುಚಯಃ
ಪಿಬಂತಿ ಸ್ವಚ್ಛಂದಂ ನಿಶಿನಿಶಿ ಭೃಶಂ ಕಾಂಜಿಕಧಿಯಾ ೬೨

[ಹೇ ಭಗವತಿ! ತವ ವದನಚಂದ್ರಸ್ಯ ಸ್ಮಿತಜ್ಯೋತ್ಸ್ನಾಜಾಲಂ ಪಿಬತಾಂ ಚಕೋರಾಣಾಂ ಅತಿರಸತಯಾ ಚಂಚುಜಡಿಮಾ ಆಸೀತ್, ಅತಃ ತೇ ಆಮ್ಲ ರುಚಯಃ ಶೀತಾಂಶೋರಮೃತಲಹರೀಂ ಕಾಂಜಿಕಧಿಯಾ ಸ್ವಚ್ಛಂದಂ ನಿಶಿನಿಶಿ ಭೃಶಂ ಪಿಬಂತಿ.]

ಹೇ ಭಗವತಿ–ಏ ಭಗವತಿಯೇ! ತವ ವದನಚಂದ್ರಸ್ಯ ಸ್ಮಿತಜ್ಯೋತ್ಸ್ನಾಜಾಲಂ–ನಿನ್ನ ಮುಖಚಂದ್ರನ ಎಳನಗೆ ಎಂಬ ಬೆಳ್ದಿಂಗಳನು, ಪಿಬತಾಂ ಚಕೋರಾಣಾಂ ಅತಿರಸತಯಾ ಚಂಚುಜಡಿಮಾ ಆಸೀತ್—ಪಾನವ ಮಾಡಿದಂಥಾ ಚಕೋರಪಕ್ಷಿಗಳಿಗೆ ಅತಿಮಧುರದಿಂದ ಜಿಹ್ವಾಜಾಡ್ಯವು ಆಯಿತು. ಅತಃ ತೇ ಆಮ್ಲರುಚಯಃ ಶೀತಾಂಶೋಃ ಅಮೃತಲಹರೀಂ ಕಾಂಜಿಕಧಿಯಾ ಸ್ವಚ್ಛಂದಂ ನಿಶಿನಿಶಿ ಭೃಶಂ ಪಿಬಂತಿ–ಅದುಕಾರಣ ಆ ಚಕೋರಪಕ್ಷಿಗಳು [3]ಅತಿಸಿಹ್ಯನುಂಡು[3] ಹುಳಿಹಣ್ಣಿನ ಬುದ್ಧಿಯಿಂದ ಯಥೇಷ್ಟವಾಗಿ ಇರುಳು ಇರುಳು ಅಧಿಕವಾಗಿ

---

[1] ಪ್ರತಿಫಲನದಿಂದ, ಎಂದಿರಬೇಕು. [2] ನಾಚದೆ ಇಹದು, ಎಂದಿರಬೇಕು [3] ಅತಿ ಸೀಯನುಂಡು (ಖ).

ಪಾನವ ಮಾಡುತವೆ [1](ಚಕೋರಗಳು). ಸರ್ವೇಶ್ವರಿಯ ಮುಖಚಂದ್ರನ ಕಿರಣಗಳ ಪಾನವ ಮಾಡಿದ ಚಕೋರಗಳಿಗೆ ಷೋಡಶಕಲಾಚಂದ್ರನ ಕಿರಣಗಳು ಹುಳಿ ಎಂಬುದರಿಂದ ಅತಿಶಯೋಕ್ತಿ ಅಲಂಕಾರ.

ನಾಲಿಗೆಯ ವರ್ಣನೆ—

ಅವಿಶ್ರಾಂತಂ ಪತ್ಯುರ್ಗುಣಗಣಕಥಾಮ್ರೇಡನಜಪಾ
ಜಪಾಪುಷ್ಪಚ್ಛಾಯಾ ತವ ಜನನಿ ಜಿಹ್ವಾ ಜಯತಿ ಸಾ
ಯದಗ್ರಾಸೀನಾಯಾಃ ಸ್ಫಟಿಕದೃಷದಚ್ಛಚ್ಛವಿಮಯೀ
ಸರಸ್ವತ್ಯಾ ಮೂರ್ತಿಃ ಪರಿಣಮತಿ ಮಾಣಿಕ್ಯವಪುಷಾ ೬೩

[ಹೇ ಜನನಿ! ತವ ಸಾ ಜಿಹ್ವಾ ಅವಿಶ್ರಾಂತಂ ಪತ್ಯುಃ ಗುಣಗಣಕಥಾ ಮ್ರೇಡನಜಪಾ ಜಪಾಪುಷ್ಪಚ್ಛಾಯಾ ಜಯತಿ. ಯದಗ್ರಾಸೀನಾಯಾಃ ಸರಸ್ವತ್ಯಾಃ ಸ್ಫಟಿಕದೃಷದಚ್ಛಚ್ಛವಿಮಯಿ ಮೂರ್ತಿಃ ಮಾಣಿಕ್ಯವಪುಷಾ ಪರಿಣಮತಿ.]

ಹೇ ಜನನಿ—ಎ ತಾಯೇ! ತವ ಸಾ ಜಿಹ್ವಾ ಅವಿಶ್ರಾಂತಂ ಪತ್ಯುಃ ಗುಣಗಣಕಥಾಮ್ರೇಡನಜಪಾ ಜಪಾಪುಷ್ಪಚ್ಛಾಯಾ ಜಯತಿ—ನಿನ್ನ ಆ ಜಿಹ್ವೆಯು ಎಡೆಬಿಡದೆ ಪತಿಯಾಗಿದ್ದಂಥಾ ಸದಾಶಿವನ ಪುರವಿಜಯಾದಿಗುಣಸಮೂಹಗಳ ಕಥಾ ಆವರ್ತನ ಜಪ ಉಂಟಾದಂಥಾ [2]ದಾಸ್ವಾಳದ[2] ಹೂವಿನ ವರ್ಣವು ಒಪ್ಪುತ್ತದೆ. ಯದಗ್ರಾಸೀನಾಯಾಃ ಸರಸ್ವತ್ಯಾಃ ಸ್ಫಟಿಕದೃಷದಚ್ಛಚ್ಛವಿಮಯೀ ಮೂರ್ತಿಃ ಮಾಣಿಕ್ಯವಪುಷಾ ಪರಿಣಮತಿ—ಆವುದಾನೊಂದು ಸರ್ವೇಶ್ವರಿಯ ನಾಲಿಗೆಯ ಅಗ್ರಸ್ಥಾನದಲ್ಲಿ ಕುಳಿತು ಇದ್ದಂಥಾ ಸರಸ್ವತೀದೇವಿಯ ಸ್ಫಟಿಕದ ಕಲ್ಲಿನ ನಿರ್ಮಲವಾದ ಕಾಂತಿಮಯವಾದ ಮೂರ್ತಿಯೂ ಮಾಣಿಕ್ಯದೇಹದಿಂದ ಕೆಂಪುವರ್ಣ ಉಂಟಾಗುತ್ತದೆ.

ಸರ್ವೇಶ್ವರಿಯ ಜಿಹ್ವಾಗ್ರದಲ್ಲಿ ಇದ್ದ ಶ್ವೇತವರ್ಣದ ಸರಸ್ವತಿಯು ನಾಲಿಗೆಯ ಕೆಂಪಿನ ವರ್ಣದಿಂದ ಕೆಂಪಾದಳು ಎಂಬುದರಿಂದ ತದ್ಗುಣಾಲಂಕಾರ. ಸರ್ವೇಶ್ವರಿಯ ನಾಲಿಗೆಯಲ್ಲಿ ಸರ್ವದಾ ಸರಸ್ವತಿ ಇಹಳೆಂಬುದು ಆಗಮರಹಸ್ಯ.

ತಾಂಬೂಲದ ವರ್ಣನೆ—

ರಣೇ ಜಿತ್ವಾ ದೈತ್ಯಾನಪಹೃತಶಿರಸ್ತ್ರೈಃ ಕವಚಿಭಿಃ
ನಿವೃತ್ತೈಶ್ಚಂಡಾಂಶತ್ರಿಪುರಹರನಿರ್ಮಾಲ್ಯವಿಮುಖೈಃ
ವಿಶಾಖೇಂದ್ರೋಪೇಂದ್ರೈಃ ಶಶಿವಿಶದಕರ್ಪೂರಶಕಲಾಃ
ವಿಲೀಯಂತೇ ಮಾತಸ್ತವ ವದನತಾಂಬೂಲಕಬಲಾಃ ೬೪

[1] ಅಧಿಕ [2] ದಾಸಾಳದ (ಖ).

[ಹೇ ಮಾತಃ! ರಣೇ ದೈತ್ಯಾನ್ ಜಿತ್ವಾ ನಿವೃತ್ತೈಃ ಅಪಹೃತ ಶಿರಸ್ತ್ರೈಃ ಕವಚಿಭಿಃ ಚಂಡಾಂಶತ್ರಿಪುರಹರನಿರ್ಮಾಲ್ಯವಿಮುಖೈಃ ವಿಶಾಖೇಂದ್ರೋಪೇಂದ್ರೈಃ ಶಶಿವಿಶದಕರ್ಪೂರಶಕಲಾಃ ತವ ವದನತಾಂಬೂಲಕಬಲಾಃ ವಿಲೀಯಂತೇ.]

ಹೇ ಮಾತಃ–ಏ ತಾಯೇ! ರಣೇ ದೈತ್ಯಾನ್ ಜಿತ್ವಾ ಅಪಹೃತ ಶಿರಸ್ತ್ರೈಃ ಕವಚಿಭಿಃ ನಿವೃತ್ತೈಃ ಚಂಡಾಂಶತ್ರಿಪುರಹರನಿರ್ಮಾಲ್ಯವಿಮುಖೈಃ ವಿಶಾಖೇಂದ್ರೋಪೇಂದ್ರೈಃ–ಯುದ್ಧದಲ್ಲಿ ರಾಕ್ಷಸರನು ಗೆದ್ದು ತಿರುಗಿ ಬಂದಂಥಾ ನಮಸ್ಕಾರಾರ್ಥವಾಗಿ ತೆಗೆಯಲ್ಪಟ್ಟ ತಲೆಜೋಡುಗಳು ಮೈಜೋಡುಗಳುಳ್ಳಂಥಾ ಚಂಡೇಶ್ವರನ ಪಾಲಿಗೆ ಬಂದ ಮಾತ್ರ ಶಿವನಿರ್ಮಾಲ್ಯದಲ್ಲಿ ವಿಮುಖರಾದ ಷಣ್ಮುಖ ದೇವೇಂದ್ರ ಉಪೇಂದ್ರರಿಂದ, ಶಶಿವಿಶದಕರ್ಪೂರಶಕಲಾಃ ತವ ವದನತಾಂಬೂಲಕಬಲಾಃ ವಿಲೀಯಂತೆ–ಚಂದ್ರನ ಬೆಳುಪುಳ್ಳ ಕರ್ಪೂರದಿಂದ ಕೂಡಿಕೊಂಡು ನಿನ್ನ ಬಾಯ ತಾಂಬೂಲಕವಳಗಳು ಅವರಲ್ಲಿ ಐಕ್ಯವಾಗುತ್ತವೆ.

ಈ ಶ್ಲೋಕದ ಅರ್ಥ—ಷಣ್ಮುಖ ದೇವೇಂದ್ರ ಉಪೇಂದ್ರರು ರಾಕ್ಷಸರ ಸಂಹರಿಸಿ ಸರ್ವೇಶ್ವರಿಯ ಕುಮಾರನ ಮುಂದೆ ಇಟ್ಟುಕೊಂಡು ಪಾದವಂದನಾರ್ಥವಾಗಿ ಬಂದು ಯುದ್ಧಸನ್ನಾಹದ ತಲೆಜೋಡು ತೆಗೆದು ಪಾದಗಳಿಗೆ ನಮಸ್ಕಾರವ ಮಾಡಲಾಗಿ ಆ ತರುವಾಯ ಪ್ರಸನ್ನವಾಗಿ ಆಗತಾನೆ ಹಾಕಿಕೊಂಡ ಕರ್ಪೂರಗಳು ಒಂದಿಷ್ಟು ಕರಗಿದ ತಾಂಬೂಲವ ಸ್ನೇಹದಿಂದ ಕೊಟ್ಟಳು. ಇಂದ್ರಾದಿಗಳು ಸರ್ವೇಶ್ವರಿಗೆ ಷಣ್ಮುಖನ ಹಾಗೆ ಎಂಬುದು ಅಭಿಪ್ರಾಯ.

ವೀಣಾಗಾನದ ವರ್ಣನೆ––

ವಿಪಂಚ್ಯಾ [1]ಗಾಯಂತ್ಯಾ[1] ವಿವಿಧಮಪದಾನಂ ಪಶುಪತೇಃ
ತ್ವಯಾರಬ್ಧೇ ವಕ್ತುಂ ಚಲಿತಶಿರಸಾ ಸಾಧುವಚನೇ
ತದೀಯೈರ್ಮಾಧುರ್ಯೈರಪಲಪಿತತಂತ್ರೀಕಲರವಾಂ
ನಿಜಾಂ ವೀಣಾಂ ವಾಣೀ ನಿಚುಳಯತಿ ಚೋಳೇನ ನಿಭೃತಮ್ ೬೫

[ಹೇ ಭಗವತಿ! ಪಶುಪತೇಃ ವಿವಿಧಮಪದಾನಂ ವಿಪಂಚ್ಯಾ ಗಾಯಂತ್ಯಾ ತ್ವಯಾ ವಕ್ತುಂ ಚಲಿತಶಿರಸಾ ಸಾಧುವಚನೇ ಆರಬ್ಧೇ ಸತಿ ತದೀಯೈರ್ಮಾಧುರ್ಯೈಃ ಅಪಲಪಿತತಂತ್ರೀಕಲರವಾಂ ನಿಜಾಂ ವೀಣಾಂ ವಾಣೀ ಚೋಳೇನ ನಿಭೃತಂ ನಿಚುಳಯತಿ.]

---

[1] ಗಾಯಂತೀ, ಎಂದು ಪಾಠ.

[1] ಹೇ ಭಗವತಿ–ಏ ಭಗವತಿಯೇ! ಪಶುಪತೇಃ ವಿವಿಧಮಪದಾನಂ ವಿಪಂಚ್ಯಾ ಗಾಯಂತ್ಯಾ–ಪರಮೇಶ್ವರನ ತ್ರಿಪುರವಿಜಯ ದಕ್ಷಯಾಗಧ್ವಂಸ ಹಾಲಾಹಲವ ಧರಿಸಿದ್ದು ಜಲಂಧರವಧೆ ಗಜಾಸುರವಧೆ ಮನ್ಮಥದಹನಾದಿ ಅನೇಕ ಪ್ರಕಾರವಾದ ಚರಿತ್ರಗಳನು ವೀಣೆಯಿಂದ ಗಾನಮಾಡುವಂಥಾ, ತ್ವಯಾ ವಕ್ತುಂ ಚಲಿತಶಿರಸಾ ಸಾಧುವಚನೇ ಆರಬ್ಧೇ ಸತಿ–ನಿನ್ನಿಂದ ನುಡಿವದಕ್ಕೋಸ್ಕರ ಮನಸ್ಸಿನ ಸಂತೋಷವಶದಿಂದ ತಲೆಯನಲ್ಲಾಡುವ ಸವಿನುಡಿಯ ಆರಂಭಿಸುತ್ತಿರಲಾಗಿ,[1] ತದೀಯೈರ್ಮಾಧುರ್ಯೈರಪಲಪಿತತಂತ್ರೀಕಲರವಾಂ ನಿಜಾಂ ವೀಣಾಂ ವಾಣೀ ಚೋಳೇನ ನಿಭೃತಂ ನಿಚುಳಯತಿ–ಆ ನಿನ್ನ ವೀಣಾಸಂಬಂಧವಾಗಿ ಇದ್ದಂಥಾ ಮಧುರಸ್ವರದಿಂದ ಪರಿಹಾಸಕವಮಾಡಲ್ಪಟ್ಟ ತಂತ್ರಿಗಳ ಮನೋಹರವಾದ ಧ್ವನಿಯನುಳ್ಳಂಥಾ ತನ್ನ ಕಚ್ಛಪಿಯೆಂಬ ವೀಣೆಯನು ಸರಸ್ವತೀದೇವಿ ಗವಸಣಿಗೆಯಿಂದ ಮೆಲ್ಲಗೆ ಮುಚ್ಚಿದಳು.

ಸರ್ವೇಶ್ವರಿಯ ವೀಣಾಗಾನಕ್ಕೆ ಸರಸ್ವತೀ ನಾಚಿ ವೀಣೆಯ ಕಟ್ಟಿದಳೆಂಬುದರಿಂದ ಅತಿಶಯೋಕ್ತಿ ಅಲಂಕಾರ.

ಚುಬುಕ ವರ್ಣನೆ—

ಕರಾಗ್ರೇಣ ಸ್ಪೃಷ್ಟಂ ತುಹಿನಗಿರಿಣಾ ವತ್ಸಲತಯಾ
ಗಿರೀಶೇನೋದಸ್ತಂ ಮುಹುರಧರಪಾನಾಕುಲತಯಾ
ಕರಗ್ರಾಹ್ಯಂ ಶಂಭೋರ್ಮುಖಮುಕುರವೃಂತಂ ಗಿರಿಸುತೇ
ಕಥಂಕಾರಂ ಬ್ರೂಮಸ್ತವ ಚುಬುಕಮೌಪಮ್ಯರಹಿತಮ್ ೬೭

[ಹೇ ಗಿರಿಸುತೇ! ತುಹಿನಗಿರಿಣಾ ವತ್ಸಲತಯಾ ಕರಾಗ್ರೇಣ ಸ್ಪೃಷ್ಟಂ, ಗಿರೀಶೇನ ಮುಹುಃ ಅಧರಪಾನಾಕುಲತಯಾ ಉದಸ್ತಂ, ಶಂಭೋಃ ಕರಗ್ರಾಹ್ಯಂ, ಮುಖಮುಕುರವೃಂತಂ ಔಪಮ್ಯರಹಿತಂ ತವ ಚುಬುಕಂ ಕಥಂಕಾರಂ ಬ್ರೂಮಃ.]

ಹೇ ಗಿರಿಸುತೇ–ಏ ಹಿಮವತ್ಪರ್ವತನ ಮಗಳೇ! ತುಹಿನಗಿರಿಣಾ ವತ್ಸಲತಯಾ ಕರಾಗ್ರೇಣ ಸ್ಪೃಷ್ಟಂ–ತಂದೆಯಾಗಿದ್ದಂಥಾ ಹಿಮವತ್ಪರ್ವತನು ಪುತ್ರಸ್ನೇಹದಿಂದ ಕೊನೆಬೆರಳುಗಳಿಂದ ಹಿಡಿಯಲ್ಪಟ್ಟಂಥಾದ್ದು, ಗಿರೀಶೇನ ಮುಹುಃ

---

[1] ಸದಾಶಿವನ ದಕ್ಷಯಾಗಧ್ವಂಸ ಮುಂತಾದ ನಾನಾವಿಧಚರಿತ್ರಗಳನು ವೀಣೆಯಿಂದ ಗಾನಮಾಡುತ್ತಿರುವ ನಿನ್ನಿಂದ ಸವಿನುಡಿಗಳನ್ನು ಹೇಳುವದಕ್ಕೆ ಆರಂಭಿಸುತ್ತಿರಲಾಗಿ ಆ ಸವಿನುಡಿಯ ಮಾಧುರ್ಯದಿಂದ ನಾಚಿ ತನ್ನ ವೀಣೆಯನ್ನು ಸರಸ್ವತೀದೇವಿಯು ಅದರ ಚೀಲದಲ್ಲಿ ಮುಚ್ಚಿದಳು ಎಂದು ಭಾವ. "ಗಾಯಂತೀ" ಎಂಬ ಪಾಠದಲ್ಲಿ ಸರಸ್ವತಿಯು ಪಶುಪತಿಯ ಚರಿತ್ರವನ್ನು ಗಾನಮಾಡುತಿರಲಾಗಿ ನಿನ್ನಿಂದ ಸವಿನುಡಿಗಳನ್ನು ಹೇಳುವುದಕ್ಕೆ ಆರಂಭಿಸುತ್ತಿರಲಾಗಿ .... ಎಂದು ಭಾವ.

ಅಧರಪಾನಾಕುಲತಯಾ ಉದಸ್ತಂ–ಸದಾಶಿವನಿಂದ ಮರಳಿ ಮರಳಿ ಅಧರ ಪಾನವ ಮಾಡುವ ತತ್ತರದಿಂದ ಎತ್ತಲ್ಪಟ್ಟಂಥಾದ್ದು, ಶಂಭೋಃ ಕರಗ್ರಾಹ್ಯಂ ಮುಖಮುಕರವೃಂತಂ–ಶಿವನ ಕೈಯಲ್ಲಿ ಹಿಡಿಯತಕ್ಕ ಮುಖವೆಂಬ ಕನ್ನಡಿಯು ಹಿಡಿಯಾಗಿದ್ದಂಥಾದ್ದು, ಔಪಮ್ಯರಹಿತಂ ತವ ಚುಬುಕಂ ಕಥಂಕಾರಂ ಬ್ರೂಮಃ– ಸರಿಹೋಲಿಸುವದಕ್ಕೆ ಸಮಾನವಸ್ತುವಿಲ್ಲದಂಥಾ ನಿನ್ನ ಚುಬುಕವನು ಹೇಗೆ ಬಣ್ಣಿಸೇವು. ಬಣ್ಣಿಸುವುದಕ್ಕೆ ಶಕ್ಯವಿಲ್ಲ.

ಸರ್ವೇಶ್ವರಿಯ ಚುಬುಕವು ಹಿಮವತ್ಪರ್ವತನ ಕೈಯಿಂದ ಮುಟ್ಟಲ್ಪಟ್ಟ ಸೌಭಾಗ್ಯಾತಿಶಯದಿಂದಲೂ ಮಹಾದೇವರ ಕೈಯಲ್ಲಿ ಹಿಡಿಯಲ್ಪಟ್ಟ ಕನ್ನಡಿಯ ಹಿಡಿ ಎಂಬುದರಿಂದಲೂ ಅನನ್ವಯಾಲಂಕಾರ.

ಕಂಠನಾಳದ ವರ್ಣನೆ—

ಭುಜಾಶ್ಲೇಷಾನ್ನಿತ್ಯಂ ಪುರದಮಯಿತುಃ ಕಂಟಕವತೀ
ತವ ಗ್ರೀವಾ ಧತ್ತೇ ಮುಖಕಮಲನಾಲಶ್ರಿಯಮಿಯಮ್
ಸ್ವತಃ ಶ್ವೇತಾ ಕಾಲಾಗರುಬಹಳಜಂಬಾಲಮಲಿನಾ
ಮೃಣಾಲೀಲಾಲಿತ್ಯಂ ವಹತಿ ಯದಧೋ ಹಾರಲತಿಕಾ ೬೭

[ಹೇ ಭಗವತಿ! ತವ ಇಯಂ ಗ್ರೀವಾ ಪುರದಮಯಿತುಃ ಭುಜಾಶ್ಲೇಷಾತ್ ನಿತ್ಯಂ ಕಂಟಕವತೀ ಮುಖಕಮಲನಾಲಶ್ರಿಯಂ ಧತ್ತೇ. ಯದ್ಯಸ್ಮಾತ್ಕಾರಣಾತ್ ಅಧಃ ಸ್ವತಃ ಶ್ವೇತಾ ಕಾಲಾಗರುಬಹಳಜಂಬಾಲಮಲಿನಾ ಹಾರಲತಿಕಾ ಮೃಣಾಲೀಲಾಲಿತ್ಯಂ ವಹತಿ.]

ಹೇ ಭಗವತಿ–ಏ ಭಗವತಿಯೇ! ತವ ಇಯಂ ಗ್ರೀವಾ ಪುರದಮಯಿತುಃ ಭುಜಾಶ್ಲೇಷಾತ್ ನಿತ್ಯಂ ಕಂಟಕವತೀ ಮುಖಕಮಲನಾಲಶ್ರಿಯಂ ಧತ್ತೇ–ನಿನ್ನ ಕಂಠನಾಳವು ತ್ರಿಪುರಾಂತಕನಾದ ಮಹಾದೇವನ ಆಲಿಂಗನದಿಂದ ರೋಮಾಂಚನವೆಂಬ ಮುಳ್ಳುಗಳುಳ್ಳ ಮುಖವೆಂಬ ತಾವರೆಯ ನಾಳದ ಸೌಭಾಗ್ಯವನು ಧರಿಸುತ್ತದೆ, ಯದ್ಯಸ್ಮಾತ್ಕಾರಣಾತ್ ಅಧಃ ಪ್ರದೇಶೇ ಸ್ವತಃ ಶ್ವೇತಾ ಕಾಲಾಗರುಬಹಳಜಂಬಾಲಮಲಿನಾ ಹಾರಲತಿಕಾ ಮೃಣಾಲೀಲಾಲಿತ್ಯಂ ವಹತಿ– ಆವುದಾನೊಂದು ಕಾರಣ ಕೆಳಗೆ ತನ್ನ ಸಹಜನಿರ್ಮಲವಾದ ಕೃಷ್ಣಾಗರುಗಂಧ ವೆಂಬ ಕೆಸರಿಂದ ಮಲಿನವಾದ ಮುತ್ತಿನ ಕಂಠಮಾಲೆಯು, ತಾವರೆಬಳ್ಳಿಯ ಚಲುವಿಕೆ ಯನು ವಹಿಸುತದೆ.

ಸರ್ವೇಶ್ವರಿಯ ಕಂಠನಾಳವ ತಾವರೆಯ ನಾಳವೆಂದು ಹೇಳಿದ್ದರಿಂದ ನಿದರುಶನಾಲಂಕಾರ.

ಕಂಠನಾಳದಲ್ಲಿ ಇದ್ದ ಮೂರು ರೇಖೆಯ ವರ್ಣನೆ—

ಗಲೇ ರೇಖಾಸ್ತಿಸ್ರೋ ಗತಿಗಮಕಗೀತ್ಯೈಕನಿಪುಣೇ
ವಿವಾಹವ್ಯಾನದ್ಧಪ್ರಗುಣಗುಣಸಂಖ್ಯಾಪ್ರತಿಭುವಃ
ವಿರಾಜಂತೇ ನಾನಾವಿಧಮಧುರರಾಗಾಕರಭುವಾಂ
ತ್ರಯಾಣಾಂ ಗ್ರಾಮಾಣಾಂ ಸ್ಥಿತಿನಿಯಮಸೀಮಾನ ಇವ ತೇ ೬೮

[ಹೇ ಗತಿಗಮಕಗೀತ್ಯೈಕನಿಪುಣೇ! ತೇ ಗಲೇ ತಿಸ್ರೋ ರೇಖಾಃ ವಿವಾಹವ್ಯಾನದ್ಧಪ್ರಗುಣಗುಣಸಂಖ್ಯಾಪ್ರತಿಭುವಃ ನಾನಾವಿಧಮಧುರರಾಗಾಕರ ಭುವಾಂ ತ್ರಯಾಣಾಂ ಗ್ರಾಮಾಣಾಂ ಸ್ಥಿತಿನಿಯಮಸೀಮಾನ ಇವ ವಿರಾಜಂತೇ.]

ಹೇ ಗತಿಗಮಕಗೀತ್ಯೈಕನಿಪುಣೇ—ಸಂಗೀತ[1]ಮಾರ್ಗ[1] ದೇಶೀಯ ಐದು ವಿಧ ಗಮಕವ ಹಾಡುವಲ್ಲಿ ಮುಖ್ಯವಾದ ನಿಪುಣ[2]ವುಂಟಾದವಳೇ![2] ತೇ ಗಲೇ ತಿಸ್ರೋ ರೇಖಾಃ—ನಿನ್ನ ಕಂಠದಲ್ಲಿಯ ಮೂರು ಭಾಗ್ಯರೇಖೆಗಳು. ಕಂಠದಲ್ಲಿ ಮೂರು ರೇಖೆ ಉಂಟಾದವರಿಗೆ ಮಹಾಭಾಗ್ಯಸೂಚನೆ, ಸಾಮುದ್ರಿಕದಲ್ಲಿ ಸಮ್ಮತಿ—

'ಲಲಾಟೇ ಚ ಗಲೇ ಚೈವ ಮಧ್ಯೇ ಚೈವ ವಲಿತ್ರಯಮ್
ಸ್ತ್ರೀಪುಂಸಯೋರಿದಂ ಜ್ಞೇಯಂ ಮಹಾಸೌಭಾಗ್ಯಸೂಚಕಮ್'

ವಿವಾಹವ್ಯಾನದ್ಧಪ್ರಗುಣಗುಣಸಂಖ್ಯಾಪ್ರತಿಭುವಃ—ಶಿವನಿಂದ ವಿವಾಹಸಮಯ ದಲ್ಲಿ ಕಟ್ಟಲ್ಪಟ್ಟ ಬಹಳ ಎಳೆಗಳಿಂದ ಮಾಡಿದಂಥಾ ಮೂರು ಮಂಗಳಸೂತ್ರವೋ ಎಂಬ ಹಾಗೆ ತೋರುತ್ತದೆ. ಮಂಗಳಸೂತ್ರ ಮೂರು ಎಂಬುದಕ್ಕೆ ಸಮ್ಮತಿ ಗೃಹ್ಯಕಾರರಿಂದ—

'ಮಾಂಗಲ್ಯತಂತುನಾನೇನ ಬಧ್ವಾ ಮಂಗಲಸೂತ್ರಕಮ್
ವಾಮಹಸ್ತೇ ಸರಂ ಬಧ್ವಾ ಕಂಠೇ ಚ ತ್ರಿಸರಂ ತಥಾ'

ನಾನಾವಿಧಮಧುರರಾಗಾಕರಭುವಾಂ ತ್ರಯಾಣಾಂ ಗ್ರಾಮಾಣಾಂ ಸ್ಥಿತಿನಿಯಮ ಸೀಮಾನ ಇವ ವಿರಾಜಂತೆ—ಗ್ರಾಮರಾಗ, ಉಪರಾಗ, ಭಾಷಾರಾಗ, ವಿಭಾ ಷಾರಾಗ, ಅಂತರಭಾಷಾರಾಗ ಎಂಬ ಸಂಗೀತರತ್ನಾಕರದ ರಾಗಾಧ್ಯಾಯದಲ್ಲಿ ಹೇಳಿದ ಅನೇಕಬಗೆಯ ಮನೋಹರವಾದ ರಾಗಗಳಿಗೆ ಆಶ್ರಯಭೂತವಾದ ಷಡ್ಜಗ್ರಾಮ, ಮಧ್ಯಮಗ್ರಾಮ, ಗಾಂಧಾರಗ್ರಾಮ. ಸ್ವರಸಮೂಹ ಗ್ರಾಮ ಎಂಬುದಕ್ಕೆ ಸಮ್ಮತಿ—

'ಯಥಾ ಕುಟುಂಬಿನಃ ಸರ್ವೇ ಏಕೀಭೂತಾ ಭವಂತಿ ಹಿ
ತಥಾಹಿ ಸ್ವರಸಂದೋಹೋ ಗ್ರಾಮ ಇತ್ಯಭಿಧೀಯತೇ'

---

[1] ಮಾರ್ಗದ (ಖ) [2] ವಾದವಳೇ (ಖ).

ಇಂಥಾ ಮೂರುಗ್ರಾಮಗಳು ಇಹಂಥಾದ್ದಕ್ಕೆ ಒಂದರಲ್ಲಿ ಒಂದು ಕೂಡದ ನಿಯಮವಾದ ಸ್ಥಳ ಹಾಗೆ ಒಪ್ಪುತ್ತದೇ. ಸರ್ವೇಶ್ವರಿಯ ಕೊರಳ ಮೂರು ರೇಖೆಯನು ಮೂರು ಮಂಗಳಸೂತ್ರವೋ ಎಂಬುದರಿಂದಲೂ ಮೂರು ಸಂಗೀತ ಗ್ರಾಮಗಳ ಸ್ಥಾನವೆಂಬುದರಿಂದಲೂ ಸಂದೇಹಾಲಂಕಾರ ಪ್ರಧಾನ.

ನಾಲ್ಕು ಕೈಗಳ ವರ್ಣನೆ—

ಮೃಣಾಲೀಮೃದ್ವೀನಾಂ ತವ ಭುಜಲತಾನಾಂ ಚತಸೃಣಾಂ
ಚತುರ್ಭಿಃ ಸೌಂದರ್ಯಂ ಸರಸಿಜಭವಃ ಸ್ತೌತಿ ವದನೈಃ
ನಖೇಭ್ಯಃ ಸಂತ್ರಸ್ಯನ್ ಪ್ರಥಮಮಥನಾದಂಧಕರಿಪೋಃ
ಚತುರ್ಣಾಂ ಶೀರ್ಷಾಣಾಂ ಸಮಮಭಯಹಸ್ತಾರ್ಪಣಧಿಯಾ ೬೯

[ಹೇ ಭಗವತಿ! ಮೃಣಾಲೀಮೃದ್ವೀನಾಂ ಚತಸೃಣಾಂ ತವ ಭುಜಲತಾನಾಂ ಸೌಂದರ್ಯಂ ಸರಸಿಜಭವಃ ಚತುರ್ಭಿರ್ವದನೈಃ ಪ್ರಥಮಮಥನಾದಂಧಕರಿಪೋಃ ನಖೇಭ್ಯಃ ಸಂತ್ರಸ್ಯನ್ ಸನ್ ಸಮಂ ಚತುರ್ಣಾಂ ಶೀರ್ಷಾಣಾಂ ಅಭಯಹಸ್ತಾರ್ಪಣಧಿಯಾ ಸ್ತೌತಿ.]

ಹೇ ಭಗವತಿ—ಎ ಭಗವತಿಯೇ! ಮೃಣಾಲೀಮೃದ್ವೀನಾಂ ಚತಸೃಣಾಂ ತವ ಭುಜಲತಾನಾಂ ಸೌಂದರ್ಯಂ—ತಾವರೆಯಬಳ್ಳಿಯ ಮೃದುವುಳ್ಳ ನಾಲ್ಕು ನಿನ್ನ ಭುಜಲತೆಗಳ ಚಲುವಿಕೆಯನು, ಸರಸಿಜಭವಃ ಚತುರ್ಭಿಃ ವದನೈಃ ಪ್ರಥಮಮಥನಾದಂಧಕರಿಪೋಃ ನಖೇಭ್ಯಃ ಸಂತ್ರಸ್ಯನ್ ಸನ್—ಬ್ರಹ್ಮನು ನಾಲ್ಕು ಮುಖಗಳಿಂದ ಐದನೆತಲೆಯ ಛೇದಿಸಿದಂಥಾ ಶಿವನ ಉಗುರುಗಳಿಂದ ಅಂಜುತ್ತಿದ್ದವನಾಗಿ, ಸಮಂ ಚತುರ್ಣಾಂ ಶೀರ್ಷಾಣಾಂ ಅಭಯಹಸ್ತಾರ್ಪಣಧಿಯಾ ಸ್ತೌತಿ—ಏಕಕಾಲದಲ್ಲಿಯೆ ಮಿಕ್ಕ ನಾಲ್ಕು ತಲೆಗಳಿಗೂ ಅಭಯಹಸ್ತವ ಕೊಡುವ ಬುದ್ಧಿಯಿಂದ ಸ್ತೋತ್ರವ ಮಾಡುತ್ತಾನೆ.

ಸರ್ವೇಶ್ವರಿಯ ಭುಜಲತೆಯ ವರ್ಣನೆಯ ಮಾಡುವದಕ್ಕೆ ಬ್ರಹ್ಮನೇ ಅಧಿಕಾರನು, ಮಿಕ್ಕಾದವರ ಕೈಯಕೂಡದು ಎಂಬುದು ಅಭಿಪ್ರಾಯ. ಕಾವ್ಯಲಿಂಗಾಲಂಕಾರ.

ಹಸ್ತಗಳ ವರ್ಣನೆ—

ನಖಾನಾಮುದ್ಯೋತೈರ್ನವನಲಿನರಾಗಂ ವಿಹಸತಾಂ
ಕರಾಣಾಂ ತೇ ಕಾಂತಿಂ ಕಥಯ ಕಥಯಾಮಃ ಕಥಮುಮೆ
ಕಯಾಚಿದ್ವಾ ಸಾಮ್ಯಂ ಭಜತು ಕಲಯಾ ಹಂತ ಕಮಲಂ
ಯದಿ ಕ್ರೀಡಲ್ಲಕ್ಷ್ಮೀಚರಣತಲಲಾಕ್ಷಾರಸಚಣಮ್ ೭೦

[ಹೇ ಉಮೇ! ನಖಾನಾಮುದ್ಯೋತ್ತೈಃ ನವನಲಿನರಾಗಂ ವಿಹಸತಾಂ ತೇ ಕರಾಣಾಂ ಕಾಂತಿಂ ಕಥಂ ಕಥಯಾಮಃ ಕಥಯ. ಕಮಲಂ ಕಲಯಾಪಿ ಸಾಮ್ಯಂ ಕಯಾಚಿದ್ವಾ ಭಜತು ಯದಿ ಹಂತ. ಅತಃ ಕಮಲಂ ಕ್ರೀಡಲ್ಲಕ್ಷ್ಮೀ ಚರಣತಲಲಾಕ್ಷಾರಸಚಣಮ್.]

ಹೇ ಉಮೇ–ಏ ಪಾರ್ವತಿಯೇ! ನಖಾನಾಮುದ್ಯೋತ್ತೈಃ ನವನಲಿನ ರಾಗಂ ವಿಹಸತಾಂ ತೇ ಕರಾಣಾಂ ಕಾಂತಿಂ ಕಥಂ ಕಥಯಾಮಃ ಕಥಯ— ಉಗುರುಗಳ ಪ್ರಭೆಯಿಂದ ಆಗ ಅರಳಿದ ಕೆಂದಾವರೆಯ ಕೆಂಪನು ಪರಿಹಾಸಕವ ಮಾಡುವಂಥಾ ನಿನ್ನ ನಾಲ್ಕು ಮುಂಗೈಗಳ ಕಾಂತಿಯನು ಹೇಗೆ [1] ಬಣ್ಣಿಸೇವು ಹೇಳು. ಕಮಲಂ ಕಲಯಾಪಿ ಸಾಮ್ಯಂ ಕಯಾಚಿದ್ವಾ ಭಜತು ಯದಿ ಹಂತ —ಕಮಲವು ಲೇಶಮಾತ್ರದೊಡನೆಯಾದರು ಸಮಾನವವನು ಆವದರಿಂದ ಹೊಂದಿ ತಾಗಿ, ಅಕಟಕಟ ಹೊಂದಲರಿಯದು, ಅತಃ ಕಮಲಂ ಕ್ರೀಡಲ್ಲಕ್ಷ್ಮೀಚರಣತಲ ಲಾಕ್ಷಾರಸಚಣಂ–ಅದುಕಾರಣ ಕಮಲವು ತನ್ನಲ್ಲಿ ಕ್ರೀಡಿಸುವ ಲಕ್ಷ್ಮಿಯ ಪಾದತಳದ ಅಲತಿಗೆಯ ರಸದಿಂದ ಸಮರ್ಥವಾದ ಕಾರಣವು[1].

ಸರ್ವೇಶ್ವರಿಯ ಕೈಗೆ ಆಗ ಅರಳಿದ ರಕ್ತಪದ್ಮವು ಒಂದು ರವೆಯಷ್ಟಾದರು ಅರಿಯಬಾರದೆಂಬುದರಿಂದ ಅತಿಶಯೋಕ್ತಿ ಅಲಂಕಾರ ಪ್ರಧಾನ.

ಸ್ತನ ವರ್ಣನೆ—

ಸಮಂ ದೇವಿ ಸ್ಕಂದದ್ವಿಪವದನಪೀತಂ ಸ್ತನಯುಗಂ
ತವೇದಂ ನಃ ಖೇದಂ ಹರತು ಸತತಂ ಪ್ರಸ್ನುತಮುಖಮ್
ಯದಾಲೋಕ್ಯಾಶಂಕಾಕುಲಿತಹೃದಯೋ ಹಾಸಜನಕಃ
ಸ್ವಕುಂಭೌ ಹೇರಂಬಃ ಪರಿಮೃಶತಿ ಹಸ್ತೇನ ಝಟಿತಿ ೭೧

[ಹೇ ದೇವಿ! ಸಮಂ ಸ್ಕಂದದ್ವಿಪವದನಪೀತಂ ಇದಂ ಪ್ರಸ್ನುತಮುಖಂ ತವ ಸ್ತನಯುಗಂ ನಃ ಖೇದಂ ಸತತಂ ಹರತು. ಯದಾಲೋಕ್ಯ ಆಶಂಕಾಕುಲಿತ ಹೃದಯಃ ಹೇರಂಬಃ ಹಾಸಜನಕಃ ಸ್ವ ಹಸ್ತೇನ ಝಟಿತಿ ಸ್ವಕುಂಭೌ ಪರಿಮೃಶತಿ.]

ಹೇ ದೇವಿ–ಏ ಭಗವತಿಯೇ! ಸಮಂ ಸ್ಕಂದದ್ವಿಪವದನಪೀತಂ ಇದಂ ಪ್ರಸ್ನುತಮುಖಂ ತವ ಸ್ತನಯುಗಂ ನಃ ಖೇದಂ ಸತತಂ ಹರತು–ಸಮವಾಗಿ ಷಣ್ಮುಖನು ವಿಘ್ನೇಶ್ವರನು ಪಾನಮಾಡಿದಂಥ ಈ ಹಾಲುಸುರಿಯುವ ಕೊನೆಗಳುಳ್ಳ ನಿನ್ನ ಮೊಲೆಗಳೆರಡು ನನ್ನ ಮನಸ್ತಾಪವನು ಆವಾಗಲು ಪರಿಹರಿಸಲಿ, ಯದಾ

---

[1] ಬಣ್ಣಿಸೇವು ; ಕಮಲವು ತನ್ನಲ್ಲಿ ಕ್ರೀಡಿಸುವ ಲಕ್ಷ್ಮಿಯ ಪಾದತಳದ ಅಲತಿಗೆಯ ರಸ ದಿಂದ ಸಮರ್ಥವಾದರೆ ಆವಾಗ ಸಾಮ್ಯವನ್ನು ಹೊಂದಬಹುದೆಂದು ಭಾವ.

ಲೋಕ್ಯಾಶಂಕಾಕುಲಿತಹೃದಯಃ ಹೇರಂಬಃ ಹಾಸಜನಕಃ ಸ್ಯ—ಆವದಾನೊಂದು ಎರಡು ಮೊಲೆಗಳನು ನೋಡಿ ತನ್ನ ಕುಂಭಸ್ಥಲಗಳ ಅಪಹರಿಸಿದಳೋ ಎಂದು ತತ್ತರಬಡುವ ಮನಸ್ಸುಳ್ಳ ಗಜಮುಖನು ತಂದೆತಾಯಿಗಳಿಗೆ ನಗೆಯ ಹುಟ್ಟಿಸಿದ ವನಾಗಿಕೊಂಡು, ಹಸ್ತೇನ ಝಟಿತಿ ಸ್ವಕುಂಭೌ ಪರಿಮೃಶತಿ–ಸೊಂಡಿಲಿಂದ ಶೀಘ್ರ ದಲ್ಲಿ ತನ್ನ ಕುಂಭಸ್ಥಳಗಳನು ತಡಹಿನೋಡಿದನು.

ಸರ್ವಲೋಕಪೂಜ್ಯಪಾದರಾದ ಷಣ್ಮುಖ ವಿಘ್ನೇಶ್ವರರುಗಳಿಂದ ಎಂದುದ ರಿಂದ ಸರ್ವೇಶ್ವರಿಯ ಸರ್ವಾತಿಶಯವ ಹೇಳಿದ್ದು, ದೇವಿಯ ಕುಚದ್ವಯಗಳ ವಿಘ್ನೇಶ್ವರನು ತನ್ನ ಕುಂಭಸ್ಥಳಗಳೋ ಎಂಬುದರಿಂದ ಅತಿಶಯೋಕ್ತಿ ಅಲಂಕಾರ.

ಅಮೂ ತೇ ವಕ್ಷೋಜಾವಮೃತರಸಮಾಣಿಕ್ಯಕುತುಪೌ
ನ ಸಂದೇಹಸ್ಪಂದೋ ನಗಪತಿಪತಾಕೇ ಮನಸಿ ನಃ
ಪಿಬಂತೌ ತೌ ಯಸ್ಮಾದವಿದಿತವಧೂಸಂಗರಸಿಕೌ
ಕುಮಾರಾವದ್ಯಾಪಿ ದ್ವಿರದವದನಕ್ರೌಂಚದಲನೌ ೭೨

[ಹೇ ನಗಪತಿಪತಾಕೇ ! ತೇ ಅಮೂ ವಕ್ಷೋಜೌ ಅಮೃತರಸಮಾಣಿಕ್ಯ ಕುತುಪೌ, ಅಸ್ಮಿನ್ನರ್ಥೇ ನಃ ಮನಸಿ ಸಂದೇಹಸ್ಪಂದೋ ನಾಸ್ತಿ. ಯಸ್ಮಾತ್ತೌ ಪಿಬಂತೌ ಅವಿದಿತವಧೂಸಂಗರಸಿಕೌ ದ್ವಿರದವದನಕ್ರೌಂಚದಲನೌ ಅದ್ಯಾಪಿ ಕುಮಾರೌ ಭವತಃ.]

ಹೇ ನಗಪತಿಪತಾಕೇ–ಏ ಹಿಮವತ್ಪರ್ವತನ ವಂಶಕ್ಕೆ ಕೆಕ್ಕೆಯಾದವಳೇ ! ತೇ ಅಮೂ ವಕ್ಷೋಜೌ ಅಮೃತರಸಮಾಣಿಕ್ಯಕುತುಪೌ–ನಿನ್ನ ಈ ಎರಡು ಮೊಲೆಗಳು ಅಮೃತರಸದ ರತ್ನದ ಬಿಂದಿಗೆಗಳು, ಅಸ್ಮಿನ್ ಅರ್ಥೇ ನಃ ಮನಸಿ ಸಂದೇಸ್ಪಂದೋ ನಾಸ್ತಿ–ಈ ಅರ್ಥದಲ್ಲಿ ನಮ್ಮ ಮನಸ್ಸಿನಲ್ಲಿ ಸಂದೇಹ ಒಂದಿಷ್ಟಾ ದರು ಇಲ್ಲ. ಯಸ್ಮಾತ್ ತೌ ಪಿಬಂತೌ ಅವಿದಿತವಧೂಸಂಗರಸಿಕೌ ದ್ವಿರದವದನ ಕ್ರೌಂಚದಲನೌ ಅದ್ಯಾಪಿ ಕುಮಾರೌ ಭವತಃ–ಆವದರಿಂದ ಅವರಿಬ್ಬರು ಸ್ತನ್ಯ ಪಾನವ ಮಾಡುತ ಸ್ತ್ರೀಸಂಭೋಗದ ರಸಿಕವ ಅರಿಯದ ಬಾಲಕರಾದ ವಿನಾಯಕ ಷಣ್ಮುಖರು ಈಗಲೂ ಕುಮಾರರುಗಳಾಗಿ ಇದ್ದಾರೆ ಅದುಕಾರಣದಿಂದ. ಈ ಶ್ಲೋಕ ಕಾವ್ಯಲಿಂಗಾಲಂಕಾರ ಪ್ರಧಾನ.

ವಹತ್ಯಂಬ ಸ್ತಂಬೇರಮದನುಜಕುಂಭಪ್ರಕೃತಿಭಿಃ
ಸಮಾರಬ್ಧಾಂ ಮುಕ್ತಾಮಣಿಭಿರಮಲಾಂ ಹಾರಲತಿಕಾಮ್
ಕುಚಾಭೋಗೋ ಬಿಂಬಾಧರರುಚಿಭಿರಂತಃ ಶಬಲಿತಾಂ
ಪ್ರತಾಪವ್ಯಾಮಿಶ್ರಾಂ ಪುರದಮಯಿತುಃ ಕೀರ್ತಿಮಿವ ತೇ ೭೩

[ಹೇ ಅಂಬ! ತೇ ಕುಚಾಭೋಗಃ ಸ್ತಂಬೇರಮದನುಜಕುಂಭಪ್ರಕೃತಿಭಿಃ ಮುಕ್ತಾಮಣಿಭಿಃ ಸಮಾರಬ್ಧಾಂ ಅಮಲಾಂ ಹಾರಲತಿಕಾಂ ಬಿಂಬಾಧರರುಚಿಭಿಃ ಅನ್ತಃಶಬಲಿತಾಂ ಪ್ರತಾಪವ್ಯಾಮಿಶ್ರಾಂ ಪುರದಮಯಿತುಃ ಕೀರ್ತಿಮಿವ ವಹತಿ.]

ಹೇ ಅಂಬ–ಏ ತಾಯೇ! ತೇ ಕುಚಾಭೋಗಃ ಸ್ತಂಬೇರಮದನುಜಕುಂಭಪ್ರಕೃತಿಭಿಃ ಮುಕ್ತಾಮಣಿಭಿಃ—ನಿನ್ನ ಕುಚವಿಸ್ತಾರವು ಗಜಾಸುರ ಕುಂಭಸ್ಥಳ ಮೊದಲಾದ ಸ್ಥಳಗಳಲ್ಲಿ ಹುಟ್ಟಿದ ಮುತ್ತಿನ ಮಣಿಗಳಿಂದ. ಆನೆಯ ಕುಂಭಸ್ಥಳ ಮೊದಲಾದವರಲ್ಲಿ ಮುತ್ತು ಹುಟ್ಟುತೆಂಬುದು ಪ್ರಸಿದ್ಧ. ಇದಕ್ಕೆ ಸಮ್ಮತಿ ಸರ್ವಜ್ಞಸೋಮೇಶ್ವರನಿಂದ—

'ಗಜಕುಂಭೇಷು ವಂಶೇಷು ಫಣಾಸು ಜಲದೇಷು ಚ
ಶುಕ್ತಿಕಾಯಾಮಿಕ್ಷುದಂಡೇ ಷೋಢಾ ಮೌಕ್ತಿಕಸಂಭವಃ
ಗಜಕುಂಭೇ ಕರ್ಬುರಾಭಾ ವಂಶೇ ರಕ್ತಸಿತಾಃ ಸ್ಮೃತಾಃ
ಫಣಾಸು ವಾಸುಕೇರೇವ ನೀಲವರ್ಣಾಃ ಪ್ರಕೀರ್ತಿತಾಃ
ಜ್ಯೋತಿರ್ವರ್ಣಾಸ್ತು ಜಲದೇ ಶುಕ್ತಿಕಾಯಾಂ ಸಿತಾಃ ಸ್ಮೃತಾಃ
ಇಕ್ಷುದಂಡೇ ಪೀತವರ್ಣಾಃ ಮಣಯೋ ಮೌಕ್ತಿಕಾಃ ಸ್ಮೃತಾಃ'

ಇಂಥಾ ಮಣಿಗಳಿಂದ, ಸಮಾರಬ್ಧಾಂ ಅಮಲಾಂ ಹಾರಲತಿಕಾಂ—ಪೋಣಿಸಲ್ಪಟ್ಟಂಥಾ ನಿರ್ಮಲವಾದ ಕಂಠಮಾಲೆಯನು, ಬಿಂಬಾಧರರುಚಿಭಿಃ ಅಂತಃ ಶಬಲಿತಾಂ—ತೊಂಡೆಯಹಣ್ಣಿನಹಾಗೆ ಇದ್ದ ಅಧರಕಾಂತಿಯಿಂದ ಮಧ್ಯದಲ್ಲಿ ಕೂಡಿದ ರಕ್ತವರ್ಣವಾಗಿ ಇದ್ದದನು, ಪ್ರತಾಪವ್ಯಾಮಿಶ್ರಾಂ ಪುರದಮಯಿತುಃ ಕೀರ್ತಿಮಿವ ವಹತಿ—ಕೆಂಪುವರ್ಣವಾದ ಪ್ರತಾಪದಿಂದ ಕೂಡಿಕೊಂಡ ಮಹಾದೇವರ ಕೀರ್ತಿಎಂಬ ಬೆಳಪಿನ ಹಾಗೆ ವಹಿಸುತದೇ.

ಸರ್ವೇಶ್ವರಿಯ ಕುಚಸ್ಥಳದಲ್ಲಿದ್ದ ಕಂಠಮಾಲೆ ಅಧರ ವರ್ಣದಿಂದ ಕೆಂಪಾದುದನು ಶಿವನಪ್ರತಾಪವ ಕೂಡಿದ ಕೀರ್ತಿಯ ಹಾಗೆಂದು ಉತ್ಪ್ರೇಕ್ಷಿಸಿದ್ದದರಿಂದ ಉತ್ಪ್ರೇಕ್ಷಾಲಂಕಾರ.

ಮೊಲೆಹಾಲಿನ ವರ್ಣನೆ—

ತವ ಸ್ತನ್ಯಂ ಮನ್ಯೇ ಧರಣಿಧರಕನ್ಯೇ ಹೃದಯತಃ
ಪಯಃಪಾರಾವಾರಃ ಪರಿವಹತಿ ಸಾರಸ್ವತಮಿವ
ದಯಾವತ್ಯಾ ದತ್ತಂ ದ್ರವಿಡಶಿಶುರಾಸ್ವಾದ್ಯ ತವ ಯತ್
ಕವೀನಾಂ ಪ್ರೌಢಾನಾಮಜನಿ ಕಮನೀಯಃ ಕವಯಿತಾ ೭೪

[ಹೇ ಧರಣಿಧರಕನ್ಯೇ! ತವ ಸ್ತನ್ಯಂ ಹೃದಯತಃ ಉತ್ಥಿತಃ ಪಯಃಪಾರಾವಾರಃ ಸಾರಸ್ವತಮಿವ ಪರಿವಹತೀತಿ ಮನ್ಯೇ. ಯದ್ಯಸ್ಮಾತ್ ದಯಾವತ್ಯಾ

ತ್ವಯಾ ದತ್ತಂ ಸ್ತನ್ಯಂ ದ್ರವಿಡಶಿಶುರಾಸ್ವಾದ್ಯ ಪ್ರೌಢಾನಾಂ ಕವೀನಾಂ ಮಧ್ಯೇ ಕಮನೀಯಃ ಕವಯಿತಾ ಅಜನಿ.]

ಹೇ ಧರಣಿಧರಕನ್ಯೇ—ಏ ಹಿಮವತ್ಪರ್ವತನ ಮಗಳೇ! ತವ ಸ್ತನ್ಯಂ ಹೃದಯತಃ ಉತ್ಥಿತಃ ಪಯಃಪಾರಾವಾರಃ ಸಾರಸ್ವತಮಿವ ಪರಿವಹತೀತಿ ಮನ್ಯೇ—ನಿನ್ನ ಮೊಲೆಹಾಲನು ಎದೆಯಲ್ಲಿ ಹುಟ್ಟಿದ ಹಾಲಸಮುದ್ರವು ಸರಸ್ವತಿಯ ರೂಪವೆಂದು ತಿಳಿದೇನು, ಸರಸ್ವತಿಯರೂಪು ಬಿಳೀದೆಂಬುದು ಪ್ರಸಿದ್ಧ, ಯದ್ಯಸ್ಮಾತ್ಕಾರಣಾತ್ ದಯಾವತ್ಯಾ ತ್ವಯಾ ದತ್ತಂ ಸ್ತನ್ಯಂ—ಆವುದಾನೊಂದು ಕಾರಣ ಅಧಿಕ ಕೃಪೆಯುಳ್ಳಂಥಾ ನಿನ್ನಿಂದ ಕೊಡಲ್ಪಟ್ಟ ಮೊಲೆಹಾಲನು, ದ್ರವಿಡಶಿಶುರಾಸ್ವಾದ್ಯ ಪ್ರೌಢಾನಾಂ ಕವೀನಾಂ ಮಧ್ಯೇ ಕಮನೀಯಃ ಕವಯಿತಾ ಅಜನಿ—ಈ ಸ್ತೋತ್ರವ ಹೇಳಿದ ತಿಗುಳಬಾಲನು ಪಾನವಮಾಡಿ ಪ್ರೌಢರಾದ ಕವೀಶ್ವರರ ಮಧ್ಯದಲ್ಲಿ ಮನೋಹರವಾದ ಕವೀಶ್ವರನು ಆದನು.

ಸರ್ವೇಶ್ವರಿಯ ಮೊಲೆಹಾಲನು ಸರಸ್ವತಿಯ ರೂಪವೆಂದು ಉತ್ಪ್ರೇಕ್ಷಿಸಿದ್ದದರಿಂದ ಉತ್ಪ್ರೇಕ್ಷಾಲಂಕಾರ.

ರೋಮಾವಳಿ ವರ್ಣನೆ—

ಹರಕ್ರೋಧಜ್ವಾಲಾವಲಿಭಿರವಲೀಢೇನ ವಪುಷಾ
ಗಭೀರೇ ತೇ ನಾಭೀಸರಸಿ ಕೃತಸಂಗೋ ಮನಸಿಜಃ
ಸಮುತ್ತಸ್ಥೌ ತಸ್ಮಾದಚಲತನಯೇ ಧೂಮಲತಿಕಾ
ಜನಸ್ತಾಂ ಜಾನೀತೇ ಜನನಿ ತವ ರೋಮಾವಲಿರಿತಿ ೭೪

[ಹೇ ಅಚಲತನಯೇ! ಮನಸಿಜಃ ಹರಕ್ರೋಧಜ್ವಾಲಾವಲಿಭಿಃ ಅವಲೀಢೇನ ವಪುಷಾ ಗಭೀರೇ ತೇ ನಾಭೀಸರಸಿ ಕೃತಸಂಗಃ, ತಸ್ಮಾತ್ ಧೂಮಲತಿಕಾ ಸಮುತ್ತಸ್ಥೌ, ಹೇ ಜನನಿ ತಾಂ ಜನಃ ರೋಮಾವಲಿರಿತಿ ಜಾನೀತೇ.]

ಹೇ ಅಚಲತನಯೇ—ಏ ಹಿಮವತ್ಪರ್ವತನ ಮಗಳೇ! ಮನಸಿಜಃ ಹರಕ್ರೋಧಜ್ವಾಲಾವಲಿಭಿರವಲೀಢೇನ ವಪುಷಾ—ಮನ್ಮಥನು ಹರನ ಕೋಪಾಗ್ನಿಜ್ವಾಲೆಗಳಿಂದ ಬಳಸಿಕೊಂಡ ಶರೀರವುಳ್ಳವನಾಗಿ, ಗಭೀರೇ ತೇ ನಾಭೀಸರಸಿ ಕೃತಸಂಗಃ—ಆಳವಾಗಿ ಇದ್ದಂಥಾ ನಿನ್ನ ನಾಭಿಯೆಂಬ ಕೊಳದಲ್ಲಿ ಮುಳಗಿದನು, ತಸ್ಮಾತ್ ಧೂಮಲತಿಕಾ ಸಮುತ್ತಸ್ಥೌ—ಅದರಿಂದ ಹೊಗೆಯ ರೇಖೆಯಾಗಿ ಹೊರಟಿತು, ಹೇ ಜನನಿ ತಾಂ ಜನಃ ರೋಮಾವಲಿರಿತಿ ಜಾನೀತೇ—ಏ ತಾಯೇ! ಆ ಧೂಮರೇಖೆಯನು ಮನುಷ್ಯನು ರೋಮರಾಜಿಯೆಂದು ತಿಳಿವುತ್ತಿದ್ದಾನೆ.

ಸರ್ವೇಶ್ವರಿಯ ರೋಮಾವಳಿಯನು ಧೂಮರೇಖೆ ಎಂದು ಉತ್ಪ್ರೇಕ್ಷಿಸಿದ್ದದರಿಂದ ಉತ್ಪ್ರೇಕ್ಷಾಲಂಕಾರ.

ಯದೇತತ್ಕಾಲಿಂದೀತನುತರತರಂಗಾಕೃತಿ ಶಿವೇ
ಕೃಶೇ ಮಧ್ಯೇ ಕಿಂಚಿಜ್ಜನನಿ ತವ ಯದ್ಭಾತಿ ಸುಧಿಯಾಮ್
ವಿಮರ್ದಾದನ್ಯೋನ್ಯಂ ಕುಚಕಲಶಯೋರಂತರಗತಂ
ತನೂಭೂತಂ ವ್ಯೋಮ ಪ್ರವಿಶದಿವ ನಾಭಿಂ ಕುಹರಿಣೀಮ್ ೭೬

[ಹೇ ಶಿವೇ ಜನನಿ! ಕೃಶೇ ತವ ಮಧ್ಯೇ ಯದೇತತ್ಕಾಲಿಂದೀತನುತರತರಂಗಾಕೃತಿ ಕಿಂಚಿತ್ ಯದ್ರೋಮಾವಲಿರೂಪಂ ಸುಧಿಯಾಂ ಕುಚಕಲಶಯೋರಂತರಗತಂ ಅನ್ಯೋನ್ಯಂ ವಿಮರ್ದಾತ್ತನೂಭೂತಂ ವ್ಯೋಮ [1]ನಾಭಿಕುಹರಿಣೀಂ[1] ಪ್ರವಿಶದಿವ ಭಾತಿ.]

ಹೇ ಶಿವೇ ಜನನಿ—ಐ ಮಂಗಳಾತ್ಮಕವಾದ ತಾಯೇ! ಕೃಶೇ ತವ ಮಧ್ಯೇ ಯದೇತತ್ಕಾಲಿಂದೀತನುತರತರಂಗಾಕೃತಿ ಕಿಂಚಿತ್ ಯತ್ ರೋಮಾವಲಿರೂಪಂ—ಸಣ್ಣನಾದ ನಿನ್ನ ನಡುವಿನಲ್ಲಿ ಅವುದಾನೊಂದು ಯಮುನಾನದಿಯ ಅತಿಸಣ್ಣನಾದ ತೆರೆಯ ಆಕಾರವುಳ್ಳ ವರ್ಣಿಸುವದಕ್ಕೆ ಶಕ್ಯವಲ್ಲದಂಥಾ ಯಾವ ರೋಮಾವಳಿರೂಪವು, ಸುಧಿಯಾಂ ಕುಚಕಲಶಯೋರಂತರಗತಂ ಅನ್ಯೋನ್ಯಂ ವಿಮರ್ದಾತ್ ತನೂಭೂತಂ ವ್ಯೋಮ[1]ನಾಭಿಕುಹರಿಣೀಂ[1] ಪ್ರವಿಶದಿವ ಭಾತಿ—ಸುಬುದ್ಧಿ ಉಂಟಾದವರಿಗೆ ಕುಚಕುಂಭಗಳ ನಡುವೆ ಇದ್ದಂಥಾ, ಎರಡು ಕುಚಗಳು ವರಸಿದದರಿಂದ ಸಣ್ಣನಾದ ನೀಲವರ್ಣದ ಆಕಾಶವು ನಾಭಿಯ ಬಿಲವನು ಪ್ರವೇಶಿಸಿದ ಹಾಗೆ ಒಪ್ಪುತ್ತದೇ.

ಸರ್ವೇಶ್ವರಿಯ ರೋಮಾವಳಿಯನು ಸಣ್ಣನಾದ ನೀಲಾಕಾಶದಹಾಗೆ ಉತ್ಪ್ರೇಕ್ಷಿಸಿದ್ದದರಿಂದ ಉತ್ಪ್ರೇಕ್ಷಾಲಂಕಾರ ಪ್ರಧಾನ.

ನಾಭಿ ವರ್ಣನೆ—

ಸ್ಥಿರೋ ಗಂಗಾವರ್ತಃ ಸ್ತನಮುಕುಲರೋಮಾವಲಿಲತಾ
ಕಲಾವಾಲಂ ಕುಂಡಂ ಕುಸುಮಶರತೇಜೋಹುತಭುಜಃ
ರತೇರ್ಲೀಲಾಗಾರಂ ಕಿಮಪಿ ತವ ನಾಭಿರ್ಗಿರಿಸುತೇ
ಬಿಲದ್ವಾರಂ ಸಿದ್ಧೇರ್ಗಿರಿಶನಯನಾನಾಂ ವಿಜಯತೇ ೭೭

[ಹೇ ಗಿರಿಸುತೇ! ತವ ನಾಭಿಃ ಸ್ಥಿರೋ ಗಂಗಾವರ್ತಃ, ಸ್ತನಮುಕುಲರೋಮಾವಲಿಲತಾಕಲಾವಾಲಂ, ಕುಸುಮಶರತೇಜೋಹುತಭುಜಃ ಕುಂಡಂ, ರತೇರ್ಲೀಲಾಗಾರಂ, ಗಿರಿಶನಯನಾನಾಂ ಬಿಲದ್ವಾರಮಿತಿ, ಕಿಮಪಿ ವಿಜಯತೇ.]

---

[1] ನಾಭಿಂ ಕುಹರಿಣೀಂ—ಬಿಲವುಳ್ಳಂಥಾ ನಾಭಿಯನ್ನು, ಎಂದಿರಬೇಕು.

ಹೇ ಗಿರಿಸುತೇ–ಎ ಪಾರ್ವತಿಯೇ! ತವ ನಾಭಿಃ–ನಿನ್ನ ನಾಭಿಯು, ಸ್ಥಿರೋ ಗಂಗಾವರ್ತಃ–ಗಂಗಾನದಿಯೊಳಗಣ ಸ್ಥಿರವಾದ ಸುಳಿಯು. ಸ್ತನಮುಕುಲ ರೋಮಾವಲಿಲತಾಕಲಾವಾಲಂ–ಮೊಲೆಗಳೆಂಬ ಮೊಗ್ಗೆಯುಂಟಾದ ರೋಮಾ ವಳಿಯೆಂಬ ಬಳ್ಳಿಯ ಪಾತೆಯು. ಕುಸುಮಶರತೇಜೋಹುತಭುಜಃ ಕುಂಡಂ– ಮನ್ಮಥನ ಕಾಂತಿಯೆಂಬ ಅಗ್ನಿಯಿಹ ಹೋಮ ಕುಂಡವು. ರತೇರ್ಲೀಲಾಗಾರಂ— ರತಿದೇವಿ ಸದಾ ಕ್ರೀಡಿಸಿಕೊಂಡು ಇಹ ಮನೆಯು. ಗಿರಿಶನಯನಾನಾಂ ಸಿದ್ಧೇ ರ್ಬಿಲದ್ವಾರಂ ಇತಿ–ಶಿವನ ಕಣ್ಣುಗೆ ತಪಸ್ಸು ಸಿದ್ಧಿಯ ಬಿಲದ್ವಾರವು. ಹೀಗೆಂದು, ಕಿಮಪಿ ವಿಜಯತೇ–ಹೇಳಶಕ್ಯವಲ್ಲದ ಚಲುವಿಕೆಯುಳ್ಳಂಥಾ ಸರ್ವಾತಿಶಯವಾಗಿ ಒಪ್ಪುತ್ತಿದೆ.

ಸರ್ವೇಶ್ವರಿಯ ನಾಭಿಯ ಒಂದನ್ನೆ ನಾನಾವಿಧವಾಗಿ ವರ್ಣಿಸಲಾಗಿ ಉಲ್ಲೇಖಾಲಂಕಾರ ಪ್ರಧಾನ.

ನಡುವಿನ ವರ್ಣನೆ—

ನಿಸರ್ಗಕ್ಷೀಣಸ್ಯ ಸ್ತನತಟಭರೇಣ ಕ್ಲಮಜುಷೋ
ನಮನ್ಮೂರ್ತೇರ್ನಾರೀತಿಲಕ ಶನಕೈಸ್ತ್ರುಟ್ಯತ ಇವ
ಚಿರಂ ತೇ ಮಧ್ಯಸ್ಯ ತ್ರುಟಿತತಟಿನೀತೀರತರುಣಾ
ಸಮಾವಸ್ಥಾಸ್ಥೇಮ್ನೋ ಭವತು ಕುಶಲಂ ಶೈಲತನಯೇ ೭೮

[ಹೇ ನಾರೀತಿಲಕ! ಶೈಲತನಯೇ! ನಿಸರ್ಗಕ್ಷೀಣಸ್ಯ ಸ್ತನತಟಭರೇಣ ಕ್ಲಮಜುಷಃ ನಮನ್ಮೂರ್ತೇಃ ಶನಕೈಃ ತ್ರುಟ್ಯತ ಇವ ಸ್ಥಿತಸ್ಯ ತ್ರುಟಿತ ತಟಿನೀತೀರತರುಣಾ ಸಮಾವಸ್ಥಾಸ್ಥೇಮ್ನಃ ತೇ ಮಧ್ಯಸ್ಯ ಚಿರಂ ಕುಶಲಂ ಭವತು.]

ಹೇ ನಾರೀತಿಲಕ ಶೈಲತನಯೇ–ಏ ಸ್ತ್ರೀರತ್ನವಾಗಿದ್ದಂಥಾ ಪಾರ್ವತಿಯೇ! ನಿಸರ್ಗಕ್ಷೀಣಸ್ಯ–ಸ್ವಭಾವದಿಂದ ಕೃಶವಾಗಿದ್ದಂಥಾ, ಸ್ತನತಟಭರೇಣ ಕ್ಲಮ ಜುಷಃ–ಸ್ತನಭಾರಗಳಿಂದ ಬಳಲಿಕೆ ಕೂಡಿ ಇದ್ದಂಥಾ, ನಮನ್ಮೂರ್ತೇಃ–ಬಾಗಿದ ಆಕಾರವುಳ್ಳಂಥಾ, ಶನಕೈಃ ತ್ರುಟ್ಯತ ಇವ ಸ್ಥಿತಸ್ಯ––ಮೆಲ್ಲಗೆ ಮುರಿವದರ ಹಾಗೆ ಇದ್ದಂಥಾ, ತ್ರುಟಿತತಟಿನೀತೀರತರುಣಾ ಸಮಾವಸ್ಥಾಸ್ಥೇಮ್ನಃ–ಬೀಳು ವಂಥಾ ನದಿಯ ತೀರದ ಮರದ ಸರಿಯಾದ ಅವಸ್ಥೆಯುಳ್ಳಂಥಾ, ತೇ ಮಧ್ಯಸ್ಯ ಚಿರಂ ಕುಶಲಂ ಭವತು–ನಿನ್ನ ನಡುವಿಗೆ ಬಹಳಕಾಲ ಕ್ಷೇಮವಾಗಲಿ.

ಸರ್ವೇಶ್ವರಿಯ ನಡುವನು ನದಿಯತೀರದ ಮರದಹಾಗೆ ಮೊಲೆಗಳ ಭಾರದಿಂದ ಆವಾಗ ಬೀಳುವದೋ ಎಂಬ ಹಾಗೆ ಅದೆ ಎಂದು ವರ್ಣಿಸಿದ್ದದರಿಂದ ಉಪಮಾಲಂಕಾರ.

ತ್ರಿವಳಿಯ ವರ್ಣನೆ—

ಕುಚೌ ಸದ್ಯಃ ಸ್ವಿದ್ಯತ್ತಟಘಟಿತಕೂರ್ಪಾಸಭಿದುರೌ
ಕಷಂತೌ ದೋರ್ಮೂಲೇ ಕನಕಕಲಶಾಭೌ ಕಲಯತಾ
ತವ ತ್ರಾತುಂ ಭಂಗಾದಲಮಿತಿ ವಲಗ್ನಂ ತನುಭುವಾ
ತ್ರಿಧಾ ನದ್ಧಂ ದೇವಿ ತ್ರಿವಲಿಲವಲೀವಲ್ಲಿಭಿರಿವ ೭೯

[ಹೇ ದೇವಿ! ಸದ್ಯಸ್ಸ್ವಿದ್ಯತ್ತಟಘಟಿತಕೂರ್ಪಾಸಭಿದುರೌ ದೋರ್ಮೂಲೇ ಕಷಂತೌ ಕನಕಕಲಶಾಭೌ ಕುಚೌ ಕಲಯತಾ ತನುಭುವಾ ಭಂಗಾದಲಮಿತಿ ತವ ವಲಗ್ನಂ ತ್ರಾತುಂ ತ್ರಿವಲಿಲವಲೀವಲ್ಲಿಭಿಃ ತ್ರಿಧಾ ನದ್ಧಮಿವ.]

ಹೇ ದೇವಿ–ಎ ಸರ್ವೇಶ್ವರಿಯೇ! ಸದ್ಯಸ್ಸ್ವಿದ್ಯತ್ತಟಘಟಿತಕೂರ್ಪಾಸಭಿದುರೌ–ಸದಾಶಿವಧ್ಯಾನ ಸಂತೋಷದಿಂದ ಮೈವುಬ್ಬಿ ಆಗ ಬೆವರುಕೂಡಿದ ಸ್ತನತಟದಲ್ಲಿ ಘಟಿತವಾದ ಕುಪ್ಪಸವು (ವ) ಹರಿವಂಥಾ, ದೋರ್ಮೂಲೇ ಕಷಂತೌ–ಕಂಕುಳು ವರಸುತ್ತಿದ್ದಂಥಾ, ಕನಕಕಲಶಾಭೌ ಕುಚೌ–ಚಿನ್ನದಬಿಂದಿಗೆಯ ಚಲುವಿಕೆಯಾಗಿದ್ದಂಥಾ ಎರಡು ಮೊಲೆಗಳನು, ಕಲಯತಾ ತನುಭುವಾ ಭಂಗಾದಲಮಿತಿ–[1]ಅತಿಭಾರವೆಂದು ತಿಳಿದ[1] ಮನ್ಮಥನಿಂದ ಮುರಿಯಬೇಡವೆಂದು, ತವ ವಲಗ್ನಂ ತ್ರಾತುಂ ತ್ರಿವಲಿಲವಲೀವಲ್ಲಿಭಿಃ ತ್ರಿಧಾ ನದ್ಧಮಿವ—ನಿನ್ನ ನಡುವನು ರಕ್ಷಿಸುವದಕ್ಕೋಸ್ಕರ ತ್ರಿವಳಿ ಎಂಬ ಯಾಲಕ್ಕಿಯ ಬಳ್ಳಿಯಿಂದ ಮೂರು ಸುತ್ತಾಗಿ ಕಟ್ಟಿದ ಹಾಗೆ ಇದ್ದಿತು.

ಸರ್ವೇಶ್ವರಿಯ ತ್ರಿವಳಿಯನು ಸ್ತನಭಾರದಿಂದ ನಡುವು ಮುರಿದಿತೋ ಎಂದು ಮನ್ಮಥನಿಂದ ಮೂರುಸುತ್ತಾಗಿ ಕಟ್ಟಿದ ಯಾಲಕ್ಕಿಯ ಬಳ್ಳಿಯೋ ಎಂದು ಉತ್ಪ್ರೇಕ್ಷಿಸಿದ್ದದರಿಂದ ಉತ್ಪ್ರೇಕ್ಷಾಲಂಕಾರ.

ನಿತಂಬಗಳ ವರ್ಣನೆ—

ಗುರುತ್ವಂ ವಿಸ್ತಾರಂ ಕ್ಷಿತಿಧರಪತಿಃ ಪಾರ್ವತಿ ನಿಜಾತ್
ನಿತಂಬಾದಾಚ್ಛಿದ್ಯ ತ್ವಯಿ ಹರಣರೂಪೇಣ ನಿದಧೇ
ಅತಸ್ತೇ ವಿಸ್ತೀರ್ಣೋ ಗುರುರಯಮಶೇಷಾಂ ವಸುಮತೀಂ
ನಿತಂಬಪ್ರಾಗ್ಭಾರಃ ಸ್ಥಗಯತಿ ಲಘುತ್ವಂ ನಯತಿ ಚ ೮೦

[ಹೇ ಪಾರ್ವತಿ! ಕ್ಷಿತಿಧರಪತಿಃ ಗುರುತ್ವಂ ವಿಸ್ತಾರಂ ನಿಜಾನ್ನಿತಂಬಾದಾಚ್ಛಿದ್ಯ ತ್ವಯಿ ಹರಣರೂಪೇಣ ನಿದಧೇ, ಅತಸ್ತೇಽಯಂ ನಿತಂಬಪ್ರಾಗ್ಭಾರಃ ಗುರುರ್ವಿಸ್ತೀರ್ಣಃ ಸ್ನ್ ಅಶೇಷಾಂ ವಸುಮತೀಂ ಸ್ಥಗಯತಿ ಲಘುತ್ವಂ ಚ ನಯತಿ.]

[1] ಸ್ಪೃಷ್ಟಿಸುವಂಥಾ, ಎಂದಿರಬೇಕು.

ಹೇ ಪಾರ್ವತಿ—ಏ ಪಾರ್ವತಿಯೇ! ಕ್ಷಿತಿಧರಪತಿಃ—ಹಿಮವತ್ಪರ್ವತನು, ಗುರುತ್ವಂ ವಿಸ್ತಾರಂ ನಿಜಾನ್ನಿತಂಬಾದಾಚ್ಛಿದ್ಯ——ಅಧಿಕವನು ಅಗಲವನು ತನ್ನ ಗಿರಿಯ ಪ್ರದೇಶದಿಂದ ತೆಕ್ಕೊಂಡು, ತ್ವಯಿ ಹರಣರೂಪೇಣ ನಿದಧೇ—ನಿನ್ನಲ್ಲಿ [1]ವಿವಾಹಸಮಯದ ಬಳುವಳಿಯ ಕೊಟ್ಟಹಾಗೆ ಇಟ್ಟನು, ಅತಸ್ತೇ ಅಯಂ ನಿತಂಬ ಪ್ರಾಗ್ಭಾರಃ ಗುರುರ್ವಿಸ್ತೀರ್ಣಃ ಸ್ವ—ಅದುಕಾರಣದಿಂದ ನಿನ್ನ ಈ ಕಾಣಬರು ವಂಥಾ ನಿತಂಬಭಾರವು ದೊಡ್ಡದಾಗಿ ಅಗಲವಾಗಿಕೊಂಡು, ಅಶೇಷಾಂ ವಸು ಮತೀಂ ಸ್ಥಗಯತಿ ಲಘುತ್ವಂ ಚ ನಯತಿ—ಸಕಲಭೂಮಿಯನು ಮುಚ್ಚುತ್ತದೆ, ಲಘುತ್ವವನು ಮಾಡುತ್ತದೆ.

ನಿನ್ನ ನಿತಂಬ ಹಿಮವತ್ಪರ್ವತನು ತನ್ನಲ್ಲಿ ಇದ್ದ ಗುರುವಿಸ್ತಾರವನು ಮದುವೆಯ ಸಮಯದಲ್ಲಿ ಮಗಳಿಗೆ ಬಳುವಳಿಯರೂಪದಲ್ಲಿ ಇಟ್ಟನೆಂದು ಸರ್ವೇಶ್ವರಿಯ ನಿತಂಬಭಾರವ ಅಧಿಕವಾದ ಗುರುವಿಸ್ತಾರವನು ಹೇಳಿದ್ದರಿಂದ ಅತಿಶಯೋಕ್ತಿ ಅಲಂಕಾರ.

ತೊಡೆಗಳ ಜಂಘೆಯಕೂಡಿದ ವರ್ಣನೆ—

ಕರೀಂದ್ರಾಣಾಂ ಶುಣ್ಡಾ೯ ಕನಕಕದಲೀಕಾಂಡಪಟಲೀ
ಮುಭಾಭ್ಯಾಮೂರುಭ್ಯಾ ಮುಭಯಮಪಿ ನಿರ್ಜಿತ್ಯ ಭವತಿ
ಸುವೃತ್ತಾಭ್ಯಾಂ ಪತ್ಯುಃ ಪ್ರಣತಿಕಠಿನಾಭ್ಯಾಂ ಗಿರಿಸುತೇ
ವಿಧಿಜ್ಞೇ ಜಾ ನುಭ್ಯಾಂ ವಿಬುಧಕರಿಕುಂಭದ್ವಯಮಪಿ ೮೧

[ಹೇ ಗಿರಿಸುತೇ! ವಿಧಿಜ್ಞೇ! ಭವತಿ! ಕರೀಂದ್ರಾಣಾಂ ಶುಣ್ಡಾ೯ ಕನಕ ಕದಲೀಕಾಂಡಪಟಲೀಂ ಉಭಾಭ್ಯಾಮೂರುಭ್ಯಾಂ ಉಭಯಂ ನಿರ್ಜಿತ್ಯ ಸುವೃತ್ತಾಭ್ಯಾಂ ಪತ್ಯುಃ ಪ್ರಣತಿಕಠಿನಾಭ್ಯಾಂ ಜಾನುಭ್ಯಾಂ ವಿಬುಧಕರಿಕುಂಭ ದ್ವಯಮಪಿ ನಿರ್ಜಿತ್ಯ ವರ್ತಸೆ.]

ಹೇ ಗಿರಿಸುತೇ ವಿಧಿಜ್ಞೇ ಭವತಿ—ಏ ಪಾರ್ವತಿಯೇ! [2]ದೇವತಾರ್ಥವ ಬಲ್ಲವಳೇ! [2] ನೀನು, ಕರೀಂದ್ರಾಣಾಂ ಶುಂಡಾ೯ ಕನಕಕದಲೀಕಾಂಡಪಟಲೀಂ—ಗಜಶ್ರೇಷ್ಠಗಳ ಸೊಂಡಿಲನು ಚಿನ್ನದ ಬಾಳೆಯ ಕಂಬದಸಮೂಹವನು, ಉಭಾಭ್ಯಾಂ ಊರುಭ್ಯಾಂ ಉಭಯಮಪಿ ನಿರ್ಜಿತ್ಯ—ಎರಡು ತೊಡೆಗಳಿಂದಲೂ ಆ ಎರಡನು ಗೆದ್ದು, ಸುವೃತ್ತಾಭ್ಯಾಂ ಪತ್ಯುಃ ಪ್ರಣತಿಕಠಿನಾಭ್ಯಾಂ—ಚನ್ನಾಗಿ ಬಟುವಾಗಿ ದ್ದಂಥಾ ಗಂಡನಾದ ಸದಾಶಿವನಿಗೆ ಬಹಳವಾಗಿ ನಮಸ್ಕಾರವನು ಮಾಡುವದ ರಿಂದ ಕಠಿಣವಾದಂಥಾ ಮೊಳಕಾಲುಗಳಿಂದ, ವಿಬುಧಕರಿಕುಂಭದ್ವಯಮಪಿ ನಿರ್ಜಿತ್ಯ ವರ್ತಸೇ—ದಿಗ್ಗಜಗಳ ಎರಡು ಕುಂಭಸ್ಥಲವನು ಗೆಲುತಾ ಇದ್ದೆ.

---

[1]"ಅಧ್ಯಗ್ನ್ಯಧ್ಯಾವಾಹನಿಕಂ ಹರಣಂ ಸ್ತ್ರೀಧನಂ ಸ್ಮೃತಮ್" ಎಂಬ ಸ್ಮೃತಿಯಲ್ಲಿ ಹೇಳಿದಂತೆ ಮಾತಾಪಿತೃಗಳಿಂದ ವಿವಾಹಸಮಯದಲ್ಲಾಗಲಿ, ವಧುವನ್ನು ಪತಿಗೃಹಕ್ಕೆ ಕಳುಹಿಸಿಕೊಡುವಾಗಲಾಗಲಿ ಕೊಡಲ್ಪಟ್ಟ ಸ್ತ್ರೀಧನಕ್ಕೆ ಹರಣ ಎಂದು ಹೆಸರು. [2] ವೇದಗಳ ಅರ್ಥವನ್ನು ತಿಳಿದವಳೇ, ಅಥವಾ ೀದಾರ್ಥವಾದ ಧರ್ಮವನ್ನು ಆಚರಿಸುವಂಥಾವಳೇ, ಎಂದಿರಬೇಕು.

ಸರ್ವೇಶ್ವರಿಯ [1]ಊರುಜಾನುಗಳನು ಕೂಡಾ ಆನೆಯು ಸೊಂಡಿಲು ಬಾಳೆಯ ಕಂಬದಹಾಗೆ[1] ವರ್ಣಿಸಿದ್ದದರಿಂದ ಉಪಮಾಲಂಕಾರ ಪ್ರಧಾನ.

ಜಂಘೆಗಳ ಪಾದನಖಗಳು ಕೂಡಿದ ವರ್ಣನೆ—

ಪರಾಜೇತುಂ ರುದ್ರಂ ದ್ವಿಗುಣಶರಗರ್ಭೌ ಗಿರಿಸುತೇ
ನಿಷಂಗೌ ತೇ ಜಂಘೇ ವಿಷಮವಿಶಿಖೋ ಬಾಢಮಕೃತ
ಯದಗ್ರೇ ದೃಶ್ಯಂತೇ ದಶಶರಫಲಾಃ ಪಾದಯುಗಲೀ
ನಖಾಗ್ರಚ್ಛದ್ಮಾನಃ ಸುರಮಕುಟಶಾಣೈಕನಿಶಿತಾಃ ೮೨

[ಹೇ ಗಿರಿಸುತೇ! ವಿಷಮವಿಶಿಖಃ ರುದ್ರಂ ಪರಾಜೇತುಂ ದ್ವಿಗುಣಶರಗರ್ಭೌ ನಿಷಂಗೌ ತೇ ಜಂಘೇ ಅಕೃತ ಬಾಢಂ, ಯದಗ್ರೇ ಪಾದಯುಗಲೀನಖಾಗ್ರಚ್ಛದ್ಮಾನಃ ಸುರಮಕುಟಶಾಣೈಕನಿಶಿತಾಃ ದಶಶರಫಲಾಃ ದೃಶ್ಯಂತೇ]

ಹೇ ಗಿರಿಸುತೇ—ಏ ಪಾರ್ವತಿಯೇ! ವಿಷಮವಿಶಿಖಃ—ಪಂಚಬಾಣನು, ರುದ್ರಂ ಪರಾಜೇತುಂ—ಶಿವನ ಗೆಲುವದಕ್ಕೋಸ್ಕರ, ದ್ವಿಗುಣಶರಗರ್ಭೌ ನಿಷಂಗೌ ತೇ ಜಂಘೇ ಅಕೃತ—ಎರಡುಮಡಿ ಅಂಬುತುಂಬಿದ [2]ಎರಡುಬತ್ತಳಿಕೆಗಳನು ನಿನ್ನ ಜಂಘೆಯಲ್ಲಿ ಮಾಡಿದನು, ಬಾಢಂ[2] ಯದಗ್ರೇ ಪಾದಯುಗಳೀ ನಖಾಗ್ರಚ್ಛದ್ಮಾನಃ ಸುರಮಕುಟಶಾಣೈಕನಿಶಿತಾಃ ದಶಶರಫಲಾಃ ದೃಶ್ಯಂತೇ—[3]ದೃಢವಾಗಿ[3] ಆವುದಾನೊಂದು ಎರಡು ಜಂಘೆಗಳ ಅಗ್ರದಲ್ಲಿ ಎರಡು ಪಾದಗಳ ಉಗುರುಕೊನೆಗಳ ನೆಪದಿಂದ ಇದ್ದಂಥಾ ನಮಸ್ಕಾರವ ಮಾಡುವ ಇಂದ್ರಾದಿಗಳ ಕಿರೀಟವೆಂಬ ಸಾಣೆಯಿಂದ ಮೊನೆಯಾಗಿದ್ದಂಥಾ ಹತ್ತು ಅಂಬುಗಳ ಅಲಗುಗಳು ಕಾಣಬರುತಾ ಅವೆ.

ಸರ್ವೇಶ್ವರಿಯ ಪಾದದ ಉಗುರುಗಳ ಪಂಚಬಾಣ ಎರಡುಮಡಿಯಾದ ಹತ್ತು ಅಂಬುಗಳ ಅಲಗುಗಳು ಎಂದುದರಿಂದ ಅಪಹ್ನವಾಲಂಕಾರ ಪ್ರಧಾನ.

ಪಾದಗಳ ವರ್ಣನೆ—

ಶ್ರುತೀನಾಂ ಮೂರ್ಧಾನೋ ದಧತಿ ತವ ಯೌ ಶೇಖರತಯಾ
ಮಮಾಪ್ಯೇತೌ ಮಾತಃ ಶಿರಸಿ ದಯಯಾ ಧೇಹಿ ಚರಣೌ
ಯಯೋಃ ಪಾದ್ಯಂ ಪಾಥಃ ಪಶುಪತಿಜಟಾಜೂಟತಟಿನೀ
ಯಯೋರ್ಲಾಕ್ಷಾಲಕ್ಷ್ಮೀರರುಣಹರಿಚೂಡಾಮಣಿರುಚಿಃ ೮೩

---

[1] ಊರುಗಳನ್ನು ಆನೆಯು ಸೊಂಡಿಲು ಬಾಳೆಯಕಂಬದ ಹಾಗೆ, ಜಾನುಗಳನ್ನು ದಿಗ್ಗಜಗಳ ಕುಂಭಸ್ಥಳದಹಾಗೆ, ಎಂದರ್ಥ. [2] ಎರಡು ಬತ್ತಳಿಕೆಗಳನ್ನಾಗಿ ನಿನ್ನ ಜಂಘೆಗಳನು ಮಾಡಿದನು, ಬಾಢಂ-ನಿಶ್ಚಯ, ಎಂದಿರಬೇಕು. [3] ಅಧಿಕ.

[ಹೇ ಮಾತಃ ! ಶ್ರುತೀನಾಂ ಮೂರ್ಧಾನಃ ತವ ಯೌ ಚರಣೌ ಶೇಖರತಯಾ ದಧತಿ, ಯಯೋಃ ಪಾದ್ಯಂ ಪಾಥಃ ಪಶುಪತಿಜಟಾಜೂಟತಟಿನೀ, ಯಯೋರ್ಲಾಕ್ಷಾಲಕ್ಷ್ಮೀಃ ಅರುಣಹರಿಚೂಡಾಮಣಿರುಚಿಃ ಭವತಿ, ತವ ಏತೌ ಮಮ ಶಿರಸ್ಯಪಿ ದಯಯಾ ಧೇಹಿ.]

ಹೇ ಮಾತಃ–ಏ ತಾಯೇ ! ಶ್ರುತೀನಾಂ ಮೂರ್ಧಾನಃ ತವ ಯೌ ಚರಣೌ ಶೇಖರತಯಾ ದಧತಿ—ವೇದಾಂತಗಳು ನಿನ್ನ ಆವುದಾನೊಂದು ಎರಡು ಪಾದಗಳನು ಶಿರೋಭೂಷಣವಾಗಿ ಧರಿಸುತ್ತಿದ್ದಾವು, ಯಯೋಃ ಪಾದ್ಯಂ ಪಾಥಃ ಪಶುಪತಿಜಟಾಜೂಟತಟಿನೀ—ಆವದಾನೊಂದು ನಿನ್ನ ಪಾದಗಳ ತೊಳದ ಜಲವು ಶಿವನ ಜಟಾಜೂಟದಲ್ಲಿ ಇದ್ದ ಗಂಗೆಯು, ಯಯೋರ್ಲಾಕ್ಷಾಲಕ್ಷ್ಮೀಃ ಅರುಣಹರಿಚೂಡಾಮಣಿರುಚಿಃ ಭವತಿ–-ಆವದಾನೊಂದು ಪಾದಗಳ ತೊಳದ ಜಲದ ಅಲತಿಗೆಯು ಕಾಂತಿ ವಿಷ್ಣುವಿನ ಕೆಂಪಾಗಿ ಇದ್ದ ಶಿರೋಮಾಣಿಕ್ಯದ ಕಾಂತಿ ಅಹುದು, ತವ ಏತೌ ಮಮ ಶಿರಸ್ಯಪಿ ದಯಯಾ ಧೇಹಿ—ಆ ಎರಡು ಪಾದವನು ನನ್ನ ಶಿರಸ್ಸಿನಲ್ಲಿ ದಯೆಯಿಂದ ಇರಿಸು.

[1] ಸರ್ವೇಶ್ವರಿಯ ಪಾದಗಳು ವೇದಾಂತಗಳಿಂದಲೂ ತ್ರಿಮೂರ್ತಿಗಳ ಶಿರಸ್ಸಿಂದಲೂ ಪೂಜಿಸಲು ಯೋಗ್ಯವೆಂಬುದಕ್ಕೆ ವಾಸಿಷ್ಠಸಂಹಿತೆಯಲ್ಲಿ ಸಮ್ಮತಿ ವಚನ—

'ನಮೋ ದೇವ್ಯೈ ಮಹಾಲಕ್ಷ್ಮ್ಯೈ ಶ್ರಿಯೈ ಸಿದ್ಧ್ಯೈ ನಮೋ ನಮಃ
ಬ್ರಹ್ಮವಿಷ್ಣುಮಹೇಶಾನದೈವತೈಃ ಪೂಜಿತಾಂಘ್ರಯೇ
ವೇದಾನಾಂ ಚ ಶಿರೋಭಿಸ್ತೇ ಶಿವಾಯೈ ವಿಶ್ವಮೂರ್ತಯೇ
ನಮಸ್ತ್ರಿಪುರಸುಂದರ್ಯೈ ಮಹಾದೇವ್ಯೈ ನಮೋ ನಮಃ'

---

[1] ಶ್ರೀದೇವಿಯ ಪಾದಗಳು ವೇದಗಳ ಶಿರಸ್ಸಾದ ಉಪನಿಷತ್ತುಗಳಿಂದ ಪ್ರತಿಪಾದಿಸಲ್ಪಟ್ಟಿವೆ. ಪ್ರಣಯಕೋಪದ ಶಾಂತಿಗಾಗಿ ಸದಾಶಿವನು ಶ್ರೀದೇವಿಯ ಚರಣಗಳಲ್ಲಿ ನಮಸ್ಕರಿಸುವಾಗ ಸದಾಶಿವನ ತಲೆಯಲ್ಲಿರುವ ಗಂಗೆಯು ಶ್ರೀದೇವಿಯ ಪಾದೋದಕವಾಗಿ ಪರಿಣಮಿಸಿತು. ಸಂಧ್ಯಾಕಾಲಗಳಲ್ಲಿ ವಿಷ್ಣುವು ಶ್ರೀದೇವಿಯನ್ನು ನಮಸ್ಕರಿಸುವಾಗ ಪಾದಗಳಲ್ಲಿರುವ ಅಲತಿಗೆಯ ರಕ್ತವರ್ಣವು ವಿಷ್ಣುವಿನ ಕಿರೀಟದಲ್ಲಿರುವ ಶುಭ್ರವಾದ ಮಣಿಯಲ್ಲಿ ಪ್ರತಿಫಲಿಸಿ ಕೆಂಪಾಯಿತು ಎಂದರ್ಥ.

ಶ್ರೀದೇವಿಯ ಎರಡು ಪಾದಕಮಲಗಳಿಗೂ ವೇದಗಳ ಶಿರಸ್ಸಿನಲ್ಲಿಯೂ ಸದಾಶಿವನ ಶಿರಸ್ಸಿನಲ್ಲಿಯೂ ವಿಷ್ಣುವಿನ ಶಿರಸ್ಸಿನಲ್ಲಿಯೂ ಸಂಚರಿಸುವ ಸ್ವಭಾವವಿರುವದರಿಂದ ಭಕ್ತನಾದ ನನ್ನ ಶಿರಸ್ಸಿನಲ್ಲಿಯೂ ಸಂಚರಿಸಬೇಕೆಂಬ ಭಕ್ತನ ಪ್ರಾರ್ಥನೆ.

ಅಥವಾ—ಪ್ರಪಂಚಾಂತರ್ಗತರಾದ ಬ್ರಹ್ಮ ವಿಷ್ಣು ಪಶುಪತಿ ಮುಂತಾದವರು ಪ್ರಪಂಚದ ಸೃಷ್ಟಿಕರ್ತೃವಾದ ಶ್ರೀದೇವಿಯ ಪಾದಾಂಬುಜವನ್ನು ತನ್ನ ತಲೆಯಮೇಲೆ ಧರಿಸಿ ಆ ಪಾದಗಳನ್ನು ತೊಳೆದ ನೀರಿನಿಂದ ಪುನೀತರಾಗಿ ಅವರವರ ಅಧಿಕಾರವನ್ನು ಪಡೆದಿರುತ್ತಾರೆ; ಅದರಂತೆ ನನ್ನ ತಲೆಯಮೇಲೂ ಇರಿಸಬೇಕೆಂಬ ಭಕ್ತನ ಪ್ರಾರ್ಥನೆ ಕೂಡುತ್ತದೆ.

ಪಾದಗಳ ವರ್ಣನೆ—

ನಮೋವಾಕಂ ಬ್ರೂಮೋ ನಯನರಮಣೀಯಾಯ ಪದಯೋಃ
ತವಾಸ್ಮೈ ದ್ವಂದ್ವಾಯ ಸ್ಫುಟರುಚಿರಸಾಲಕ್ತಕವತೇ
ಅಸೂಯತ್ಯತ್ಯಂತಂ ಯದಭಿಹನನಾಯ ಸ್ಪೃಹಯತೇ
ಪಶೂನಾಮೀಶಾನಃ ಪ್ರಮದವನಕಂಕೇಲಿತರವೇ ೮೪

[ಹೇ ಭಗವತಿ! ನಯನರಮಣೀಯಾಯ ಸ್ಫುಟರುಚಿರಸಾಲಕ್ತಕವತೇ ತವ ಪದಯೋಃ ಅಸ್ಮೈ ದ್ವಂದ್ವಾಯ ನಮೋವಾಕಂ ಬ್ರೂಮಃ, ಪಶೂನಾಮೀಶಾನಃ ಯದಭಿಹನನಾಯ ಸ್ಪೃಹಯತೇ ಪ್ರಮದವನಕಂಕೇಲಿತರವೇ ಅತ್ಯಂತಂ ಅಸೂಯತಿ.]

ಹೇ ಭಗವತಿ—ಏ ಭಗವತಿಯೇ! ನಯನರಮಣೀಯಾಯ ಸ್ಫುಟರುಚಿರಸಾಲಕ್ತಕವತೇ ತವ ಪದಯೋಃ ಅಸ್ಮೈ ದ್ವಂದ್ವಾಯ ನಮೋವಾಕಂ ಬ್ರೂಮಃ—ಕಣ್ಣುಗಳಿಗೆ ಆನಂದಕರವಾಗಿದ್ದಂಥಾ ಕಾಂತಿಯಿಂದ ಒಪ್ಪುವ ಅಲತಿಗೆ ಯುಳ್ಳಂಥಾ ನಿನ್ನ ಪಾದಗಳ ಎರಡಕ್ಕೋಸ್ಕರ ನಮಸ್ಕಾರವ ಮಾಡೇವು, ಪಶೂನಾಮೀಶಾನಃ ಯದಭಿಹನನಾಯ ಸ್ಪೃಹಯತೇ ಪ್ರಮದವನಕಂಕೇಲಿತರವೇ ಅತ್ಯಂತಂ ಅಸೂಯತಿ—ಪರಮೇಶ್ವರನು ಆವದಾನೊಂದು ಪಾದತಾಡನವ ಬಯಸುವ ಕೇಳೀವನದ ಅಶೋಕವೃಕ್ಷಕ್ಕೋಸ್ಕರ ಅತ್ಯಂತವಾಗಿ ಮತ್ಸರಿಸುತ್ತಾನೆ.

[1] ಈ ಶ್ಲೋಕದ ಅಭಿಪ್ರಾಯ——ಸರ್ವೇಶ್ವರಿ ದೋಹದಾರ್ಥವಾಗಿ ಅಶೋಕವೃಕ್ಷದ ಫಲಕ್ಕಾಗಿ ಪಾದತಾಡನ ಮಾಡುವಳು, ಅದರಿಂದ ಈಶ್ವರಗು ಒಂದುವೇಳೆಯಲ್ಲಿ ಪಾದತಾಡನಸೌಖ್ಯ ಉಂಟಾಗುವದು, ಈ ಅಚೇತನವಾದ ಅಶೋಕವೃಕ್ಷಕ್ಕು ಸರ್ವೇಶ್ವರಿಯ ಪಾದತಾಡನಸೌಖ್ಯ ತನ್ನಹಾಗೆ ಉಂಟಾಗುತ್ತದೆಯಲ್ಲಾ ಎಂದು ದ್ವೇಷಿಸುತ್ತ ಇದಾನೆಂಬುದು ಅಭಿಪ್ರಾಯ. ಅತಿಶಯೋಕ್ತಿ ಅಲಂಕಾರ.

ಮೃಷಾ ಕೃತ್ವಾ ಗೋತ್ರಸ್ಖಲನಮಥ ವೈಲಕ್ಷ್ಯನಮಿತಂ
ಲಲಾಟೇ ಭರ್ತಾರಂ ಚರಣಕಮಲೇ ತಾಡಯತಿ ತೇ
ಚಿರಾದಂತಃಶಲ್ಯಂ ದಹನಕೃತಮುನ್ಮೀಲಿತವತಾ
ತುಲಾಕೋಟಿಕ್ವಾಣೈಃ ಕಿಲಿಕಿಲಿತಮೀಶಾನರಿಪುಣಾ ೮೫

---

[1] ಸರ್ವೇಶ್ವರಿಯು ಅಶೋಕವೃಕ್ಷಕ್ಕೆ ದೋಹದಾರ್ಥವಾಗಿ ಪಾದತಾಡನವನ್ನು ಮಾಡುವಾಗ ಪ್ರಣಯಕಲಹಸಮಯದಲ್ಲಿ ಶ್ರೀದೇವಿಯ ಪಾದತಾಡನದ ಸೌಖ್ಯವನ್ನು ಅನುಭವಿಸಿದ ಪರಮೇಶ್ವರನು ಅಚೇತನವಾದ ಈ ವೃಕ್ಷಕ್ಕೂ ಶ್ರೀದೇವಿಯ ಪಾದತಾಡನ ಸೌಖ್ಯವುಂಟಾಯಿತಲ್ಲಾ ಎಂದು ಅಸೂಯೆಪಟ್ಟನು, ಎಂಬುದಾಗಿ ಶ್ರೀದೇವಿಯ ಪಾತಿವ್ರತ್ಯವು ಹೇಳಲ್ಪಟ್ಟಿದೆ.

[ಹೇ ಭಗವತಿ! ತೇ ಚರಣಕಮಲೇ ಗೋತ್ರಸ್ಖಲನಂ ಮೃಷಾ ಕೃತ್ವಾ ಅಥ ವೈಲಕ್ಷ್ಯನಮಿತಂ ಭರ್ತಾರಂ ಲಲಾಟೇ ತಾಡಯತಿ ಸತಿ, ದಹನಕೃತಂ ಚಿರಾದಂತಃಶಲ್ಯಂ ಉನ್ಮೀಲಿತವತಾ ಈಶಾನರಿಪುಣಾ ತುಲಾಕೋಟಿಕ್ವಾಣೈಃ ಕಿಲಿಕಿಲಿತಮ್.]

ಹೇ ಭಗವತಿ—ಏ ಭಗವತಿಯೇ! ತೇ ಚರಣಕಮಲೇ (ಸತಿಸಪ್ತಮೀ ವಿಭಕ್ತಿಯು)—ನಿನ್ನ ಚರಣಕಮಲವು, ಗೋತ್ರಸ್ಖಲನಂ ಮೃಷಾ ಕೃತ್ವಾ ಅಥ ವೈಲಕ್ಷ್ಯನಮಿತಂ ಭರ್ತಾರಂ ಲಲಾಟೇ ತಾಡಯತಿ ಸತಿ—[1] ಮತ್ತೊಬ್ಬ ಸ್ತ್ರೀಯ ಹೆಸರಲ್ಲಿ ತಪ್ಪಿ ಕರೆದು ಖಿನ್ನನಾಗಿ ಅಪರಾಧವೆಂದು ನಮಸ್ಕಾರವ ಮಾಡಿದ ಗಂಡನ ಹಣೆಯಮೇಲೆ ಒದೆತಿರಲಾಗಿ, ದಹನಕೃತಂ ಚಿರಾದಂತಃಶಲ್ಯಂ ಉನ್ಮೀಲಿತವತಾ ಈಶಾನರಿಪುಣಾ—ಸುಟ್ಟದ್ದರಿಂದ ಮಾಡಲ್ಪಟ್ಟ ಬಹುಕಾಲದ ಅಂತಃ[2]ಭೇದವನು ತೆಗೆದುಹಾಕುವ ಶಿವವೈರಿಯಾದ ಮನ್ಮಥನಿಂದ, ತುಲಾಕೋಟಿಕ್ವಾಣೈಃ ಕಿಲಿಕಿಲಿತಂ—ಕಾಲಕಡಗದ ಧ್ವನಿಗಳಿಂದ ಕಿಲಿಕಿಲಿ ಎಂಬ ಜಯವೀರ ಧ್ವನಿಯು ಮಾಡಲ್ಪಟ್ಟಿತ್ತು.

ತಪ್ಪು ಹೆಸರಿನಲ್ಲಿ ಕರೆದು ಅಪರಾಧವೆಂದು ನಮಸ್ಕಾರವ ಮಾಡಿದ ಗಂಡನ ಹಣೆಯಮೇಲೇ ಸರ್ವೇಶ್ವರಿ ಒದೆಯಲಾಗಿ ಆ ಕಾಲಕಡಗದ ಧ್ವನಿಯನು ಮನ್ಮಥನ ವೀರಧ್ವನಿ ಎಂದು ಹೇಳಿದ್ದರಿಂದ ಅತಿಶಯೋಕ್ತಿ ಅಲಂಕಾರ.

ಹಿಮಾನೀಹಂತವ್ಯಂ ಹಿಮಗಿರಿನಿವಾಸೈಕಚತುರೌ
ನಿಶಾಯಾಂ ನಿದ್ರಾಣಂ ನಿಶಿ ಚರಮಭಾಗೇ ಚ ವಿಶದೌ
ವರಂ ಲಕ್ಷ್ಮೀಪಾತ್ರಂ ಶ್ರಿಯಮತಿಸೃಜಂತೌ ಸಮಯಿನಾಂ
ಸರೋಜಂ ತ್ವತ್ಪಾದೌ ಜನನಿ ಜಯತಶ್ಚಿತ್ರಮಿಹ ಕಿಮ್ ೮೬

[ಹೇ ಜನನಿ! ಹಿಮಗಿರಿನಿವಾಸೈಕಚತುರೌ ನಿಶಿ ಚರಮಭಾಗೇ ಚ ವಿಶದೌ ಸಮಯಿನಾಂ ಶ್ರಿಯಂ ಅತಿಸೃಜಂತೌ ತ್ವತ್ಪಾದೌ ಹಿಮಾನೀಹಂತವ್ಯಂ ನಿಶಾಯಾಂ ನಿದ್ರಾಣಂ ವರಂ ಲಕ್ಷ್ಮೀಪಾತ್ರಂ ಸರೋಜಂ ಜಯತಃ, ಇಹ ಕಿಂ ಚಿತ್ರಮ್.]

ಹೇ ಜನನಿ—ಏ ತಾಯೇ! ಹಿಮಗಿರಿನಿವಾಸೈಕಚತುರೌ—ಹಿಮವತ್ಪರ್ವತದಲ್ಲಿ ಆವಾಗಲು ಸಂಚಾರದ [3]ನಿಪುಣವುಳ್ಳಂಥಾ, ನಿಶಿ ಚರಮಭಾಗೇ ಚ ವಿಶದೌ—ಇರುಳು ಹಗಲು ಒಪ್ಪುತ್ತಿದ್ದಂಥಾ, ಸಮಯಿನಾಂ ಶ್ರಿಯಂ ಅತಿಸೃಜಂತೌ—ಸಮಯಿಗಳಾದ ಭಕ್ತರಿಗೆ ಲಕ್ಷ್ಮೀರೂಪಾದ ಐಶ್ವರ್ಯವನು ಅಧಿಕವಾಗಿ ಕೊಡುವಂಥಾ, ತ್ವತ್ಪಾದೌ—ನಿನ್ನ ಎರಡು ಪಾದಗಳು, ಹಿಮಾನೀಹಂತವ್ಯಂ ನಿಶಾಯಾಂ

---

[1] ಸರ್ವೇಶ್ವರಿಯನ್ನು ಪರಮೇಶ್ವರನು ಮತ್ತೊಬ್ಬ ಸ್ತ್ರೀಯ ಹೆಸರಿನಿಂದ ಕರೆದನು. ಅನಂತರ ಏನು ಮಾಡುವದಕ್ಕೂ ತೋಚದೆ ಇರುವಿಕೆಯಿಂದ ತನ್ನಷ್ಟುತಾನೆ ಬಗ್ಗಿದ ಈಶ್ವರನ ತಲೆಯಮೇಲೆ ನೀನು ಕಾಲನಿಂದ ಒದೆಯುತ್ತಿರಲಾಗಿ, ಎಂದರ್ಥ. ಇಲ್ಲಿ ಒದೆಯುವದಕ್ಕೆ ಪ್ರಣಯ ಕಲಹವೆ ಕಾರಣ. [2] ಭೇದವನು, ಎಂದಿರಬೇಕು. [3] ನೈಪುಣ್ಯ ಎಂದಿರಬೇಕು.

ನಿದ್ರಾಣಂ ವರಂ ಲಕ್ಷ್ಮೀಪಾತ್ರಂ ಸರೋಜಂ–ಮಂಜಿನಿಂದ ಕೆಡುವಂಥಾ ರಾತ್ರೆಯು ಮುಕುಳವಾಗುವಂಥಾ ಲಕ್ಷ್ಮಿಗೆ ಸ್ಥಾನಮಾತ್ರವಾದಂಥಾ ಕಮಲವನು, ಜಯತಃ ಇಹ ಕಿಂ ಚಿತ್ರಂ—ಗೆಲುವದು [1] ಈಗ ಏನು ಚಿತ್ರವು.

ಸರ್ವೇಶ್ವರಿಯು ಪಾದಕಮಲವು ಮಂಜಿನಲ್ಲಿ ಕೆಡದು, ಇರುಳು ವಿಕಾಸವಾಗಿ ಇಹುದು, ಭಕ್ತರಿಗೆ ಲಕ್ಷ್ಮಿಯು ಕೊಡುವದು, ಇಂಥಾ ಪಾದಕಮಲವು ಮಂಜಿನಲ್ಲಿ ಕೆಡುವ ರಾತ್ರೆ ಮುಕುಳವಾಗುವ ಲಕ್ಷ್ಮಿಗೆ ಸ್ಥಾನಮಾತ್ರವಾದ ಸ್ವಭಾವ ಕಮಲವ ಗೆಲುವದು ಆಶ್ಚರ್ಯವಲ್ಲವೆಂದು ಹೇಳಿದ್ದರಿಂದ ವ್ಯತಿರೇಕಾಲಂಕಾರ.

ಪಾದಗಳ ವರ್ಣನೆ—

ಪದಂ ತೇ ಕೀರ್ತೀನಾಂ ಪ್ರಪದಮಪದಂ ದೇವಿ ವಿಪದಾಂ
ಕಥಂ ನೀತಂ ಸದ್ಭಿಃ ಕಠಿನಕಮಠೀಕರ್ಪರತುಲಾಮ್
ಕಥಂ ವಾ ಪಾಣಿಭ್ಯಾಮುಪಯಮನಕಾಲೇ ಪುರಭಿದಾ
ಯದಾದಾಯ ನ್ಯಸ್ತಂ ದೃಷದಿ ದಯಮಾನೇನ ಮನಸಾ ೮೭

[ಹೇ ದೇವಿ! ಕೀರ್ತೀನಾಂ ಪದಂ ವಿಪದಾಂ ಅಪದಂ ತೇ ಪ್ರಪದಂ ಕಠಿನ ಕಮಠೀಕರ್ಪರತುಲಾಂ ಸದ್ಭಿಃ ಕಥಂ ನೀತಂ, ಉಪಯಮನಕಾಲೇ ಪುರಭಿದಾ ದಯಮಾನೇನ ಮನಸಾ ಪಾಣಿಭ್ಯಾಂ ಯತ್ ಆದಾಯ ದೃಷದಿ ಕಥಂ ವಾ ನ್ಯಸ್ತಮ್.]

ಹೇ ದೇವಿ!–ಎ ಸರ್ವೇಶ್ವರಿಯೇ! ಕೀರ್ತೀನಾಂ ಪದಂ ವಿಪದಾಂ ಅಪದಂ ತೇ ಪ್ರಪದಂ–ಕೀರ್ತಿಗಳಿಗೆ ಸ್ಥಾನವಾದಂಥಾ ಆಪತ್ತುಗಳಿಗೆ ಸ್ಥಾನವಿಲ್ಲದಂಥಾ ನಿನ್ನಪಾದಾಗ್ರವನು, ಕಠಿನಕಮಠೀಕರ್ಪರತುಲಾಂ ಸದ್ಭಿಃ ಕಥಂ ನೀತಂ–ಕಠಿಣವಾದ ಆಮೆಯು ಬೆನ್ನಿನ ಸಾದೃಶ್ಯವನು ಕವೀಶ್ವರರುಗಳಿಂದ ಹೇಗೆ ಹೊಂದಿಸಲ್ಪಟ್ಟಿತ್ತು, ಉಪಯಮನಕಾಲೇ ಪುರಭಿದಾ ದಯಮಾನೇನ ಮನಸಾ–ವಿವಾಹ ಸಮಯದಲ್ಲಿ ಶಿವನಿಂದ ದಯವುಳ್ಳಮನಸಾಗಿದ್ದು, ಪಾಣಿಭ್ಯಾಂ ಯತ್ ಆದಾಯ ದೃಷದಿ ಕಥಂ ವಾ ನ್ಯಸ್ತಂ—ಎರಡು ಕೈಯಲ್ಲಿಯೂ ಆವದಾನೊಂದು ಪಾದವು ಹಿಡಿದು ಅಸಿಕಲ್ಲಿನಲ್ಲಿ ಹೇಗೆ ಇಡಲ್ಪಟ್ಟಿತು.

ಸರ್ವೇಶ್ವರಿಯ ಅತಿ ಕೋಮಲವಾದ ಪಾದಕ್ಕೆ ಕಠಿಣವಾದ ಆಮೆಯ ಬೆನ್ನಿನ ಸಾಮ್ಯವು, ಶಿವನ ಕೈಯಿಂದ ವಿವಾಹಸಮಯದಲ್ಲಿ ಅಸಿಕಲ್ಲಿನಲ್ಲಿ ಇಟ್ಟಿದ್ದು ಕೂಡದೆಂಬುದರಿಂದ ಅನನ್ವಯಾಲಂಕಾರ.

---

[1] ಇಲ್ಲ, ಎಂದಿರಬೇಕು.

ಪಾದಗಳ ಉಗುರು ಕೂಡಿದ ವರ್ಣನೆ—

ನಖೈರ್ನಾಕಸ್ತ್ರೀಣಾಂ ಕರಕಮಲಸಂಕೋಚಶಶಿಭಿಃ
ತರೂಣಾಂ ದಿವ್ಯಾನಾಂ ಹಸತ ಇವ ತೇ ಚಂಡಿ ಚರಣೌ
ಫಲಾನಿ ಸ್ವಃಸ್ಥೇಭ್ಯಃ ಕಿಸಲಯಕರಾಗ್ರೇಣ ದದತಾಂ
ದರಿದ್ರೇಭ್ಯೋ ಭದ್ರಾಂ ಶ್ರಿಯಮನಿಶಮಹ್ನಾಯದದತೌ ೮೮

[ಹೇ ಚಂಡಿ! ಕಿಸಲಯಕರಾಗ್ರೇಣ ಸ್ವಃಸ್ಥೇಭ್ಯ ಏವ ಫಲಾನಿ ದದತಾಂ ದಿವ್ಯಾನಾಂ ತರೂಣಾಂ, ದರಿದ್ರೇಭ್ಯಃ ಭದ್ರಾಂ ಶ್ರಿಯಂ ಅನಿಶಂ ಅಹ್ನಾಯ ದದತೌ ತೇ ಚರಣೌ ನಾಕಸ್ತ್ರೀಣಾಂ ಕರಕಮಲಸಂಕೋಚಶಶಿಭಿಃ ನಖೈಃ ಹಸತ ಇವ.]

ಹೇ ಚಂಡಿ—ಎ ಪಾರ್ವತಿಯೇ! ಕಿಸಲಯಕರಾಗ್ರೇಣ ಸ್ವಃಸ್ಥೇಭ್ಯ ಏವ ಫಲಾನಿ ದದತಾಂ ದಿವ್ಯಾನಾಂ ತರೂಣಾಂ—ಪಲ್ಲವವೆಂಬ ಕೈಗಳಿಂದ ಸ್ವರ್ಗದಲ್ಲಿ ಇದ್ದಂಥಾ ದೇವತೆಗಳಿಗೋಸ್ಕರವೆ ಫಲಗಳನು ಕೊಡುತ ಇದ್ದಂಥಾ [1](ದೇವಲೋಕದ ಕಲ್ಪವೃಕ್ಷಗಳನು, ದರಿದ್ರೇಭ್ಯಃ ಭದ್ರಾಂ ಶ್ರಿಯಂ ಅಹ್ನಾಯ ದದತೌ ತೇ ಚರಣೌ—ದರಿದ್ರರುಗಳಾಗಿ ಇದ್ದಂಥಾವರಿಗೋಸ್ಕರ ಸ್ಥಿರವಾಗಿದ್ದಂಥಾ) ಅಷ್ಟೈಶ್ವರ್ಯಗಳನು ಆವಾಗಲು ಶೀಘ್ರದಲ್ಲಿ ಕೊಡುವ ನಿನ್ನ ಎರಡು ಶ್ರೀ ಪಾದಗಳು, ನಾಕಸ್ತ್ರೀಣಾಂ ಕರಕಮಲಸಂಕೋಚಶಶಿಭಿಃ ನಖೈಃ ಹಸತ ಇವ—ಶಚೀದೇವಿ ಮೊದಲಾದ ದೇವಸ್ತ್ರೀಯರ ಕೈಗಳೆಂಬ ತಾವರೆಗಳ ಮುಕುಳವ ಮಾಡುವ ಚಂದ್ರನ ಆಕಾರವಾಗಿದ್ದಂಥಾ ಕಾಲು ಉಗುರುಗಳಿಂದ ಪರಿಹಾಸವ ಮಾಡುತ್ತಿದ್ದಾವು.

ನಾಕಸ್ತ್ರೀಣಾಂ ಕರಕಮಲಸಂಕೋಚಶಶಿಭಿಃ ಎಂಬುದರಿಂದ ಸರ್ವೇಶ್ವರಿಯ ಪಾದದರುಶನವಾಗುತಲೆ ದೇವಸ್ತ್ರೀಯರು ನಮಸ್ಕಾರಮಾಡುವದಕ್ಕೆ ಕೈಮುಗಿದಾರೆಂಬುದು ಅಭಿಪ್ರಾಯ. ಸ್ವರ್ಗದಲ್ಲಿ ಇಹ ದೇವತೆಗಳ ಮಾತ್ರಕ್ಕೆ ಫಲವ ಕೊಡುವ ಪಲ್ಲವವೆಂಬ ಕೈಯುಂಟಾದ ಕಲ್ಪವೃಕ್ಷಗಳ [2]ದರಿದ್ರರುಗಳಿಗೆ[2] ಸದ್ಯದಲ್ಲಿ ಫಲವ ಕೊಡುವ ಸರ್ವೇಶ್ವರಿಯ ಪಾದಗಳು ನಗುತವೆ ಎಂಬುದರಿಂದ ವ್ಯತಿರೇಕಾಲಂಕಾರ.

ಪಾದಗಳ ಅಲತಿಗೆ ಕೂಡಿದ ವರ್ಣನೆ—

ಕದಾ ಕಾಲೇ ಮಾತಃ ಕಥಯ ಕಲಿತಾಲಕ್ತಕರಸಂ
ಪಿಬೇಯಂ ವಿದ್ಯಾರ್ಥೀ ತವ ಚರಣನಿರ್ಣೇಜನಜಲಮ್
ಪ್ರಕೃತ್ಯಾ ಮೂಕಾನಾಮಪಿ ಚ ಕವಿತಾಕಾರಣತಯಾ
[3]ಯದಾ ಧತ್ತೇ[3] ವಾಣೀಮುಖಕಮಲತಾಂಬೂಲರಸತಾಮ್ ೮೯

---

[1] ಈ ಕುಂಡಲಯೊಳಗಿರುವ ಪಾಠ (ಕ) ಪುಸ್ತಕದಲ್ಲಿ ಇಲ್ಲಾ. [2] ದೇವತೆಗಳಿಗೆ ಮತ್ತು ದರಿದ್ರರುಗಳಿಗೆ, ಎಂದಿರಬೇಕು [3]ಕದಾಧತ್ತೇ ಎಂಬ ಪಾಠದಲ್ಲಿ ಯಾವಾಗ ಧರಿಸುತ್ತದೆ ಎಂದರ್ಥ.

[ಹೇ ಮಾತಃ! ಕಲಿತಾಲಕ್ತಕರಸಂ ತವ ಏತತ್ ಚರಣನಿರ್ಣೇಜನಜಲಂ ವಿದ್ಯಾರ್ಥೀ ಅಹಂ ಕದಾ ಕಾಲೇ ಪಿಬೇಯಾಂ ಕಥಯ, ಪ್ರಕೃತ್ಯಾ ಮೂಕಾನಾಂ ಅಪಿ ಚ ಕವಿತಾಕಾರಣತಯಾ ವಾಣೀಮುಖಕಮಲತಾಂಬೂಲರಸತಾಂ ಯದಾಧತ್ತೇ.]

ಹೇ ಮಾತಃ—ಏ ತಾಯೇ!, ಕಲಿತಾಲಕ್ತಕರಸಂ ತವ ಏತಚ್ಚರಣನಿರ್ಣೇಜನಜಲಂ-ಅಲಂಕಾರಾರ್ಥವಾಗಿ ಇಕ್ಕಿದ ಅಲತಿಗೆಯ ರಸವುಳ್ಳ ನಿನ್ನ ಪಾದಾಭಿಷೇಕವ ಮಾಡಿದ ಈ ನೀರನು, ವಿದ್ಯಾರ್ಥೀ ಅಹಂ ಕದಾ ಕಾಲೇ ಪಿಬೇಯಾಂ ಕಥಯ-ವಿದ್ಯಾರ್ಥಿ [1]ಯಾಗಿದ್ದಂಥಾ[1] ನಾನು [2]ಯಾವಜ್ಜೀವವು[2] ಪಾನವ ಮಾಡೇನು ಅನುಗ್ರಹವ ಮಾಡು, ಪ್ರಕೃತ್ಯಾ ಮೂಕಾನಾಂ ಅಪಿ ಚ ಕವಿತಾಕಾರಣತಯಾ-ಸ್ವಭಾವದಿಂದ ಮೂಕರಾಗಿದ್ದವರಿಗೂ ಕವಿತ್ವವ ಹೇಳುವದಕ್ಕೆ ಕಾರಣವಾಗುವದರಿಂದ, ವಾಣೀಮುಖಕಮಲತಾಂಬೂಲರಸತಾಂ [3]ಯತ್ ಆಧತ್ತೇ[3]-ಸರಸ್ವತಿಯ ಮುಖಕಮಲದ ತಾಂಬೂಲ ಸ್ವಭಾವವನು ಅವುದಾನೊಂದು ನಿನ್ನ ಪಾದಾಭಿಷೇಕದ ಅಲತಿಗೆಯ ಕೂಡಿದ ಜಲವು ಕೊಡುತದೆ.

ಇಲ್ಲಿ ಬರೆಯತಕ್ಕ ಅರ್ಥ—ಚರಣನಿರ್ಣೇಜನಜಲವೆಂದು ಹೇಳಿದ್ದರಿಂದ ಸಮಯ ಮತವನೆ ಹೇಳಿದ್ದು. ಕೌಲಮತದಲ್ಲಿ ಸಪ್ರಾಕಾರವಾಗಿ ಮೂಲಾಧಾರ ಚಕ್ರದಲ್ಲಿ ದೇವಿಯು ಇಹ ಸ್ಥಾನವ ಹೇಳಿದ್ದರಿಂದ ಚರಣನಿರ್ಣೇಜನಜಲಪಾನ ಕೂಡದು, ಸಹಸ್ರಕಮಲದಲ್ಲಿಯೆ ಚರಣನಿರ್ಣೇಜನಜಲವೆಂಬುದು ಮೊದಲೆ ಬಹಳವಾಗಿ ಬರದದೆ. "ಸುಧಾಧಾರಾಸಾರೈಶ್ಚರಣಯುಗಲಾಂತರ್ವಿಗಲತೈಃ. ಪ್ರಪಂಚಂ ಸಿಂಚಂತೀ ಪುನರಪಿ ರಸಾಮ್ನಾಯಮಹಸಃ." (ಶ್ಲೋಕ ೧೦) ಎಂಬ ಶ್ಲೋಕದ ಪೂರ್ವಾರ್ಧ ಸಮಯಮತ ಪ್ರತಿಪಾದಕ. "ಅವಾಪ್ಯ ಸ್ವಾಂ ಭೂಮಿಂ" ಎಂಬ ಅಪರಾರ್ಧ ಕೌಲಮತ ಪ್ರತಿಪಾದಕ.

ಸರ್ವೇಶ್ವರಿಯ ಪಾದಾಭಿಷೇಕದ ಅಲತಿಕೆ ಕೂಡಿದ ಕೆಂಪಿನ ಜಲವನು ಸರಸ್ವತಿಯ ಮುಖಕಮಲತಾಂಬೂಲರಸದ ಹಾಗೆ ಉತ್ಪ್ರೇಕ್ಷಿಸಿದ್ದದರಿಂದ ಉತ್ಪ್ರೇಕ್ಷಾಲಂಕಾರ.

ಪಾದಗಳ ವರ್ಣನೆ—

ದದಾನೇ ದೀನೇಭ್ಯಃ ಶ್ರಿಯಮನಿಶಮಾಶಾನುಸದೃಶೀಂ
ಅಮಂದಂ ಸೌಂದರ್ಯಪ್ರಕರಮಕರಂದಂ ವಿಕಿರತಿ
ತವಾಸ್ಮಿನ್ ಮಂದಾರಸ್ತಬಕಸುಭಗೇ ಯಾತು ಚರಣೇ
ನಿಮಜ್ಜನ್ ಮಜ್ಜೀವಃ [4]ಕರಣಚರಣೈಃ[4] ಷಟ್ಚರಣತಾಮ್ ೯೦

---

[1] ಯಾದ ಥಾ (ಖ) [2] ಜೀವ ನಾನವಲ್ಲಿ ಯಾವಾಗ ಎಂದರ್ಥ [3] ಕದಾಧತ್ತೇ ಎಂಬ ಪಾಠದಲ್ಲಿ ಯಾವಾಗ ಧರಿಸುತ್ತದೆ. ಎಂದರ್ಥ [4] ಕರಣಚರಣಃ ಎಂಬ ಪಾಠವಲ್ಲಿ ಪಂಚೇಂದ್ರಿಯಗಳು ಮನಸ್ಸುಕೂಡಾ ಆರುಕಾಲುಗಳುಳ್ಳಂಥಾ ನನ್ನ ಜೀವವು ಎಂದು ಅರ್ಥ.

[ಹೇ ಭಗವತಿ। ದೀನೇಭ್ಯಃ ಆಶಾನುಸದೃಶೀಂ ಶ್ರಿಯಂ ಅನಿಶಂ ದದಾನೇ ಅಮಂದಂ ಸೌಂದರ್ಯಪ್ರಕರಮಕರಂದಂ ವಿಕಿರತಿ ಮಂದಾರಸ್ತಬಕಸುಭಗೇ ಅಸ್ಮಿನ್ ತವ ಚರಣೇ ಮಜ್ಜೀವಃ ನಿಮಜ್ಜನ್ ಸನ್ ಕರಣಚರಣೈಃ ಷಟ್ಚರಣತಾಂ ಯಾತು.]

ಹೇ ಭಗವತಿ–ಎ ಭಗವತಿಯೇ! ದೀನೇಭ್ಯಃ ಆಶಾನುಸದೃಶೀಂ ಶ್ರಿಯಂ ಅನಿಶಂ ದದಾನೇ–ದರಿದ್ರರಿಗೋಸ್ಕರ ಬಯಕೆಗೆ ತಕ್ಕಂಥಾ ಲಕ್ಷ್ಮಿಯು ರೂಪವಾದ ಐಶ್ವರ್ಯವನು ಆವಾಗಲು ಕೊಡುತ ಇದ್ದಂಥಾ, ಅಮಂದಂ ಸೌಂದರ್ಯ ಪ್ರಕರಮಕರಂದಂ ವಿಕಿರತಿ–ಅಧಿಕವಾಗಿದ್ದಂಥಾ ಚೆಲುವಿಕೆಯ ಸಮೂಹದ ಪುಷ್ಪರಸವನು ಚೆಲ್ಲುವಂಥಾ, ಮಂದಾರಸ್ತಬಕಸುಭಗೇ–[1]ಪಾರಿಜಾತದ[1] ಹೂವಿನ ಗೊಂಚಲ ಹಾಗೆ ಒಪ್ಪುವಂಥಾ, ಅಸ್ಮಿನ್ ತವ ಚರಣೇ––ಈ ನಿನ್ನ ಪಾದದಲ್ಲಿ, ಮಜ್ಜೀವಃ ನಿಮಜ್ಜನ್ ಸನ್ ಕರಣಚರಣೈಃ ಷಟ್ಚರಣತಾಂ ಯಾತು–ನನ್ನ ಜೀವವು [2]ಎರಡಾಗಿದ್ದಾಗಿ[2] ಪಂಚೇಂದ್ರಿಯಗಳು ಮನಸ್ಸು ಕೂಡಾ ಆರು ಕಾಲುಗಳಿಂದ ತುಂಬಿಯು ಭಾವವನು ಐದಲಿ.

ಸರ್ವೇಶ್ವರಿಯ ಶ್ರೀಪಾದವೆಂಬ ಮಕರಂದರಸವ ಚೆಲ್ಲುವ [1]ಪಾರಿಜಾತ[1] ಹೂವಿನ ಗೊಂಚಲಲ್ಲಿ ಪಂಚೇಂದ್ರಿಯಗಳು ಮನಸ್ಸುಕೂಡಾ ಆರು ಕಾಲು ಉಂಟಾದ ನನ್ನ ಜೀವವೆಂಬ ತುಂಬಿಯು ಇರಲಿ ಎಂದು ಅಭಿಪ್ರಾಯ. ಇಲ್ಲಿ ಅತಿಶಯ ಪರಿಣಾಮಾಲಂಕಾರ ಕೂಡಿ ಇಹುದು.

ನಡೆಯ ವರ್ಣನೆ—

ಪದನ್ಯಾಸಕ್ರೀಡಾಪರಿಚಯಮಿವಾರಬ್ಧುಮನಸಃ
ಸ್ಖಲಂತಸ್ತೇ ಖೇಲಂ ಭವನಕಲಹಂಸಾ ನ ಜಹತಿ
ಅತಸ್ತೇಷಾಂ ಶಿಕ್ಷಾಂ ಸುಭಗಮಣಿಮಂಜೀರರಣಿತ
ಚ್ಛಲಾದಾಚಕ್ಷಾಣಂ ಚರಣಕಮಲಂ ಚಾರುಚರಿತೇ ೯೧

[ಹೇ ಚಾರುಚರಿತೇ! ತೇ ಪದನ್ಯಾಸಕ್ರೀಡಾಪರಿಚಯಂ ಆರಬ್ಧುಮನಸಃ ಭವನಕಲಹಂಸಾಃ ಸ್ಖಲಂತಃ ಸಂತಃ ಖೇಲಂ ನ ಜಹತಿ, ಅತಃ ಚರಣಕಮಲಂ ಸುಭಗಮಣಿಮಂಜೀರರಣಿತಚ್ಛಲಾತ್ ತೇಷಾಂ ಶಿಕ್ಷಾಂ ಆಚಕ್ಷಾಣಮಿವ.]

ಹೇ ಚಾರುಚರಿತೇ–ಎ ಮನೋಹರವಾದ ಗಮನವುಂಟಾದ ತಾಯೇ! ತೇ ಪದನ್ಯಾಸಕ್ರೀಡಾಪರಿಚಯಂ—ನಿನ್ನ ಪಾದವ ಇಡುವ ವಿಲಾಸಾಭ್ಯಾಸವನು, ಆರಬ್ಧುಮನಸಃ ಭವನಕಲಹಂಸಾಃ—ಸಂಗ್ರಹಿಸುವಮನಸ್ಸುಳ್ಳಂಥಾ ಮನೆಯ ಕಲಹಂಸೆಗಳು, ಸ್ಖಲಂತಃ ಸಂತಃ ಖೇಲಂ ನ ಜಹತಿ–ತಪ್ಪು ಹೆಜ್ಜೆಗಳುಳ್ಳವಾಗಿ ವಿಲಾಸಗತಿಯನು ಬಿಡವು, ಅತಃ ತೇ ಚರಣಕಮಲಂ ಸುಭಗಮಣಿಮಂಜೀರ

---

[1] ಮಂದಾರ, ಎಂದಿರಬೇಕು [2] ಮುಳುಗಿದ್ದಾಗಿ, ಎಂದಿರಬೇಕು.

ರಣಿತಚ್ಛಲಾತ್–ಅದುಕಾರಣ ನಿನ್ನ ಪಾದಪದ್ಮವು ಮನೋಹರವಾದ ರತ್ನ ನೂಪುರಗಳ ಧ್ವನಿಯ ನೆವದಿಂದ, ತೇಷಾಂ ಶಿಕ್ಷಾಂ ಆಚಕ್ಷಾಣಮಿವ–ಆ ಕಲಹಂಸೆಗಳಿಗೆ ಅಭ್ಯಾಸವನು ಕಲಿಸುವ ನುಡಿಗಳಹಾಗೆ ಇದ್ದಿತು.

ಸರ್ವೇಶ್ವರಿಯು ನಡೆವಾಗ ಶ್ರೀಪಾದಗಳನಿಕ್ಕುವದರಿಂದ ಉಂಟಾದ ನೂಪುರಧ್ವನಿಯನು ಹಂಸೆಗಳಿಗೆ ನಡೆಯ ಕಲಿಸುವ ಶಿಕ್ಷಾಧ್ವನಿಯೆಂದು ಉತ್ಪ್ರೇಕ್ಷಿಸಿದ್ದದರಿಂದ ಉತ್ಪ್ರೇಕ್ಷಾಲಂಕಾರ ಪ್ರಧಾನ.

ಸರ್ವಾಂಗ ವರ್ಣನೆ—

ಅರಾಲಾ ಕೇಶೇಷು ಪ್ರಕೃತಿಸರಲಾ ಮಂದಹಸಿತೇ
ಶಿರೀಷಾಭಾ ಗಾತ್ರೇ ದೃಷದುಪಲಶೋಭಾ ಕುಚತಟೇ
ಭೃಶಂ ತನ್ವೀ ಮಧ್ಯೇ ಪೃಥುರುರಸಿಜಾರೋಹವಿಷಯೇ
ಜಗತ್ತ್ರಾತುಂ ಶಂಭೋರ್ಜಯತಿ ಕರುಣಾ ಕಾಚಿದರುಣಾ ೯೨

[ಕೇಶೇಷು ಅರಾಲಾ, ಮಂದಹಸಿತೇ ಪ್ರಕೃತಿಸರಲಾ, ಗಾತ್ರೇ ಶಿರೀಷಾಭಾ, ಕುಚತಟೇ ದೃಷದುಪಲಶೋಭಾ, ಮಧ್ಯೇ ಭೃಶಂ ತನ್ವೀ, ಉರಸಿಜಾರೋಹ ವಿಷಯೇ ಪೃಥುಃ, ಶಂಭೋಃ ಅರುಣಾ ಕಾಚಿತ್ ಕರುಣಾ ಜಗತ್ ತ್ರಾತುಂ ಜಯತಿ.]

ಕೇಶೇಷು ಅರಾಲಾ–ಮುಂಗುರುಳುಗಳಲ್ಲಿ [1] ನೀರಿಯುಳ್ಳಂಥಾ,[1] ಮಂದ ಹಸಿತೇ ಪ್ರಕೃತಿಸರಲಾ–ಮುಗುಳುನಗೆಯಲ್ಲಿ ಸ್ವಭಾವದಿಂದ ಮನೋಹರವುಳ್ಳಂಥಾ, ಗಾತ್ರೇ ಶಿರೀಷಾಭಾ–ದೇಹದಲ್ಲಿ ಶಿರೀಷಪುಷ್ಪದ ಹಾಗೆ ಅತಿಮೃದುವುಳ್ಳಂಥಾ, ಕುಚತಟೇ ದೃಷದುಪಲಶೋಭಾ–ಮೊಲೆಗಳಲ್ಲಿ ಅಸಿಯಕಲ್ಲಿನ ಹಾಗೆ ಅತಿಕಠಿಣವುಳ್ಳಂಥಾ, ಮಧ್ಯೇ ಭೃಶಂ ತನ್ವೀ–ನಡುವಿನಲ್ಲಿ ಅತಿಸಣ್ಣವುಳ್ಳಂಥಾ, ಉರಸಿಜಾರೋಹವಿಷಯೇ ಪೃಥುಃ–ವಕ್ಷಸ್ಥಲದಲ್ಲಿ ಅತಿವಿಸ್ತಾರವುಳ್ಳಂಥಾ, ಶಂಭೋಃ ಅರುಣಾ ಕಾಚಿತ್ ಕರುಣಾ ಜಗತ್ ತ್ರಾತುಂ ಜಯತಿ–ಶಿವನ ಕೆಂಪಾಗಿ ಇದ್ದಂಥಾ ಹೇಳಶಕ್ಯವಲ್ಲದ ದಯಾರಸವಾದ ತ್ರಿಪುರಸುಂದರಿಯು ಲೋಕವನು ರಕ್ಷಿಸುವದಕ್ಕೋಸ್ಕರ ಒಪ್ಪುತ್ತದೆ.

ಕರುಣರಸ ಕೆಂಪುವರ್ಣವೆಂಬುದು ಕವಿಸಮಯಸಿದ್ಧ. ತ್ರಿಪುರಸೌಂದರೀ ದೇವಿಯು ಕೆಂಪುವರ್ಣವೆಂಬುದು ಶಾಸ್ತ್ರಸಿದ್ಧ. ಈ ಶ್ಲೋಕದಲ್ಲಿ ಸರ್ವೇಶ್ವರಿಯ ಶಿವನ ಕರುಣರಸದ ಕೆಂಪಿನ ರೂಪೆಂದು ಹೇಳಿದ್ದರಿಂದ ಅತಿಶಯೋಕ್ತಿ ಅಲಂಕಾರ.

---

[1] ವಕ್ರವಾಗಿಯುೞ, ಎಂದರ್ಥ ; ನಿರಿಯುಳ್ಳಂಥಾ (ಖ).

ರಾಣೀವಾಸ ವರ್ಣನೆ—

ಪುರಾರಾತೇರನ್ತಃಪುರಮಸಿ ತತಸ್ತ್ವಚ್ಚರಣಯೋಃ
ಸಪರ್ಯಾಮರ್ಯಾದಾ ತರಲಕರಣಾನಾಮಸುಲಭಾ
ತಥಾಹ್ಯೇತೇ ನೀತಾಃ ಶತಮುಖಮುಖಾಃ ಸಿದ್ಧಿಮತುಲಾಂ
ತವ ದ್ವಾರೋಪಾಂತಸ್ಥಿತಿಭಿರಣಿಮಾದ್ಯಾಭಿರಮರಾಃ ೯೩

[ಹೇ ಭಗವತಿ! ಪುರಾರಾತೇರಂತಃಪುರಮಸಿ, ತತಃ ತ್ವಚ್ಚರಣಯೋಃ ಸಪರ್ಯಾಮರ್ಯಾದಾ ತರಲಕರಣಾನಾಮಸುಲಭಾ. ತಥಾಹಿ ಏತೇ ಶತಮುಖ ಮುಖಾಃ ಅಮರಾಃ ತವ ದ್ವಾರೋಪಾಂತಸ್ಥಿತಿಭಿಃ ಅಣಿಮಾದ್ಯಾಭಿಃ ಸಹ ಸಿದ್ಧಿಂ ನೀತಾಃ.]

ಹೇ ಭಗವತಿ–ಏ ಭಗವತಿಯೇ! ಪುರಾರಾತೇಃ ಅಂತಃಪುರಮಸಿ– ತ್ರಿಪುರಾಂತಕನ ಅಂತಃಪುರದ ಪಟ್ಟದ ದೇವಿ [1]ಆಗುತ್ತಿದ್ದೆ[1], ತತಃ ತ್ವಚ್ಚರಣಯೋಃ ಸಪರ್ಯಾಮರ್ಯಾದಾ ತರಲಕರಣಾನಾಮಸುಲಭಾ– ಅದುಕಾರಣದಿಂದ ನಿನ್ನ ಎರಡು ಪಾದಗಳ ಪೂಜಾಪ್ರಕಾರವು ಚಂಚಲಚಿತ್ತರಿಗೆ ದೊರಕದು, ಸ್ಥಿರಚಿತ್ತವಿಲ್ಲದವರಿಗೆ ಅಂತಃಪುರಪ್ರವೇಶವಾಗದೆಂಬುದು ತಾತ್ಪರ್ಯ, ತಥಾಹಿ–ಹಾಗೆ ಅಹುದಲ್ಲಾ, ಏತೇ ಶತಮುಖಮುಖಾಃ ಅಮರಾಃ– ಇಂದ್ರಾದಿ ದೇವತೆಗಳು, ತವ ದ್ವಾರೋಪಾಂತಸ್ಥಿತಿಭಿಃ ಅಣಿಮಾದ್ಯಾಭಿಃ ಸಹ ಸಿದ್ಧಿಂ ನೀತಾಃ–ನಿನ್ನ ಅರಮನೆಯ ಬಾಗಿಲಲ್ಲಿ ಇದ್ದಂಥಾ ಅಣಿಮಾದ್ಯಷ್ಟ ಸಿದ್ಧಿರೂಪಾದ ಐಶ್ವರ್ಯಗಳೊಡನೆ ಕೂಡಾ ಅರ್ಥಸಿದ್ಧಿಯನು ಐದಿದರು.

ಇಲ್ಲಿ ಬರೆಯತಕ್ಕ ಅರ್ಥ—ಇಂದ್ರಾದಿ ದೇವತೆಗಳು ಚಂಚಲಚಿತ್ತರಾದ ಕಾರಣ ಅಂತಃಪುರಪ್ರವೇಶಕೊಡದೆ ಸರ್ವೇಶ್ವರಿಯ ಬಾಗಿಲಲ್ಲಿ ಇದ್ದ ಅಣಿಮಾದಿ ಸಿದ್ಧಿಗಳೊಡನೆ ಹೊರಬಾಗಿಲಲ್ಲಿ [2]ಇದ್ದರಾದೆಂಬುದರಿಂದ[2] ಶ್ರೀಚಕ್ರದ ಬಾಹ್ಯ [3]ದೇಶದಲ್ಲಿ[3] ಇಂದ್ರಾದಿ ದಿಕ್ಪಾಲಕರಿಗೆ ಅವಸ್ಥಾನ ಸಿದ್ಧವು. ಅತಿಶಯೋಕ್ತಿ ಅಲಂಕಾರ.

ಮಂಚದ ವರ್ಣನೆ—

ಗತಾಸ್ತೇ ಮಂಚತ್ವಂ ದ್ರುಹಿಣಹರಿರುದ್ರೇಶ್ವರಭೃತಃ
ಶಿವಃ ಸ್ವಚ್ಛಚ್ಛಾಯಾಘಟಿತಕಪಟ ಪ್ರಚ್ಛದಪಟಃ
ತ್ವದೀಯಾನಾಂ ಭಾಸಾಂ ಪ್ರತಿಫಲನರಾಗಾರುಣತಯಾ
ಶರೀರೀ ಶೃಂಗಾರೋ ರಸ ಇವ ದೃಶಾಂ ದೋಗ್ಧಿ ಕುತುಕಮ್ ೯೪

---

[1] ಆಗಿರುತ್ತೆ [2] ಇದ್ದಾರೆಂಬುದರಿಂದ (ಖ) [3] ಬಾಹ್ಯದೆಶೆಯಲ್ಲಿ (ಕ),

[ಹೇ ಭಗವತಿ! ತೇ ಮಂಚತ್ವಂ ಗತಾಃ ದ್ರುಹಿಣಹರಿರುದ್ರೇಶ್ವರಭೃತಃ, ಶಿವಃ ಸ್ವಚ್ಛಚ್ಛಾಯಾಘಟಿತ ಕಪಟ ಪ್ರಚ್ಛದಪಟಃ ಸ್ವ ತ್ವದೀಯಾನಾಂ ಭಾಸಾಂ ಪ್ರತಿಫಲನರಾಗಾರುಣತಯಾ ಶರೀರೀ ಶೃಂಗಾರೋ ರಸ ಇವ ದೃಶಾಂ ಕುತಕಂ ದೋಗ್ಧಿ.]

ಹೇ ಭಗವತಿ—ಏ ಭಗವತಿಯೇ! ತೇ ಮಂಚತ್ವಂ ಗತಾಃ ದ್ರುಹಿಣಹರಿರುದ್ರೇಶ್ವರಭೃತಃ—ನಿನ್ನ ಮಂಚದ ರೂಪವನು ಐದಿದ ಬ್ರಹ್ಮವಿಷ್ಣುರುದ್ರೇಶ್ವರರು ಈ ನಾಲ್ವರು ಭೃತ್ಯರು, ಇವರು ಸರ್ವೇಶ್ವರಿಯ ಅತ್ಯಂತ ಸಮೀಪ ಸೇವಾರ್ಥವಾಗಿ ಮಂಚದ ರೂಪಾದರೆಂಬುದು ಅಭಿಪ್ರಾಯ. ಶಿವಃ ಸ್ವಚ್ಛಚ್ಛಾಯಾಘಟಿತ ಕಪಟಪ್ರಚ್ಛದಪಟಃ ಸ್ವ—ಐದನೆ ತುರ್ಯಾತೀತಮೂರ್ತಿಯಾದ ಸದಾಶಿವನು ಬಿಳಿಯ ಕಾಂತಿಯಿಂದ ಕೂಡಿದ ವ್ಯಾಜವಾದ ಮಂಚದ ಮೇಲುಹಾಸಿಕೆಯಾದವನಾಗಿಕೊಂಡು, ತ್ವದೀಯಾನಾಂ ಭಾಸಾಂ ಪ್ರತಿಫಲನರಾಗಾರುಣತಯಾ—ನಿನ್ನ ಸಂಬಂಧವಾಗಿ ಇದ್ದಂಥಾ ಕಾಂತಿಗಳ ಪ್ರತಿಬಿಂಬವಾದ ಕೆಂಪಿನ ಕಾಂತಿಯಿಂದ, ಶರೀರೀ ಶೃಂಗಾರೋ ರಸ ಇವ ದೃಶಾಂ ಕುತಕಂ ದೋಗ್ಧಿ—ಶರೀರವುಳ್ಳ ಶೃಂಗಾರರಸವೋ ಎಂಬ ಹಾಗೆ ನಿನ್ನ ಕಣ್ಣುಗಳಿಗೆ ಆನಂದವನು ಮಾಡುತ್ತಾನೆ. ಶೃಂಗಾರರಸ ಕೆಂಪುವರ್ಣವೆಂದು ಸಮಯಸಿದ್ಧ.

ಇಲ್ಲಿಗೆ ಬರೆಯತಕ್ಕ ಅರ್ಥ—ಮೂಲಾಧಾರ ಸ್ವಾಧಿಷ್ಠಾನ ಮಣಿಪೂರ ಅನಾಹತ ವಿಶುದ್ಧಿ ಈ ಐದು ಚಕ್ರಗಳು, ಭೂಮಿ ಜಲ ಅಗ್ನಿ ವಾಯು ಆಕಾಶ ಈ ರೂಪಾದ ಪಂಚಭೂತಗಳು, ಆ ಚಕ್ರದಲ್ಲಿ ಗಂಧರಸರೂಪಸ್ಪರ್ಶಶಬ್ದ ರೂಪಾದ ಪಂಚತನ್ಮಾತ್ರಗಳು, ಆಜ್ಞಾಚಕ್ರದಲ್ಲಿ ಮನಸ್ಸು ಜ್ಞಾನೇಂದ್ರಿಯವೈದು ಕರ್ಮೇಂದ್ರಿಯವೈದು ಕೂಡಾ ಆಜ್ಞಾಚಕ್ರಪರಿಯಂತವಾದ ಇಪ್ಪತ್ತೊಂದು ತತ್ತ್ವವು ಇಹವು. ಅದರಮೇಲೆ ಮಾಯಾ, ಶುದ್ಧವಿದ್ಯಾ, ಮಹೇಶ್ವರ, ಸದಾಶಿವ ಈ ತತ್ತ್ವ ನಾಲ್ಕು ಬ್ರಹ್ಮಗ್ರಂಥಿಯಮೇಲೆ ಇದ್ದ ಮೂರು ರೇಖೆಯಿಂದ ನಾಲ್ಕು ಮೂಲೆಯಾದ ನಾಲ್ಕು ಬಾಗಿಲು ಕೂಡಿದ ಭೂಪುರವೆಂಬ ಹೆಸರುಳ್ಳ ಶ್ರೀಚಕ್ರದ ನಾಲ್ಕು ಬಾಗಿಲಲ್ಲಿ ಮೂಡಲು ಆದಿಯಾಗಿ ಇಹ ಮಾಯಾ ಶುದ್ಧವಿದ್ಯಾ ಮಹೇಶ್ವರ ಸದಾಶಿವ ಈ ತತ್ತ್ವಚತುಷ್ಟಯವು ಮಂಚದ ನಾಲ್ಕು ಕಾಲುಗಳೆಂಬುದು. ಶುದ್ಧವಿದ್ಯೆ ಎಂಬ ಜ್ಞಾನಶಕ್ತಿಗೆ ಸದಾಶಿವನ ಸಂಯೋಗದಿಂದ ಗಂಡಹೆಂಡತಿಯರಾಗಿ ಸಹಸ್ರಕಮಲ ಮಧ್ಯದಲ್ಲಿ ಇದ್ದಾರೆ. ಆ ಸದಾಶಿವನು ಮೋಹದಿಂದ ಶುದ್ಧವಿದ್ಯೆ ಎಂಬ ಜ್ಞಾನಶಕ್ತಿಯ ಸಂಯೋಗದಿಂದ ಐಕ್ಯರೂಪಾಗಿ ತಿಳಿಯಲ್ಪಡುತ್ತದೆ. ಸಹಸ್ರಕಮಲದಲ್ಲಿ ಇದ್ದಂಥಾ ನಾಲ್ಕು ಬಾಗಿಲು ಉಳ್ಳಂಥಾ ಕರ್ಣಿಕಾರೂಪಾಗಿದ್ದಂಥಾ ಶ್ರೀಚಕ್ರಮಧ್ಯದಲ್ಲಿ ಇದ್ದಂಥಾ ನಾಲ್ಕು ಮೂಲೆಯುಳ್ಳಂಥಾ ಬಿಂದುರೂಪಾದಂಥಾ ಸರಘಾ ಎಂಬ ಹೆಸರುಳ್ಳಂಥಾ ಸುಧಾಸಿಂಧುವಿನಲ್ಲಿ ಶಿವಶಕ್ತಿಗಳ ಐಕ್ಯ. ಕಡೆಯ ಬೇಕಾದ ಅರ್ಥವನು ಸುಧಾಸಿಂಧೋರ್ಮಧ್ಯೇ (ಶ್ಲೋಕ ೮) ಎಂಬ ಶ್ಲೋಕದ ಟೀಕಿನಲ್ಲಿ ನೋಡಿಕೊಂಬದು.

ಅತಿಧವಳವರ್ಣವಾದ ಸದಾಶಿವನು ಸರ್ವೇಶ್ವರಿಯ ಕೆಂಪಿನ ದೇಹ ಕಾಂತಿಯ ಪ್ರತಿಫಲನದಿಂದ ಕೆಂಪಾಗಲಾಗಿ ಕೆಂಪುವರ್ಣದ ಶೃಂಗಾರರಸ ದೇಹವ ಧರಿಸಿತೋ ಎಂದು ಉತ್ಪ್ರೇಕ್ಷಿಸಿದ್ದದರಿಂದ ಉತ್ಪ್ರೇಕ್ಷಾಲಂಕಾರ.

ಭೋಗದ ವರ್ಣನೆ—

ಕಲಂಕಃ ಕಸ್ತೂರೀ ರಜನಿಕರಬಿಂಬಂ ಜಲಮಯಂ
ಕಲಾಭಿಃ ಕರ್ಪೂರೈರ್ಮರಕತಕರಂಡಂ ನಿಬಿಡಿತಮ್
ಅತಸ್ತ್ವದ್ಭೋಗೇನ ಪ್ರತಿದಿನಮಿದಂ ರಿಕ್ತಕುಹರಂ
ವಿಧಿರ್ಭೂಯೋ ಭೂಯೋ ನಿಬಿಡಯತಿ ನೂನಂ ತವ ಕೃತೇ ೯೫

[ಹೇ ಭಗವತಿ! ಕಲಂಕಃ ಕಸ್ತೂರೀ, ರಜನಿಕರಬಿಂಬಂ ಜಲಮಯಂ, ಕಲಾಭಿಃ ಕರ್ಪೂರೈಃ ನಿಬಿಡಿತಂ ಮರಕತಕರಂಡಂ ಪ್ರತಿದಿನಂ ತ್ವದ್ಭೋಗೇನ ರಿಕ್ತಕುಹರಂ, ಅತಃ ವಿಧಿಃ ಭೂಯೋ ಭೂಯಃ ತವ ಕೃತೇ ನಿಬಿಡಯತಿ ನೂನಮ್.]

ಹೇ ಭಗವತಿ–ಏ ಭಗವತಿಯೇ ! ಕಲಂಕಃ ಕಸ್ತೂರೀ–[1]ಕಲಂಕವಾದ[1] ಕಸ್ತೂರಿಯೂ, ರಜನಿಕರಬಿಂಬಂ ಜಲಮಯಂ–ಚಂದ್ರಬಿಂಬವು ಪನ್ನೀರರೂಪು, ಕಲಾಭಿಃ ಕರ್ಪೂರೈಃ–ಷೋಡಶಕಲೆಗಳೆಂಬ ಕರ್ಪೂರಗಳಿಂದ, ನಿಬಿಡಿತಂ ಮರಕತಕರಂಡಂ–ತುಂಬಿ ಇದ್ದಂಥಾ ಪಚ್ಚೆರತ್ನದ ಭರಣಿಯುನು, ಪ್ರತಿದಿನಂ ತ್ವದ್ಭೋಗೇನ ರಿಕ್ತಕುಹರಂ–ದಿನದಿನವ ನಿನ್ನ ಭೋಗದಿಂದ ಬರಿಯದಾದಂಥಾದನು, ಅತಃ ವಿಧಿಃ ಭೂಯೋ ಭೂಯಃ ತವ ಕೃತೇ ನಿಬಿಡಯತಿ ನೂನಂ–ಅದು ಕಾರಣ ಬ್ರಹ್ಮನು ಮರಳಿಮರಳಿ ನಿನಗೋಸ್ಕರ ತುಂಬುತ್ತಾನೆ, ನಿಶ್ಚಯ.

ಈ ಶ್ಲೋಕದಲ್ಲಿ ಕಾಣಬರುವುದು ಮಂಡಲವಲ್ಲ ಪಚ್ಚೆಕರಡಿಗೆ. ಅಲ್ಲಿ ಇಹದು ಕಳಂಕವಲ್ಲ ಕಸ್ತೂರಿ, ಚಂದ್ರನಲ್ಲ ಜಲಮಯವಾದ ಪನ್ನೀರು, ಷೋಡಶಕಲೆಗಳಲ್ಲ ಕರ್ಪೂರವು, ಈ ಪ್ರಕಾರದಲ್ಲಿ ಚಂದ್ರಮಂಡಲವನು ಸರ್ವೇಶ್ವರಿಯ ಪರಿಮಳ ಭರಣಿ ಎಂದು ಹೇಳಿ ವೃದ್ಧಿಕ್ಷಯಗಳಿಂದ ಬ್ರಹ್ಮನು ದೇವಿಯ ಭೋಗಕ್ಕೆ ವೆಚ್ಚವಾಗಲಾಗಿ ತಿರುಗಿ ತುಂಬುತ್ತಾನೆ ಎಂಬುದರಿಂದ ಅಪಹ್ನವಾಲಂಕಾರ ಉತ್ಪ್ರೇಕ್ಷೆ.

ಆರುವಿಧ ಐಕ್ಯಜ್ಞಾನಫಲ—

ಸ್ವದೇಹೋದ್ಭೂತಾಭಿರ್ಘೃಣಿಭಿರಣಿಮಾದ್ಯಾಭಿರಭಿತೋ
ನಿಷೇವ್ಯೇ [2]ನಿತ್ಯೇ ತ್ವಾಮಹಮಿತಿ ಸದಾ ಭಾವಯತಿ ಯಃ
ಕಿಮಾಶ್ಚರ್ಯಂ ತಸ್ಯ ತ್ರಿಣಯನಸಮೃದ್ಧಿಂ ತೃಣಯತಃ
ಮಹಾಸಂವರ್ತಾಗ್ನಿರ್ವಿರಚಯತಿ ನೀರಾಜನವಿಧಿಮ್ ೯೬

---

[1] ಕಳಂಕವು ಎಂದಿರಬೇಕು. [2] ನಿತ್ಯೇ ತ್ವಾಃ ಎಂಬ ಪದವನ್ನು ಲಿಂಗವ್ಯತ್ಯಯದಿಂದ ನಿತ್ಯಾಬಃ ಎಂದು ಮಾಡಿಕೊಂಡಿದಾರೆ. ನಿತ್ಯೇ ಎಂಬ ಪಾಠವಲ್ಲಿ ಆದ್ಯಂತವಿಲ್ಲದವಳೇ ಎಂಬುದಾಗಿ ದೇವಿಯ ಸಂಬೋಧನೆ

[ಹೇ ನಿಷೇವ್ಯೇ! ಸ್ವದೇಹೋದ್ಭೂತಾಭಿಃ ಘೃಣಿಭಿಃ ಅಣಿಮಾದ್ಯಾಭಿಃ ಅಭಿತಃ ನಿತ್ಯಾಭಿಃ ಸಂವರಿತಾಂ ತ್ವಾಂ ಯಃ ಸಾಧಕಃ ಅಹಮಿತಿ ಸದಾ ಭಾವಯತಿ, ತ್ರಿಣಯನಸಮೃದ್ಧಿಂ ತೃಣಯತಃ ತಸ್ಯ ಮಹಾಸಂವರ್ತಾಗ್ನಿಃ ನೀರಾಜನವಿಧಿಂ ವಿರಚಯತಿ, ಕಿಮಾಶ್ಚರ್ಯಮ್.]

ಹೇ ನಿಷೇವ್ಯೇ—ಐ ಸೇವೆಯ ಮಾಡುವವರಿಗೆ ಗತಿಯಾಗಿದ್ದಂಥಾವಳೇ! ಸ್ವದೇಹೋದ್ಭೂತಾಭಿಃ ಘೃಣಿಭಿಃ ಅಣಿಮಾದ್ಯಾಭಿಃ ಅಭಿತಃ—ನಿನ್ನ [1]ಪಾದದಲ್ಲಿ ಹುಟ್ಟಿದ ಕಿರಣರೂಪಾದ ಅಣಿಮಾದ್ಯಷ್ಟೈಶ್ವರ್ಯಗಳಿಂದ ಬಳಸಿಕೊಂಡು ಇದ್ದಂಥಾ, ನಿತ್ಯಾಭಿಃ ಸಂವರಿತಾಂ ತ್ವಾಂ—ತ್ರಿಪುರಸುಂದರೀ ಮೊದಲಾದ ಹದಿನಾರು ನಿತ್ಯೆಗಳಿಂದಲೂ ಕೂಡಿಕೊಂಡು ಇದ್ದಂಥಾ ನಿನ್ನನು, ಯಃ ಸಾಧಕಃ ಅಹಮಿತಿ ಸದಾ ಭಾವಯತಿ—ಆವನೊಬ್ಬ ಸಾಧಕನು ನಾನೆಂದು ಐಕ್ಯಾನಂದದಿಂದ ಆವಾಗಲೂ ಧ್ಯಾನವ ಮಾಡಿಯಾನು, ತ್ರಿಣಯನ ಸಮೃದ್ಧಿಂ ತೃಣಯತಃ ತಸ್ಯ—ತ್ರಿಯಂಬಕನ ಮಹಿಮೆಯ ತೃಣಪ್ರಾಯವಮಾಡುವ ಆ ಭಕ್ತನಿಗೆ, ಮಹಾಸಂವರ್ತಾಗ್ನಿಃ ನೀರಾಜನವಿಧಿಂ ವಿರಚಯತಿ ಕಿಮಾಶ್ಚರ್ಯಂ—ಪ್ರಳಯಕಾಲಾಗ್ನಿಯು ಆರತಿಯ ಕಾರ್ಯವನು ಮಾಡುವದೆಂಬುದು ಏನು ಅಶ್ಚರ್ಯವು.

ಈ ಶ್ಲೋಕದ ಅಭಿಪ್ರಾಯ——ಸರ್ವೇಶ್ವರಿಯು ತಾನೆಂಬ ಐಕ್ಯಜ್ಞಾನದಿಂದ ಆ ಸರ್ವೇಶ್ವರಿಗೆ ಪ್ರಳಯಕಾಲಾಗ್ನಿ ಆರತಿಯ ಕಾರ್ಯವ ಮಾಡುವದು ಆಶ್ಚರ್ಯವಲ್ಲವಲ್ಲಾ.

ಸರ್ವೇಶ್ವರಿಯ ಪತಿವ್ರತಾಮಹಿಮೆ—

ಕಲತ್ರಂ ವೈಧಾತ್ರಂ ಕತಿಕತಿ ಭಜಂತೇ ನ ಕವಯಃ
ಶ್ರಿಯೋ ದೇವ್ಯಾಃ ಕೋ ವಾ ನ ಭವತಿ ಪತಿಃ ಕೈರಪಿ ಧನೈಃ
ಮಹಾದೇವಂ ಹಿತ್ವಾ ತವ ಸತಿ ಸತೀನಾಮಚರಮೇ
ಕುಚಾಭ್ಯಾಮಾಲಿಂಗಃ ಕುರವಕತರೋರಪ್ಯಸುಲಭಃ ೯೭

[ಹೇ ಸತಿ! ವೈಧಾತ್ರಂ ಕಲತ್ರಂ ಕತಿಕತಿ ಕವಯೋ ನ ಭಜನ್ತೇ, ಶ್ರಿಯೋ ದೇವ್ಯಾಃ ಕೈರಪಿ ಧನೈಃ ಕೋ ವಾ ಪತಿರ್ನ ಭವತಿ, ಹೇ ಸತೀನಾಮಚರಮೇ! ಮಹಾದೇವಂ ಹಿತ್ವಾ ತವ ಕುಚಾಭ್ಯಾಮಾಲಿಂಗಃ ಕುರವಕತರೋರಪಿ ಅಸುಲಭಃ.]

ಹೇ ಸತಿ—ಐ ಪತಿವ್ರತೆಯೇ! ವೈಧಾತ್ರಂ ಕಲತ್ರಂ ಕತಿಕತಿ ಕವಯಃ ನ ಭಜನ್ತೇ—ಬ್ರಹ್ಮನ ಹೆಂಡತಿಯಾದ ಸರಸ್ವತೀದೇವಿಯನು ಆರಾರು ಕವಿಗಳು ಭಜಿಸರು, ಸರ್ವಕವಿಗಳು ಭಜಿಸುವರೆ, ಶ್ರಿಯೋ ದೇವ್ಯಾಃ ಕೈರಪಿ ಧನೈಃ

---

[1] ಶ್ಲೋಕದಲ್ಲಿರುವ ದೇಹಶಬ್ದಕ್ಕೆ ದೇಹಾವಯುವವಾದ ಪಾದವೆಂದರ್ಥ.

ಕೋ ವಾ ಪತಿರ್ನ ಭವತಿ–ಲಕ್ಷ್ಮೀದೇವಿಗೆ ಆವದಾನೊಂದು ಧನಗಳಿಂದ ಆವನು ಲಕ್ಷ್ಮೀಪತಿಯೆನಿಸಿಕೊಳ್ಳನು. ಅಲ್ಪಧನಿಕರಾದವರು ಲಕ್ಷ್ಮೀಪತಿ ಎನಿಸಿಕೊಂಬರು, ಹೇ ಸತೀನಾಮಚರಮೇ–ಪತಿವ್ರತೆಯರಲ್ಲಿ ಅಗ್ರಗಣ್ಯೆಯಾದ ಸರ್ವೇಶ್ವರಿಯೇ ! ಮಹಾದೇವಂ ಹಿತ್ವಾ ತವ ಕುಚಾಭ್ಯಾಮಾಲಿಂಗಃ ಕುರವಕತರೋರಪಿ ಅಸುಲಭಃ –ಮಹಾದೇವರು ಹೊರತಾಗಿ ನಿನ್ನ ಎರಡು ಕುಚಗಳ ಆಲಿಂಗನವು ಅಚೇತನ ವಾದ ಗೋರಟೆಯ ಮರಕ್ಕೂ ದೋಹಳಾರ್ಥವಾಗಿಯಾದರು ಸಂಭವಿಸದು.

ಈ ಶ್ಲೋಕದ ಅಭಿಪ್ರಾಯ–ಆವನಾನೊಬ್ಬನು ಸಾರಸ್ವತವಾದ ಮಂತ್ರ ಪುನಶ್ಚರಣೆಯಿಂದರಿವು ಉಂಟಾದವನಾಗಿ ಸರಸ್ವತಿಯ ಪತಿಯೆನಿಸಿಕೊಂಬನು, ಧನಧಾನ್ಯ ಐಶ್ವರ್ಯಗಳಿಂದ ಲಕ್ಷ್ಮೀಪತಿ ಎನಿಸಿಕೊಂಬನು, ಪಾರ್ವತಿಯು ಪತಿಯೆಂದು ಮಹಾದೇವರೆ ಅಲ್ಲದೆ ಮತ್ತಾರಿಗೂ ಎನಿಸಿಕೊಳ್ಳಕೂಡದು. ಅದರಿಂದ ಸರ್ವೇಶ್ವರಿಯ ಪತಿವ್ರತಾಮಹಿಮೆ ಹೇಳಶಕ್ಯವಲ್ಲದಂಥಾದ್ದು.

ಶ್ರೀವಿದ್ಯೆ ಎಂಬ ಚಂದ್ರಕಲೆಯೇ ಆದಿಮಾಯೆ ಎಂದು ಪ್ರತಿಪಾದಿಸಿದ್ದು—

ಗಿರಾಮಾಹುರ್ದೇವೀಂ ದ್ರುಹಿಣಗೃಹಿಣೀಮಾಗಮವಿದೋ
ಹರೇಃ ಪತ್ನೀಂ ಪದ್ಮಾಂ ಹರಸಹಚರೀಮದ್ರಿತನಯಾಮ್
ತುರೀಯಾ ಕಾಪಿ ತ್ವಂ ದುರಧಿಗಮ ನಿಸ್ಸೀಮಮಹಿಮಾ
ಮಹಾಮಾಯಾ ವಿಶ್ವಂ ಭ್ರಮಯಸಿ ಪರಬ್ರಹ್ಮಮಹಿಷಿ ೯೮

[ಹೇ ಪರಬ್ರಹ್ಮಮಹಿಷಿ! ತ್ವಾಮೇವ ಆಗಮವಿದಃ ದ್ರುಹಿಣಗೃಹಿಣೀಂ ಗಿರಾಂ ದೇವೀಂ ಆಹುಃ. ತ್ವಾಮೇವ ಹರೇಃ ಪತ್ನೀಂ ಪದ್ಮಾಂ ಆಹುಃ. ತ್ವಾಮೇವ ಹರಸಹಚರೀಂ ಅದ್ರಿತನಯಾಂ ಆಹುಃ. ತ್ವಂ ತುರೀಯಾ ಕಾಪಿ ದುರಧಿಗಮನಿಸ್ಸೀಮಮಹಿಮಾ ಮಹಾಮಾಯಾ ಸತೀ ವಿಶ್ವಂ ಭ್ರಮಯಸಿ.]

ಹೇ ಪರಬ್ರಹ್ಮಮಹಿಷಿ–ಏ ಪರಬ್ರಹ್ಮವಾದ ಸದಾಶಿವನ ಹೆಂಡತಿಯೇ ! ತ್ವಾಮೇವ–ನಿನ್ನ ಒಬ್ಬಳನ್ನೆ, ಆಗಮವಿದಃ–ಶಾಸ್ತ್ರವಬಲ್ಲಂಥಾ ವ್ಯಾಸಾದಿ ಮುನಿ ಗಳು, ದ್ರುಹಿಣಗೃಹಿಣೀಂ ಗಿರಾಂ ದೇವೀಂ ಆಹುಃ–ಬ್ರಹ್ಮನ ಹೆಂಡತಿಯಾದ ಸರಸ್ವತೀದೇವಿ ಎಂದು ಹೇಳುವರು, ತ್ವಾಮೇವ ಹರೇಃ ಪತ್ನೀಂ ಪದ್ಮಾಂ ಆಹುಃ– ನಿನ್ನನ್ನೆ ಹರಿಯ ಹೆಂಡತಿಯಾದ ಲಕ್ಷ್ಮೀ ಎಂದು ಹೇಳುವರು, ತ್ವಾಮೇವ ಹರಸಹ ಚರೀಂ ಅದ್ರಿತನಯಾಂ ಆಹುಃ–ನಿನ್ನನ್ನೆ ಹರನ ಹೆಂಡತಿಯಾದ ಪಾರ್ವತಿಯೆಂದು ಹೇಳುವರು, ತ್ವಂ ತುರೀಯಾ ಕಾಪಿ ದುರಧಿಗಮನಿಸ್ಸೀಮಮಹಿಮಾ ಮಹಾ ಮಾಯಾ ಸತೀ ವಿಶ್ವಂ ಭ್ರಮಯಸಿ–ನೀನು ಈವರಿಗೂ ಅತಿಶಯವಾದ ನಾಲ್ಕನೆಯ ಹೇಳಶಕ್ಯವಲ್ಲದ ಆ ಮಹಿಮೆಯುಳ್ಳಂಥಾ ಮಹಾಮಾಯೆಯಾಗಿ ಪ್ರಪಂಚರೂಪವು ಪಾರವಮಾಡುತ್ತಿದ್ದೆ.

ಶ್ರೀವಿದ್ಯೆ ಎಂಬ ಹೆಸರುಳ್ಳ ಚಂದ್ರಕಲೆಯು ಒಂದನ್ನೆ ನಾನಾವಿಧವಾದ ನಾಮಗಳಿಂದ ಶಾಸ್ತ್ರವಬಲ್ಲ ಮುನಿಗಳು ಹೇಳುವರು ಎಂಬುದು ಅಭಿಪ್ರಾಯ.

ಈ ಸೌಂದರ್ಯಲಹರಿಯ ಸ್ತೋತ್ರದ ಫಲ—

ಸರಸ್ವತ್ಯಾ ಲಕ್ಷ್ಮ್ಯಾ ವಿಧಿಹರಿಸಪತ್ನೋ ವಿಹರತೇ
ರತೇಃ ಪಾತಿವ್ರತ್ಯಂ ಶಿಥಿಲಯತಿ ರಮ್ಯೇಣ ವಪುಷಾ
ಚಿರಂ ಜೀವನ್ನೇವ ಕ್ಷಪಿತಪಶುಪಾಶವ್ಯತಿಕರಃ
ಪರಾನಂದಾಭಿಖ್ಯಂ ರಸಯತಿ ರಸಂ ತ್ವದ್ಭಜನವಾನ್ ೯೯

[ಹೇ ಭಗವತಿ! ತ್ವದ್ಭಜನವಾನ್ ಸರಸ್ವತ್ಯಾ ಲಕ್ಷ್ಮ್ಯಾ ವಿಧಿಹರಿಸಪತ್ನೋ ವಿಹರತೇ, ರಮ್ಯೇಣ ವಪುಷಾ ರತೇಃ ಪಾತಿವ್ರತ್ಯಂ ಶಿಥಿಲಯತಿ, ಕ್ಷಪಿತಪಶುಪಾಶವ್ಯತಿಕರಃ ಚಿರಂ ಜೀವನ್ನೇವ ಪರಾನಂದಾಭಿಖ್ಯಂ ರಸಂ ರಸಯತಿ.]

ಹೇ ಭಗವತಿ—ಎ ಭಗವತಿಯೇ! ತ್ವದ್ಭಜನವಾನ್ ಸರಸ್ವತ್ಯಾ ಲಕ್ಷ್ಮ್ಯಾ ವಿಧಿಹರಿಸಪತ್ನೋ ವಿಹರತೇ, ರಮ್ಯೇಣ ವಪುಷಾ ರತೇಃ ಪಾತಿವ್ರತ್ಯಂ ಶಿಥಿಲಯತಿ—ನಿನ್ನ ಭಜಿಸುವಂಥಾವನು ಸರಸ್ವತಿಯ ಕೂಡಲು ಲಕ್ಷ್ಮಿಯು ಕೂಡಲು ಬ್ರಹ್ಮನಿಗೂ ವಿಷ್ಣುವಿಗೂ ಮತ್ಸರವ ಹುಟ್ಟಿಸುವನಾಗಿ ಕ್ರೀಡೆ ಮಾಡುವನು, ಚೆಲುವಿಕೆಯಾದ ದೇಹದಿಂದ ಮನ್ಮಥನ ಸ್ತ್ರೀಯಾದ ರತಿದೇವಿಯ ಪತಿವ್ರತಾಧರ್ಮವನು ಕೆಡಿಸುವನು. ಸಾದಾಖ್ಯಕಲೆಯ ಉಪಾಸನವ ಮಾಡುವವಗೆ ಸರಸ್ವತಿಯ ರೂಪಾದ ವಿದ್ಯವು ಲಕ್ಷ್ಮಿಯ ರೂಪಾದ ಐಶ್ವರ್ಯವು ಮನ್ಮಥನಿಗಿಂತಲೂ ಅಧಿಕವಾದ ಸೌಂದರ್ಯವು ಉಂಟೆಂದು ಇಂಥಾ ಐಹಿಕಫಲವ ಹೇಳಿ ಪರಲೋಕ ಫಲವ ಹೇಳುತ್ತಾರೆ; ಕ್ಷಪಿತಪಶುಪಾಶವ್ಯತಿಕರಃ ಚಿರಂಜೀವನ್ನೇವ ಪರಾನಂದಾಭಿಖ್ಯಂ ರಸಂ ರಸಯತಿ—ಹೋಗಲಾಡಿಸಲ್ಪಟ್ಟ ಅಜ್ಞಾನ ಉಂಟಾದವನಾಗಿ ಅನೇಕ ಕಾಲ ಕಪಿಲಮಾರ್ಕಂಡೇಯರ ಹಾಗೆ ಶರೀರವ ಧರಿಸಿಕೊಂಡು ಉತ್ಕೃಷ್ಟ ಜ್ಞಾನಸುಖವನು ಅನುಭವಿಸುವನು.

ಇಲ್ಲಿಗೆ ಬರೆಯತಕ್ಕ ಅರ್ಥ——ತ್ವದ್ಭಜನವಾನ್ ಎಂಬ ಶಬ್ದದಿಂದ ಎರಡು ವಿಧ ಭಜನವು ಹೇಳಲ್ಪಟ್ಟಿತು. ಷಟ್ಚಕ್ರಸೇವಾತ್ಮಕವು ಧಾರಣಾತ್ಮಕವು. ಆದಿಯಲ್ಲಿ ಆರುಚಕ್ರಗಳ ಸೇವಾಪ್ರಕಾರವ ಹೇಳೇನು—ಆಧಾರಸ್ವಾಧಿಷ್ಠಾನ ಕತ್ತಲೆಯ ಲೋಕವಾದಕಾರಣ ಅಲ್ಲಿ ಸಮಯಿಗಳಿಗೆ ಉಪಾಸನೆಯ ಮಾಡಬಾರದು. ಮಣಿಪೂರ [1]ಮೊದಲಾದ[1] ಸಹಸ್ರಕಮಲ ಪರಿಯಂತರವಾದ ಐದು ಚಕ್ರಗಳು ಪೂಜೆಯ ಮಾಡುವ ಸ್ಥಳಗಳು. ಮಣಿಪೂರಚಕ್ರದಲ್ಲಿ ಪೂಜೆಯ ಮಾಡುವವರಿಗೆ [2]ಸಾರ್ಷ್ಟೀ[2] ರೂಪಾದ ಮುಕ್ತಿಯೂ, [2]ಸಾರ್ಷ್ಟೀ[2] ಎಂಬ ಮುಕ್ತಿ ಸರ್ವೇಶ್ವರಿಯ ಪಟ್ಟಣ

[1] ಮೊದಲಾಗಿ (ಬ) [2] ಸಾರ್ಷ್ಟಿ.

ಸಮೀಪದ ಗ್ರಾಮದಲ್ಲಿ ಇಹಂಥಾದ್ದು. ಅನಾಹತಚಕ್ರದಲ್ಲಿ ಪೂಜೆಯ ಮಾಡುವವರಿಗೆ ಸಾಲೋಕ್ಯಮುಕ್ತಿಯೂ, ಸಾಲೋಕ್ಯವೆಂಬ ಮುಕ್ತಿ ಸರ್ವೇಶ್ವರಿಯ ಪಟ್ಟಣದಲ್ಲಿ ಇಹಂಥಾದ್ದು. ವಿಶುದ್ಧಿ ಚಕ್ರದಲ್ಲಿ ಪೂಜೆಯ ಮಾಡುವವರಿಗೆ ಸಾಮೀಪ್ಯಮುಕ್ತಿಯೂ, ಸಾಮೀಪ್ಯಮುಕ್ತಿ ಎಂಬುದು ಸರ್ವೇಶ್ವರಿಯ ಸಮೀಪದಲ್ಲಿ ಇಹಂಥಾದ್ದು. ಆಜ್ಞಾಚಕ್ರದಲ್ಲಿ ಪೂಜೆಯ ಮಾಡುವವರಿಗೆ ಸಾರೂಪ್ಯ ಮುಕ್ತಿಯೂ, ಸಾರೂಪ್ಯಮುಕ್ತಿ ಎಂಬುದು ಸರ್ವೇಶ್ವರಿಯ ರೂಪಿಗೆ ಸಮಾನ ಸ್ವರೂಪು ಉಳ್ಳಂಥಾದ್ದು. ಈ ನಾಲ್ಕುವಿಧ ಮುಕ್ತಿಯೂ ಪ್ರಧಾನವಲ್ಲ, ಸಹಸ್ರ ಕಮಲದಲ್ಲಿ ಪೂಜೆಯ ಮಾಡುವವರಿಗೆ ಪ್ರಧಾನವಾದ ಸಾಯುಜ್ಯಮುಕ್ತಿಯು ಆಗಲಾಗಿ ಸಹಸ್ರಕಮಲದಲ್ಲಿ ನಿನ್ನ ಪೂಜೆಯ ಮಾಡುವವರಿಗೆ 'ಪರಾನಂದಾಭಿಖ್ಯಂ ರಸಂ ತ್ವದ್ಭಜನವಾನ್ ರಸಯತಿ' ಎಂದು ಹೇಳಲ್ಪಟ್ಟಿತ್ತು. ಸಾಯುಜ್ಯ ಮುಕ್ತಿ ಸಾಧಕನಿಗೆ ಹೇಗೆ ಬಹುದೆಂದರೆ—ಮೂಲಾಧಾರ ಶಕ್ತಿಯನು ಮೂಲಾಧಾರಾದಿಯಾದ ಆರು ಚಕ್ರವನು ಭೇದಿಸಿ ಸಹಸ್ರಕಮಲದಲ್ಲಿ ಇಹ ಸದಾಶಿವನ ಕೂಡಾ ಐಕ್ಯಧ್ಯಾನವ ಮಾಡಿದರೆ ದೇಹಾವಸಾನದಲ್ಲಿ ಸಾಧಕನಿಗೆ ಶಿವಶಕ್ತಿಗಳ ಶರೀರದಲ್ಲಿ ಐಕ್ಯ ಉಂಟಾಗುವದು. ಅದೆ ಸಾಯುಜ್ಯಮುಕ್ತಿ.

ನಿಶ್ಚೈಸಿದ ಅರ್ಥವ ಬರೆದೇನು—ಮೂಲಾಧಾರಾದಿಯಾದ ಆರು ಕಮಲಗಳು ಶ್ರೀಚಕ್ರದ ತ್ರಿಕೋಣ, ಅಷ್ಟಕೋಣ, ದಶಕೋಣ ಮತ್ತೊಂದು ದಶಕೋಣ, ಹದಿನಾಲ್ಕುಕೋಣ, ಶಿವಚಕ್ರ ನಾಲ್ಕನು ಕೂಡಿಸಿದ್ದು ಒಂದು, ಎಲ್ಲಾ ಕೂಡಾ ಶ್ರೀಚಕ್ರಕ್ಕು ಮೂಲಾಧಾರಾದಿಯಾದ ಆರು ಕಮಲಕ್ಕೂ ಮೊದಲೆ ಐಕ್ಯ ಬರದಿದೇ. ಅದೇ ನಾದಬಿಂದು ಐಕ್ಯ.

ಅದು ಹೇಗೆ ಎಂದರೆ—ನಾದವೆಂಬುದು ಶ್ರೀಚಕ್ರ, ಬಿಂದುವೆಂಬುದು ಮೂಲಾಧಾರಾದಿಯಾದ ಆರು ಕಮಲವೆಂದು ಮೊದಲೆ ಬರದಿದೆ. ಆ ನಾದ ಬಿಂದು ಐಕ್ಯ ಹೇಗೆಂದರೆ—ಆಧಾರಕಮಲ ನಾಲ್ಕುದಳ, ಅದರ ಕರ್ಣಿಕೆ ಶ್ರೀಚಕ್ರದ ತ್ರಿಕೋಣ, ಸ್ವಾಧಿಷ್ಠಾನಕಮಲ ಆರುದಳ, ಅದರ ಕರ್ಣಿಕೆ ಶ್ರೀಚಕ್ರದ ಎಂಟು ಕೋಣ, ಮಣಿಪೂರಕಮಲ ಹತ್ತುದಳ, ಅದರ ಕರ್ಣಿಕೆ ಶ್ರೀಚಕ್ರದ ಹತ್ತು ಕೋಣ, ಅನಾಹತಕಮಲ ಹನ್ನೆರಡುದಳ, ಅದರ ಕರ್ಣಿಕೆ ಶ್ರೀಚಕ್ರದ ಎರಡನೆ ಹತ್ತುಕೋಣ, ವಿಶುದ್ಧಿಕಮಲ ಹದಿನಾರುದಳ, ಅದರ ಕರ್ಣಿಕೆ ಶ್ರೀಚಕ್ರದ ಹದಿನಾಲ್ಕುಕೋಣ. ಈ ಪರಿಯಂತರ ಶಕ್ತಿಚಕ್ರ ಐಕ್ಯ. ಆಜ್ಞಾಕಮಲ ಎರಡು ದಳ, ಅದರ ಕರ್ಣಿಕೆ ಎರಡು, ಒಂದು ಕರ್ಣಿಕೆಯಲ್ಲಿ ಶಿವಚಕ್ರದ ಅಷ್ಟದಳ, ಮತ್ತೊಂದು ಕರ್ಣಿಕೆಯಲ್ಲಿ ಶಿವಚಕ್ರದ ಹದಿನಾರುದಳ, ಎರಡು ಕರ್ಣಿಕೆಯ ಕೂಡಿಕೊಂಡು ಇಹ ಆಜ್ಞಾಚಕ್ರದಲ್ಲಿ ಶಿವಚಕ್ರ ನಾಲ್ಕು ಇಹವು, ಶಿವಚಕ್ರದ ವೃತ್ತತ್ರಯವು ಸ್ವಾಧಿಷ್ಠಾನಚಕ್ರದ ಮೇಲೆ ರುದ್ರಗ್ರಂಥಿ ರೂಪಾದ ವೃತ್ತ ಒಂದು, ಅನಾಹತಚಕ್ರದ ಮೇಲೆ ವಿಷ್ಣುಗ್ರಂಥಿ ರೂಪಾದ ವೃತ್ತ ಒಂದು, ಆಜ್ಞಾ ಚಕ್ರದ ಮೇಲೆ ಬ್ರಹ್ಮಗ್ರಂಥಿ ರೂಪಾದ ವೃತ್ತ ಒಂದು, ಆ ವೃತ್ತದಮೇಲೆ

ಸೋಪಾನಯುಕ್ತವಾದ ನಾಲ್ಕು ಬಾಗಿಲು ಕೂಡಿಕೊಂಡು ಇದ್ದ ಭೂಪುರವೆಂಬ ನಾಲ್ಕು ಮೂಲೆಯಾದ ಮೂರು ರೇಖೆ ಇಹುದು. ಅವೆ ಸಾವಿರದಳ ಕರ್ಣಿಕೆ. ಆ ನಾಲ್ಕು ಬಾಗಿಲು ಕೂಡಿಕೊಂಡು ಇದ್ದ ಕರ್ಣಿಕೆಯ ನಡುವೆ ಬಿಂದುಸ್ಥಾನ ವೆಂಬ ಶ್ರೀಚಕ್ರ ಇಹುದು. ಹೀಗೆ ಕಮಲಕ್ಕೂ ಶ್ರೀಚಕ್ರಕ್ಕೂ ಐಕ್ಯಧ್ಯಾನವೆ ನಾದ ಬಿಂದುವಿಗೆ ಐಕ್ಯಧ್ಯಾನ.

ಆರು ಚಕ್ರಕ್ಕೂ ಅಕ್ಷರಾತ್ಮಕವಾದ ಐವತ್ತು ಕಲೆಗೂ ಐಕ್ಯ. ಅದು ಹೇಗೆಂದರೆ--ವಿಶುದ್ಧಿ ಆಜ್ಞಾಚಕ್ರಾತ್ಮಕವಾದ ಚಂದ್ರಖಂಡದಲ್ಲಿ ಅಕಾರಾದಿ ಯಾದ ಹದಿನಾರು ಸ್ವರಾಕ್ಷರಗಳಿಗೆ ಅಂತರ್ಭಾವ. ಮಣಿಪೂರ ಅನಾಹತಾತ್ಮಕ ವಾದ ಸೂರ್ಯಖಂಡದಲ್ಲಿ ಕಕಾರಾದಿ ಮಕಾರಪರಿಯಂತರ ಇಪ್ಪತ್ತೈದು ಅಕ್ಷರಗಳಿಗೆ ಅಂತರ್ಭಾವ. ಮೂಲಾಧಾರ ಸ್ವಾಧಿಷ್ಠಾನಾತ್ಮಕವಾದ ಅಗ್ನಿಖಂಡ ದಲ್ಲಿ ಯಕಾರಾದಿ ಸಕಾರಪರಿಯಂತರ ಏಳು ಅಕ್ಷರ ಅಂತಸ್ಥ ಊಷ್ಮಾಣಗಳಿಗೆ ಅಂತರ್ಭಾವ. ಹಕಾರ ಳಕಾರ ಬಿಂದುಸ್ಥಾನದಲ್ಲಿ ಅಂತರ್ಭಾವ. ಕ್ಷಕಾರ ಮೂರು ಖಂಡದಲ್ಲಿ ಅಂತರ್ಭಾವ. ಮೂಲಾಧಾರಾದಿಯಾದ ಆರು ಕಮಲಗಳ ಐವತ್ತು ದಳಗಳಲ್ಲಿ ಐವತ್ತು ಕಲಾತ್ಮಕವಾದ ಐವತ್ತಕ್ಷರಗಳು ಇಹವು. ಸೋಮ ಸೂರ್ಯ ಅನಲಾತ್ಮಕವಾದ ಐವತ್ತು ಕಲೆಗಳು ಹದಿನಾರು ನಿತ್ಯೆಗಳ ಸ್ವರೂಪ. ಹದಿನಾರು ನಿತ್ಯೆಗಳು ಹದಿನಾರು ಚಂದ್ರಕಲಾ ಸ್ವರೂಪ. ಆ ಹದಿನಾರು ಕಲೆಗಳು ಮೂಲ ಮಂತ್ರದ ಹದಿನಾರು ಅಕ್ಷರಸ್ವರೂಪ. ಆ ಮೂಲಮಂತ್ರ ಮೂರು ಖಂಡ ಸ್ವರೂಪ. ಆ ಮೂರು ಖಂಡವು ಸೋಮ ಸೂರ್ಯಾನಲಸ್ವರೂಪ. ಆ ಸೋಮ ಸೂರ್ಯಾನಲರುಗಳು ಮೂರು ಗ್ರಂಥಿಸ್ವರೂಪ. ಆ ಮೂರು ಗ್ರಂಥಿಗಳು ಮೂರು ಹ್ರೀಂಕಾರಸ್ವರೂಪ. ಆ ಮೂರು ಹ್ರೀಂಕಾರವು ಭುವನೇಶ್ವರಿಯ ಮಂತ್ರಸ್ವರೂಪ. ಆ ಭುವನೇಶ್ವರಿಯ ಮಂತ್ರ ಮೂಲಮಂತ್ರಸ್ವರೂಪ. ಆ ಮೂಲಮಂತ್ರಕ್ಕೂ ಶ್ರೀಚಕ್ರಕ್ಕೂ ಐಕ್ಯ. ಆ ಶ್ರೀಚಕ್ರಕ್ಕೆ ಮೂಲಾಧಾರಾದಿಯಾದ ಆರು ಚಕ್ರಗಳ ಕೂಡಲು ಬ್ರಹ್ಮಗ್ರಂಥಿ ಆದಿಯಾದ ಮೂರು ಗ್ರಂಥಿಗಳ ಕೂಡಲು ಸಹಸ್ರಕಮಲ ಕರ್ಣಿಕೆಯ ಕೂಡಲು ಐಕ್ಯ. ಇದೆ ಐವತ್ತು ಅಕ್ಷರರೂಪಾದ ಕಲೆಗು ಶ್ರೀಚಕ್ರರೂಪಾದ ನಾದಕ್ಕು ಐಕ್ಯ.

ಆರು ವಿಧ ಐಕ್ಯ ಹೇಗೆಂದರೆ--ಶ್ರೀಚಕ್ರರೂಪಾದ ನಾದವು ಷಟ್ಕಮಲ ರೂಪಾದ ಬಿಂದುವಿನಲ್ಲಿ ಐಕ್ಯ. ಆ ನಾದವೆ ಐವತ್ತು ಅಕ್ಷರಾತ್ಮಕವಾದ ಕಲೆಯಲ್ಲಿ ಐಕ್ಯ. ಷಟ್ಕಮಲರೂಪಾದ ಬಿಂದು ಶ್ರೀಚಕ್ರರೂಪಾದ ನಾದದಲ್ಲಿ ಐಕ್ಯ. ಆ ಬಿಂದುವೆ ಐವತ್ತು ಅಕ್ಷರ ರೂಪಾದ ಕಲೆಯಲ್ಲಿ ಐಕ್ಯ. ಐವತ್ತು ಅಕ್ಷರ ರೂಪಾದ ಕಲೆಯು ಶ್ರೀಚಕ್ರರೂಪಾದ ನಾದದಲ್ಲಿ ಐಕ್ಯ. ಆ ಕಲೆಯೆ ಷಟ್ಕಮಲ ರೂಪಾದ ಬಿಂದುವಿನಲ್ಲಿ ಐಕ್ಯ. ಈ ಪ್ರಕಾರದಲ್ಲಿ ನಾದಬಿಂದು ಕಲೆಗಳ ಮೂರನು ಒಂದರಲ್ಲಿ ಒಂದ ಐಕ್ಯವ ಮಾಡಲಾಗಿ ಆರು ವಿಧವಾದ ಐಕ್ಯವಾದ ಶ್ರೀ ವಿದ್ಯಾಮೂಲ ಮಂತ್ರವು ಶ್ರೀಚಕ್ರದಲ್ಲಿ ಐಕ್ಯವ ಮಾಡುವದು. ಈ ಆರು ವಿಧ ಐಕ್ಯವೆ

ಭಗವತಿಯ ಪೂಜೆ ಎಂದು ಚೆನ್ನಾಗಿ ಹೇಳಿದೇವು. ಈ ಆರು ವಿಧ ಐಕ್ಯಾನಂತರದಲ್ಲಿ ಹತ್ತು ಭುಜ ಉಂಟಾದ ಭಗವತಿಯು ಮಣಿಪೂರಚಕ್ರದಲ್ಲಿ ಪ್ರತ್ಯಕ್ಷವಾಗಿ ಕಾಣಿಸುವಳು.

ಇನ್ನು ಬಿಂದುಸ್ವರೂಪವ ಹೇಳೇನು—ಬಿಂದು ಎಂಬುದು ಮೂಲಾಧಾರಾದಿ ಆರು ಚಕ್ರವು ಜಗದ ಉತ್ಪತ್ತಿಸ್ಥಿತಿಲಯಕ್ಕೆ ಕಾರಣವು, ಶಿವಶಕ್ತಿ ವಿಶೇಷವು, ಅದು ಒಂದೆ ಸಹಸ್ರಕಮಲಮಧ್ಯದ ನಾಲ್ಕು ಬಾಗಿಲಾದ ಕರ್ಣಿಕಾಮಧ್ಯದ ಶ್ರೀಚಕ್ರಮಧ್ಯದಲ್ಲಿ ನಾಲ್ಕುಕೋಣಸ್ವರೂಪವಾದ ಶಕ್ತಿತತ್ತ್ವ. ಅದರ ಒಳಗಿಹ ಶಿವತತ್ತ್ವವು ನಾದವೆಂದು ಹೇಳಲ್ಪಟ್ಟಿತು. ಶಕ್ತಿಯು ಶಬ್ದ, ಶಿವನು ಆ ಶಬ್ದಾರ್ಥವಾದ ಸ್ವರೂಪವಾಗಲಾಗಿ ಕಲೆಯ ಸ್ವರೂಪ ಅವರಿಬ್ಬರಿಗು ಸರಿ. ಶಿವಶಕ್ತಿಗಳ ಮೇಳನ ನಾದಬಿಂದುಕಲಾತೀತವೆಂದು ಸಮಯಮತರಹಸ್ಯ. ಆ ಸಹಸ್ರಕಮಲಮಧ್ಯದ ಬಿಂದು ಒಂದೆ ಮೂಲಾಧಾರದಲ್ಲಿ ನಾಲ್ಕು ವಿಧವು. ಸ್ವಾಧಿಷ್ಠಾನದಲ್ಲಿ ಆರು ವಿಧವು. ಕೂಡಾ ಹತ್ತುವಿಧವಾಗಿ ಇಹದು. ಇದಕ್ಕೆ ಸಂಮತಿ ವಚನ—

'ದಶಧಾ ಭಿದ್ಯತೇ ಬಿಂದುರೇಕ ಏವ ಪರಾತ್ಮಕಃ
ಚತುರ್ಧಾಧಾರಕಮಲೇ ಷೋಢಾಧಿಷ್ಠಾನಪಂಕಜೇ
ಉಭಯಾಕಾರರೂಪತ್ವಾದಿತರೇಷಾಂ ತದಾತ್ಮತಾ'

ಈ ಶ್ಲೋಕದ ಅರ್ಥ—ಒಂದೆ ಬಿಂದು ಮೂಲಾಧಾರಕಮಲದ ನಾಲ್ಕು ದಳಗಳಲ್ಲಿ ನಾಲ್ಕುವಿಧವಾಗಿ ಇಹದು. ಸ್ವಾಧಿಷ್ಠಾನಕಮಲದ ಆರುದಳದಲ್ಲಿ ಆರುವಿಧವಾಗಿ ಇಹದು. ಆ ಬಿಂದು ಹೀಗೆ ಹತ್ತುವಿಧವಾಗಿ ಇಹದು.

ಇಲ್ಲಿಗೆ ಬರೆಯುತಕ್ಕ ಅರ್ಥ—ಆಧಾರಕಮಲ ನಾಲ್ಕುದಳ ನಾಲ್ಕು ಬಿಂದುಸ್ವರೂಪವು. ಆ ಬಿಂದುಗಳ ಹೆಸರು ಮನೋಬುದ್ಧಿಅಹಂಕಾರಚಿತ್ತವೆಂಬವು ಪ್ರಕೃತಿಸ್ವರೂಪವಾದವು ಜಗದ ಸೃಷ್ಟಿಗೆ ಕಾರಣವಾದವು. ಸ್ವಾಧಿಷ್ಠಾನಪದ್ಮದ ಆರುದಳರೂಪಾದ ಆರುಬಿಂದುಗಳು ಕಾಮ ಕ್ರೋಧ ಲೋಭ ಮೋಹ ಮದ ಮಾತ್ಸರ್ಯಸ್ವರೂಪಗಳು ಜಗತ್ತಿನ ಸಂಹಾರಕಾರಣವಾದವು. ಈ ಹತ್ತು ಬಿಂದುಗಳು ಮೂಲಾಧಾರ ಸ್ವಾಧಿಷ್ಠಾನರೂಪವು. ಮಣಿಪೂರವು ಮೂಲಾಧಾರ ಸ್ವಾಧಿಷ್ಠಾನಸ್ವರೂಪವೆಂದು ಹತ್ತುದಳವು. ಅನಾಹತಚಕ್ರ ಮಣಿಪೂರದ್ದು ಹತ್ತು ದಳವು ಮೂಲಾಧಾರಸ್ವಾಧಿಷ್ಠಾನಕ್ಕಾಗಿ ಎರಡುದಳವಕೂಡಾ ಹನ್ನೆರಡು ದಳವು. ವಿಶುದ್ಧಿಪದ್ಮವು ಅನಾಹತಚಕ್ರದ ಹನ್ನೆರಡುದಳವು ಆಧಾರ ಚಕ್ರದ ನಾಲ್ಕುದಳವು ಕೂಡಾ ಹದಿನಾರು. ಅಲ್ಲದೆ ಮಣಿಪೂರದ ಹತ್ತುದಳವು ಸ್ವಾಧಿಷ್ಠಾನದ ಆರು ದಳವು ಕೂಡಾ ಹದಿನಾರುದಳವು. ಆಜ್ಞಾಚಕ್ರವು ಮೂಲಾಧಾರಸ್ವಾಧಿಷ್ಠಾನ ಎರಡುಚಕ್ರಕ್ಕಾದ ಎರಡುದಳವು. ಹೀಗೆ ಮಣಿಪೂರ ಮೊದಲಾಗಿ ಆಜ್ಞಾಚಕ್ರ ಪರಿಯಂತವಾದ ನಾಲ್ಕುಕಮಲಗಳಿಗೆ ಮೂಲಾಧಾರಸ್ವಾಧಿಷ್ಠಾನ ಎರಡುಕಮಲ

[1]ಗಳಲ್ಲಿ ಮೇಲಣಕಮಲಗಳು ನಾಲ್ಕು ಅಂತರ್ಭಾ[2]ವವಾದದರಿಂದ[2] ಒಂದುಬಿಂದುವೆ ಹತ್ತುವಿಧವಾಗಿಹದು. ಈ ಪ್ರಕಾರದಲ್ಲಿ ಷಟ್ಚಕ್ರಪೂಜಾಪ್ರಕಾರ ಪ್ರಪಂಚವೆಲ್ಲವು ಚೆನ್ನಾಗಿ ವಿವರಿಸಿ ಬರೆಯಿತು.

ಭಜನೆ ಶಬ್ದಾರ್ಥದ ಎರಡನೇಯ ಧಾರಣಾಸ್ವರೂಪವ ಹೇಳೇನು— ಶಂಕರಾಚಾರ್ಯಸ್ವಾಮಿಗಳವರು [3]ಧಾರಣಾ ಜ್ಞಾನದಿಂದ[3] ಮುಕ್ತಿ ಎಂದು ನಿರೂಪಿಸಿ ಇದ್ದಾರೆ. ಅದು ಹೇಗೆಂದರೆ—ಧಾರಣಾ ಎಂಬುದು ಮೂಲಾಧಾರಾದಿ ಆರು ಕಮಲದಲ್ಲಿಯೂ ವಾಯುಪೂರಣವ ಮಾಡುವಂಥಾದ್ದು. ಆ ಧಾರಣೆಯು ಮೂಲಾಧಾರಾದಿ ಆರು ಕಮಲಕಿರಣಭೇದದಿಂದ ಮುನ್ನೂರ ಅರವತ್ತಾಗಿ ಇಹದು. ಆ ಧಾರಣವ ಮಾಡಿದಂಥಾವರಿಗೆ ಮೂಲಾಧಾರಾದಿಯಾದ ಆರುಚಕ್ರ ಕ್ರಮದಲ್ಲಿ ಫಲ—ಮತಿ ಸ್ಮೃತಿ ಬುದ್ಧಿ ಪ್ರಜ್ಞಾ ಮೇಧಾ ಪ್ರತಿಭಾ ಎಂಬ ಈ ಆರು ಉಂಟಾಗಿಹದು. ಸಹಸ್ರಕಮಲಧಾರಣದಲ್ಲಿ ಸಂವಿದ್ರೂಪಫಲ. [4]ಶ್ರೀಶಂಕರಾಚಾರ್ಯರು[4] ಸಕಲಜನನಿಯ ಸ್ತೋತ್ರದಲ್ಲಿ ಕೌಲಮತಸಮಯಮತದವರಿಗೆ ಪೂಜಾಭೇದವನು ಧಾರಣಾಪ್ರಕಾರವನು ನಿರೂಪಿಸಿದ್ದಾರೆ. ಆ ಶ್ಲೋಕ—

‘ಚತುಷ್ಪತ್ರಾಂತಷ್ಷಡ್ದಳಪುಟಭಗಾಂತಸ್ತ್ರಿವಲಯ
ಸ್ಫುರದ್ವಿದ್ಯುದ್ವಹ್ನಿದ್ಯುಮಣಿನಿಯುತಾಭದ್ಯುತಿಲತೇ
ಷಡಶ್ರಂ ಭಿತ್ವಾದೌ ದಶದಲಮಥ ದ್ವಾದಶದಲಂ
ಕಲಾಶ್ರಂ ಚ ದ್ವ್ಯಶ್ರಂ ಗತವತಿ ನಮಸ್ತೇ ಗಿರಿಸುತೇ’

(ಸಕಲಜನನೀಸ್ತವ, ಶ್ಲೋಕ ೯)

ಕೌಲಮತದವರಿಗೆ ಮೂಲಾಧಾರದಲ್ಲಿ ಪೂಜೆ, ಸಮಯಮತದವರಿಗೆ ಮಣಿಪೂರಚಕ್ರ ಆದಿಯಾದ ನಾಲ್ಕುಚಕ್ರದಲ್ಲಿಯೂ ಪೂಜೆ. ಧಾರಣಾಸ್ವರೂಪವಾದ ವಾಯುನಿರೋಧವ ಮಾಡಿದರೆ ಮೂಲಾಧಾರದ ಕುಂಡಲಿನೀಶಕ್ತಿ ರುದ್ರಗ್ರಂಥಿ ವಿಷ್ಣುಗ್ರಂಥಿ ಬ್ರಹ್ಮಗ್ರಂಥಿಗಳ ಭೇದಿಸುವ ಸಮಯದಲ್ಲಿ ಅನೇಕ ಅಗ್ನಿಸೂರ್ಯ ಮಿಂಚುಗಳ ಪ್ರಕಾಶದ ಹಾಗೆ ಸಹಸ್ರಕಮಲಕ್ಕೆ ಹೋಗುವಳು, ಎಂದು ಈ ಶ್ಲೋಕದ ತಾತ್ಪರ್ಯ.

ಕಡೆಯಲ್ಲಿ ಮುಗಿದರ್ಥ—ಶರೀರಾಕಾರವಾದ ಪಿಂಡಾಂಡಕ್ಕೂ ಹದಿನಾಲ್ಕು ಲೋಕಾತ್ಮಕವಾದ ಬ್ರಹ್ಮಾಂಡಕ್ಕೂ ಐಕ್ಯಧ್ಯಾನವ ಮಾಡುಪದರಿಂದಲೂ ಆರು ಕಮಲಧ್ಯಾನಮಹಿಮೆಯಿಂದಲೂ ಶಿವಶಕ್ತಿಗಳಿಗೆ ಐದುವಿಧ ಸಮಾನಧ್ಯಾನದಿಂದಲೂ ಆರುವಿಧ ಐಕ್ಯಧ್ಯಾನದಿಂದಲೂ, ತನ್ನ ಶರೀರವೆ ಬ್ರಹ್ಮಾಂಡದಹಾಗೆ ಕಾಣಿಸಿ ಇಹದೆಂದು ಸರ್ವಯೋಗಶಾಸ್ತ್ರರಹಸ್ಯ. ಅದಕ್ಕಾಗಿ ಯೋಗಿಗಳಿಗೆ ನಾಲ್ಕುವಿಧ ಐಕ್ಯಧ್ಯಾನವ ಮಾಡಬೇಕೆಂದು ಹೇಳಿದ ವಚನ—

---

[1] ಪ್ರಕೃತಿಭೂತವಾದವು ಮೂಲಾಧಾರಸ್ವಾಧಿಷ್ಠಾನಕಮಲಗಳಲ್ಲಿ, ಎಂದಿರಬೇಕು. [2] ವವೆಂದದರಿಂದ (ಖ) [3] ಧಾರಣಾಸ್ವರೂಪದಿಂದ (ಖ) [4] ಕಾಳಿದಾಸಭಗವತ್ಪಾದರು.

'ಪಿಂಡಬ್ರಹ್ಮಾಂಡಯೋರ್ರೈಕ್ಯಂ ಲಿಂಗಸೂತ್ರಾತ್ಮನೋರಪಿ
ಸ್ವಾಪಾವ್ಯಾಕೃತಯೋರ್ರೈಕ್ಯಂ ಕ್ಷೇತ್ರಜ್ಞಪರಮಾತ್ಮನೋಃ'

ಇದಕ್ಕೆ ಅರ್ಥ—ಪರಮಾತ್ಮನಾದ ಈಶ್ವರನಿಗೆ ಬ್ರಹ್ಮಾಂಡಾಕಾರವಾದ ಶರೀರ ಒಂದು, ಪಂಚಜ್ಞಾನೇಂದ್ರಿಯ ಪಂಚಕರ್ಮೇಂದ್ರಿಯ ಪಂಚಪ್ರಾಣ ಮನಸ್ಸು ಈ ಹದಿನಾರು ಸ್ವರೂಪದ ಲಿಂಗಶರೀರ ಒಂದು, ಮಾಯಾಸ್ವರೂಪ ವಾದ ಶರೀರ ಒಂದು, ಈ ಮೂರು ಶರೀರದಿಂದ ಮೂರು ಹೆಸರು. ಬ್ರಹ್ಮಾಂಡ ಸ್ವರೂಪವಾದ ವಿರಾಟನೆಂದು, ಲಿಂಗಶರೀರಸ್ವರೂಪವಾದ ಸೂತ್ರಾತ್ಮಕನೆಂದು, ಮಾಯಾಸ್ವರೂಪವಾದ ಅವ್ಯಾಕೃತವೆಂದು, ಈ ಪ್ರಕಾರದ ಮೂರು ಹೆಸರುಂಟು. ಕ್ಷೇತ್ರಜ್ಞನಾದ ಜೀವನಿಗು ಆ ಪ್ರಕಾರದಲ್ಲಿಯೆ ಮೂರು ಶರೀರವುಂಟು. ಪಿಂಡಾ ಕಾರವಾದ ಹಸ್ತಪಾದಶರೀರ ಮೊದಲಾದ ಅವಯುವಗಳು ಕೂಡಿಕೊಂಡು ಸ್ಥೂಲ ಶರೀರ ಒಂದು, ಜ್ಞಾನೇಂದ್ರಿಯವೈದು ಕರ್ಮೇಂದ್ರಿಯವೈದು ಪಂಚಪ್ರಾಣಗಳು ಮನಸ್ಸು ಈ ಹದಿನಾರು ಸ್ವರೂಪವಾದ ಲಿಂಗಶರೀರ ಒಂದು, ನಿದ್ರೆಯ ಸುಷುಪ್ತ್ಯವಸ್ಥೆ ಕೂಡಿಕೊಂಡಿರುವ ಪ್ರಾಜ್ಞಸ್ವರೂಪವಾದ ಸ್ವಾಭಾವ್ಯ ಒಂದು, ಈ ಜೀವನ ಮೂರು ಶರೀರಕ್ಕೂ ಆ ಪರಮಾತ್ಮನ ಮೂರು ಶರೀರಕ್ಕೂ ಐಕ್ಯ ಧ್ಯಾನ. ಅದು ಹೇಗೆಂದರೆ—ಈ ಜೀವನ ಪಿಂಡಶರೀರಕ್ಕೂ ಪರಮಾತ್ಮನ ಬ್ರಹ್ಮಾಂಡಶರೀರಕ್ಕೂ ಒಂದು ಐಕ್ಯ. ಈ ಜೀವನ ಲಿಂಗಶರೀರಕ್ಕೂ ಪರಮಾತ್ಮನ ಲಿಂಗಶರೀರಸ್ವರೂಪವಾದ ಸೂತ್ರಾತ್ಮನಿಗೂ ಒಂದು ಐಕ್ಯ. ಈ ಜೀವನ ಸುಷು ಪ್ತಿಯ ಅವಸ್ಥೆಯ ಕೂಡಿಕೊಂಡು ಇರುವ ಸ್ವಾಭಾವ್ಯನಿಗೂ ಆ ಪರಮಾತ್ಮನ ಮಾಯೆಯ ಕೂಡಿಕೊಂಡು ಇಹ ಅವ್ಯಾಕೃತನಿಗೂ ಒಂದು ಐಕ್ಯ. ಕ್ಷೇತ್ರಜ್ಞ ಸ್ವರೂಪವಾದ ಜೀವನಿಗೂ ಪರಮಾತ್ಮವಾದ ಬ್ರಹ್ಮಕ್ಕೂ ಐಕ್ಯ. ಈ ನಾಲ್ಕು ವಿಧ ಐಕ್ಯಧ್ಯಾನ ಪ್ರಕಾರವ ಸಂಕ್ಷೇಪದಲ್ಲಿ ಲಕ್ಷ್ಮೀಧರಾಚಾರ್ಯರು ನಿರೂಪಿಸಿದರು. ಸೌಂದರ್ಯಲಹರಿಯ ಸ್ತೋತ್ರದಲ್ಲಿ ಪ್ರತಿಪಾದಕವಾದ ಸಮಯಕೌಲಸಿದ್ಧಾಂತ ರಹಸ್ಯವ ಹೇಳಿದ್ದೆಲ್ಲಾ ಈ ಶ್ಲೋಕದ ಟೀಕಿನಲ್ಲಿಯೂ ಚನ್ನಾಗಿ ಬರದದೆ. ಸೂಕ್ಷ್ಮ ಬುದ್ಧಿಯಿಂದ ಮಹಾತ್ಮರುಗಳಾದವರು ತಿಳಿದುಕೊಂಬದು.

ಸ್ತೋತ್ರಮುಗಿದ ಅಭಿಪ್ರಾಯ—

ಪ್ರದೀಪಜ್ವಾಲಾಭಿರ್ದಿವಸಕರನೀರಾಜನವಿಧಿಃ
ಸುಧಾಸೂತೇಶ್ಚಂದ್ರೋಪಲಜಲಲವೈರರ್ಘ್ಯರಚನಾ
ಸ್ವಕೀಯೈರಂಭೋಭಿಃ ಸಲಿಲನಿಧಿಸೌಹಿತ್ಯಕರಣಂ
ತ್ವದೀಯಾಭಿರ್ವಾಗ್ಭಿಸ್ತವ ಜನನಿ ವಾಚಾಂ ಸ್ತುತಿರಿಯಮ್ ೧೦೦

[ಹೇ ಜನನಿ ! ಸ್ವಕೀಯಾಭಿಃ ಪ್ರದೀಪಜ್ವಾಲಾಭಿಃ ದಿವಸಕರನೀರಾಜನ ವಿಧಿಃ ಯಥಾ, ಸ್ವಕೀಯೈಃ ಚಂದ್ರೋಪಲಜಲಲವೈಃ ಸುಧಾಸೂತೇಃ ಅರ್ಘ್ಯ

ರಚನಾ ಯಥಾ, ಸ್ವಕೀಯೈರಂಭೋಭಿಃ ಸಲಿಲನಿಧಿಸೌಹಿತ್ಯಕರಣಂ ಯಥಾ, ತಥಾ ತ್ವದೀಯಾಭಿಃ ವಾಗ್ಭಿಃ ವಾಚಾಂ ತವ ಇಯಂ ಸ್ತುತಿಃ.]

ಹೇ ಜನನಿ–ಏ ತಾಯೇ ! ಸ್ವಕೀಯಾಭಿಃ ಪ್ರದೀಪಜ್ವಾಲಾಭಿಃ ದಿವಸಕರ ನೀರಾಜನವಿಧಿರ್ಯಥಾ–ತನ್ನ ಸಂಬಂಧವಾದ ದೀಪದ ಕಿರಣಗಳಿಂದ ಸೂರ್ಯನಿಗೆ ಆರತಿಯ ಮಾಡುವದು ಹೇಗೆ, ಸ್ವಕೀಯೈಃ ಚಂದ್ರೋಪಲಜಲಲವೈಃ ಸುಧಾಸೂತೇಃ ಅರ್ಘ್ಯರಚನಾ ಯಥಾ—ತನ್ನ ಸಂಬಂಧವಾದ ಚಂದ್ರಕಾಂತಶಿಲೆಯ ಜಲಕಣಗಳಿಂದ ಅಮೃತವ ಸುರಿವ ಚಂದ್ರನಿಗೆ ಅರ್ಘ್ಯವ ಕೊಡುವದು ಹೇಗೆ, ಸ್ವಕೀಯೈರಂಭೋಭಿಃ ಸಲಿಲನಿಧಿಸೌಹಿತ್ಯಕರಣಂ ಯಥಾ–ತನ್ನ ಸಂಬಂಧವಾದ ಜಲಗಳಿಂದ ಸಕಲ ಜಲಕ್ಕೂ ಆಸ್ಪದವಾದ ಸಮುದ್ರನಿಗೆ ತರ್ಪಣವ ಕೊಡುವದು ಹೇಗೆ, ತಥಾ ತ್ವದೀಯಾಭಿಃ ವಾಗ್ಭಿಃ ವಾಚಾಂ ತವ ಇಯಂ ಸ್ತುತಿಃ–ಹಾಗೆ ನಿನ್ನ ಸಂಬಂಧವಾದ ವಾಕ್ಕುಗಳಿಂದ ವಾಕ್ಸಮೂಹದ ನಿನ್ನ ಈ ಸ್ತುತಿ.

ಶ್ರೀಶಂಕರಭಗವತ್ಪಾದರು ಸೌಂದರ್ಯಲಹರಿಯ ಸ್ತೋತ್ರವ ಮುಗಿಸಿ ಬ್ರಹ್ಮ ಮೊದಲಾದ ದೇವತೆಗಳು ಸ್ತೋತ್ರವ ಮಾಡಲರಿಯದಂಥಾ ಸರ್ವೇಶ್ವರಿಯ ಸ್ತೋತ್ರವ ಮಾಡಬಲ್ಲನೆ, [1] ಆದರು ಜ್ಯೋತಿರ್ಮಯವಾದ ಸೂರ್ಯನಿಗೆ ದೀಪದಿಂದ ಆರತಿಯ ಮಾಡುವಹಾಗೆ ಭಕ್ತಿಯಿಂದ ನೀನು ಕೊಟ್ಟ [2]ವಾಕ್ಕಿನಲ್ಲಿ[2] ನಿನ್ನ ಸ್ತೋತ್ರವ ಮಾಡಿದೇವೆಂದರು.

ಈ ಷಟ್ಚಕ್ರದೀಪಿಕೆ ಎಂಬ ಕನ್ನಡ ಟೀಕು ಸಂಪೂರ್ಣ

---

[1] ಆದರು ಜ್ಯೋತಿರ್ಮಯವಾದ ಸೂರ್ಯನಿಗೆ ಅವನ ಕಿರಣಗಳಿಂದ ಉಂಟಾದ ದೀಪಜ್ವಾಲೆಗಳಿಂದ ಆರತಿಯಮಾಡುವಹಾಗೆ, ಚಂದ್ರಕಿರಣಸಂಬಂಧದಿಂದ ಚಂದ್ರಕಾಂತಮಣಿಗಳಲ್ಲಿ ಸುರಿಯುವ ನೀರಿನ ಬಿಂದುವಿನಿಂದ ಚಂದ್ರನಿಗೆ ಅರ್ಘ್ಯಕೊಡುವಹಾಗೆ, ಸಮುದ್ರದ ನೀರಿನಿಂದಲೆ ಸಮುದ್ರವನ್ನು ಭರ್ತಿಮಾಡುವಹಾಗೆ, ಎಂದಿರಬೇಕು [2] ವಾಕ್ಕಿನಿಂದ.

ಅನುಬಂಧ ೧

ಯಂತ್ರಗಳು, ಪೂಜಾಕ್ರಮ ಮತ್ತು ಫಲ

ಫಲಾಪೇಕ್ಷಿಗಳಾದ ಭಕ್ತರ ಸೌಕರ್ಯಕ್ಕಾಗಿ ಇತರ ಭಾಷೆಗಳಲ್ಲಿ ಮುದ್ರಿಸಿರುವಂತೆ ಯಂತ್ರ ಬೀಜಾಕ್ಷರ ಪೂಜಾಕ್ರಮಗಳನ್ನು ಪ್ರಕಟಿಸಿದೆ. ಇವು ಪ್ರಾಚೀನ ಕಾಲದಿಂದಲೂ ದೊಡ್ಡವರ ಆಚರಣೆಯಲ್ಲಿ ಬಂದಿದೆಯೇ ಹೊರತು ಬೇರೆ ಆಧಾರ ಯಾವುದೂ ಸಿಗಲಿಲ್ಲ. ಅನೇಕರು ಇದನ್ನು ಆಚರಿಸಿ ಫಲಭಾಗಿಗಳಾಗಿರುವುದರಿಂದ ಸರ್ವರಿಗೂ ಅನುಕೂಲವಾಗುವಂತೆ ಮುದ್ರಿಸಿದೆ. ೨೨, ೩೦ ಶ್ಲೋಕಗಳಿಗೆ ಸಂಬಂಧಪಟ್ಟ ಶ್ರೀಚಕ್ರವನ್ನು ಪುಸ್ತಕದ ಆರಂಭದಲ್ಲಿ ಇರುವಂತೆ ಬರೆದುಕೊಳ್ಳಬೇಕು.

ಶ್ರೀ ಸೌಂದರ್ಯಲಹರಿಯಲ್ಲಿರುವ ಶ್ಲೋಕಗಳು

1	ಶಿವಃ ಶಕ್ತ್ಯಾ ಯುಕ್ತಃ	....	ಸಕಲಕಾರ್ಯಜಯಃ, ಸಕಲಾಭಿವೃದ್ಧಿಃ
2	ತನೀಯಾಂಸಂ ಪಾಂಸುಂ	....	ಸರ್ವಲೋಕವಶ್ಯತೆ, ಪ್ರಕೃತಿ ಜಯ
3	ಅವಿದ್ಯಾನಾಮಂತಸ್ತಿಮಿರ	....	ಸರ್ವೈಶ್ವರ್ಯಂ, ಸರ್ವವೇದವಿತ್ವಂ
4	ತ್ವದನ್ಯಃ ಪಾಣಿಭ್ಯಾಂ	....	ಸಾಮ್ರಾಜ್ಯಪ್ರಾಪ್ತಿಃ, ದಾರಿದ್ರ್ಯ ನಿವೃತ್ತಿಃ
5	ಹರಿಸ್ತ್ವಾಮಾರಾಧ್ಯ	....	ಸಕಲಜನ ಸಂಮೋಹನಂ, ಪುರುಷ ವಶ್ಯಂ
6	ಧನುಃ ಪೌಷ್ಪಂ ಮೌರ್ವೀ	....	ಪುತ್ರಾವಾಪ್ತಿಃ
7	ಕ್ವಣತ್ಕಾಂಚೀದಾಮಾ	....	ಶತ್ರುಜಯಃ
8	ಸುಧಾಸಿಂಧೋರ್ಮಧ್ಯೇ	....	ಕಾರಾಗೃಹ ನಿವೃತ್ತಿಃ, ಸಕಲಕಾರ್ಯ ಜಯಃ
9	ಮಹೀಂ ಮೂಲಾಧಾರೇ	....	ಪಂಚಭೂತಜಯಃ, ದೇಶಾಂತರಕ್ಕೆ ಹೋದವನು ಶೀಘ್ರ ಬರುವನು
10	ಸುಧಾಧಾರಾಸಾರೈಃ	....	ವೃಷ್ಯಂ, ಸ್ತ್ರೀಣಾಂ ರಜೋದರ್ಶನಂ
11	ಚತುರ್ಭಿಃ ಶ್ರೀಕಂಠೈಃ	....	ವಂಧ್ಯಾದೋಷನಿವೃತ್ತಿಃ
12	ತ್ವದೀಯಂ ಸೌಂದರ್ಯಂ	....	ಕವಿತ್ವ ಮತ್ತು ವಶಿತ್ವಸಿದ್ಧಿ
13	ನರಂ ವರ್ಷೀಯಾಂಸಂ	....	ಸ್ತ್ರೀವಶ್ಯ
14	ಕ್ಷಿತೌ ಷಟ್ಪಂಚಾಶತ್	....	ವಸಂತಾದಿ ರೋಗ ಮತ್ತು ದುರ್ಭಿಕ್ಷದ ಬಾಧೆ ಇಲ್ಲ
15	ಶರಜ್ಜ್ಯೋತ್ಸ್ನಾ	....	ಕವಿತ್ವ ಮತ್ತು ಜ್ಞಾನದ ಪ್ರಾಪ್ತಿ
16	ಕವೀಂದ್ರಾಣಾಂ ಚೇತಃ	....	ವೇದಶಾಸ್ತ್ರಾದಿ ಜ್ಞಾನಪ್ರಾಪ್ತಿ
17	ಸವಿತ್ರೀಭಿರ್ವಾಚಾಂ	....	ಸರ್ವ ಕಲಾಜ್ಞಾನ
18	ತನುಚ್ಛಾಯಾಭಿಸ್ತೇ	....	ಸಕಲ ಪ್ರಾಣಿವಶ್ಯತೆ
19	ಮುಖಂ ಬಿಂದುಂ ಕೃತ್ವಾ	....	ರಾಜ ರಾಕ್ಷಸ ಮೃಗ ಸ್ತ್ರೀಯರ ವಶ್ಯ
20	ಕಿರಂತೀಮಂಗೇಭ್ಯಃ	....	ವಿಷಶಾಂತಿ, ಜ್ವರನಿವೃತ್ತಿ
21	ತಟಿಲ್ಲೇಖಾತನ್ವೀಂ	....	ಸಕಲ ಜನವಿರೋಧ ಪರಿಹಾರ
22	ಭವಾನಿ ತ್ವಂ ದಾಸೇ	....	ಸಾಮ್ರಾಜ್ಯ ಮೊದಲಾದ ಸರ್ವಾಭೀಷ್ಟ ಸಿದ್ಧಿ
23	ತ್ವಯಾ ಹೃತ್ವಾ ವಾಮಂ	....	ಸರ್ವಾಪನ್ನಿವೃತ್ತಿ, ಸಾಲದ ಬಿಡುಗಡೆ

24	ಜಗತ್ಸೂತೇ ಧಾತಾ	ಭೂತ ಪ್ರೇತ ಪಿಶಾಚ ಅಪಸ್ಮಾರಾದಿ ನಿವೃತ್ತಿ
25	ತ್ರಯಾಣಾಂ ದೇವಾನಾಂ	ಸರ್ಕಾರೀ ಉದ್ಯೋಗ, ಉನ್ನತಸ್ಥಾನ ಪ್ರಾಪ್ತಿ
26	ವಿರಿಂಚಿಃ ಪಂಚತ್ವಂ	ಸರ್ವಸಿದ್ಧಿ, ಶತ್ರು ಜಯ
27	ಜಪೋ ಜಲ್ಪಃ ಶಿಲ್ಪಂ	ಮಂತ್ರಸಿದ್ಧಿ, ದೇವತಾದರ್ಶನ, ಆತ್ಮಜ್ಞಾನ
28	ಸುಧಾಮಪ್ಯಾಸ್ವಾದ್ಯ	ಹೆಂಗಸರಿಗೆ ಸಕಲಸಿದ್ಧಿ, ಪುರುಷರಿಗೆ ಅಪಮೃತ್ಯು ನಿವಾರಣ
29	ಕಿರೀಟಂ ವೈರಿಂಚಂ	ದುಷ್ಟರು ಮೂರ್ಖರು ವಶವಾಗುವರು
30	ಚತುಷ್ಷಷ್ಟ್ಯಾ ತಂತ್ರೈಃ	ಸಕಲಜನ ಮತ್ತು ರಾಜವಶ್ಯ
31	ಶಿವಃ ಶಕ್ತಿಃ ಕಾಮಃ	ವಿದ್ಯಾಸಿದ್ಧಿ, ರಸಾಯನಸಿದ್ಧಿ
32	ಸ್ಮರಂ ಯೋನಿಂ ಲಕ್ಷ್ಮೀಂ	ಬಹುಧನಪ್ರಾಪ್ತಿ
33	ಶರೀರಂ ತ್ವಂ ಶಂಭೋಃ	ಬುದ್ಧಿವಂತನಾಗುವನು
34	ಮನಸ್ತ್ವಂ ವ್ಯೋಮ ತ್ವಂ	ಕ್ಷಯರೋಗ ನಿವೃತ್ತಿ
35	ತವಾಜ್ಞಾಚಕ್ರಸ್ಥಂ	ಕಠಿನರೋಗ ಶಾಂತಿ
36	ವಿಶುದ್ಧೌ ತೇ ಶುದ್ಧಸ್ಫಟಿಕ	ಬ್ರಹ್ಮರಾಕ್ಷಸಬಾಧಾಶಾನ್ತಿ
37	ಸಮುನ್ಮೀಲತ್ಸಂವಿತ್ಕಮಲ	ಬಾಲಾರಿಷ್ಟನಿವೃತ್ತಿ
38	ತವ ಸ್ವಾಧಿಷ್ಠಾನೇ	ದುಸ್ಸ್ವಪ್ನನಾಶನ
39	ತಟಿತ್ತ್ವಂತಂ ಶಕ್ತ್ಯಾ ...	ಚಿಂತಿತಾರ್ಥವು ಸ್ವಪ್ನದಲ್ಲಿ ಕಾಣುವುದು
40	ತವಾಧಾರೇ ಮೂಲೇ ...	ಉದರರೋಗನಿವೃತ್ತಿ
41	ಗತೈರ್ಮಾಣಿಕ್ಯತ್ವಂ	ಮಹೋದರನಿವೃತ್ತಿ
42	ಧುನೋತು ಧ್ವಾಂತಂ ನಃ	ಸರ್ವಜನವಶ್ಯತೆ
43	ತನೋತು ಕ್ಷೇಮಂ ನಃ	ವಶ್ಯ ಮತ್ತು ಇತರ ಬಾಧಾನಿವೃತ್ತಿ
44	ಅರಾಲೈಃ ಸ್ವಾಭಾವ್ಯಾತ್	ವಾಕ್ಸಿದ್ಧಿ
45	ಲಲಾಟಂ ಲಾವಣ್ಯ	ಸ್ತ್ರೀಯರಿಗೆ ಸ್ವಭರ್ತೃ ಸಮಾಗಮ ಮತ್ತು ಗರ್ಭಧಾರಣ
46	ಭ್ರುವೌ ಭುಗ್ನೇ ಕಿಂಚಿತ್	ದೇವತಾವಶ್ಯ ಮತ್ತು ಜನವಶ್ಯ
47	ಅಹಃ ಸೂತೇ ಸವ್ಯಂ	ನವಗ್ರಹಶಾಂತಿ
48	ವಿಶಾಲಾ ಕಲ್ಯಾಣೀ ...	ನಿಧಿದರ್ಶನ
49	ಕವೀನಾಂ ಸಂದರ್ಭ	ಮಹಾಮಾರೀಬಾಧಾನಿವೃತ್ತಿ
50	ಶಿವೇ ಶೃಂಗಾರಾರ್ದ್ರಾ	ಸರ್ವಜನವಶ್ಯತೆ

51	ಗತೇ ಕರ್ಣಾರ್ಭ್ಯರ್ಣಂ	....	ಕಣ್ಣು ಕಿವಿ ರೋಗ ನಿವೃತ್ತಿ
52	ವಿಭಕ್ತಂ ತ್ರೈವರ್ಣ್ಯಂ	....	ನಿರ್ದಿಷ್ಟ ಕೆಲಸದ ಸಿದ್ಧಿಯನ್ನು ತಿಳಿಯುವ ಕ್ರಮ
53	ಪವಿತ್ರೀಕರ್ತುಂ ನಃ	...	ಯೋನಿರೋಗ ನಿವೃತ್ತಿ
54	ನಿಮೇಷೋನ್ಮೇಷಾಭ್ಯಾಂ	....	ಅಂಡವ್ಯಾಧಿನಿವೃತ್ತಿ
55	ತವಾಪರ್ಣೇ ಕರ್ಣೇಜಪ	....	ಮುಚ್ಚಿದ ಬಾಗಿಲು ತಾನಾಗಿಯೇ ತೆರೆಯುವುದು
56	ದೃಶಾ ದ್ರಾಘೀಯಸ್ಯಾ	....	ಭಾಗ್ಯಪ್ರಾಪ್ತಿ
57	ಅರಾಳಂ ತೇ ಪಾಳೀಯುಗಳಂ	....	ಸಕಲರಾಜವಶ್ಯ
58	ಸ್ಫುರದ್ಗಂಡಾಭೋಗ	....	ಸಕಲಜನವಶ್ಯ
59	ಸರಸ್ವತ್ಯಾಃ ಸೂಕ್ತೀಃ	...	ಸರ್ವವಿದ್ಯಾಪ್ರಾಪ್ತಿ
60	ಅಸೌ ನಾಸಾವಂಶಃ	....	ಹೆಂಗಸರಿಗೆ ಸಕಲಪುರುಷವಶ್ಯತೆ
61	ಪ್ರಕೃತ್ಯಾ ರಕ್ತಾಯಾಃ	....	ಸುಖನಿದ್ರಾಪ್ರಾಪ್ತಿ
62	ಸ್ಮಿತಜ್ಯೋತ್ಸ್ನಾಜಾಲಂ	....	ಸರ್ವರೂ ವಿಧೇಯರಾಗುವರು
63	ಅವಿಶ್ರಾಂತಂ ಪತ್ಯುಃ	...	ಸಕಲಜನವಶ್ಯತೆ
64	ರಣೇ ಜಿತ್ವಾ ದೈತ್ಯಾನ್	....	ಸಕಲಜನವಶ್ಯತೆ
65	ವಿಪಂಚ್ಯಾ ಗಾಯಂತೀ	....	ಸಂಗೀತ ಮತ್ತು ವಾದ್ಯಗಳಲ್ಲಿ ಪಾಂಡಿತ್ಯ
66	ಕರಾಗ್ರೇಣ ಸ್ಪೃಷ್ಟಂ	....	ಸ್ತ್ರೀವಶ್ಯತೆ
67	ಭುಜಾಶ್ಲೇಷಾನ್ನಿತ್ಯಂ	....	ಸಕಲರಾಜವಶ್ಯತೆ
68	ಗಳೇ ರೇಖಾಸ್ತಿಸ್ರಃ	....	ಸ್ತ್ರೀವಶ್ಯತೆ
69	ಮೃಣಾಳೀಮೃದ್ವೀನಾಂ	....	ಸಕಲಪುರುಷವಶ್ಯತೆ
70	ನಖಾನಾಮುದ್ಯೋತೈಃ	....	ಯಕ್ಷಿಣೀವಶ್ಯತೆ
71	ಸಮಂ ದೇವಿ ಸ್ಕಂದ	....	ನಿರ್ಭಯವಾಗಿ ರಾತ್ರಿಯಲ್ಲಿ ಸಂಚಾರ ಮಾಡಬಹುದು
72	ಅಮೂ ತೇ ವಕ್ಷೋಜೌ	....	ಹೆಂಗಸರಿಗೆ ಸ್ತನ್ಯಪ್ರಾಪ್ತಿ, ಹಸುಗಳಿಗೆ ಹಾಲುಕಟ್ಟುವುದು ನಿಲ್ಲುವುದು
73	ವಹತ್ಯಂಬ ಸ್ತಂಬೇರಮ	....	ಯಶಃಪ್ರಾಪ್ತಿ
74	ತವ ಸ್ತನ್ಯಂ ಮನ್ಯೇ	....	ಮಹಾಕವಿತ್ವಪ್ರಾಪ್ತಿ
75	ಹರಕ್ರೋಧಜ್ವಾಲಾವಲಿಭಿಃ	....	ಸಕಲಜನವಶ್ಯತೆ
76	ಯದೇತತ್ಕಾಲಿಂದೀ	....	ರಾಜವಶ್ಯತೆ
77	ಸ್ಥಿರೋ ಗಂಗಾವರ್ತಃ	....	ಸಕಲರಾಜವಶ್ಯತೆ

78	ನಿಸರ್ಗಕ್ಷೀಣಸ್ಯ	....	ಇಂದ್ರಜಾಲವಿದ್ಯಾಪ್ರಾಪ್ತಿ
79	ಕುಚೌ ಸದ್ಯಃ ಸ್ವಿದ್ಯತ್	....	ಇಂದ್ರಜಾಲವನ್ನು ತೋರಿಸಲು ಶಕ್ತನಾಗುವನು
80	ಗುರುತ್ವಂ ವಿಸ್ತಾರಂ	....	ಅಗ್ನಿಸ್ತಂಭನ
81	ಕರೀಂದ್ರಾಣಾಂ ಶುಂಡಾರ್	....	ನೀರಿನಮೇಲೆ ಸಂಚರಿಸುವ ಶಕ್ತಿ
82	ಪರಾಜೇತುಂ ರುದ್ರಂ	....	ಮಹಾಸೈನ್ಯಸ್ತಂಭನ
83	ಶ್ರುತೀನಾಂ ಮೂರ್ಧಾನಃ	....	ಪರಕಾಯ ಪ್ರವೇಶಶಕ್ತಿ
84	ನವೋವಾಕಂ ಬ್ರೂಮಃ	....	ಭೂತಬಾಧಾನಿವೃತ್ತಿ
85	ಮೃಷಾ ಕೃತ್ವಾ ಗೋತ್ರ	....	ಪಿಶಾಚಬಾಧಾನಿವೃತ್ತಿ
86	ಹಿಮಾನೀಹಂತವ್ಯಂ	....	ಸರ್ಪವನ್ನು ತರಿಸಲು ಶಕ್ತನಾಗುವನು
87	ಪದಂ ತೇ ಕೀರ್ತೀನಾಂ	....	ಮೃಗಗಳನ್ನು ತರಿಸಲು ಶಕ್ತನಾಗುವನು
88	ನಖೈರ್ನಾಕಸ್ತ್ರೀಣಾಂ	....	ಸರ್ವರೋಗನಿವೃತ್ತಿ
89	ಕದಾ ಕಾಲೇ ಮಾತಃ	....	ಸ್ತ್ರೀಯರಿಗೆ ಗರ್ಭೋತ್ಪತ್ತಿ, ಪುರುಷರಿಗೆ ವೃಷ್ಯತ್ವಪ್ರಾಪ್ತಿ
90	ದದಾನೇ ದೀನೇಭ್ಯಃ	....	ಕ್ಷುದ್ರಬಾಧಾನಿವೃತ್ತಿ
91	ಪದನ್ಯಾಸಕ್ರೀಡಾ	....	ಭೂ ದ್ರವ್ಯಲಾಭ
92	ಅರಾಳಾ ಕೇಶೇಷು	....	ಸಕಲ ಇಷ್ಟಾರ್ಥಸಿದ್ಧಿ
93	ಪುರಾರಾತೇರಂತಃಪುರಮಸಿ	....	ವ್ರಣಚಿಕಿತ್ಸೆ
94	ಗತಾಸ್ತೇ ಮಂಚತ್ವಂ	....	ರಾಜ್ಯಲಾಭ
95	ಕಲಂಕಃ ಕಸ್ತೂರೀ	....	ಇಷ್ಟಾರ್ಥಸಿದ್ಧಿ
96	ಸ್ವದೇಹೋದ್ಭೂತಾಭಿಃ	....	ಪರಕಾಯಪ್ರವೇಶ ಮತ್ತು ಅಗ್ನಿಸ್ತಂಭನ
97	ಕಲತ್ರಂ ವೈಧಾತ್ರಂ	....	ವಿದ್ಯಾಪ್ರಾಪ್ತಿ
98	ಗಿರಾಮಾಹುರ್ದೇವೀಂ	....	ಶರೀರದಾರ್ಢ್ಯಪ್ರಾಪ್ತಿ
99	ಸರಸ್ವತ್ಯಾ ಲಕ್ಷ್ಮ್ಯಾ	....	ಶೂರತ್ವಪ್ರಾಪ್ತಿ
100	ಪ್ರದೀಪಜ್ವಾಲಾಭಿಃ	....	ಸಕಲಕಾರ್ಯಸಿದ್ಧಿ

ಸೌಂದರ್ಯಲಹರೀ ಸ್ತೋತ್ರ ಪಠನ ಕ್ರಮವು

೧ ಋಷ್ಯಾದಿಗಳು—ಅಸ್ಯ ಶ್ರೀ ಸೌಂದರ್ಯಲಹರೀಸ್ತೋತ್ರಮಹಾಮಂತ್ರಸ್ಯ ಗೋವಿಂದ ಋಷಿಃ; ಅನುಷ್ಟುಪ್ ಛಂದಃ; ಶ್ರೀಮಹಾ ತ್ರಿಪುರಸುಂದರೀ ದೇವತಾ; 'ಶಿವಃ ಶಕ್ತ್ಯಾ ಯುಕ್ತಃ' ಇತಿ ಬೀಜಮ್; 'ಸುಧಾಸಿಂಧೋರ್ಮಧ್ಯೇ' ಇತಿ ಶಕ್ತಿಃ; 'ಜಪೋ ಜಲ್ಪಃ ಶಿಲ್ಪಮ್' ಇತಿ ಕೀಲಕಮ್; ಶ್ರೀಲಲಿತಾಮಹಾ ತ್ರಿಪುರಸುಂದರೀಪ್ರೀತ್ಯರ್ಥೇ ಪಾರಾಯಣೇ ಜಪೇ ವಿನಿಯೋಗಃ


೨ ಕರನ್ಯಾಸಃ—ಹ್ರಾಂ ಅಂಗುಷ್ಠಾಭ್ಯಾಂ ನಮಃ; ಹ್ರೀಂ ತರ್ಜನೀಭ್ಯಾಂ ನಮಃ; ಹ್ರೂಂ ಮಧ್ಯಮಾಭ್ಯಾಂ ನಮಃ; ಹ್ರೈಂ ಅನಾಮಿಕಾಭ್ಯಾಂ ನಮಃ; ಹ್ರೌಂ ಕನಿಷ್ಠಿಕಾಭ್ಯಾಂ ವೌಷಟ್; ಹ್ರಃ ಕರತಲಕರಪೃಷ್ಠಾಭ್ಯಾಂ ಫಟ್

೩ ಅಂಗನ್ಯಾಸಃ—ಹ್ರಾಂ ಹೃದಯಾಯ ನಮಃ; ಹ್ರೀಂ ಶಿರಸೇ ಸ್ವಾಹಾ; ಹ್ರೂಂ ಶಿಖಾಯೈ ವಷಟ್; ಹ್ರೈಂ ಕವಚಾಯ ಹುಮ್; ಹ್ರೌಂ ನೇತ್ರತ್ರಯಾಯ ವೌಷಟ್; ಹ್ರಃ ಅಸ್ತ್ರಾಯ ಫಟ್; ಭೂರ್ಭುವಃ ಸುವರೋಮಿತಿ ದಿಗ್ಬಂಧಃ

೪ ಧ್ಯಾನಮ್—ಲೌಹಿತ್ಯನಿರ್ಜಿತಜಪಾಕುಸುಮಾನುರಾಗಾಂ
ಪಾಶಾಂಕುಶೌ ಧನುರಿಷೂನಪಿ ಧಾರಯಂತೀಮ್।
ತಾಮ್ರೇಕ್ಷಣಾಮರುಣಮಾಲ್ಯವಿಶೇಷಭೂಷಾಂ
ತಾಂಬೂಲಪೂರಿತಮುಖೀಂ ತ್ರಿಪುರಾಂ ನಮಾಮಿ॥

೫ ಪಂಚೋಪಚಾರಾಃ—ಲಂ ಪೃಥಿವ್ಯಾತ್ಮನೇ ಗಂಧಂ ಕಲ್ಪಯಾಮಿ; ಹಂ ಆಕಾಶಾತ್ಮನೇ ಪುಷ್ಪಂ ಕಲ್ಪಯಾಮಿ; ಯಂ ವಾಯ್ವಾತ್ಮನೇ ಧೂಪಂ ಕಲ್ಪಯಾಮಿ; ರಂ ವಹ್ನ್ಯಾತ್ಮನೇ ದೀಪಂ ಕಲ್ಪಯಾಮಿ; ವಂ ಅಮೃತಾತ್ಮನೇ ಅಮೃತೋಪಹಾರಂ ಕಲ್ಪಯಾಮಿ


ಶ್ಲೋ ೧



(1) ಅಕ್ಕಿಹಿಟ್ಟಿನಿಂದ ಶುದ್ಧವಾದ ಸ್ಥಲದಲ್ಲಿ ಈ ಯಂತ್ರವನ್ನು ಬರೆದು ಅದರಲ್ಲಿ ತುಪ್ಪದದೀಪವನ್ನು ಇರಿಸಿ ಹನ್ನೆರಡುದಿವಸ ಪೂಜೆ ಮಾಡಿ ಪ್ರತಿನಿತ್ಯವೂ ಈ ಶ್ಲೋಕವನ್ನು ಒಂದುಸಾವಿರಾವರ್ತಿ ಜಪಿಸಬೇಕು. ಇದರಿಂದ ಸಕಲಕಾರ್ಯ ಜಯವಾಗುವುದು.


(2) ಈ ಯಂತ್ರವನ್ನೇ ಚಿನ್ನದ ತಗಡಿನಲ್ಲಿ ಬರೆದು ಪೂರ್ವಾಭಿಮುಖವಾಗಿ ಹನ್ನೆರಡು ದಿವಸ ಪೂಜಿಸಿ ಈ ಶ್ಲೋಕವನ್ನು ಪ್ರತಿದಿನ ಒಂದುಸಾವಿರಾವರ್ತಿ ಜಪಿಸಿ ಯಂತ್ರವನ್ನು ಕಂಠದಲ್ಲಿ ಧರಿಸಬೇಕು. ಇದರಿಂದ ಸಕಲಾಭಿವೃದ್ಧಿ ಆಗುವುದು. ನೈವೇದ್ಯ—ತ್ರಿಮಧುರ (ತ್ರಿಮಧುರವೆಂದರೆ ಬೆಲ್ಲ, ಬಾಳೆಹಣ್ಣು, ತೆಂಗಿನಕಾಯಿ, ಇವುಗಳ ಕಲಸಿದ ದ್ರವ್ಯ).

ಶ್ಲೋ ೨



ಈ ಯಂತ್ರವನ್ನು ಚಿನ್ನದ ತಗಡಿನಲ್ಲಿ ಬರೆದು ಉತ್ತರದಿಙ್ಮುಖನಾಗಿ ೫೫ ದಿವಸಗಳು ಪೂಜೆ ಮಾಡಿ ಈ ಶ್ಲೋಕವನ್ನು ಪ್ರತಿದಿವಸವೂ ಒಂದುಸಾವಿರ ಆವರ್ತಿ ಜಪಿಸಿ ಯಂತ್ರವನ್ನು ಧರಿಸಿದರೆ ಸರ್ವಲೋಕವಶ್ಯತೆಯೂ ಪ್ರಕೃತಿಜಯವೂ ಆಗುವುದು. ನೈವೇದ್ಯ—ಹಾಲುಕೀರು.


ಶ್ಲೋ ೩



(1) ಈ ಯಂತ್ರವನ್ನು ಚಿನ್ನದ ತಗಡಿನಲ್ಲಿ ಬರೆದು ಐಶಾನ್ಯಾಭಿಮುಖವಾಗಿ ಹದಿನೈದು ದಿವಸಗಳು ಯಂತ್ರಪೂಜೆ ಮಾಡಿ ಪ್ರತಿದಿನವೂ ಒಂದುಸಾವಿರಾವರ್ತಿ ಶ್ಲೋಕವನ್ನು ಜಪಿಸಿ ಯಂತ್ರವನ್ನು ಧಾರಣಮಾಡಿದರೆ ಸರ್ವೈಶ್ವರ್ಯವೂ ಸರ್ವವಿದ್ಯೆಯೂ ಪ್ರಾಪ್ತವಾಗುವುದು.

(2) ಇದೇ ಯಂತ್ರವನ್ನು ನಲವತ್ತೈದು ದಿವಸಗಳು ಮೊದಲಿನಂತೆ ಪೂಜಿಸಿ ಪ್ರತಿದಿನ ಎರಡು ಸಾವಿರಾವರ್ತಿ ಶ್ಲೋಕವನ್ನು ಜ ಸಿ ಯಂತ್ರವನ್ನು ಧರಿಸಿದರೆ ಉಪಾಸಕನು ವೇದವಿತ್ತಾಗಿ ಆಗುವನು. ನೈವೇದ್ಯ— ಉದ್ದಿನ ವಡೆ.


ಶ್ಲೋ ೪



(1) ಈ ಯಂತ್ರವನ್ನು ಬೆಳ್ಳಿಯ ತಗಡಿನಲ್ಲಿ ಬರೆದು ಪೂರ್ವದಿಗಭಿಮುಖವಾಗಿ ಹದಿನಾರುದಿನಗಳು ಪೂಜಿಸಿ ಪ್ರತಿದಿನವೂ ಒಂದುಸಾವಿರಾವರ್ತಿ ಈ ಶ್ಲೋಕವನ್ನು ಜಪಿಸಿ ಯಂತ್ರವನ್ನು ಧರಿಸಿದರೆ ಸಾಮ್ರಾಜ್ಯ ಪ್ರಾಪ್ತವಾಗುವುದು.


(2) ಇದೇರೀತಿ ಮೂವತ್ತಾರುದಿನಗಳು ಮಾಡಿದರೆ ದಾರಿದ್ರ್ಯ ನಿವೃತ್ತಿಯಾಗುವುದು. ನೈವೇದ್ಯ—ಕೇಸರೀಭಾತು.

ಶ್ಲೋ ೫




ಈ ಯಂತ್ರವನ್ನು ತಾಮ್ರದ ತಗಡಿನಲ್ಲಿ ಬರೆದು ವಾಯವ್ಯದಿಗಭಿಮುಖವಾಗಿ ಎಂಟುದಿನಗಳು ಪೂಜಿಸಿ ಪ್ರತಿದಿನವೂ ಎರಡುಸಾವಿರಾವರ್ತಿ ಶ್ಲೋಕವನ್ನು ಜಪಿಸಿ ಯಂತ್ರವನ್ನು ಧರಿಸಿದರೆ ಸಕಲಜನಸಂಮೋಹನವೂ ಸ್ತ್ರೀಯರಿಗೆ ತಮ್ಮ ಪುರುಷ ವಶ್ಯತೆಯೂ ಆಗುವುದು. ನೈವೇದ್ಯ—ಪಾಯಸ.

ಶ್ಲೋ ೬




ಚಿನ್ನದ ತಗಡಿನಲ್ಲಿ ಈ ಯಂತ್ರವನ್ನು ಬರೆದು ಪೂರ್ವಾಭಿಮುಖವಾಗಿ ಇಪ್ಪತ್ತೊಂದು ದಿನಗಳು ಪೂಜಿಸಿ ಪ್ರತಿದಿನ ಈ ಶ್ಲೋಕವನ್ನು ಐದುನೂರು ಆವರ್ತಿ ಜಪಿಸಿ ಯಂತ್ರ ವನ್ನು ಧರಿಸಿದರೆ ಷಂಡತ್ವನಿವೃತ್ತಿಯಾಗಿ ಸಂತಾನಪ್ರಾಪ್ತಿಯಾಗುವುದು. ನೈವೇದ್ಯ— ಕಲ್ಲುಸಕ್ಕರೆ.

ಶ್ಲೋ ೭




ಈ ಯಂತ್ರವನ್ನು ಚಿನ್ನದ ತಗಡಿನಲ್ಲಿ ಬರೆದು ಪೂರ್ವಾಭಿಮುಖವಾಗಿ ನಲವತ್ತೈದು ದಿನಗಳು ಪೂಜಿಸಿ ಪ್ರತಿದಿನವೂ ಈ ಶ್ಲೋಕವನ್ನು ಸಾವಿರಾವರ್ತಿ ಜಪಿಸಿ ಯಂತ್ರವನ್ನು ಧರಿಸಬೇಕು, ಅಥವಾ ವಿಭೂತಿಯನ್ನು ಮಂತ್ರಿಸಿ ಧರಿಸಬೇಕು. ಇದರಿಂದ ಶತ್ರುಜಯ ವಾಗುವುದು. ನೈವೇದ್ಯ— ಹಾಲುಕೀರು.

ಶ್ಲೋ ೮



ಈ ಯಂತ್ರವನ್ನು ಕೆಂಪುಗಂಧದ ಕೊರಡಿನಲ್ಲಿ ಮಾಡಿಸಿ ಹನ್ನೆರಡು ದಿನಗಳು ಕೆಂಬಣ್ಣದ ಹೂವುಗಳಿಂದ ಪೂಜಿಸಿ ಈ ಶ್ಲೋಕವನ್ನು ಪ್ರತಿದಿನ ಎರಡುಸಾವಿರಾವರ್ತಿ ಜಪಿಸಿ ದರಿಸಿದರೆ ಕಾರಾಗೃಹದಿಂದ ನಿವೃತ್ತಿ. ಸಕಲಕಾರ್ಯಜಯವು ಆಗುವುದು. ನೈವೇದ್ಯ—ಮೆಣಸು.


ಶ್ಲೋ ೯



(1) ಚಿನ್ನದ ತಗಡಿನಲ್ಲಿ ಈ ಯಂತ್ರವನ್ನು ಬರೆದು ಹತ್ತುದಿನಗಳು ಪೂಜಿಸಿ ಈ ಶ್ಲೋಕವನ್ನು ಪ್ರತಿದಿನ ಒಂದುಸಾವಿರಾವರ್ತಿ ಜಪಿಸಿ ಯಂತ್ರವನ್ನು ಧರಿಸಿದರೆ ದೇಶಾಂತರಕ್ಕೆ ಹೋದವರು ಶೀಘ್ರದಲ್ಲಿ ವಾಪಸು ಬರುವರು.


(2) ಈ ಯಂತ್ರವನ್ನೇ ಶ್ರೀಗಂಧದಿಂದ ಲೇಪಿಸಿ ನಲವತ್ತೆಂಟುದಿನಗಳು ಪೂಜಿಸಿ ಶ್ಲೋಕವನ್ನು ಪ್ರತಿದಿನವೂ ಒಂದುಸಾವಿರಾವರ್ತಿ ಜಪಿಸಿ ಧರಿಸಿದರೆ ಪಂಚಭೂತಜಯ ವಾಗುವುದು. ನೈವೇದ್ಯ — ಹಾಲುಕೀರು.

ಶ್ಲೋ ೧೦




ಈ ಯಂತ್ರವನ್ನು ಚಿನ್ನದ ತಗಡಿನಲ್ಲಿ ಬರೆದು ಆರುದಿನಗಳು ಪೂಜಿಸಿ ಪ್ರತಿನಿತ್ಯ ಈ ಶ್ಲೋಕವನ್ನು ಒಂದುಸಾವಿರಾವರ್ತಿ ಜಪಿಸಿ ಕೆಂಪುಬಣ್ಣದ ರೇಷ್ಮೆದಾರದಿಂದ ಕಟ್ಟಿ ಕೊಳ್ಳಬೇಕು. ಇದರಿಂದ ಪುರುಷರಿಗೆ ವೃಷ್ಯವೂ ಸ್ತ್ರೀಯರಿಗೆ ರಜೋದರ್ಶನವೂ ಆಗುವುದು. ನೈವೇದ್ಯ—ಬಾಳೆಹಣ್ಣು.

ಶ್ಲೋ ೧೧



ಚಿನ್ನದ ತಗಡಿನಲ್ಲಿ ಈ ಯಂತ್ರವನ್ನು ಬರೆದು ಎಂಭತ್ತೊಂದುದಿನಗಳು ಪೂಜಿಸಿ ಪ್ರತಿದಿನವೂ ಈ ಶ್ಲೋಕವನ್ನು ಸಾವಿರಾವರ್ತಿ ಜಪಿಸಿ ಧರಿಸಬೇಕು. ಅಥವಾ ಹಸುವಿನ ಬೆಣ್ಣೆಯನ್ನು ಮಂತ್ರಿಸಿ ಸೇವಿಸಬೇಕು. ಇದರಿಂದ ವಂಧ್ಯಾದೋಷ ನಿವೃತ್ತಿ. ನೈವೇದ್ಯ—ಪಾಯಸ.

ಶ್ಲೋ ೧೨




ಈ ಯಂತ್ರವನ್ನು ನೀರಿನಲ್ಲಿ ಬರೆದು ನಲವತ್ತೈದುದಿನಗಳು ಪೂಜಿಸಿ ನೀರನ್ನು ಮುಚ್ಚಿಕೊಂಡು ಈ ಶ್ಲೋಕವನ್ನು ಸಾವಿರಾವರ್ತಿ ಜಪಿಸಿ ಆ ನೀರನ್ನು ಕುಡಿದರೆ ಮೂಗನೂ ಕವಿಯಾಗುವನು, ವಶಿತ್ವವು ಸಿದ್ಧಿಸುವುದು. ನೈವೇದ್ಯ—ಜೇನುತುಪ್ಪ.

ಶ್ಲೋ ೧೩

ಕ್ಲೀಂ ಕ್ಲೀಂ ಕ್ಲೀಂ
ಸಾಧ್ಯಮ್
ಕ್ಲೀಂ ಕ್ಲೀಂ ಕ್ಲೀಂ


ಈ ಯಂತ್ರವನ್ನು ಚಿನ್ನದ ತಗಡಿನಲ್ಲಿ ಬರೆದು ಆರುದಿನಗಳು ಪೂಜಿಸಿ ಈ ಶ್ಲೋಕವನ್ನು ಪ್ರತಿದಿನ ಸಾವಿರಾವರ್ತಿ ಜಪಿಸಿ ಯಂತ್ರವನ್ನು ಧರಿಸಿದರೆ ಸ್ತ್ರೀವಶ್ಯವಾಗುವುದು. ನೈವೇದ್ಯ—ತ್ರಿಮಧುರ.

ಶ್ಲೋ ೧೪




ಈ ಯಂತ್ರವನ್ನು ಚಿನ್ನದ ತಗಡಿನಲ್ಲಿ ಬರೆದು ನಲವತ್ತೈದುದಿನಗಳು ಪೂಜಿಸಿ ಪ್ರತಿದಿನವೂ ಈ ಶ್ಲೋಕವನ್ನು ಸಾವಿರಾವರ್ತಿ ಜಪಿಸಿ ಧರಿಸಬೇಕು. ಇದರಿಂದ ವಸಂತಾದಿ ರೋಗಗಳೂ ದುರ್ಭಿಕ್ಷವೂ ಬಾಧಿಸುವುದಿಲ್ಲ. ನೈವೇದ್ಯ—ಹಾಲುಕೀರು.

ಶ್ಲೋ ೧೫




ಚಿನ್ನದ ತಗಡಿನಲ್ಲಿ ಈ ಯಂತ್ರವನ್ನು ಬರೆದು ನಲವತ್ತೊಂದುದಿನ ಪೂಜಿಸಿ ಈ ಶ್ಲೋಕವನ್ನು ಪ್ರತಿದಿನವೂ ಒಂದುಸಾವಿರಾವರ್ತಿ ಜಪಿಸಿ ಯಂತ್ರವನ್ನು ಧರಿಸಬೇಕು. ಅಥವಾ ನೀರಿನಲ್ಲಿ ಈ ಯಂತ್ರವನ್ನು ಬರೆದು ಹಿಂದಿನಂತೆ ಪೂಜಾದಿಗಳನ್ನು ಮಾಡಿ ನೀರನ್ನು ಕುಡಿಯಬೇಕು. ಇದರಿಂದ ಉಪಾಸಕನು ಕವಿಯಾಗಿಯೂ, ಜ್ಞಾನಿಯಾಗಿಯೂ ಆಗುವನು. ನೈವೇದ್ಯ—ಬಾಳೆಯಹಣ್ಣು ಮತ್ತು ಸಕ್ಕರೆ.

ಶ್ಲೋ ೧೬




ಈ ಯಂತ್ರವನ್ನು ಚಿನ್ನದ ತಗಡಿನಲ್ಲಿ ಬರೆದು ನಲವತ್ತೊಂದುದಿನ ಪೂಜಿಸಿ ಪ್ರತಿದಿನ ಒಂದುಸಾವಿರಾವರ್ತಿ ಈ ಶ್ಲೋಕವನ್ನು ಜಪಿಸಿ ಯಂತ್ರವನ್ನು ಧರಿಸಿದರೆ ವೇದ ಶಾಸ್ತ್ರಾದಿ ಜ್ಞಾನಿಯಾಗುವನು. ನೈವೇದ್ಯ—ಜೇನುತುಪ್ಪ.

ಶ್ಲೋ॥ ೧೭




ಈ ಯಂತ್ರವನ್ನು ಸ್ವರ್ಣತಗಡಿನಲ್ಲಿ ಬರೆದು ತೊಂಭತ್ತೊಂದುದಿನ ಪೂಜಿಸಿ ಪ್ರತಿದಿನ ಒಂದುಸಾವಿರಾವರ್ತಿ ಈ ಶ್ಲೋಕವನ್ನು ಜಪಿಸಿ ಯಂತ್ರವನ್ನು ಧರಿಸಿದರೆ ಎಲ್ಲಕಲೆಗಳಲ್ಲಿಯೂ ಸಮರ್ಥನಾಗುವನು. ನೈವೇದ್ಯ—ಬಾಳೆಹಣ್ಣು, ಹಾಲು, ಸಕ್ಕರೆ ಮತ್ತು ಕಲ್ಲುಸಕ್ಕರೆ.

ಶ್ಲೋ॥ ೧೮




ಈ ಯಂತ್ರವನ್ನು ಚಿನ್ನದ ತಗಡಿನಲ್ಲಿ ಬರೆದು ನಲವತ್ತೈದುದಿನ ಪೂಜಿಸಿ ಈ ಶ್ಲೋಕವನ್ನು ಪ್ರತಿದಿನ ಒಂದುಸಾವಿರಾವರ್ತಿ ಜಪಿಸಿ ಯಂತ್ರವನ್ನು ಧರಿಸಬೇಕು. ಅಥವಾ ಶ್ರೀಗಂಧ ಕುಂಕುಮ ಹೂವು ಇವುಗಳನ್ನಾದರೂ ಮಂತ್ರಿಸಿ ಧರಿಸಬೇಕು ಇದರಿಂದ ಸಕಲಪ್ರಾಣಿಗಳು ವಶವಾಗುವುವು. ನೈವೇದ್ಯ—ಹಾಲುಕೀರು, ತಾಂಬೂಲ

ಶ್ಲೋ ೧೯



ಚಿನ್ನದ ತಗಡಿನಲ್ಲಿ ಈ ಯಂತ್ರವನ್ನು ಬರೆದು ಇಪ್ಪತ್ತೈದುದಿನಗಳು ಪೂಜಿಸಿ ಪ್ರತಿದಿನವೂ ಈ ಶ್ಲೋಕವನ್ನು ಒಂದುಸಾವಿರದ ಇನ್ನೂರಾವರ್ತಿ ಜಪಿಸಿ ಧರಿಸಬೇಕು. ಅಥವಾ ಶ್ರೀಗಂಧ ಕುಂಕುಮ ವಿಭೂತಿ ಪುಷ್ಪ ಇವುಗಳನ್ನಾದರೂ ಮಂತ್ರಿಸಿ ಧರಿಸಬೇಕು. ಇದರಿಂದ ಸಕಲ ರಾಜ ರಾಕ್ಷಸ ಮೃಗ ಸ್ತ್ರೀಯರು ವಶ್ಯರಾಗುವರು. ನೈವೇದ್ಯ— ಹಾಲು, ಜೇನುತುಪ್ಪ ಮತ್ತು ಬಾಳೆಯಹಣ್ಣು.

ಶ್ಲೋ ೨೦




(1) ಈ ಯಂತ್ರವನ್ನು ವಿಭೂತಿಯಲ್ಲಿ ಬರೆದು ಈ ಶ್ಲೋಕವನ್ನು ಒಂದು ಸಾವಿರಾವರ್ತಿ ಜಪಿಸಿ ವಿಭೂತಿಯನ್ನು ಧರಿಸಿದರೆ ವಿಷ ನಿವೃತ್ತಿಯಾಗುವುದು, ಜ್ವರನಿವೃತ್ತಿಯಾಗುವುದು. ಈ ಭಸ್ಮವು ಸರ್ಪಕ್ಕೆ ತಗಲಿದರೆ ಅದು ಮೋಹಿಸುವುದು.

(2) ಈ ಶ್ಲೋಕವನ್ನು ಎರಡುಸಾವಿರಾವರ್ತಿಯಂತೆ ನಲವತ್ತೈದುದಿನ ಜಪಿಸಿ ಸಾಧನಮಾಡಿದರೆ ಯಾವಾಗಲೂ ವಿಷಭಯ ಉಂಟಾಗುವುದಿಲ್ಲ.

(3) ಈ ಯಂತ್ರವನ್ನೇ ಮಾಯೂರ ತಾಮ್ರ ಅಥವಾ ಪುನ್ನಾಗತಾಮ್ರದೊಡನೆ ಬೆರಿಸಿದ ಚಿನ್ನದ ತಗಡಿನಲ್ಲಿ ಬರೆದು ಮೊದಲಿನಂತೆ ಪೂಜೆ ಮತ್ತು ಶ್ಲೋಕಾವರ್ತಿಗಳಿಂದ ಸಾಧನೆಮಾಡಿ ಆ ಯಂತ್ರವನ್ನು ಉಂಗುರವಾಗಿಮಾಡಿ ಧರಿಸಿಕೊಂಡು ಆ ಕೈಯಿಂದ ಸರ್ಪದಷ್ಟಪುರುಷನಮೇಲೆ ಜಲವನ್ನು ಪ್ರೋಕ್ಷಿಸಿದರೆ ವಿಷನಿವೃತ್ತಿಯಾಗುವುದು.

ಶ್ಲೋ ೨೧




ಈ ಯಂತ್ರವನ್ನು ಚಿನ್ನ ಅಥವಾ ಬೆಳ್ಳಿ ಅಥವಾ ತಾಮ್ರದ ತಗಡಿನಲ್ಲಿ ಬರೆದು ನಲವತ್ತೈದುದಿನ ಪೂಜಿಸಿ ಪ್ರತಿದಿನ ಒಂದುಸಾವಿರಾವರ್ತಿ ಶ್ಲೋಕವನ್ನು ಜಪಿಸಿ ಧರಿಸಬೇಕು. ಇದರಿಂದ ಸಕಲಜನವಿರೋಧನಾಶವೂ ವಶ್ಯವೂ ಆಗುವುದು. ನೈವೇದ್ಯ—ಬಾಳೆಯ ಹಣ್ಣು, ಜೇನುತುಪ್ಪ ಮತ್ತು ಬೆಲ್ಲ.

ಶ್ಲೋ ೨೨

ಶ್ರೀ ಚಕ್ರಮ್


ಈ ಚಕ್ರವನ್ನು ಚಿನ್ನದ ತಗಡಿನಲ್ಲಿ ಬರೆದು ಪುಣ್ಯತೀರ್ಥದಲ್ಲಾಗಲಿ ಪುಣ್ಯಕ್ಷೇತ್ರದಲ್ಲಾಗಲಿ ದೇವೀ ಸಂನಿಧಿಯಲ್ಲಾಗಲಿ ಕುಳಿತುಕೊಂಡು ನಲವತ್ತೈದು ದಿನಗಳು ಪೂಜಿಸಿ ಪ್ರತಿದಿನವೂ ಈ ಶ್ಲೋಕವನ್ನು ಒಂದುಸಾವಿರಾವರ್ತಿ ಜಪಿಸಿ ಸಾಧನೆ ಮಾಡಬೇಕು. ಇದರಿಂದ ಇಹಲೋಕದ ಸರ್ವಾಭೀಷ್ಟಸಿದ್ಧಿಯೂ ಸಕಲೈಶ್ವರ್ಯ ಮತ್ತು ಸಾಮ್ರಾಜ್ಯ ಸಿದ್ಧಿಯೂ ಆಗುವುದು. ನೈವೇದ್ಯ—ಜೇನುತುಪ್ಪ, ತ್ರಿಮಧುರ, ಹಾಲು, ಮೊಸರು ಮತ್ತು ಚಿತ್ರಾನ್ನ.

ಶ್ಲೋ ೨೩




ಈ ಯಂತ್ರವನ್ನು ಚಿನ್ನದ ತಗಡಿನಲ್ಲಿ ಬರೆದು ಮನೆಯಲ್ಲಿ ಇರಿಸಿ ಮೂವತ್ತು ದಿನಗಳು ಪೂಜಿಸಿ ಪ್ರತಿದಿನ ಈ ಶ್ಲೋಕವನ್ನು ಮೂರುಸಾವಿರಾವರ್ತಿ ಜಪಿಸಬೇಕು. ಇದರಿಂದ ಸರ್ವಾಪತ್ತುನಿವೃತ್ತಿಯೂ ಸಾಲದಿಂದ ಬಿಡುಗಡೆಯೂ ಭೂತಪ್ರೇತಬಾಧಾನಿವೃತ್ತಿಯೂ ಆಗುವುದು. ನೈವೇದ್ಯ—ಹಾಲುಕೀರು.

ಶ್ಲೋ ೨೪




ಈ ಯಂತ್ರವನ್ನು ಚಿನ್ನದ ತಗಡಿನಲ್ಲಿ ಬರೆದು ಮೂವತ್ತು ದಿವಸ ಪೂಜಿಸಿ ಈ ಶ್ಲೋಕವನ್ನು ಪ್ರತಿದಿನ ಸಾವಿರಾವರ್ತಿ ಜಪಿಸಿ ಧರಿಸಬೇಕು. ಭೂತಪ್ರೇತಪಿಶಾಚ ಅಪಸ್ಮಾರಾದಿಗಳು ನಿವೃತ್ತಿಯಾಗುವುದು. ನೈವೇದ್ಯ—ಜೇನುತುಪ್ಪ, ಉದ್ದಿನವಡೆ ಮತ್ತು ಶಿಗಳಿ.

ಶ್ಲೋ ೨೫



ಚಿನ್ನದ ತಗಡಿನಲ್ಲಿ ಈ ಯಂತ್ರವನ್ನು ಬರೆದು ನಲವತ್ತೈದುದಿನಗಳು ಪೂಜಿಸಿ ಪ್ರತಿದಿನ ಈ ಶ್ಲೋಕವನ್ನು ಒಂದುಸಾವಿರಾವರ್ತಿ ಜಪಿಸಿ ಯಂತ್ರವನ್ನು ಧರಿಸಿದರೆ ಸರ್ಕಾರದ ಉದ್ಯೋಗವೂ ಉತ್ಕೃಷ್ಟವಾದ ಪದವಿಯೂ ದೊರೆಯುವುದು. ನೈವೇದ್ಯ—ಜೇನುತುಪ್ಪ.


ಶ್ಲೋ ೨೬



(1) ಈ ಯಂತ್ರವನ್ನು ಚಿನ್ನದ ತಗಡಿನಲ್ಲಿ ಬರೆದು ಅಮಾವಾಸ್ಯೆದಿವಸ ಪೂಜಿಸಿ ಶ್ಲೋಕವನ್ನು ಒಂದುಸಾವಿರಾವರ್ತಿ ಜಪಿಸಿ ಯಂತ್ರವನ್ನು ಧರಿಸಿದರೆ ಸರ್ವಸಿದ್ಧಿಯಾಗುವುದು.


(2) ಈ ಯಂತ್ರವನ್ನೇ ಆರುದಿನ ಪೂಜಿಸಿ ಪ್ರತಿದಿನ ಶ್ಲೋಕವನ್ನು ಸಾವಿರಾವರ್ತಿ ಜಪಿಸಿ ಧರಿಸಿದರೆ ಶತ್ರುಜಯವಾಗುವುದು. ನೈವೇದ್ಯ—ಪಾಯಸ.

ಶ್ಲೋ ೨೭




ಚಿನ್ನದ ತಗಡಿನಲ್ಲಿ ಈ ಯಂತ್ರವನ್ನು ಬರೆದು ನಲವತ್ತೈದುದಿನ ಪೂಜಿಸಿ ಪ್ರತಿದಿನ ಈ ಶ್ಲೋಕವನ್ನು ಒಂದುಸಾವಿರಾವರ್ತಿ ಜಪಿಸಿ ಯಂತ್ರವನ್ನು ಧರಿಸಿದರೆ ಮಂತ್ರಸಿದ್ಧಿ ದೇವೀದರ್ಶನ ಆತ್ಮಜ್ಞಾನ ಇವು ಆಗುವುವು. ನೈವೇದ್ಯ—ಪಾಯಸ.

ಶ್ಲೋ ೨೮



ಈ ಯಂತ್ರವನ್ನು ಚಿನ್ನದ ತಗಡಿನಲ್ಲಿ ಬರೆದು ನಲವತ್ತೈದುದಿನ ಪೂಜಿಸಿ ಶ್ಲೋಕವನ್ನು ಪ್ರತಿದಿನ ಸಹಸ್ರಾವರ್ತಿ ಜಪಿಸಿ ಧರಿಸಿದರೆ ಸ್ತ್ರೀಯರಿಗೆ ಸಕಲ ಸಿದ್ಧಿಯೂ, ಪುರುಷರಿಗೆ ಅಪಮೃತ್ಯು ನಿವಾರಣವೂ ಆಗುವುದು. ನೈವೇದ್ಯ—ಹಾಲುಕೀರು, ತ್ರಿಮಧುರ ಮತ್ತು ತಾಂಬೂಲ.

ಶ್ಲೋ ೨೯



ಈ ಯಂತ್ರವನ್ನು ಸುವರ್ಣತಗಡಿನಲ್ಲಿ ಬರೆದು ನಲವತ್ತೈದುದಿನ ಪೂಜಿಸಿ ಪ್ರತಿದಿನ ಈ ಶ್ಲೋಕವನ್ನು ಸಾವಿರಾವರ್ತಿ ಜಪಿಸಿ ಯಂತ್ರವನ್ನು ಧರಿಸಿದರೆ ದುಷ್ಟರೂ ಒಳ್ಳೆಯವರಾಗಿ ತನ್ನ ವಶವಾಗುವರು. ನೈವೇದ್ಯ—ಉದ್ದಿನವಡೆ, ಜೇನುತುಪ್ಪ.

ಶ್ಲೋ ೩೦

ಶ್ರೀ ಚಕ್ರಮ್


ಈ ಯಂತ್ರವನ್ನು ಚಿನ್ನದ ತಗಡಿನಲ್ಲಿ ಬರೆದು ನಲವತ್ತೈದುದಿನ ಪೂಜಿಸಿ ಪ್ರತಿ ದಿನವೂ ಯಂತ್ರವನ್ನು ಕೈಯಲ್ಲಿಟ್ಟುಕೊಂಡು ಸಹಸ್ರಾವರ್ತಿ ಜಪಿಸಬೇಕು. ಇದರಿಂದ ಸಕಲಜನವಶ್ಯವೂ ರಾಜವಶ್ಯವೂ ಆಗುವುದು. ನೈವೇದ್ಯ—ಹಾಲು, ಜೇನುತುಪ್ಪ.

ಶ್ಲೋ ೩೧




ಚಿನ್ನದ ತಗಡಿನಲ್ಲಿ ಈ ಯಂತ್ರವನ್ನು ಬರೆದು ನಲವತ್ತೈದು ದಿನ ಪೂಜಿಸಿ ಪ್ರತಿ ನಿತ್ಯ ಈ ಶ್ಲೋಕವನ್ನು ಒಂದುಸಾವಿರಾವರ್ತಿ ಜಪಿಸಿ ಯಂತ್ರವನ್ನು ಧರಿಸಿದರೆ ಸಕಲ ವಿದ್ಯಾಸಿದ್ಧಿಯೂ ರಸಾಯನ ಸಿದ್ಧಿಯೂ ಆಗುವುದು. ನೈವೇದ್ಯ—ಮೊಸರನ್ನ, ಉದ್ದಿನ ವಡೆ.

ಶ್ಲೋ ೩೨




ಈ ಯಂತ್ರವನ್ನು ಚಿನ್ನದ ತಗಡಿನಲ್ಲಿ ಬರೆದು ಅದರಮೇಲೆ ರೂಪಾಯನ್ನು ಇರಿಸಿ ನಲವತ್ತೈದುದಿನ ಪೂಜಿಸಿ ಶ್ಲೋಕವನ್ನು ಪ್ರತಿನಿತ್ಯ ಸಾವಿರಾವರ್ತಿ ಜಪಿಸಿ ಯಂತ್ರವನ್ನು ಧರಿಸಿದರೆ ಬಹಳ ಧನವಂತನಾಗುವನು.

ಶ್ಲೋ ೩೩



ಈ ಯಂತ್ರವನ್ನು ಸುವರ್ಣತಗಡಿನಲ್ಲಿ ಬರೆದು ನಲವತ್ತೈದು ದಿನ ಪೂಜಿಸಿ ಈ ಪದ್ಯವನ್ನು ಪ್ರತಿದಿನ ಒಂದುಸಾವಿರಾವರ್ತಿ ಜಪಿಸಿ ಯಂತ್ರವನ್ನು ಧರಿಸಬೇಕು. ಇದರಿಂದ ಮಹಾಬುದ್ಧಿವಂತನಾಗುವನು. ನೈವೇದ್ಯ—ಜೇನುತುಪ್ಪ.

ಶ್ಲೋ॥ ೩೪




ಈ ಯಂತ್ರವನ್ನು ಚಿನ್ನದ ತಗಡಿನಲ್ಲಿ ಬರೆದು ನಲವತ್ತೈದುದಿನಗಳು ಪೂಜಿಸಿ ಪ್ರತಿದಿನ ಈ ಶ್ಲೋಕವನ್ನು ಒಂದುಸಾವಿರಾವರ್ತಿ ಜಪಿಸಿ ಯಂತ್ರವನ್ನು ಧರಿಸಬೇಕು ಮತ್ತು ಅಳಲೆಕಾಯನ್ನು ಮಂತ್ರಿಸಿ ಸೇವಿಸಬೇಕು. ಇದರಿಂದ ಕ್ಷಯರೋಗನಿವೃತ್ತಿ ಯಾಗುವುದು. ನೈವೇದ್ಯ—ಹಾಲುಕೀರು, ಜೇನುತುಪ್ಪ.

ಶ್ಲೋ॥ ೩೫




